"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

18ನೇ ಮಾರ್ಚ್ 2021
ಗುರುವಾರ

## ವಿಷಯಾನುಕ್ರಮಣಿಕೆ

**1.ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1514 – ಬಾಂದಾರ ನಿರ್ಮಿಸುವಲ್ಲಿ ಅವ್ಯವಹಾರದ ತಡೆ ಬಗ್ಗೆ.**
– ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಣ್ಣ ನೀರಾವರಿ ಸಚಿವರ ಪರವಾಗಿ)

**1615 – ಕೆರೆಗಳ ಹೂಳೆತ್ತುವ ಕಾಮಗಾರಿ ಬಗ್ಗೆ.**
– ಶ್ರೀ ಆರ್.ಧರ್ಮಸೇನ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಣ್ಣ ನೀರಾವರಿ ಸಚಿವರ ಪರವಾಗಿ)

**1628 – ಮಂಜೂರಾದ ವಿದ್ಯುತ್ ಉಪ ಕೇಂದ್ರಗಳ ಬಗ್ಗೆ.**
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

**1535 – ಬೆಂಗಳೂರು ನಗರದ ರಿಂಗ್ ರಸ್ತೆಯ ಒತ್ತುವರಿ ಬಗ್ಗೆ.**
– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

**1577 – ಸಮಗ್ರ ನೀರಾವರಿ ಯೋಜನೆಗಳ ಬಗ್ಗೆ.**
– ಶ್ರೀ ಪ್ರಕಾಶ್ ಕೆ.ರಾಥೋಡ್
– ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1600 – ಮಾದಕ ವಸ್ತುಗಳ ಸೇವನೆ ಪಿಡುಗಿನ ಬಗ್ಗೆ.**

- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

**1511 – ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯಗಳ ಬಗ್ಗೆ.**

- ಶ್ರೀ ಪ್ರದೀಪ್ ಶೆಟ್ಟರ್
- ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

**1502 – ಸಮತೋಲನಾ ಜಲಾಶಯ ನಿರ್ಮಾಣದ ಬಗ್ಗೆ.**

- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ)(ಮುಖ್ಯಮಂತ್ರಿಗಳ ಪರವಾಗಿ)

**1526 – ಪಾದಚಾರಿ ಮಾರ್ಗಗಳಲ್ಲಿನ ಟ್ರಾನ್ಸ್‌ಫಾರ್ಮರ್‌ನಿಂದಾಗಿ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲ ಸರಿಪಡಿಸುವ ಬಗ್ಗೆ.**

- ಶ್ರೀ ಕೆ.ಗೋವಿಂದ ರಾಜು
- ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

**1571 – ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬಗ್ಗೆ.**

- ಶ್ರೀ ಸುನೀಲ್ ವಲ್ಯಾಪುರ್
- ಡಾ: ನಾರಾಯಣಗೌಡ(ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು)

**1574 – ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ನಿರ್ಮಾಣವಾಗುತ್ತಿರುವ ಮೇಲುಸೇತುವೆ ಕಾಮಗಾರಿ ಬಗ್ಗೆ.**

- ಶ್ರೀಮತಿ ಎಸ್.ವೀಣಾ ಅಚ್ಚಯ್ಯ
- ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ(ಮುಖ್ಯಮಂತ್ರಿಗಳ ಪರವಾಗಿ)

**1587 – ಬೆಂಗಳೂರು ನಗರಾಭಿವೃದ್ಧಿ ಇಲಾಖೆಗಳ ವಿವಿಧ ಪ್ರಾಧಿಕಾರಿಗಳ ಸಭೆ ಬಗ್ಗೆ.**

- ಶ್ರೀ ಎಂ.ಎ.ಗೋಪಾಲಸ್ವಾಮಿ(ಶ್ರೀ ರಘು ಆಚಾರ್‌ರವರ ಪರವಾಗಿ)
- ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1527 – ಮೀಸಲಾತಿ ಅಡಿಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ಪದೋನ್ನತಿ ಬಗ್ಗೆ.**

– ಡಾ: ತಳವಾರ್ ಸಾಬಣ್ಣ

– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ)(ಮುಖ್ಯಮಂತ್ರಿಗಳ ಪರವಾಗಿ)

**1563 – ಪೊಲೀಸ್ ಇಲಾಖೆ ನೌಕರರು ನಿಗಧಿಗಿಂತ ಹೆಚ್ಚು ಸಮಯ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ.**

– ಶ್ರೀ ಎಸ್.ರವಿ

– ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

**1554 – ಚಿಕ್ಕಮಗಳೂರಿನ ಬೆಳವಾಡಿ ದೊಡ್ಡಕೆರೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ.**

– ಶ್ರೀ ಎನ್.ರವಿಕುಮಾರ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಣ್ಣ ನೀರಾವರಿ ಸಚಿವರ ಪರವಾಗಿ)

**ತಡೆಹಿಡಿಯಲಾದ ಪ್ರಶ್ನೆ**

**ಸಂಖ್ಯೆ 399 – ಆಯುಧ ಲೈಸನ್ಸ್ ನವೀಕರಿಸುವ ಬಗ್ಗೆ.**

– ಶ್ರೀ ಸುನೀಲ್ ವಲ್ಯಾಪುರ್

– ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

**684 – ಬಿ.ಎಂ.ಆರ್.ಸಿ.ಎಲ್. ಗುತ್ತಿಗೆ ನೌಕರರ ನೇಮಕಾತಿ ಬಗ್ಗೆ.**

– ಶ್ರೀ ಕಾಂತರಾಜ್ (ಬಿ.ಎಂ.ಎಲ್)

– ಶ್ರೀ ಬಸವರಾಜ ಬೊಮ್ಮಾಯಿ(ಗೃಹ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

**672 – ಮಂಡ್ಯ ಜಿಲ್ಲೆಯ ನಾಲೆಗಳ ಅಭಿವೃದ್ಧಿ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ)

**631 – ತಮಿಳುನಾಡು ರಾಜ್ಯವು ಅಕ್ರಮವಾಗಿ ನದಿ-ಜೋಡಣೆ ಯೋಜನೆಯನ್ನು ಕೈಗೆತ್ತಿಕೊಂಡಿರುವ ಬಗ್ಗೆ.**

– ಶ್ರೀ ಎಂ.ನಾರಾಯಣ ಸ್ವಾಮಿ

– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ)(ಮುಖ್ಯಮಂತ್ರಿಗಳ ಪರವಾಗಿ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

**689 –** ವಿದ್ಯುತ್ ವಿತರಣಾ ಕಂಪನಿಗಳ ಖಾಸಗೀಕರಣದ ಬಗ್ಗೆ.

- ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
- ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಕಲ್ಯಾಣ ಕರ್ನಾಟಕದಲ್ಲಿ ಮಕ್ಕಳು, ಹಿರಿಯರು ಅಪೌಷ್ಟಿಕತೆಯಿಂದ ಬಳಲುತ್ತಿರುವ ಬಗ್ಗೆ.**

- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.143ರಲ್ಲಿ ಬರುವ ಬಿ.ಬಿ.ಎಂ.ಪಿ. ಸ್ವತ್ತುಗಳ ಬಗ್ಗೆ.**

- ಶ್ರೀ ಪಿ.ಆರ್.ರಮೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಉತ್ತರ ಕನ್ನಡ ಜಿಲ್ಲೆ ಜೊಯಿಡಾ ತಾಲ್ಲೂಕಿನ ಅಂಬೇವಾಡಿಯಿಂದ ಮೌಳಿಂಗವರೆಗಿನ ರಸ್ತೆ ಹಾಳಾಗಿರುವ ಬಗ್ಗೆ.**

- ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ಮಂಡ್ಯ ಜಿಲ್ಲೆಯಲ್ಲಿ ಕಳಪೆ ಗುಣಮಟ್ಟದ ಬೆಲ್ಲ ಉತ್ಪಾದನೆಯಿಂದ ಕೇರಳ ಮತ್ತು ಗುಜರಾತ್ ರಾಜ್ಯಗಳು ಬೆಲ್ಲ ಖರೀದಿ ನಿಷೇಧಿಸಿರುವ ಬಗ್ಗೆ.**

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಉ) ಮೈಸೂರಿನಲ್ಲಿರುವ ರಾಷ್ಟ್ರಕವಿ ಕುವೆಂಪುರವರ ಮನೆ "ಉದಯ ರವಿ"ಯನ್ನು ರಾಷ್ಟ್ರೀಯ ಸ್ಮಾರಕವಾಗಿ ಪರಿವರ್ತಿಸುವ ಬಗ್ಗೆ.**

- ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಊ) ಕೇಂದ್ರ ಸರ್ಕಾರದ ಜಲಜೀವನ್ ಮಿಷನ್ ಯೋಜನೆ ಅಡಿಯಲ್ಲಿ ಗ್ರಾಮೀಣ ಪ್ರದೇಶಗಳ ಮನೆ ಮನೆಗೂ ನೀರು ಪೂರೈಕೆಯಲ್ಲಿ ರಾಜ್ಯ ಹಿಂದುಳಿದಿರುವ ಬಗ್ಗೆ.**

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಋ) ರಾಯಚೂರು ಜಿಲ್ಲೆ ಮಾನ್ವಿ, ಸಿರವಾರ ಮತ್ತು ರಾಯಚೂರು ತಾಲ್ಲೂಕಿನಲ್ಲಿ ತುಂಗಭದ್ರ ನಾಲೆಯಿಂದ ನೀರು ಬರದಿರುವುದರಿಂದ ರೈತರಿಗೆ ತೊಂದರೆಯಾಗಿರುವ ಬಗ್ಗೆ.**

- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ**

**ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಳ ಮಾಡುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ)

**4. ವರದಿಯನ್ನೊಪ್ಪಿಸುವುದು**

**5. ವಿತ್ತೀಯ ಕಾರ್ಯಕಲಾಪ**

**2021–22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಪ್ರತಾಪ್ ಸಿಂಹ ನಾಯಕ್
- ಶ್ರೀ ಆರ್.ಪ್ರಸನ್ನಕುಮಾರ್
- ಶ್ರೀ ಗೋವಿಂದ ರಾಜು

**6. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**ನಾಗಮಂಗಲ ತಾಲ್ಲೂಕಿನ ವಿವಿಧ ಹೋಬಳಿಗಳ ಕಾಲುವೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡಿರುವ ರೈತರಿಗೆ ಭೂಪರಿಹಾರ ನೀಡದೆ ಇರುವ ಬಗ್ಗೆ.**

- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಎಂ.ಎ.ಗೋಪಾಲಸ್ವಾಮಿ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
- ಶ್ರೀ ಮರಿತಿಬ್ಬೇಗೌಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**7. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆ**

**ಅ) 2020–21ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ 62 ನರ್ಸಿಂಗ್ ಮತ್ತು 40 ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಪ್ರಾರಂಭಿಸಲು ಅವಶ್ಯವಿರುವ ಮೂಲಭೂತ ಸೌಕರ್ಯ ಹಾಗೂ ಬೋಧಕ ಸಿಬ್ಬಂದಿಗಳ ಕೊರತೆ ಇದ್ದರೂ ಕೂಡ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿರುವ ಬಗ್ಗೆ.**

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಡಾ:ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)
- ಶ್ರೀ ಎನ್.ರವಿಕುಮಾರ್
- ಶ್ರೀ ಮರಿತಿಬ್ಬೇಗೌಡ
- ಡಾ:ತೇಜಸ್ವಿನಿಗೌಡ
- ಶ್ರೀ ಎನ್.ಅಪ್ಪಾಜಿಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**ಆ) ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರಂ ವಾರ್ಡ್ ಸಂಖ್ಯೆ 53ನೇ ವ್ಯಾಪ್ತಿಯ ಬಸವನಪುರ ಗ್ರಾಮದ ಸರ್ವೆ ನಂಬರ್ 26/1 ರಲ್ಲಿ ನಾಲ್ಕು ಎಕರೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಇದ್ದರೂ ಅಲ್ಲಿನ ಜಿಲ್ಲಾಧಿಕಾರಿಗಳು ಕಾನೂನು ಬಾಹಿರವಾಗಿ ಭೂಪರಿವರ್ತನೆ ಆದೇಶ ಹೊರಡಿಸಿರುವ ಬಗ್ಗೆ.**

- ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಡಾ:ತೇಜಸ್ವಿನಿ ಗೌಡ
- ಶ್ರೀ ರಘುನಾಥ ರಾವ್ ಮಲ್ಕಾಪೂರೆ
- ಶ್ರೀ ಎನ್.ರವಿಕುಮಾರ್
- ಶ್ರೀ ಹೆಚ್.ಎಂ.ರಮೇಶ್ ಗೌಡ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಆಯನೂರು ಮಂಜುನಾಥ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**8. ಕಾರ್ಯಕಲಾಪಗಳ ಪಟ್ಟಿಯಲ್ಲಿನ ಚರ್ಚೆಯಾಗದೆ ಉಳಿದಿರುವ ಗಮನ ಸೆಳೆಯುವ ಸೂಚನೆ ಮತ್ತು ನಿಯಮ 330ರ ವಿಷಯಗಳಿಗೆ ಉತ್ತರಗಳ ಮಂಡನೆ**

**i**) <u>ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು</u>

**ಅ**) ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರಂ ವಾರ್ಡ್ ಸಂಖ್ಯೆ 53ನೇ ವ್ಯಾಪ್ತಿಯ ಬಸವನಪುರ ಗ್ರಾಮದ ಸರ್ವೆ ನಂ.26/1 ರಲ್ಲಿ ನಾಲ್ಕು ಎಕರೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಇದ್ದರೂ ಸಹ ಅಲ್ಲಿನ ಜಿಲ್ಲಾಧಿಕಾರಿಗಳು ಕಾನೂನುಬಾಹಿರವಾಗಿ ಭೂಪರಿವರ್ತನೆ ಆದೇಶ ಹೊರಡಿಸಿರುವ ಬಗ್ಗೆ.

**ಆ**) ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ದೃಷ್ಟಿಯಿಂದ ಪ್ರಮುಖ ಇಲಾಖೆಗಳ ವಿಭಾಗೀಯ ಕಛೇರಿ ಹಾಗೂ ಪ್ರಾದೇಶಿಕ ಆಡಳಿತ ಕಛೇರಿಯನ್ನು ನಿರ್ಮಿಸಲು ಹಾಗೂ ಸುವರ್ಣ ವಿಧಾನಸೌಧವನ್ನು ಸದ್ಬಳಕೆ ಮಾಡಿಕೊಳ್ಳುವ ಬಗ್ಗೆ.

**ಇ**) ಬೆಂಗಳೂರು ಜಲಮಂಡಳಿಯವರು ನೀರಿನ ಸಂಪರ್ಕ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಪಡೆದವರಿಗೆ ಹಾಗೂ ಪಡೆಯದವರಿಗೆ ನೋಟೀಸ್ ಜಾರಿ ಮಾಡಿರುವುದರಿಂದ ಸಾರ್ವಜನಿಕರು ಆತಂಕಕ್ಕೊಳಗಾಗಿರುವ ಬಗ್ಗೆ.

**ಈ**) ಉತ್ತರ ಕರ್ನಾಟಕ ಭಾಗದ ಜನರ ಹಾಗೂ ಜಾನುವಾರುಗಳ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವ ನಿಟ್ಟಿನಲ್ಲಿ ಸಮಗ್ರ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

**ii**) <u>ನಿಯಮ 330ರ ವಿಷಯಗಳು</u>

**ಅ**) ರಾಜ್ಯದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಕೋವಿಡ್-19 ಸಾಂಕ್ರಾಮಿಕ ರೋಗದ ಪರಿಣಾಮದಿಂದಾಗಿ ಲಾಕ್‌ಡೌನ್ ವಿಧಿಸಲಾಗಿ ಶಾಲಾ ಮಕಕ್ಕಳ ಕಲಿಕೆಯಲ್ಲಿ ತೀವ್ರ  ಹಿನ್ನಡೆ ಉಂಟಾಗಿರುವುದರಿಂದ ವಿದ್ಯಾರ್ಥಿಗಳ ಕುಟುಂಬಗಳ ಸ್ಥಿತಿ, ಆರ್ಥಿಕ ಸಂಕಷ್ಟ ಹಾಗೂ ಜೀವನ ಶೈಲಿಗಳ ಕುರಿತಂತೆ ಸಮಗ್ರ ಸಮೀಕ್ಷೆ ನಡೆಸುವ ಬಗ್ಗೆ.

**ಆ**) ಪದವಿ ಪೂರ್ವ ಶಿಕ್ಷಣ ಇಲಾಖೆಯು ದಿನಾಂಕ 27.09.2018ರಂದು ಹೊರಡಿಸಿರುವ ಆದೇಶ ಸಂಖ್ಯೆ ಇಡಿ/107/ಟಿಪಿಯು/2017 ರ ಪ್ರಕಾರ ಅನುದಾನಿತ     ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ತೊಂದರೆಯಾಗುತ್ತಿರುವ ಬಗ್ಗೆ.

**ಇ**) ರಾಜ್ಯದಲ್ಲಿನ ಪೊಲೀಸ್ ಸಿಬ್ಬಂದಿಗಳ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಶ್ರೀ ರಾಘವೇಂದ್ರ ಔರದ್ಕರ್‌ರವರ ವರದಿಗೆ ವ್ಯತಿರಿಕ್ತವಾಗಿ ಆರ್ಥಿಕ ಇಲಾಖೆ ಹೊರಡಿಸಿರುವ  ಮತ್ತೊಂದು ಆದೇಶದ ಪರಿಣಾಮವಾಗಿ ಅನೇಕ ವರ್ಷ ಸೇವೆ ಸಲ್ಲಿಸಿರುವ ಹಿರಿಯ ಸಿಬ್ಬಂದಿಗಳಿಗೆ ಹಾಗೂ ಹೊಸದಾಗಿ ಸೇವೆಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇರಿರುವ ಸಿಬ್ಬಂದಿಗಳಿಗೆ ಸಮಾನ ವೇತನ ನಿಗದಿಯಾಗಿರುವುದರಿಂದ
ತಾರತಮ್ಯವಾಗಿರುವ ವಿಷಯದ ಬಗ್ಗೆ.

\- - -

**(472) 18-03-2021/ 10-30/ ಕೆಹೆಚ್-ಎಂಡಿ**

**ಕರ್ನಾಟಕ ವಿಧಾನ ಪರಿಷತ್ತು**

***ಗುರುವಾರ, 18ನೇ ಮಾರ್ಚ್ 2021***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# 1.ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 1514**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿ 2018-19ನೇ ಸಾಲಿನಿಂದ ಉಂಟಾದ ಅತಿವೃಷ್ಟಿಯಿಂದಾಗಿ ತಾಲ್ಲೂಕಿನಲ್ಲಿ ಹರಿಯುವ ತಟ್ಟಿಹಳ್ಳಕ್ಕೆ ಕೃಷಿ ಭೂಮಿಗೆ ನೀರುಣಿಸಲು ಸಹಾಯವಾಗಲೆಂದು ನಿರ್ಮಿಸಲಾದ 23 ಸಣ್ಣ ಸಣ್ಣ ಬಾಂದಾರುಗಳಲ್ಲಿ 10 ಬಾಂದಾರುಗಳು ಪೂರ್ತಿಯಾಗಿ ಹಾಳಾಗಿವೆ. 2018-19ನೇ ಸಾಲಿನ ಅತಿವೃಷ್ಟಿಯಿಂದ ದುಸ್ಗಿಯಿಂದ ಹಂಪೆಹಳ್ಳಿಯವರೆಗೆ 23 ಬಾಂದಾರುಗಳಲ್ಲಿ 10 ಬಾಂದಾರುಗಳು ಹಾಳಾಗಿದ್ದು, ಅದನ್ನು ಸರಿಯಾಗಿ ರಿಪೇರಿ ಮಾಡಿಲ್ಲ, ಅದಕ್ಕೆ ಬಾಗಿಲು ಹಾಕಿಲ್ಲ. ಅಲ್ಲಿನ ನೀರು ಎಲ್ಲಾ ಕಡೆ ಹರಿದು ಹೋಗಿದೆ. ಈ ರೀತಿಯ ಅತಿವೃಷ್ಟಿಯಿಂದ ಬಾಂದಾರುಗಳಿಗೆ ದೊಡ್ಡ ದೊಡ್ಡ ಮರಗಳು, ಗಿಡಗಂಟಿಗಳು, ಮಣ್ಣು ಬಂದು ಸೇರಿಕೊಂಡು ಬಂದಾರಗಳ ವಿಂಗ್‌ವಾಲ್, ಕೀ ವಾಲ್, ಬಾಡಿವಾಲ್‌ಗಳೆಲ್ಲಾ ಮುರಿದು ಹೋಗಿವೆ.

**(ಮುಂದು)**

**(473) 18/03/2021/ಎಸ್‌ಪಿಆರ್/ಎಂಡಿ/10:40**

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ(ಮುಂದು):**
ಅಲ್ಲಿ ನೀರು ನಿಲ್ಲುವುದಕ್ಕೆ ಅವಕಾಶವೇ ಇಲ್ಲ. ಮುಂದುವರೆದು, ಅಲ್ಲಿ ಯಾವುದೇ ರೀತಿಯಾದ ಅನುಭವಗಳು ಘಟಿಸುವುದಿಲ್ಲವೆಂದು ಲಿಖಿತ ಉತ್ತರದಲ್ಲಿ ಸರ್ಕಾರವು ತಿಳಿಸಿದೆ. 10 ಬಾಂದಾರಗಳಲ್ಲಿ ಸರಿಯಾದ ಕೆಲಸಗಳನ್ನು ನಿರ್ವಹಿಸಿಲ್ಲ; ಅವುಗಳು ಕಳಪೆ ಮಟ್ಟದ್ದಾಗಿವೆ. ದಿನಾಂಕ 23/02/2020 ರಂದು ಪ್ರಕಟಗೊಂಡ **'ಕರಾವಳಿ ಮುಂಜಾವು'** ಎನ್ನುವ ದಿನಪತ್ರಿಕೆಯಲ್ಲಿ **"ಹಾನಿಗೊಳಗಾದ ಬಾಂದಾರ; ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಸಂಕಷ್ಟಗೊಳಗಾದ ರೈತರು"** ಎಂಬ ಶೀರ್ಷಿಕೆಯಡಿ ವರದಿಯೊಂದು ಪ್ರಕಟಗೊಂಡಿತ್ತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಣ್ಣ ನೀರಾವರಿ ಸಚಿವರ ಪರವಾಗಿ):-**ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತುಂಬಾ ಗಂಭೀರವಾದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಸದಸ್ಯರು 2018-19ನೇ ಸಾಲಿನಲ್ಲಿ ಎಂದು ಉಲ್ಲೇಖಿಸಿದ್ದು, ಇದರ ಬದಲಾಗಿ ಅದನ್ನು 2019-20ನೇ ಸಾಲು ಎಂಬುದಾಗಿ ಗಮನಿಸಬೇಕು. ಆ ಸಂದರ್ಭದಲ್ಲಾದ ಅತಿವೃಷ್ಟಿಯಿಂದಾಗಿ ಮತ್ತು ಬೇರೆ ಬೇರೆ ಕಾರಣಗಳಿಂದಾಗಿ ಸುಮಾರು ಬಾಂದಾರುಗಳು ಹಾನಿಗೊಳಗಾಗಿವೆ ಮತ್ತು ಕಳಪೆ ಮಟ್ಟದ ಕಾಮಗಾರಿಗಳು ಎಂಬುದಾಗಿ ಸದಸ್ಯರು ಪ್ರಸ್ತಾಪಿಸಿದ್ದಾರೆ. 2019-20ನೇ ಸಾಲಿನಲ್ಲಿ ಒಟ್ಟು 27 ಬಾಂದಾರುಗಳ ದುರಸ್ತಿ ಮತ್ತು ಪುನಃಶ್ಚೇತನಕ್ಕಾಗಿ 12.20 ಕೋಟಿ ರೂಪಾಯಿಗಳ ಅಂದಾಜು ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ 6.58 ಕೋಟಿ ಅಂದಾಜು ಮೊತ್ತದ 18 ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ. ಆದರೆ ಸದಸ್ಯರು ಕಾಮಗಾರಿಯು ಕಳಪೆ ಗುಣಮಟ್ಟದ್ದಾಗಿವೆ ಎಂದು ಹೇಳುತ್ತಿದ್ದಾರೆ. ನಮ್ಮಲ್ಲಿ ಲಭ್ಯವಿರುವ ಮಾಹಿತಿ ಹಾಗೂ ನಾವು ತೆಗೆಸಿರುವ ಫೋಟೋಗಳನ್ನು ಗಮನಿಸಿದಾಗ, ಅವುಗಳು ಅತಿವೃಷ್ಟಿಯಿಂದಾಗಿ ಆದ ಕಾಮಗಾರಿಗಳಾಗಿವೆ. ಸದಸ್ಯರು ಹೇಳಿರುವ ಅಂಕಿ ಸಂಖ್ಯೆಗಳಲ್ಲಿ ವ್ಯತ್ಯಾಸಗಳಿವೆ. ಅವುಗಳನ್ನು ಸರಿಪಡಿಸಿಕೊಳ್ಳಬಹುದು. ಇದನ್ನು ಹೊರತುಪಡಿಸಿ, ಸದಸ್ಯರು ಬೇರೆ ಇನ್ನೇನಾದರೂ ಹೇಳುವುದಿದ್ದರೆ ಹೇಳಲಿ. ಸದಸ್ಯರು ಒಟ್ಟು 27 ಬಾಂದಾರುಗಳು ಎಂದು ಹೇಳಿದ್ದು, ಆ ಪೈಕಿ 18 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 5.62 ಕೋಟಿ ರೂಪಾಯಿಗಳ ಅಂದಾಜು ಮೊತ್ತದ 9 ಕಾಮಗಾರಿಗಳು ಪ್ರಗತಿಯಲ್ಲಿವೆ. ಈಗ ಪ್ರಗತಿಯಲ್ಲಿರುವ ಕಾಮಗಾರಿಗಳಲ್ಲಿ ಏನಾದರೂ ಲೋಪಗಳಿದ್ದರೆ, ಅದನ್ನೂ ಸಹ ತಿಳಿಸಬಹುದು. ಆ ಕಾಮಗಾರಿಗಳ ಪೈಕಿ 2.349 ಕೋಟಿ ರೂಪಾಯಿಗಳನ್ನು ಮಾತ್ರವೇ ವೆಚ್ಚ ಮಾಡಲಾಗಿದ್ದು, ಇದನ್ನು ಸದಸ್ಯರ ಗಮನಕ್ಕೆ ತರಲಾಗಿದೆ. ಈ ಮೊದಲು ಪೂರ್ಣಗೊಳಿಸಿದ ಕಾಮಗಾರಿಗಳು ಬೇರೆಯಾಗಿವೆ. ಪ್ರಶ್ನಿತ 27 ಬಾಂದಾರುಗಳ ಅಭಿವೃದ್ಧಿಯ ಕಾಮಗಾರಿಗಳಲ್ಲಾದ ಲೋಪಗಳನ್ನು ಸರಿಪಡಿಸಿ, ಗುಣಮಟ್ಟದ ಕೆಲಸಗಳನ್ನು ಮಾಡಲಾಗಿದೆ. ಈಗ ಮಾಡಿರುವ ಕಾಮಗಾರಿಗಳು ಕಳಪೆ ಮಟ್ಟದ್ದಾಗಿಲ್ಲವೆಂದು ವರದಿ ಸ್ವೀಕೃತಗೊಂಡಿದೆ. ಇದನ್ನೂ ಹೊರತುಪಡಿಸಿ, ಸದಸ್ಯರು ಬೇರೆ ಏನನ್ನಾದರೂ ಹೇಳುವುದಾದರೆ ಹೇಳಲಿ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಯಾವುದೂ ಕಳಪೆ ಗುಣಮಟ್ಟದ ಕಾಮಗಾರಿಯಾಗಿಲ್ಲವೆಂದು ಸರ್ಕಾರವು ಹೇಳುತ್ತಿದೆ. ಪತ್ರಿಕೆಯಲ್ಲಿ ಇದರ ಬಗ್ಗೆ ವರದಿಯಾಗಿದ್ದಲ್ಲದೇ ಸ್ಥಳೀಯರು ನಮ್ಮ ಬಳಿ ಈ ಸಂಬಂಧ ದೂರನ್ನು ಸಲ್ಲಿಸಿದ್ದಾರೆ. ಗುಸ್ಗಿಯಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಂಪೆಹಳ್ಳಿಯವರೆಗೆ ತಟ್ಟಿಹಳ್ಳಕ್ಕೆ 23 ಬಾಂದಾರುಗಳನ್ನು ನಿರ್ಮಿಸಲಾಗಿದೆ. ಅತಿವೃಷ್ಟಿಯಿಂದಾಗಿ ಅಲ್ಲಿನ ಬದಿಯ ಗೋಡೆಗಳೆಲ್ಲವೂ ಹಾಳಾಗಿ ಹೋಗಿವೆ. ಆದರೆ ಎಲ್ಲಾ ಬಾಂದಾರುಗಳನ್ನು ಸರಿಯಾಗಿ ನಿರ್ಮಿಸಲಾಗಿದೆ ಎಂದು ಸರ್ಕಾರವು ಹೇಳುತ್ತಿದೆ. ಆದರೆ, ಫೆಬ್ರವರಿ ಮಾಹೆಯಲ್ಲಿಯೇ ಈ ಬಗ್ಗೆ ವರದಿಯೊಂದು ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಆ ಭಾಗದ ಬಾಂದಾರುಗಳನ್ನು ಸರಿಯಾಗಿ ಮಾಡಿಲ್ಲ. ಇಲಾಖೆಯ ಅಧಿಕಾರಿಗಳು ಕೊಟ್ಟ ಉತ್ತರವು ತಪ್ಪಾಗಿದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅಲ್ಲಿನ ಕಾಮಗಾರಿಗಳು ಕಳಪೆಯಾಗಿವೆ ಎಂದು ಸದಸ್ಯರು ಹೇಳುತ್ತಿದ್ದಾರೆ. ಹಾಲಿ ಇರುವ ಬಾಂದಾರುವಿನ ಬದಿಯ ಗೋಡೆಗಳು ಕೊಚ್ಚಿಕೊಂಡು ಹೋಗಿವೆ. ಸರ್ಕಾರದ ಹಣವು ಮಾತ್ರವೇ ವ್ಯಯವಾಗಿದೆ ವಿನಾ ಅಲ್ಲಿ ಯಾವುದೇ ರೀತಿಯ ಗುಣಾತ್ಮಕವಾದ ಕೆಲಸಗಳಾಗಿರುವುದಿಲ್ಲ. ಆ ಬಾಂದಾರುಗಳ ಕಳಪೆ ಮಟ್ಟದ ಕಾಮಗಾರಿಗಳಾಗಿರುವುದರಿಂದ ಮುಂದಿನ ದಿನಗಳಲ್ಲಿ ರೈತರಿಗೆ ತೊಂದರೆಯಾಗುತ್ತದೆ. ಪುನಃ ಭಾರಿ ಪ್ರಮಾಣದಲ್ಲಿ ಮಳೆಯಾದರೆ, ನಮ್ಮ ಭಾಗದ ರೈತರ ಭೂಮಿ ಮತ್ತು ಬೆಳೆಗಳು ಕೊಚ್ಚಿಕೊಂಡು ಹೋಗುತ್ತವೆ.

**ಸಭಾಪತಿಯವರು:–** ಇಲಾಖೆಯ ಅಧಿಕಾರಿಗಳಿಗೆ ಸದಸ್ಯರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ಅವುಗಳನ್ನು ಸರಿಪಡಿಸುವಂತೆ ನಿರ್ದೇಶನ ನೀಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅಲ್ಲಿ Third Party Inspection ಅನ್ನು ಮಾಡಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, 2004–05 ನೇ ಸಾಲಿನಲ್ಲಿ ಆಗಿರುವ ಕಾಮಗಾರಿಗಳಲ್ಲಿ ಪ್ರವಾಹ ಬಂದು ಅಲ್ಲಿನ ಕೀ ವಾಲ್‌ಗಳು ಒಡೆದುಹೋಗಿವೆ. ಅಂತಹ 27 ಬಾಂದಾರುಗಳ ದುರಸ್ತಿ ಅಥವಾ ಪುನಃಶ್ಚೇತನ ಕಾಮಗಾರಿಗಳನ್ನು ಕೈಗೆತ್ತಿಕೊಂಡು, ಆ ಪೈಕಿ 18ನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಇಲಾಖೆಯ ಅಧಿಕಾರಿಗಳನ್ನು ಸದಸ್ಯರ ಬಳಿ ಕಳುಹಿಸಿ, ಕೊಡುತ್ತೇವೆ. ಅವರೊಂದಿಗೆ ಸ್ಥಳ ತನಿಖೆಯನ್ನು ಮಾಡಿ, ಅವರೇ ಖುದ್ದು ಪರಿಶೀಲನೆ ಮಾಡಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಈಗ ಅಲ್ಲಿನ ನೀರು ಎಲ್ಲವೂ ಹರಿದು ಹೋಗಿದೆ. ನೀರು ಇರುವ ಬಾಂದಾರುಗಳೇ ಇಲ್ಲ. ಹೀಗಾಗಿ ರೈತರಿಗೆ ಈಗ ನೀರು ಸಿಗುವುದಿಲ್ಲ. ಹಾಲಿ ಕಬ್ಬನ್ನು ಬೆಳೆಯುತ್ತಿದ್ದಾರೆ; ಬೇರೆ ಬೀಜಗಳನ್ನೂ ಸಹ ಬಿತ್ತಿದ್ದಾರೆ.

**ಸಭಾಪತಿಯವರು:–** ಈಗ ಆದದ್ದು ಆಯಿತು. ಆದರೆ ಇದು ಮುಂದೆ ಸರಿಯಾಗಬೇಕಾದರೆ ಏನು ಮಾಡಬೇಕೆಂದು ಅವರು ತಿಳಿಸುತ್ತಾರೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಲಿಖಿತ ಉತ್ತರವನ್ನು ನೀಡಿದೆ. ನಾವು ಅಲ್ಲಿಯೇ ಇರುತ್ತೇವೆ ಹಾಗೂ ಬಾಂದಾರನ್ನು ನೋಡಿಕೊಂಡು ಬಂದಿದ್ದೇವೆ. ಅಲ್ಲಿನ ಕಳಪೆ ಕಾಮಗಾರಿಯ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಅದನ್ನು ತಾವು ನೋಡಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಿತ ಎಲ್ಲಾ ಮಾಹಿತಿಗಳನ್ನು ನಾನು ತೆಗೆದುಕೊಂಡು ಬಂದಿದ್ದೇನೆ. 2004–05 ನೇ ಸಾಲಿನಲ್ಲಾದ ಕಾಮಗಾರಿಯು ಅತಿವೃಷ್ಟಿಯಿಂದಾಗಿ ಒಡೆದು ಹೋಗಿದ್ದು, ಕಾಮಗಾರಿಗಳ ಪುನಃಶ್ಚೇತನ ಕೆಲಸಗಳಾಗಿವೆ. ಇಷ್ಟಾಗಿಯೂ ಸಹ ಸದಸ್ಯರಿಗೆ ಸಮಾಧಾನವಿಲ್ಲವೆಂದರೆ, ಇಲಾಖೆಯ ಅಧಿಕಾರಿಗಳ ತಂಡವನ್ನು ಕಳುಹಿಸಿಕೊಟ್ಟು ಪರಿಶೀಲನೆ ಮಾಡಲಾಗುವುದು. ಸದಸ್ಯರು ಖುದ್ದು ಪರಿಶೀಲಿಸಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ: 1615**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗೆ ಸರ್ಕಾರವು ಉತ್ತರವನ್ನು ನೀಡಿದೆ. ಮೂರು ವರ್ಷಗಳ ಹಿಂದಿನ ಕೆಲಸವು ಪ್ರಗತಿಯಲ್ಲಿದೆ; ಇನ್ನೂ ಕೆಲಸಗಳನ್ನು ಮಾಡಬೇಕೆಂದು ಉತ್ತರಿಸಿದ್ದಾರೆ. ನೀರಾವರಿಯನ್ನೇ ನೆಚ್ಚಿಕೊಂಡಿರುವ ನಮ್ಮ ಭಾಗದ ರೈತರಿಗೆ ಕಷ್ಟವಾಗುತ್ತದೆ. ಹೀಗಾಗಿ ಇದಕ್ಕೆ ಕಾಲಮಿತಿಯನ್ನು ನಿಗದಿಪಡಿಸಿ, ಆರು ತಿಂಗಳು ಅಥವಾ ಒಂದು ವರ್ಷದೊಳಗೆ ಬಾಕಿಯಿರುವ ಕೆಲಸಗಳನ್ನು ಮಾಡಿಕೊಡಬೇಕು. ಸರಿಯಾದ ಸಮಯದಲ್ಲಿ ಕೆಲಸಗಳು ಆಗಿಲ್ಲವೆಂದರೆ, ರೈತರಿಗೆ ಅನುಕೂಲವಾಗುವುದಿಲ್ಲ.

2018-19 ಮತ್ತು 2019-20 ನೇ ಸಾಲಿನಲ್ಲಿ 41 ಕಾಮಗಾರಿಗಳ ಪೈಕಿ ಕೇವಲ ಒಂದನ್ನು ಮಾತ್ರವೇ ಪೂರ್ಣಗೊಳಿಸಿರುವುದಾಗಿ ಸರ್ಕಾರವು ಉತ್ತರಿಸಿದೆ. ಇನ್ನೂ 40 ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಸರ್ಕಾರವು ತಿಳಿಸಿದೆ. ಇದರರ್ಥ ಈ ಇಲಾಖೆಯಲ್ಲಿ ಕೆಲಸಗಳಾಗಿಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಉದ್ಯೋಗ ಖಾತ್ರಿ ಯೋಜನೆಯಡಿ ಕೆರೆಗಳ ಹೂಳೆತ್ತುವ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲವೆಂದು ಸರ್ಕಾರವು ಲಿಖಿತ ಉತ್ತರದಲ್ಲಿ ತಿಳಿಸಿದೆ. ಈ ಕಾರಣಕ್ಕಾಗಿ ಸ್ಥಳೀಯರಿಗೆ ಕಾಮಗಾರಿಯನ್ನು ವಹಿಸಬೇಕು. ಇಂತಹ ಕಾಮಗಾರಿಗಳಲ್ಲಿ ಸರ್ಕಾರದಿಂದ ಸರಿಯಾಗಿ ಹಣ ಸಂದಾಯವಾಗುವುದಿಲ್ಲ ಎನ್ನುವ ಕಾರಣಕಾಗಿ ಸಾಕಷ್ಟು ಕೂಲಿ-ಕಾರ್ಮಿಕರು ಕೆಲಸಕ್ಕೆ ಬರುವುದಿಲ್ಲ. ಇದರ ಬಗ್ಗೆ ಸರ್ಕಾರವು ಹಲವಸೆಯನ್ನು ಕೊಟ್ಟು, ಕೆಲಸಗಳನ್ನು ಮಾಡಿಸಿದರೆ, ರೈತರಿಗೆ ಮತ್ತು ಜನರಿಗೆ ಅನುಕೂಲವಾಗುತ್ತದೆ, ಹಾಗೂ ರಾಜ್ಯದ ಪ್ರಗತಿಯುಂಟಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಣ್ಣ ನೀರಾವರಿ ಸಚಿವರ ಪರವಾಗಿ):-**ಮಾನ್ಯ ಸಭಾಪತಿಯವರೇ, ಸದಸ್ಯರು ಕೆರೆ ಸಂಜೀವಿನಿ ಯೋಜನೆಯಡಿ ಕೈಗೆತ್ತಿಕೊಳ್ಳುವ ಕಾಮಗಾರಿಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಕೆರೆಗಳು ಇರುವ ಪ್ರದೇಶದಲ್ಲಿನ ರೈತರನ್ನು ಒಗ್ಗೂಡಿಸಿ, ಸಮಿತಿಯನ್ನು ಮಾಡಿ ಅಲ್ಲಿ ನಮ್ಮ ಇಲಾಖೆಯ ಮೂಲಕ ಕೆರೆಗಳ ಹೂಳನ್ನು ತೆಗೆದು ರೈತರಿಗೆ ವಿತರಣೆ ಮಾಡುವ ಕಾರ್ಯಕ್ರಮ ಇದಾಗಿದೆ. ಇದರ ಮೂಲಕ ಕೆರೆಯ ನೀರು ಅಭಿವೃದ್ಧಿಯಾಗುತ್ತದೆ ಮತ್ತು ರೈತರಿಗೆ ಹೂಳು ದೊರೆಯುತ್ತದೆ ಎನ್ನುವ ಯೋಜನೆಯು ಇದಾಗಿದೆ. ಸದಸ್ಯರು ತಿಳಿಸಿದಂತೆ, ಕೆಲವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಮತ್ತೆ ಕೆಲವು ಪ್ರಗತಿಯಲ್ಲಿವೆ. ತಕ್ಷಣವೇ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಎಲ್ಲಾ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸಲಾಗುವುದು.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಇತ್ತೀಚೆಗೆ ಮೈಸೂರು ತಾಲ್ಲೂಕಿನ ಜಯಪುರ ಹೋಬಳಿಯ ಮದ್ದೂರು ಗ್ರಾಮದ ಒಡಕನಕಟ್ಟೆ ಇದು ದೊಡ್ಡ ಕೆರೆಯಾಗಿದ್ದು ಇದನ್ನು ಒತ್ತುವರಿ ಮಾಡಲಾಗಿತ್ತು. ಅದನ್ನು ಆ ಊರಿನವರು ಬಿಡಿಸಿಕೊಂಡಿದ್ದಾರೆ. ಇದರಿಂದ ಸುಮಾರು ನಾಲ್ಕು ಸಾವಿರ ಕುಟುಂಬಕ್ಕೆ ಅನುಕೂಲವಾಗುತ್ತದೆ ಮತ್ತು ಹತ್ತಾರು ಊರುಗಳಿಗೆ ಕುಡಿಯುವುದಕ್ಕೆ ಅಥವಾ ವ್ಯವಸ್ಯಾಯಕ್ಕಾಗಿ ನೀರಿನ ವ್ಯವಸ್ಥೆಯಾಗುತ್ತದೆ. ಇಂತಹ ಕೆಲಸಗಳನ್ನು ದಯಮಾಡಿ ಮಾಡಿಸಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದನ್ನು ಪರಿಶೀಲಿಸಲಾಗುವುದು.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಪರಿಶೀಲನೆಯಲ್ಲ, ಸರ್ಕಾರವು ಭರವಸೆಯನ್ನು ಕೊಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಂತಹ ಕಾಮಗಾರಿಗಳನ್ನು ಪ್ರಥಮವಾಗಿ ಕೈಗೆತ್ತಿಕೊಳ್ಳುವ ಕೆಲಸಗಳನ್ನು ಮಾಡುತ್ತೇವೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1628**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟಂತೆ ನನ್ನ ಪ್ರಶ್ನೆಗೆ ಮುಖ್ಯಮಂತ್ರಿಗಳ ಪರವಾಗಿ ಗೃಹ ಸಚಿವರು ಕಳೆದ ಅಧಿವೇಶನದಲ್ಲಿ ಉತ್ತರ ನೀಡಿದ್ದರು. ಈ ವಿಚಾರದಲ್ಲಿ ನಾನು ಬಹಳ ಆಶಾ ಗೋಪುರವನ್ನು ಕಟ್ಟಿಕೊಂಡಿದ್ದೇನು. ಬಹುಶಃ ನನ್ನ ಪ್ರಶ್ನೆಯು ಇಲ್ಲಿ ಚರ್ಚೆಯಾದರೆ, ಸಮಸ್ಯೆ ಬಗೆಹರಿಯುತ್ತದೆ ಎಂದು ಭಾವಿಸಿದ್ದೇನು. ಶ್ರೀ ಕೆ.ಟಿ.ಶ್ರೀಕಂಠೇಗೌಡರವರೂ ಸಹ ಇದರ ಪರವಾಗಿದ್ದಾರೆ. ಆ ಹೋಬಳಿಯಲ್ಲಿ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸುವ ಬಗ್ಗೆ ಪ್ರಸ್ತಾಪಿಸಿದರು. ಆದರೆ ಇಲ್ಲಿನ ದುರಂತವೇನೆಂದರೆ, ಇದು ಆಗಲೇ ಇಲ್ಲ. ಆದ್ದರಿಂದ ಇದು ಚರ್ಚೆ ಮಾಡುವ ವಿಷಯವಾಗಿದೆ. ಸಚಿವರು ಪ್ರಶ್ನೆಗೆ ಉತ್ತರ ನೀಡಿ, ಅದರಿಂದ ನಾವು ತೃಪ್ತರಾಗಿ ಕೆಲಸವಾಗುತ್ತದೆ ಎಂದು ನಾವು ಆಸೆಯನ್ನಿಟ್ಟುಕೊಂಡಿದ್ದೇವು. ನಿಜವಾಗಿಯೂ ಸಹ ಸದನದಲ್ಲಿ ನೀಡಿದ ಉತ್ತರಕ್ಕೆ ಬೆಲೆ ಇಲ್ಲವೆಂದಾದರೆ, ನಮ್ಮ ಪ್ರಶ್ನೆಗೆ ಯಾವ ಅರ್ಥ ಮತ್ತು ಮಹತ್ವವಿದೆ? ಗೃಹ ಸಚಿವರು ಮುಖ್ಯಮಂತ್ರಿಗಳ ಪರವಾಗಿ ನೀಡಿದ ಉತ್ತರಕ್ಕೆ ಯಾವ ಅರ್ಥವಿದೆ?

**ಶ್ರೀ ಎಸ್.ಆರ್.ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಸದಸ್ಯರು ರೈತನ ಬಗ್ಗೆ ಪ್ರಶ್ನೆಯನ್ನು ಕೇಳಿದ್ದರು. ನಾನು ಅಂದಿನ ದಿನವೇ ಸಂಬಂಧಪಟ್ಟ Chamundeshwari Electricity Supply Corporation ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚನೆಯನ್ನು ನೀಡಿದ್ದೇನು. ಅವರು ಕ್ರಮ ತೆಗೆದುಕೊಳ್ಳುವುದಾಗಿ ಈಗಾಗಲೇ ತಿಳಿಸಿದ್ದರು. ಅದರ ವಿವರವನ್ನು ನಾನು ಪಡೆದುಕೊಂಡು ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನಾಳೆಯ ದಿನ ಸದಸ್ಯರಿಗೆ ಒದಗಿಸಲಾಗುವುದು. ಸದನದಲ್ಲಿ ನಾವು ಒಮ್ಮೆ ಹೇಳಿದ ಮೇಲೆ ಆ ಕೆಲಸವು ಆಗಲೇ ಬೇಕು. ನಾನು ಸಂಪೂರ್ಣವಾದ ಜವಾಬ್ದಾರಿಯನ್ನು ತೆಗೆದುಕೊಂಡು ಆ ಕೆಲಸಗಳನ್ನು ಮಾಡಿಸುತ್ತೇನೆ. ಈಗ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದ್ದು, ಇದರ ಬಗ್ಗೆ ಮುಂದಿನ ಪ್ರಶ್ನೆಗಳನ್ನು ಕೇಳಬಹುದು.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೇಳಿದ ಪ್ರಶ್ನೆಗೆ ಸರ್ಕಾರವು ಬಹಳ ಕೂಲಂಕುಷವಾದ ಉತ್ತರವನ್ನು ನೀಡಿದೆ. ಇಲ್ಲಿರುವ ಬಹಳ ಪ್ರಮುಖವಾದ ಪ್ರಶ್ನೆ ಏನೆಂದರೆ, ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಗೆ ಮಂಜೂರಾದ ವಿದ್ಯುತ್ ಉಪಕೇಂದ್ರಗಳ ಸಂಖ್ಯೆ ಎಷ್ಟು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವುಗಳ ಅನುಷ್ಠಾನಕ್ಕೆ ಮೀಸಲಿರಿಸಿದ ಅನುದಾನವೆಷ್ಟು ಎನ್ನುವುದಾಗಿರುತ್ತದೆ. ಇದಕ್ಕೆ ಸರ್ಕಾರವು 'ಕಳೆದ ಮೂರು ವರ್ಷಗಳಲ್ಲಿ ಕ.ವಿ.ಪ್ರ.ನಿ.ನಿ. ವತಿಯಿಂದ ಮಂಡ್ಯ ಜಿಲ್ಲೆಗೆ ನಾಗಮಂಗಲ ತಾಲ್ಲೂಕಿನಲ್ಲಿ 'ನಾಗಮಂಗಲ ಸರಹದ್ದು' 2 X 100 ಎಂ.ವಿ.ಎ. 220/66 ಕೆ.ವಿ. ವಿದ್ಯುತ್ ಉಪಕೇಂದ್ರ ಮಂಜೂರಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಕೇವಲ ನಾಗಮಂಗಲ ಸರಹದ್ದು ಮಾತ್ರವೇ ಸರ್ಕಾರವು ಉತ್ತರಿಸಿದೆ. ಆದರೆ ನಾನು ಇಡೀ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದೆನು.

**(ಮುಂದು)**

**(474)18-03-2021(10-50)ಬಿಎಸ್‌ಡಿ-ಎಕೆ**

**ಶ್ರೀ ಎನ್. ಅಪ್ಪಾಜಿಗೌಡ(ಮುಂದು):-**

ಕೇವಲ ನಾಗಮಂಗಲ ಸರಹದ್ದಿಗೆ ಮಾತ್ರ ಉತ್ತರವನ್ನು ಕೊಟ್ಟಿದ್ದು, ನಾನು ಇಡೀ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿದ್ಯುತ್ ಉಪಕೇಂದ್ರಗಳು ಅಂದರೆ substations ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅದರಲ್ಲಿ ಪ್ರಮುಖವಾದ ಒಂದೇ ಒಂದು 220 kV substation ಅನ್ನು ನಾವು ತೆಗೆದುಕೊಂಡಿದ್ದೇವೆ. ರೂ.196 ಕೋಟಿಯ 220 kV substation ಅನ್ನು ತೆಗೆದುಕೊಂಡಿದ್ದೇವೆ. ಆ ಕೆಲಸ ಪ್ರಾರಂಭ ಮಾಡಿದ್ದು, ಅನುದಾನ ಬಿಡುಗಡೆ ಮಾಡಿ ಕಾಲಮಿತಿಯಲ್ಲಿ ಮುಗಿಸಲು ನಮ್ಮ programme ನಲ್ಲಿ ಇದೆ.

**ಶ್ರೀ ಎನ್. ಅಪ್ಪಾಜಿಗೌಡ:-** ಕೇವಲ ನಾಗಮಂಗಲವನ್ನು ಮಾತ್ರ ತೆಗೆದುಕೊಂಡಿದ್ದು, ನಾನು ಇಡೀ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಉಪ ಕೇಂದ್ರಗಳನ್ನು ಪ್ರಾರಂಭ ಮಾಡುತ್ತಾರೆ ಎಂಬ ಪ್ರಶ್ನೆ ಕೇಳಿದ್ದೇನೆ. ನಾನು ಉಪ ಕೇಂದ್ರಗಳ ಸಂಖ್ಯೆ ಕೇಳಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ನಮಗೆ ಬಂದಿರುವ ಮಾಹಿತಿಯಂತೆ ಇಡೀ ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿಯೇ ರೂ.196 ಕೋಟಿಯ 220 kV ಯ ಕೆಲಸವನ್ನು ತೆಗೆದುಕೊಂಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್. ಅಪ್ಪಾಜಿಗೌಡ:–** ಅಂದರೆ ಬೇರೆ 6 ತಾಲ್ಲೂಕುಗಳಲ್ಲಿ ಎಲ್ಲಿಯೂ ತೆಗೆದುಕೊಂಡಿಲ್ಲವೇ? ಅಧಿಕಾರಿಗಳ ಕೊಟ್ಟ ಉತ್ತರವನ್ನು ಹೇಳುವ ಬದಲು ಕಳೆದ 3 ವರ್ಷಗಳಲ್ಲಿ ನಾಗಮಂಗಲ ಬಿಟ್ಟು ಬೇರೆ ಕಡೆ ಪ್ರಾರಂಭ ಮಾಡಿಲ್ಲವೇ? ಅಥವಾ ಮಂಜೂರಾಗಿಲ್ಲವೇ?

**ಶ್ರೀ ಬಸವರಾಜ ಬೊಮ್ಮಾಯಿ:–** ಕಳೆದ 3 ವರ್ಷಗಳಲ್ಲಿ ಇದೊಂದನ್ನು ಪ್ರಾರಂಭ ಮಾಡಿದ್ದೇವೆ, ಅದರಂತೆ ಉತ್ತರ ಕೊಟ್ಟಿದ್ದೇನೆ.

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಗೆ ಮಂಜೂರಾದ ಹೊಸ ವಿದ್ಯುತ್ ಉಪ ಕೇಂದ್ರಗಳಲ್ಲಿ ಎಷ್ಟು ಕಾಮಗಾರಿಗಳು ಪ್ರಾರಂಭವಾಗಿವೆ ಹಾಗೂ ಯಾವ ಹಂತದಲ್ಲಿವೆ ಮತ್ತು ಕಳೆದ ಮೂರು ವರ್ಷಗಳಲ್ಲಿ ಅಕ್ರಮ ಸಕ್ರಮ ಶೀಘ್ರ ಸಂಪರ್ಕ ಹೊಂದಲು ಸಾರ್ವಜನಿಕರಿಂದ ಸಲ್ಲಿಕೆಯಾದ ಅರ್ಜಿಗಳೆಷ್ಟು; ಅದರಲ್ಲಿ ವಿಲೇವಾರಿ ಮಾಡಿದ ಅರ್ಜಿಗಳೆಷ್ಟು; ವಿಲೇವಾರಿಯಾಗದಿರಲು ಕಾರಣವೇನು ಎಂಬ ಪ್ರಶ್ನೆಗಳನ್ನು ಕೇಳಿದ್ದೇನೆ. ಇದು ಬಹಳ ಪ್ರಮುಖವಾದ ಪ್ರಶ್ನೆಯಾಗಿದ್ದು, ತಾವು ರೈತಾಪಿ ವರ್ಗದಿಂದ ಬಂದಿದವರಾಗಿದ್ದೀರಿ. ವಿದ್ಯುತ್ ಜಾಸ್ತಿ ಉತ್ಪಾದನೆಯಾಗುತ್ತಿದ್ದು, ಈಗಲೂ ರೈತರಿಗೆ ಅಕ್ರಮ ಸಕ್ರಮದಡಿ 10 ವರ್ಷಗಳಿಂದ ರೂ.20 ರಿಂದ ರೂ.50 ಸಾವಿರದವರೆಗೆ ಹಣ ಕಟ್ಟಿದ್ದರೂ ಕೊಡುವುದಕ್ಕೆ ಆಗುತ್ತಿಲ್ಲ. ಜೊತೆಗೆ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಮಂಡ್ಯ ಜಿಲ್ಲೆಯ ಪ್ರತಿ ತಾಲ್ಲೂಕುಗಳಿಗೆ ಸುಮಾರು ರೂ.30 ರಿಂದ 40 ಕೋಟಿ ಹಣ ಬಿಡುಗಡೆ ಮಾಡಿದ್ದಾರೆ. ರಾಜ್ ಎಂಬುವವರು electrical contract ತೆಗೆದುಕೊಂಡಿದ್ದು, ಕೆಲಸವನ್ನೇ ಮಾಡುತ್ತಿಲ್ಲ. Tender ಆಗಿ ಸುಮಾರು 3 ವರ್ಷಗಳು ಕಳೆದಿದೆ. ಎಷ್ಟು ದಿವಸ ಸಮಯ ಕೊಡುತ್ತಾರೆ? ರೈತರ ಗತಿ ಏನು? ವಿದ್ಯುತ್ ಜಾಸ್ತಿ ಇದೆ ಎಂದು ಹೇಳಿ ಈಗಲೂ ನಮ್ಮ ಹಳ್ಳಿಗಳ ಕಡೆ current ಇಲ್ಲ. ರೈತರು ಬಹಳ ಕಷ್ಟ ಪಡುತ್ತಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಒಟ್ಟು 13,798 ಅರ್ಜಿಗಳು ಅಕ್ರಮ ಸಕ್ರಮಕ್ಕಾಗಿ ಬಂದಿವೆ. ಅದರಲ್ಲಿ 6,756 ಅರ್ಜಿಗಳನ್ನು ವಿಲೇವಾರಿ ಮಾಡಿದ್ದು, ಇನ್ನೂ 7,000 ಅರ್ಜಿಗಳನ್ನು ವಿಲೇವಾರಿ ಮಾಡಬೇಕಾಗಿದೆ. ಇದರಲ್ಲಿ ರೂ.20 ಸಾವಿರ ರೈತರು ನೀಡುತ್ತಿದ್ದು, ಸುಮಾರು ರೂ.1.75 ಲಕ್ಷ ಸರ್ಕಾರದಿಂದ ಕೊಡಬೇಕಾಗುತ್ತದೆ. ಈ ಕೆಲಸ ಪ್ರಗತಿಯಲ್ಲಿದ್ದು, ಈ ವರ್ಷದ ಛಣಜರಜಣ ನಲ್ಲಿಯೂ ಅನುದಾನವನ್ನು ಪಡೆದುಕೊಂಡು ಬಾಕಿ ಇರುವುದನ್ನು ಕಾಲಮಿತಿಯಲ್ಲಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್. ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ನಾಯಕರಾದ ಮಾನ್ಯ ಕುಮಾರಸ್ವಾಮಿಯವರು ಮಂಡ್ಯ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೂ ಸುಮಾರು ರೂ.30 ರಿಂದ 40 ಕೋಟಿಗಳನ್ನು ಬಿಡುಗಡೆ ಮಾಡಿದ್ದು, tender ಸಹ ಆಗಿದೆ. ಇಲ್ಲಿ ಬಹಳ ಮುಖ್ಯವಾದ ಪ್ರಶ್ನೆ ಏನೆಂದರೆ, ಈ ಗುತ್ತಿಗೆದಾರರ ಸಮಸ್ಯೆ ಇದ್ದು, ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದು ಕಣ್ಣೀರು ತರಿಸುವ ಕೆಲಸವಾಗಿದೆ. ಅದರ ಜೊತೆಗೆ electrical department ನ ಅಧಿಕಾರಿಗಳು ಅಂದರೆ ಮಂಡ್ಯ ಮತ್ತು ನಾಗಮಂಗಲದ CESCOM ಅಧಿಕಾರಿಗಳಿಗೆ ನಾವು ಹೇಳಿದರೂ ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ಬಹಳ ಉಡಾಫೆ ಉತ್ತರಗಳನ್ನು ಕೊಡುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯಲ್ಲಿ transformer ನಿಂದ ಹಿಡಿದು ರೈತರ ಅಕ್ರಮ ಸಕ್ರಮದವರೆಗೂ ಹಲವಾರು ಸಮಸ್ಯೆಗಳಿದ್ದು, ಈ ಬಗ್ಗೆ CESCOM MD, engineers ಮತ್ತು ಮಂಡ್ಯ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳ ಸಭೆಯನ್ನು ಮುಂದಿನ ಸೋಮವಾರ-ಮಂಗಳವಾರದೊಳಗೆ ಕರೆದು ಸಮಸ್ಯೆಗಳನ್ನು ಬಗೆಹರಿಸುತ್ತೇನೆ.

**ಸಭಾಪತಿಯವರು:-** ನಂತರ ಶ್ರೀ ಎಸ್. ರವಿ ರವರು ಸದನದಲ್ಲಿ ಹಾಜರಿಲ್ಲ, ನಂತರ ಶ್ರೀ ಯು.ಬಿ. ವೆಂಕಟೇಶ್ ರವರು ಪ್ರಶ್ನೆ ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1535**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಬೆಂಗಳೂರು ಅಭಿವೃದ್ಧಿ ಮಾನ್ಯ ಮುಖ್ಯಮಂತ್ರಿಗಳ ಬಳಿ ಇದೆ. ನಾನು ಮೊದಲಿಂದಲೂ ಈ ಖಾತೆಯನ್ನು ಬೇರೆಯವರಿಗೆ ವಹಿಸಿಕೊಡಬೇಕೆಂದು ಹೇಳುತ್ತಿದ್ದೇನೆ. ಉತ್ತರದಲ್ಲಿ ಹೇಳಿರುವಂತೆ ಏನೇನೂ ಆಗಿಲ್ಲ, BWSSB ನವರು road cut ಮಾಡಿದ್ದಕ್ಕೆ ಆಗಿದೆ ಎಂದು ಹೇಳಿದ್ದಾರೆ. ಇಷ್ಟೊಂದು ಬೇಜವಾಬ್ದಾರಿ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳಿಂದ ನಿರೀಕ್ಷೆ ಮಾಡಿರಲಿಲ್ಲ. ಉತ್ತರದಲ್ಲಿ ' ಪ್ರಸ್ತುತ, ಸದರಿ ಸರ್ವೀಸ್ ರಸ್ತೆಯನ್ನು ದುರಸ್ಥಿಪಡಿಸಿ ಮರು ಡಾಂಬರೀಕರಣ ಕೈಗೊಂಡಿದ್ದು, ಸೇವಾ ರಸ್ತೆಯನ್ನು ಸಾರ್ವಜನಿಕರ ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗಿರುತ್ತದೆ ಮತ್ತು ಖಾಸಗಿಯವರ ಅನ್ಯ ಚಟುವಟಿಕೆಗಳಿಗೆ ಕಡಿವಾಣ ಹಾಕಲಾಗಿರುತ್ತದೆ' ಎಂದು ತಿಳಿಸಿದ್ದಾರೆ. ಇಂತಹ ಹಾರಿಕೆ ಉತ್ತರವನ್ನು ನೀಡುವ ಮೂಲಕ ಸದನಕ್ಕೆ ತಪ್ಪು ಮಾಹಿತಿ ನೀಡಬಾರದು. ನಾನು ನಿನ್ನೆ ಸಾಯಂಕಾಲ ವಸ್ತುಸ್ಥಿತಿಯ ಬಗ್ಗೆ photo ತಂದಿದ್ದು, ರಾತ್ರೋರಾತ್ರಿ ಚಮತ್ಕಾರ ಅಥವಾ ಪವಾಡ ಮಾಡಿದ್ದರೆ ನನಗೆ ಗೊತ್ತಿಲ್ಲ. ಆ ರೀತಿ ಆಗಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ನಿನ್ನೆ ಸಾಯಂಕಾಲದವರೆಗೂ ಇದೇ ರೀತಿ ಇದೆ. ಬೇಕಾದಷ್ಟು accidents ಆಗುತ್ತಿವೆ. ಈ road ನಾಯಂಡಹಳ್ಳಿ junction ಗೆ ಹೋಗುತ್ತದೆ. ಆಜುಬಾಜು ಇರುವವರು ಅನೈತಿಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಮೊದಲು ಒಂದು bar ಇದ್ದು, ನಂತರ BDA ನವರು ಒಡೆದುಹಾಕಿದರು. ಆ ದಾರಿಯಲ್ಲಿ ಹೆಣ್ಣುಮಕ್ಕಳು ಓಡಾಡಲು ಭಯ ಬೀಳುತ್ತಾರೆ. Police ಅಥವಾ engineer ಗಳು ಏನು ಮಾಡುತ್ತಿದ್ದಾರೆ? ನಾನು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದರೆ ನನಗೆ ಶಿಕ್ಷೆ ಆಗಲಿ, ಇಲ್ಲದಿದ್ದರೆ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾಯಂಡಹಳ್ಳಿ junction ನಲ್ಲಿ service road ಇದೆ. BWSSB ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ shed ಗಳು ಇದ್ದದ್ದು ನಿಜ. ಅವರು ಹೇಳುತ್ತಿರುವುದು ನಿಜ. ಈಗ ಆ ಕೆಲಸ ಪೂರ್ತಿಯಾಗಿದ್ದು, cleaning ಮಾಡುತ್ತಿದ್ದಾರೆ. ಅದನ್ನು ಸಾರ್ವಜನಿಕರಿಗೆ ಮುಕ್ತವಾಗಿಡಲು ಆದೇಶ ಕೊಟ್ಟಿದ್ದೇವೆ. ಮೊದಲು ಕೆಲಸ ಮಾಡುವಾಗ ಬಹಳಷ್ಟು ಅಡಚಣೆ ಆಗಿರುವುದು ಗಮನಕ್ಕೆ ಬಂದು, ಈಗ ಕೆಲಸ ಬೇಗ ಆಗಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

complete ಮಾಡಲಾಗಿದೆ. ಅದನ್ನು clean ಮಾಡಿಸಿ, ಸಾರ್ವಜನಿಕರಿಗೆ ಮುಕ್ತ ಮಾಡುತ್ತೇವೆ. ಅನೈತಿಕ ಚಟುವಟಿಕೆ ಇದ್ದರೆ Police Commissioner ಗೆ ಹೇಳುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:-** ನಾನು ನಿನ್ನೆ ಸಾಯಂಕಾಲದ ವಿಚಾರ ಹೇಳುತ್ತಿದ್ದೇನೆ.

**Sri BASAVARAJ BOMMAI:** BWSSB ನವರ ಕೆಲಸ ಆಗಿರುವುದು ನಿಜ, ಅಲ್ಲಿ ಕೆಲಸ ಮಾಡಿ ಏನಾದರೂ ಉಳಿದಿದ್ದರೆ ಅದನ್ನು ಸ್ವಚ್ಛಗೊಳಿಸಿ ಮುಕ್ತಗೊಳಿಸುವ ಬಗ್ಗೆ ಹೇಳುತ್ತಿದ್ದೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಅಲ್ಲಿ ಓಡಾಡುವುದಕ್ಕೆ ಆಗುವುದಿಲ್ಲ, ಮಾನ್ಯ ಸಚಿವರು ಸರ್ಕಾರಿ ವಾಹನದಲ್ಲಿ ತೆರಳದೇ ಒಂದು private vehicle ನಲ್ಲಿ ಹೋಗಲಿ, ಅಲ್ಲಿ ಏನಾಗುತ್ತದೆ ಎಂಬುದನ್ನು ನೋಡಲಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸದಸ್ಯರು ಮೊದಲಿನ ವಸ್ತುಸ್ಥಿತಿ ಬಗ್ಗೆ ಹೇಳಿದ್ದಾರೆ, ನಿನ್ನೆಯ ವಸ್ತುಸ್ಥಿತಿ ಹೇಳಿದ್ದಾರೆ. ಆ ಕೆಲಸ ಮುಗಿದಿದೆ. ಇದರ ಬಗ್ಗೆ ಕೂಡಲೇ ಸೂಚನೆಯನ್ನು ಕೊಟ್ಟು ಏನಾದರೂ ಇದ್ದರೆ ಎಲ್ಲವನ್ನು ಸ್ವಚ್ಛಗೊಳಿಸಿ ಸಾರ್ವಜನಿಕರಿಗೆ ಮುಕ್ತ ಮಾಡಿ, ವಾಹನಗಳಿಗೂ ಮುಕ್ತ ಮಾಡಿಕೊಡುತ್ತೇನೆ.

**ಶ್ರೀ ಯು.ಬಿ. ವೆಂಕಟೇಶ್:-** ಇದಕ್ಕೆ ಸಂಬಂಧಪಟ್ಟಂತೆ ಬೇರೆ ಬೇರೆ ಬಡಾವಣೆಗಳಲ್ಲಿ ಈ ರೀತಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ರಸ್ತೆಗಳ details ಕೊಡಿ ಎಂದು ಕೇಳಿದ್ದು, ಅದರ ವಿವರ ಕೊಟ್ಟಿಲ್ಲ. ಅಂದರೆ ಅಲ್ಲಿ ಏನೂ ಆಗಿಲ್ಲ ಎಂದು ಅರ್ಥವೇ? ಅಥವಾ ನಾನೇ ಆ ವಿವರ ತಂದುಕೊಡಬೇಕೇ?

**ಶ್ರೀ ಬಸವರಾಜ ಬೊಮ್ಮಾಯಿ:-** ಸದ್ಯಕ್ಕೆ ಇದೇ ಒಂದು major road ಆಗಿದ್ದು, ಬೇರೆ ಕಡೆ ಎಲ್ಲಿಯೂ ಇಲ್ಲ ಎನ್ನುವಂತೆ ನಮ್ಮ ಉತ್ತರ ಇದೆ.

**ಶ್ರೀ ಯು.ಬಿ. ವೆಂಕಟೇಶ್:-** ಇದು ಬೇಜವಾಬ್ದಾರಿ ಉತ್ತರವಾಗಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಬೊಮ್ಮಾಯಿ:–** ಇಲ್ಲಿ ಜವಾಬ್ದಾರಿ ಬೇಜವಾಬ್ದಾರಿ ಪ್ರಶ್ನೆ ಅಲ್ಲ, ಅವರ ಮತ್ತು ನಮ್ಮ ಉದ್ದೇಶ ಈ ರೀತಿ ಇರುವುದನ್ನು ಸರಿಪಡಿಸುವುದಾಗಿದೆ. I am not questioning the Hon'ble Member's integrity. He need not question my integrity.

**Sri U.B. VENKATESH:** I have not questioned the Hon'ble Minister's integrity. I am questioning the integrity of the officers who have given him this wrong reply.

**ಶ್ರೀ ಬಸವರಾಜ ಬೊಮ್ಮಾಯಿಃ–** ಅದಕ್ಕೆ solution ಏನೆಂದರೆ, ಈ ರೀತಿ ಇರುವುದನ್ನು ಅವರು ನಮ್ಮ ಗಮನಕ್ಕೆ ತಂದಿದ್ದು, ಆ ಕೆಲಸ ನಾವು ಮಾಡುತ್ತಿದ್ದೇವೆ. ಈಗ ಸ್ವಯಂ ಪ್ರೇರಣೆಯಿಂದ ಬೆಂಗಳೂರು BBMP Commissioner ಗೆ ಸೂಚನೆಯನ್ನು ಕೊಡುತ್ತೇನೆ. ಈ ರೀತಿಯ ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ junction ಗಳು ಹಾಗೂ service road ಗಳ ಬಗ್ಗೆ complete ಆಗಿ check ಮಾಡಿ, ಎಲ್ಲೆಲ್ಲಿ ಇದೆಯೋ ತೆಗೆದು ಹಾಕಲು ಸೂಚನೆ ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1577**
**ಉತ್ತರದ ಪ್ರತಿ ಲಗತ್ತಿಸಿದೆ**

**ಶ್ರೀ ಪ್ರಕಾಶ್ ಕೆ. ರಾಥೋಡ್–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ನಾನು ಬಿಜಾಪುರ ಜಿಲ್ಲೆಯಲ್ಲಿ ಹಮ್ಮಿಕೊಂಡಿರುವ ಸಮಗ್ರ ನೀರಾವರಿ ಯೋಜನೆಗಳ ಬಗ್ಗೆ ಕೇಳಿದ್ದೇನೆ. ಅದರಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಗೆ ಎಷ್ಟು ಹಣವನ್ನು ಮೀಸಲಿಟ್ಟಿದ್ದಾರೆ ಮತ್ತು ಹಿಂದಿನ ವರ್ಷದಲ್ಲಿ ಆಯವ್ಯಯದಲ್ಲಿ ಏನು ಹೇಳಿದ್ದರು, ಈ ವರ್ಷ ಏನು ಮಾಡಿದ್ದಾರೆ ಎಂಬ ಮಾಹಿತಿ ಕೊಟ್ಟಿಲ್ಲ.

**(ಮುಂದು)**

**(475)/18.03.2021/11.00/ಹೆಚ್‌ವಿ:ಎಕೆ**

**ಶ್ರೀ ಪ್ರಕಾಶ್ ಕೆ.ರಾಥೋಡ್(ಮುಂದು):–**

ಸನ್ಮಾನ್ಯ ಸಭಾಪತಿಯವರೇ, ಕೆರೆಗೆ ನೀರು ತುಂಬಿಸುವ ಯೋಜನೆಗಳು ಪ್ರಗತಿಯಲ್ಲಿವೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಅವುಗಳು ಯಾವಯಾವ ಹಂತದಲ್ಲಿವೆ ಎನ್ನುವುದರ ಬಗ್ಗೆ ಮಾಹಿತಿಯನ್ನು ನೀಡಿಲ್ಲ. ವಿಶೇಷವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಹಿಂದಿನ ಸರ್ಕಾರ ಕಾಲುವೆಗಳನ್ನು ನಿರ್ಮಾಣ ಮಾಡಿತ್ತು. ಆದರೆ, ಇಂಡಿ ಏತ ನೀರಾವರಿ ಯೋಜನೆಯಲ್ಲಿ ಬರುವಂತಹ ಚಡಚಣ ಕಡೆ ಇರುವಂತಹ ಕಾಲುವೆಗಳು ಮುಚ್ಚಿ ಹೋಗುತ್ತಿವೆ. ನಿರ್ಮಾಣ ಮಾಡಿರುವ ಕಾಲುವೆಗಳು ಮುಚ್ಚಿ ಹೋಗುತ್ತಿರುವುದರಿಂದ, ಈ ಕಾಲುವೆಗಳು ಯಾವುದಕ್ಕೂ ಉಪಯೋಗಕ್ಕೆ ಬರುತ್ತಿಲ್ಲ. ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ಕೋರುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಕೃಷ್ಣಾ ನ್ಯಾಯಾಧೀಕರಣ–2ರ ಅಂತಿಮ ತೀರ್ಪಿನ ಅನ್ವಯ ನಮ್ಮ ವಿಜಾಪುರ ಜಿಲ್ಲೆಗೆ ಬೇಕಾಗಿರುವ 130 ಟಿ.ಎಂ.ಸಿ. ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಈ ಸರ್ಕಾರ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಟ್ಟಿಲ್ಲ ಮತ್ತು ನಿರ್ಮಾಣ ಮಾಡಿರುವ ಕಾಲುವೆಗಳ ನಿರ್ವಹಣೆಯನ್ನು ಸಹ ಸರಿಯಾಗಿ ಮಾಡುತ್ತಿಲ್ಲ. ಸರ್ಕಾರ ಆಯವ್ಯಯದಲ್ಲಿ ಹಣವನ್ನು ನೀಡುತ್ತಿದ್ದೇವೆ ಅಥವಾ ನಿರ್ಮಾಣ ಮಾಡಿರುವ ಕಾಲುವೆಗಳನ್ನು ನಿರ್ವಹಣೆ ಮಾಡುತ್ತಿದ್ದೇವೆ ಎನ್ನುವ ನಿಟ್ಟಿನಲ್ಲಿ ನಿರ್ದಿಷ್ಟವಾಗಿ ಯಾವುದೇ ಸೂಚನೆಗಳನ್ನು ಕೊಟ್ಟಿಲ್ಲ. ನಮ್ಮ ಬಿಜಾಪುರ ಜಿಲ್ಲೆ ಬರಗಾಲ ಪೀಡಿತ ಜಿಲ್ಲೆಯಾಗಿದೆ. ಈ ಜಿಲ್ಲೆಗೆ ಕುಡಿಯುವ ನೀರಿನ ಸೌಲಭ್ಯವನ್ನು, ನೀರಾವರಿ ಸೌಲಭ್ಯವನ್ನು ಒದಗಿಸಿ ಕೊಡುವುದಕ್ಕೆ ಮತ್ತು ಕೆರೆಗಳನ್ನು ತುಂಬಿಸುವ ಯೋಜನೆಗಾಗಿ ಸಾಕಷ್ಟು ಹಣದ ಅವಶ್ಯಕತೆ ಇದೆ. ಹಿಂದೆಯೂ ನಾನು ಈ ಬಗ್ಗೆ ಸರ್ಕಾರವನ್ನು ಒತ್ತಾಯಿಸಿದ್ದೆ. ನಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಮಯದಲ್ಲಿ 10 ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಕಾಲುವೆಗಳನ್ನು ನಿರ್ಮಾಣ ಮಾಡಿದ್ದೇವೆ. ಇದಕ್ಕೆ rehabilitation, land acquisition and resettlement, ಎಲ್ಲವೂ ಆಗಬೇಕಾಗಿದೆ. ಇದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಹಣದ ಅವಶ್ಯಕತೆ ಇದೆ. ಸರ್ಕಾರ ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿದೆ ಎನ್ನುವುದನ್ನು ತಿಳಿಸಬೇಕಾಗಿದೆ.

**ಸಭಾಪತಿಯವರು:-** ಪ್ರಶ್ನೆ ಕೇಳಿರುವ ಮಾನ್ಯ ಸದಸ್ಯರು ಹಾಗೂ ಉತ್ತರವನ್ನು ಹೇಳುತ್ತಿರುವ ಮಾನ್ಯ ಸಚಿವರು ಇಬ್ಬರು ಬಿಜಾಪುರ ಜಿಲ್ಲೆಗೆ ಸೇರಿದವರಾಗಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ರಾಥೋಡ್‌ರವರು ಪೂರ್ಣ ಪ್ರಮಾಣದಲ್ಲಿ ಬೆಂಗಳೂರಿನವರಾಗಿದ್ದಾರೆ, ನಾನು ಬಿಜಾಪುರದಲ್ಲಿಯೇ ಉಳಿದಿದ್ದೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗಳ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗಳ ಬಗ್ಗೆ ನ್ಯಾಯಮೂರ್ತಿ ಬ್ರಿಜೇಶ್‌ಕುಮಾರ್‌ರವರ ತೀರ್ಪು ಬಂದ ಮೇಲೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು 2012-13ನೇ ಸಾಲಿನಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಜಗದೀಶ ಶೆಟ್ಟರ್‌ರವರು 17,207 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದರು. ಆದಾದ ನಂತರ ಚುನಾವಣೆಗಳು ನಡೆದು ಸರ್ಕಾರ ಬದಲಾವಣೆ ಆಯಿತು. ಸರ್ಕಾರ ಬದಲಾವಣೆ ಆಗುವುದಕ್ಕೂ ಮೊದಲು ಅಂದರೆ, 2010ನೇ ಅವಧಿಯಲ್ಲಿಯೇ ಇದನ್ನು ಕೈಗೆತ್ತಿಕೊಂಡಿದ್ದರಿಂದ 2010 ರಿಂದ 2013ನೇ ಸಾಲಿನ ಮೇ ತಿಂಗಳವರೆಗೆ ಅಂದಿನ ಸರ್ಕಾರ ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗಳಿಗೆ ಸುಮಾರು 735 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿತ್ತು. 2013-14ನೇ ಸಾಲಿನಲ್ಲಿ ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 2017-18ನೇ ಸಾಲಿನ ಮೇ ತಿಂಗಳವರೆಗೆ ಅಂದರೆ, ಚುನಾವಣೆಗಳು ನಡೆಯುವವರೆವಿಗೂ ಸುಮಾರು 7600 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಇದರ ನಂತರ 2018-19ನೇ ಸಾಲಿನಲ್ಲಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಸುಮಾರು 1346 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. 2018-19ನೇ ಸಾಲಿನಲ್ಲಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ಇವತ್ತಿನವರೆಗೆ ಸುಮಾರು 3 ಸಾವಿರ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಈ ಸಾಲಿನ ಆಯವ್ಯಯದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಮಗಾರಿಗಳಿಗೆ 5600 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಇನ್ನೂ ಹೆಚ್ಚಿನ ಅನುದಾನವನ್ನು ಒದಗಿಸಬೇಕೆನ್ನುವುದು ನಮ್ಮ ಭಾಗದ ಜನಪ್ರತಿನಿಧಿಗಳ ಮತ್ತು ಸಾರ್ವಜನಿಕರ ಅಭಿಪ್ರಾಯವಾಗಿದೆ. ಹೆಚ್ಚಿನ ಅನುದಾನವನ್ನು ಪಡೆದುಕೊಳ್ಳುವುದಕ್ಕೆ ನಾವು ಪ್ರಯತ್ನಿಸುತ್ತೇವೆ. ಈಗ ಆಯವ್ಯಯದಲ್ಲಿ ಕೊಟ್ಟಿರುವಂತಹ 5600 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಯೋಜನೆಗಳನ್ನು ಹಾಕಿಕೊಂಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೆರೆಗೆ ನೀರು ತುಂಬಿಸುವ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಇದೊಂದು ಹಳೆಯ ಯೋಜನೆಯಾಗಿದೆ. 2006-07ನೇ ಸಾಲಿನಲ್ಲಿ ನಮ್ಮ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದರು, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದರು ಮತ್ತು ಮಾನ್ಯ ಕೆ.ಎಸ್.ಈಶ್ವರಪ್ಪನವರು ನೀರಾವರಿ ಸಚಿವರಾಗಿದ್ದರು. ಆಗ ಈ ಯೋಜನೆಗೆ ನಾವು ಚಾಲನೆ ನೀಡಿದ್ದೆವು. ಇಂಡಿ ತಾಲ್ಲೂಕಿನ ಭರ್ತಿ ಗ್ರಾಮದ ರೈತರು ಅಣ್ಣಪ್ಪ ಕೈಯ್ಯೂರ್ ಅವರ ನೇತೃತ್ವದಲ್ಲಿ ಕೆರೆಗೆ ನೀರು ತುಂಬಿಸುವ ಯೋಜನೆ ಜಾರಿಗೆ ತರಬೇಕೆಂದು ಹೋರಾಟ ನಡೆಸುತ್ತಿದ್ದರು. ನಾನು ಮತ್ತು ಮಾನ್ಯ ಕೆ.ಎಸ್. ಈಶ್ವರಪ್ಪನವರು ಸ್ಥಳಕ್ಕೆ ಭೇಟಿ ನೀಡಿ ಹೋರಾಟವನ್ನು ಕೈಬಿಡುವಂತೆ ಮನವಿ ಮಾಡಿ, ಆ ದಿನವೇ ಕೆರೆಗೆ ನೀರು ತುಂಬಿಸುವ ಯೋಜನೆಗೆ ಚಾಲನೆಯನ್ನು ನೀಡಿದ್ದೆವು. ಇದರ ನಂತರ 2008-09ನೇ ಸಾಲಿನಲ್ಲಿ ಮಾನ್ಯ ಬಸವರಾಜ ಬೊಮ್ಮಾಯಿಯವರು ನೀರಾವರಿ ಮಂತ್ರಿಗಳಾಗಿದ್ದರು. ಅವರೂ ಕೆರೆಗೆ ನೀರು ತುಂಬುವ ಯೋಜನೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಚಾಲನೆಯನ್ನು ನೀಡಿದ್ದರು.

ಸನ್ಮಾನ್ಯ ಸಭಾಪತಿಯವರೇ, ಬಿಜಾಪುರ ಜಿಲ್ಲೆಯ ಮಮದಾಪೂರ, ಭೂತನಾಳ, ಬೇಗಂ-ತಲಾಬ್ ಮತ್ತು ಇತರೆ ಕೆರೆ ತುಂಬುವ ಯೋಜನೆಗಳು ಪೂರ್ಣಗೊಂಡಿದ್ದು, ನಿರ್ವಹಣೆಯ ಹಂತದಲ್ಲಿವೆ. ಬೇಗಂ ತಲಾಬ್ ಕೆರೆಯ ಜಲಾಭಿವೃದ್ಧಿ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. ಇದಕ್ಕೆ ನೀರು ತುಂಬಿಸುವ ಮತ್ತು ಅಭಿವೃದ್ಧಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ.

ಸನ್ಮಾನ್ಯ ಸಭಾಪತಿಯವರೇ, ತಮಗೂ ಗೊತ್ತಿರುವಂತೆ ವಿಜಾಪುರದ ಬೇಗಂ ತಲಾಬ್ ಅನ್ನು 16ನೇ ಶತಮಾನದಲ್ಲಿ ಅಂದಿನ ಮೊಘಲ್ ಸುಲ್ತಾನ ಮೊಹಮದ್ ಆದಿಲ್ ಶಾ ನಿರ್ಮಾಣ ಮಾಡಿದ್ದ. ಈಗ ಆ ಕೆರೆ ಒಡೆದು ಹೋಗಿ, ರೈತರು ಅದರಲ್ಲಿ ಹೊಲ ಉಳುಮೆ ಮಾಡಿಕೊಂಡು ಅದು ಕೆರೆ ಎನ್ನುವುದು ಯಾರಿಗೂ ಗೊತ್ತಾಗದಂತೆ ಆಗಿತ್ತು. ರೆಕಾರ್ಡ್‌ನಲ್ಲಿ ಮಾತ್ರ ಕೆರೆ ಇತ್ತು. ನಾನು ಸಣ್ಣ

"ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀರಾವರಿ ಸಚಿವನಾದ ಮೇಲೆ, ಕೆರೆಯನ್ನು ಅತಿಕ್ರಮಿಸಿದ್ದ ರೈತರನ್ನು ಹೊರಗೆ ಹಾಕಿ, ಆ ಕೆರೆಯನ್ನು ದುರಸ್ತಿಪಡಿಸಿ, ಬಂಡು ರಿಪೇರಿ ಮಾಡಿ, waist weir ರಿಪೇರಿ ಮಾಡಿ ಮತ್ತು ಹೂಳು ತೆಗೆಯುವಂತಹ ಕೆಲಸವನ್ನು ಪ್ರಾರಂಭಿಸಲಾಗಿತ್ತು. ಕೆರೆಗೆ ನೀರು ತುಂಬಿಸುವಂತಹ ಕೆಲಸವನ್ನು ನಮ್ಮ ನಂತರ ಬಂದಂತಹ ಸರ್ಕಾರ ಮಾಡಿತ್ತು. ಇದು ಅಲ್ಲಿನ ವಸ್ತು ಸ್ಥಿತಿ. ಉಳಿದಿರುವ ಕೆರೆಗಳಿಗೆ ನೀರು ತುಂಬಿಸುವಂತಹ ಕೆಲಸ ಪ್ರಗತಿಯಲ್ಲಿದೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸೀಮಿತವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಹೆಚ್ಚಿನ ಮಾಹಿತಿಯನ್ನು ಅವರಿಗೆ ಕಳುಹಿಸಿಕೊಡಲಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಬಿಜಾಪುರ ಜಿಲ್ಲೆಯಲ್ಲಿ ಬಹಳಷ್ಟು ಕೆರೆಗಳಿಗೆ ನೀರು ತುಂಬಿಸುವುದಕ್ಕೆ ನಾನು ನೀರಾವರಿ ಮಂತ್ರಿಯಾಗಿದ್ದಾಗ ಆದೇಶವನ್ನು ನೀಡಿದ್ದೆ. ಮುಂದೆ ಬಂದಂತಹ ಸರ್ಕಾರಗಳು ಅವುಗಳನ್ನು ಮುಂದುವರಿಸಿಕೊಂಡು ಬಂದಿವೆ. ಇವತ್ತಿನವರೆವಿಗೂ ಕೆಲಸಕಾರ್ಯಗಳು ನಡೆಯುತ್ತಿವೆ. ಯಾವುದಾದರೊಂದು ನಿರ್ದಿಷ್ಟವಾದ ಕೆರೆಗೆ ನೀರು ತುಂಬಿಸಬೇಕಾದರೆ, ಕೆಲಸ ನಿಂತು ಹೋಗಿದ್ದರೆ ಅಥವಾ ಅರ್ಧಕ್ಕೆ ಕೆಲಸ ನಿಂತು ಹೋಗಿರುವಂತಹ ಪ್ರಕರಣಗಳು ಇದ್ದರೆ ಆ ಬಗ್ಗೆ ಅವರು ಮಾಹಿತಿಯನ್ನು ನೀಡಿದರೆ, ಅದಕ್ಕೆ ಉತ್ತರವನ್ನು ಕಳುಹಿಸಿಕೊಡುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಅವರು ಮಾತನಾಡುತ್ತಾ, 'ಮಾನ್ಯ ಪ್ರಕಾಶ್ ರಾಥೋಡ್‌ರವರು ಪೂರ್ಣ ಪ್ರಮಾಣದಲ್ಲಿ ಬೆಂಗಳೂರಿನವರಾಗಿದ್ದಾರೆ' ಎಂದು ಹೇಳಿದ್ದಾರೆ. ನಾನು ಬೆಂಗಳೂರಿನವನಾಗಿಲ್ಲ, ನಾನು ಬಿಜಾಪುರದವನು. ನನ್ನ ಕಾರ್ಯಸ್ಥಾನ ಬಿಜಾಪುರ ಜಿಲ್ಲೆಯಾಗಿದೆ. ನಾನು ಚುನಾವಣೆಗೆ ಹೋದಾಗ, 'ಪ್ರಕಾಶ್ ರಾಥೋಡ್ ಬಿಜಾಪುರದವನಲ್ಲ, ಬೆಂಗಳೂರಿನವನು' ಎಂದು ಜನರು ಹೇಳುತ್ತಾರೆ. ತಪ್ಪು ಮಾಹಿತಿ ಜನರಿಗೆ ಹೋಗಬಾರದು.

**ಶ್ರೀ ಗೋವಿಂದ ಎಂ.ಕಾರಜೋಳ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ರಾಥೋಡ್‌ರವರು ಹುಟ್ಟಿರುವುದು ಬಿಜಾಪುರ ಜಿಲ್ಲೆಯಲ್ಲಿ. ಇವರ ತಂದೆಯವರ ಹುಟ್ಟೂರು ಬಸವನ ಬಾಗೇವಾಡಿ. ಇವರ ತಂದೆಯವರು ಮಂತ್ರಿಗಳಾಗಿದ್ದರು ಮತ್ತು ಶ್ರೇಷ್ಠ ರಾಜಕಾರಣಿಗಳಾಗಿದ್ದರು. ಬಿಜಾಪುರ ಜಿಲ್ಲೆಯಲ್ಲಿ ಅತ್ಯುತ್ತಮ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಇವತ್ತಿಗೂ ಬಿಜಾಪುರದಲ್ಲಿ ಮಾನ್ಯ ಸದಸ್ಯರ ಮನೆ ಇದೆ. 'ತಾವಿಬ್ಬರು ಬಿಜಾಪುರದವರೇ' ಎಂದು ತಾವು ಹೇಳಿದ ಹಿನ್ನೆಲೆಯಲ್ಲಿ ತಮಾಷೆಗಾಗಿ ನಾನು ಆ ರೀತಿ ಹೇಳಿದೆ. ನಾನೂ ಇವರು ಇಬ್ಬರೂ ವಿಜಾಪುರ ಜಿಲ್ಲೆಯಲ್ಲಿಯೇ ಹುಟ್ಟಿದ್ದೇವೆ. ಬಿಜಾಪುರದ ಬಗ್ಗೆ ಅವರಿಗಿರುವ ಕಾಳಜಿಗೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದ ಕಾರಜೋಳರವರು ಹಿರಿಯರು. ನನ್ನನ್ನು ಬಿಜಾಪುರದವನೆಂದು ನೆನಪಿಸಿಕೊಳ್ಳುತ್ತಿದ್ದಾರೆ ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಸಚಿವರು ಸವಿಸ್ತಾರವಾಗಿರುವ ಉತ್ತರವನ್ನು ನೀಡಿದ್ದಾರೆ. ಅವರು ನೀರಾವರಿ ಸಚಿವರಾಗಿದ್ದಾಗ, ಮಾನ್ಯ ಬಸವರಾಜ ಬೊಮ್ಮಾಯಿಯವರು ನೀರಾವರಿ ಸಚಿವರಾಗಿದ್ದಾಗ ಮತ್ತು ನಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ನೀರಾವರಿ ಕ್ಷೇತ್ರದಲ್ಲಿ ಬಹಳಷ್ಟು ಕೆಲಸಗಳು ನಡೆದಿವೆ. ನಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಾಗ ಮಾನ್ಯ ಎಂ.ಬಿ.ಪಾಟೀಲ್‌ರವರು ನೀರಾವರಿ ಸಚಿವರಾಗಿದ್ದಾಗ ಮತ್ತು ಮಾನ್ಯ ಹೆಚ್.ಕೆ.ಪಾಟೀಲ್‌ರವರು ನೀರಾವರಿ ಸಚಿವರಾಗಿದ್ದಾಗ ಸಾಕಷ್ಟು ಕೆಲಸಗಳಾಗಿವೆ. ಕೆರೆ ತುಂಬಿಸುವ ಯೋಜನೆಗೆ ಮಾನ್ಯ ಗೋವಿಂದ ಕಾರಜೋಳರವರು ನೀರಾವರಿ ಸಚಿವರಾಗಿದ್ದಾಗ ಚಾಲನೆ ಕೊಟಿದ್ದರು ಮತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಲೂ ಆ ಕೆಲಸವನ್ನು ಮಾಡಿದ್ದೇವೆ. ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾದರೆ, ಎಷ್ಟು ಹಣದ ಅವಶ್ಯಕತೆ ಇದೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ವಿರೋಧ ಪಕ್ಷದ ನಾಯಕರಾಗಿರುವ ಶ್ರೀ ಎಸ್.ಆರ್.ಪಾಟೀಲ್‌ರವರು ಸಹ ಆ ಭಾಗದಿಂದ ಬಂದವರಾಗಿದ್ದಾರೆ. ಈ ಯೋಜನೆ ಪೂರ್ಣಗೊಳ್ಳುವುದಕ್ಕೆ ಒಂದು ಲಕ್ಷ ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಹಣದ ಅವಶ್ಯಕತೆಯಿದೆ. ಈ ಹಣವನ್ನು ಹೊಂದಿಸುವುದಕ್ಕೆ ಸರ್ಕಾರ ಯಾವ ಯೋಜನೆಯನ್ನು ರೂಪಿಸಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇನ್ನೂ 30 ವರ್ಷ ಕಾದರೂ ಸಹ ಈ ಯೋಜನೆ ಪೂರ್ಣಗೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. **(ಮುಂದು)**

**(476) 18.3.2021 11.10 ಎಕೆ:ಆರ್‌ಎನ್**

**ಶ್ರೀ ಪ್ರಕಾಶ್ ಕೆ.ರಾಥೋಡ್ (ಮುಂದು):-**

ಮಾನ್ಯ ಸಭಾಪತಿಯವರೇ, ಇಷ್ಟು ಮೊತ್ತವನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಈ ಯೋಜನೆ ಮುಗಿಸಲು ಇನ್ನೂ 30 ವರ್ಷಗಳು ಬೇಕಾಗುತ್ತವೆ. 1964 ರಲ್ಲಿ ಆಲಮಟ್ಟಿ ಅಣೆಕಟ್ಟನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದರು. ಇನ್ನೂ 30 ವರ್ಷ ಅದನ್ನು ಮುಗಿಸುವುದಕ್ಕಾಗುವುದಿಲ್ಲ. ನ್ಯಾಯಮೂರ್ತಿ ಬ್ರಿಜೇಶ್ ಕುಮಾರ್‌ರವರ ತೀರ್ಪಿನಲ್ಲಿ, ನದಿಗೆ ಹರಿದು ಹೋಗುತ್ತಿರುವ 130 ಟಿಎಂಸಿ ನೀರನ್ನು ಉಪಯೋಗ ಮಾಡಬೇಕು ಎಂದು ಹೇಳಿದೆ. ಇದಕ್ಕೆ ಸರ್ಕಾರ ಏನಾದರೂ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇಲ್ಲದೇ ಇದ್ದರೆ ಇದನ್ನು ನ್ಯಾಷನಲ್ ಪ್ರಾಜೆಕ್ಟ್ ಎಂದು ಮಾಡುತ್ತೇವೆ ಎಂದಾದರೂ ಹೇಳಿ. ಕೇಂದ್ರ ಸರ್ಕಾರದಿಂದ ನೆರವು ತೆಗೆದುಕೊಳ್ಳುತ್ತಿರಾ? ಅದನ್ನಾದರೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿ. ಇಲ್ಲದೇ ಇದ್ದರೆ, ನಾವೇ 1 ಲಕ್ಷ ಕೋಟಿ ರೂಪಾಯಿಗಳನ್ನು ಇಟ್ಟು ಮುಂದಿನ 5 ವರ್ಷಗಳಲ್ಲಿ ಪೂರ್ಣಗೊಳಿಸುತ್ತೇವೆ ಎಂದಾದರೂ ಹೇಳಿ. ಬಜೆಟ್‌ನಲ್ಲಿ ಕೇವಲ 5000 ಕೋಟಿ ರೂ.ಗಳನ್ನಿಟ್ಟರೆ ಅಲ್ಲಿ ಯಾವುದೇ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಆಗುವುದಿಲ್ಲ. ಎರಡು ಹಳ್ಳಿಗಳನ್ನೂ ಕೂಡ ಪುನರ್ವಸತಿ ಮಾಡುವುದಕ್ಕೆ ಆಗುವುದಿಲ್ಲ. ಏಷ್ಯಾ ಖಂಡದ ಅತಿ ದೊಡ್ಡ ಜಲಾಶಯದ ಕಾಮಗಾರಿಯನ್ನು ಪೂರ್ಣಗೊಳಿಸುವುದಕ್ಕೆ ಆಗುತ್ತಿಲ್ಲ. ಬಿಜಾಪುರ ಜಿಲ್ಲೆಯ ಜನರು ಸಾಕಷ್ಟು ತ್ಯಾಗ ಮಾಡಿದ್ದಾರೆ. ನಾನು ಬೇನಾಳದವನು. 6 ಕಿಲೋ ಮೀಟರ್ ದೂರದಲ್ಲಿರುವ ನಮಗೆಯೇ ಕುಡಿಯುವ ನೀರು ಸಿಗುವುದಿಲ್ಲ. ನಿಡುಗುಂದಿಗೆ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಬಿಜಾಪುರಕ್ಕೂ ಕುಡಿಯುವ ನೀರು ಸಿಗುವುದಿಲ್ಲ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ದೊಡ್ಡ ಪ್ರಮಾಣದಲ್ಲಿ ಹಣ ಮೀಸಲಿಟ್ಟು ಯೋಜನೆಯನ್ನು ಸಂಪೂರ್ಣ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಮತ್ತೆ, ಅಲ್ಲಿನ ಕಾಲುವೆಗಳು ಮುಚ್ಚಿ ಹೋಗುತ್ತಿವೆ. ಅದಕ್ಕೆ ಹಣವನ್ನೇನು ಖರ್ಚು ಮಾಡಲಾಯಿತೋ ಅದೆಲ್ಲವೂ ವ್ಯರ್ಥವಾಗುತ್ತಿದೆ.

**ಶ್ರೀ ಎಸ್.ಆರ್.ಪಾಟೀಲ್:**-ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಪ್ರತಿಷ್ಠಿತವಾದಂತಹ ನೀರಾವರಿ ಯೋಜನೆಯಾಗಿದೆ. ಕೇವಲ ರಾಜ್ಯದ್ದಲ್ಲ, ರಾಷ್ಟ್ರದ ವರಮಾನವನ್ನು ಹೆಚ್ಚು ಮಾಡುವಂತಹ ಯೋಜನೆ ಇದಾಗಿದೆ. 130 ಟಿಎಂಸಿಯಲ್ಲಿ 80 ಟಿಎಂಸಿ ನೀರು ಬಿಜಾಪುರಕ್ಕೆ ಸಿಗಲಿದೆ. ಇದಕ್ಕೆ ಕೇವಲ 5600 ಕೋಟಿ ರೂಪಾಯಿಗಳು ಇಟ್ಟರೆ ಹೇಗೆ? ಮಾನ್ಯ ಬಸವರಾಜ ಬೊಮ್ಮಾಯಿಯವರು ನೀರಾವರಿ ಮಂತ್ರಿ ಇದ್ದಾಗ ಸುಮಾರು 17000 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ ದೊರಕಿತು. ನಂತರ ಮೂರು ವರ್ಷದಲ್ಲಿ 54000 ಕೋಟಿ ರೂ.ಗಳಾಯಿತು. ಈಗ 1 ಲಕ್ಷ ಕೋಟಿ ರೂಪಾಯಿ ಮೀರುವಂತಹ ಬೃಹತ್ ನೀರಾವರಿ ಯೋಜನೆ ಇದಾಗಿದೆ. ಇಡೀ ಏಷ್ಯ ಖಂಡದಲ್ಲೇ ದೊಡ್ಡ ಯೋಜನೆಯಾಗಿದೆ. ಈ ಯೋಜನೆಗೆ 5600 ಕೋಟಿ ರೂಪಾಯಿಗಳನ್ನು ಇಟ್ಟಿರುವುದು ಬಕಾಸುರನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ ಎಂದು ಹೇಳಿದ ಹಾಗೆ ಆಗುತ್ತದೆ. ಹೋದ ಸಲ ಬಜೆಟ್‌ನಲ್ಲಿ ಇಡದೇ ಇದ್ದರೂ ಮಾನ್ಯ ಮುಖ್ಯಮಂತ್ರಿಗಳು 10000 ಕೋಟಿ ರೂಪಾಯಿಗಳನ್ನು ಕೊಡಿಸುತ್ತೇವೆ ಎಂದು ಹೇಳಿದ್ದರು. 1964ರಲ್ಲಿ ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಈ ಯೋಜನೆಗೆ ಅಡಿಗಲ್ಲು ಹಾಕಿದ್ದರು. ಆಂಧ್ರ ಪ್ರದೇಶದಲ್ಲಿ 1 ಲಕ್ಷ ಕೋಟಿ ರೂ.ಗಳು ನೀರಾವರಿ ಯೋಜನೆಗೆ ಬೇಕಾದಾಗ, ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಬದಿಗೊತ್ತಿ ನೀರಾವರಿ ಯಜ್ಞ ಎಂದು ಘೋಷಣೆ ಮಾಡಿ ನೀರಾವರಿಗೆ ಆದ್ಯತೆ ಕೊಟ್ಟರು within a stipulated period ಪೂರ್ಣಗೊಳಿಸಿದರು. You beg, borrow

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

or steal get the money and complete the Third Stage of Upper Krishna Project. ಉತ್ತರ ಕರ್ನಾಟಕದ ಬಾಗಲಕೋಟೆ, ಬಿಜಾಪುರ, ಕಲ್ಬುರ್ಗಿ, ಯಾದಗಿರಿ, ಕೊಪ್ಪಳ, ರಾಯಚೂರು ಮತ್ತು ಗದಗ ಈ 7 ಜಿಲ್ಲೆಗಳಿಗೆ ಉಪಯೋಗವಾಗುವಂತಹ, 14 ಲಕ್ಷ ಎಕರೆ ನೀರಾವರಿ ಆಗುವಂತಹ 3ನೇ ಹಂತದ ಯೋಜನೆ ಇದಾಗಿದೆ. ಇಡೀ ಉತ್ತರ ಕರ್ನಾಟಕ ಸಮೃದ್ಧಿಯಿಂದ ತುಂಬಿ ತುಳುಕಾಡುವಂತಹ ಮಹತ್ತರವಾದ ಯೋಜನೆ ಇದಾಗಿದೆ. ಮಾನ್ಯ ಉಪಮುಖ್ಯಮಂತ್ರಿಗಳು ಅದೇ ಭಾಗದವರಾಗಿದ್ದಾರೆ. ಅವರಿಗೆ ಕಾಳಜಿ ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಅಸಹಾಯಕರಾಗಿಬಿಟ್ಟಿದ್ದೀರಿ ಎಂದು ನನಗನಿಸುತ್ತಿದೆ. You take it on a top priority. ಯಾವ ಸರ್ಕಾರ ಮಾಡದೇ ಇದ್ದರೂ ನಾವು ಅವರ ಮೇಲೆ ದೋಷಾರೋಪಣೆ ಮಾಡುತ್ತೇವೆ. ಯಾವುದೇ ಪಕ್ಷದ ಸರ್ಕಾರ ಇರಲಿ, I do not care even it may be my party. ಇದು ಆ ಭಾಗದ ಜಿಲ್ಲೆಗಳ ಪ್ರಶ್ನೆಯಾಗಿದೆ. ರಾಷ್ಟ್ರ ಕಷ್ಟದಲ್ಲಿದ್ದಾಗ ಶ್ರೀಮತಿ ಇಂದಿರಾಗಾಂಧಿ ಮತ್ತು ಮಾನ್ಯ ನಿಜಲಿಂಗಪ್ಪನವರ ತೂಕದಷ್ಟು ಬಂಗಾರವನ್ನು ತೂಗಿದವರು ನಾವು. ದೇಶದ ಯಾವ ಜಿಲ್ಲೆಯವರೂ ಈ ರೀತಿ ತೂಗಲಿಲ್ಲ. ರಾಷ್ಟ್ರದ ಕಷ್ಟದಲ್ಲಿ ನಾವು ಭಾಗಿಗಳಾಗುತ್ತೇವೆ. ನಮ್ಮ ತ್ಯಾಗ, ಬಲಿದಾನ, ಶ್ರಮಗಳನ್ನು ಗಣನೆಗೆ ತೆಗೆದುಕೊಂಡು ಆದ್ಯತೆಯ ಮೇಲೆ beg, borrow or steal you get the money and complete the Third Stage of Upper Krishna Project.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಬೊಮ್ಮಾಯಿಯವರಿದ್ದಾಗ ಸಾಲ ಹಣದ ಮೊತ್ತ 17,207 ಕೋಟಿ ರೂಪಾಯಿಗಳಾಗಿತ್ತು. 2017ರ ಸೆಪ್ಟೆಂಬರ್‌ನಲ್ಲಿ ಈ ಯೋಜನೆಯನ್ನು ಪರಿಷ್ಕರಣೆ ಮಾಡಿದಾಗ 51,148 ಕೋಟಿ ರೂಪಾಯಿಗಳಾಗಿದೆ. ಈ ಮೊತ್ತದಲ್ಲಿ ಸುಮಾರು 35000 ಕೋಟಿ ರೂಪಾಯಿಗಳಷ್ಟು R & R ವೆಚ್ಚಕ್ಕೆ ಬೇಕಾಗುತ್ತದೆ. Rehabilitation, Resettlement and ಪರಿಹಾರ ಕೊಡುವಂಥದ್ದಕ್ಕೆ ಬೇಕಾಗುತ್ತದೆ. 20 ಹಳ್ಳಿಗಳು ಮುಳುಗಡೆಯಾಗುತ್ತವೆ, 1,32,000 ಎಕರೆ ಭೂಮಿ ಮುಳುಗಡೆ ಆಗುತ್ತದೆ. Civil ಕಾಮಗಾರಿಗಳಿಗೆ ಸುಮಾರು 16000 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದು 2017ರ ಅಂದಾಜುಗಳಾಗಿವೆ. ಪ್ರತಿವರ್ಷ ಶೇಕಡ 10 ರಷ್ಟು ಹೆಚ್ಚಾಗುತ್ತದೆ, ಮತ್ತೆ, ಅಂದಾಜು 10000 ಕೋಟಿ ರೂಪಾಯಿಗಳು ಹೆಚ್ಚಾಗಬಹುದು. ಮಾನ್ಯ ಎಸ್.ಆರ್.ಪಾಟೀಲರವರು ಎಂದು ಹೇಳಿದ ಹಾಗೆ ನಮ್ಮ ಜಿಲ್ಲೆಗೆ ಹೆಚ್ಚು ಉಪಯುಕ್ತವಾಗುತ್ತದೆ. 5 ಲಕ್ಷ 94 ಸಾವಿರ ಹೆಕ್ಟೇರ್ ಭೂಮಿಗೆ ನೀರಾವರಿ ಆಗುವ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಯಾಗಿದೆ. ಇದರಲ್ಲಿ 3 ಲಕ್ಷ 22 ಸಾವಿರ ಹೆಕ್ಟೇರ್ ಜಾಗ ಅಖಂಡ ಬಿಜಾಪುರದ ಒಳಗೆ ಬರುತ್ತದೆ. ಮಿಕ್ಕ 6 ಜಿಲ್ಲೆಗಳ ಪ್ರದೇಶಗಳು ಇದರ ಉಪಯೋಗ ಪಡೆದುಕೊಳ್ಳುತ್ತವೆ. ಇವತ್ತು ನಾವು ಆ ಯೋಜನೆಯನ್ನು ಯಾವುದೇ ಪರಿಸ್ಥಿತಿಯಲ್ಲಿ 5 ವರ್ಷದಲ್ಲಿ ಮುಗಿಸಬೇಕು ಎನ್ನುವ ಆತುರತೆಯೊಳಗೆ ಇದ್ದೇವೆ. ಹಣಕಾಸಿನ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲದೇ, ಈ ಪ್ರಾಜೆಕ್ಟನ್ನು ನ್ಯಾಷನಲ್ ಪ್ರಾಜೆಕ್ಟ್ ಆಗಿ ಘೋಷಣೆ ಮಾಡಬೇಕೆಂದು ಕೇಂದ್ರ ಸರ್ಕಾರದ ಮೇಲೆ ಪದೇ ಪದೇ ಒತ್ತಡ ಹಾಕುತ್ತಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಪರವಾಗಿ ಈಗಾಗಲೇ ಕೇಂದ್ರದವರೊಡನೆ ಭೇಟಿಯಾಗಿ ಮಾತನಾಡಿದ್ದಾರೆ ಮತ್ತು ಪತ್ರಗಳನ್ನು ಬರೆದಿದ್ದಾರೆ. ನಾವು ಈ ನಿಟ್ಟಿನಲ್ಲಿ ಹೆಚ್ಚಿನ ಪ್ರಯತ್ನ ಮಾಡುತ್ತೇವೆ. ಖಂಡಿತವಾಗಿಯೂ ನ್ಯಾ. ಬ್ರಿಜೇಶ್ ಕುಮಾರ್‌ರವರ ತೀರ್ಪಿನಂತೆ ಸಿಕ್ಕ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಶತಾಯ-ಗತಾಯ ಪ್ರಯತ್ನ ಮಾಡುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ : 1600**

(ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಮಾದಕ ಪದಾರ್ಥಗಳ ಪಿಡುಗು ಹೆಚ್ಚಾಗಿದ್ದು ಇದಕ್ಕೆ ಸಮಾಜದ ಎಲ್ಲಾ ವರ್ಗದ ಜನರು ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ ಪ್ರಶ್ನೆಗೆ ಬಹಳ ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, 2018 ರಲ್ಲಿ 1031 ಮಾದಕ ಪ್ರಕರಣಗಳು, 2019ರಲ್ಲಿ 1661, 2020ರಲ್ಲಿ 4066 ಪ್ರಕರಣಗಳು ಬಂದಿವೆ. ಇದು ಏರಿಕೆಯ ಪ್ರಮಾಣದಲ್ಲಿವೆ. ಇದು ರಾಜ್ಯವನ್ನು ಬೇರೆ ಕಡೆಗೆ ಕರೆದುಕೊಂಡು ಹೋಗುವ ಸ್ಥಿತಿ ಇದೆ. ದಾಖಲಾದ ಪ್ರಕರಣಗಳ ಸಂಖ್ಯೆಯನ್ನು ಗಮನಿಸಿದಾಗ, 2018ರಲ್ಲಿ 1452, 2019ರಲ್ಲಿ 2295 ಮತ್ತು 2021ರಲ್ಲಿ 5479 ಎಂದು ಹೇಳಿದ್ದಾರೆ. ಅಂದರೆ ಈ ತರಹದ ಒಟ್ಟು ಮಾದಕ ವಸ್ತುಗಳನ್ನು ಉಪಯೋಗ ಮಾಡುತ್ತಿರುವುದನ್ನು ನೋಡಿದರೆ ಈ ಸಮಾಜ ಯಾವ ದಿಕ್ಕಿನಲ್ಲಿ ಹೋಗುತ್ತಿದೆ, ಯಾವ ಒಂದು ಹಂತಕ್ಕೆ ಹೋಗುತ್ತಿದೆ ಎನ್ನುವುದು ಗೊತ್ತಾಗುತ್ತಿದೆ. ಮಾನ್ಯ ಸಚಿವರು ಈ ವಿಚಾರದಲ್ಲಿ, “ಸಮಗ್ರ ಮಾದಕ ವಸ್ತು ನಿಗ್ರಹ ನೀತಿ”ಯನ್ನು ತರಬೇಕು ಎಂದು ಪತ್ರಿಕಾ ಹೇಳಿಕೆಯನ್ನು ನೀಡಿದ್ದಾರೆ. ಆದಷ್ಟು ಬೇಗ ಈ ನೀತಿಯನ್ನು ತರಬೇಕು. ಸಮಾಜವನ್ನು ರಕ್ಷಣೆ ಮಾಡುವ ಕೆಲಸಕ್ಕೆ ಸರ್ಕಾರ ಮುಂದಾಗಬೇಕು ಎನ್ನುವ ಒತ್ತಾಯವನ್ನು ಮಾಡಬಯಸುತ್ತೇನೆ. ವಿಶೇಷವಾಗಿ ಬೆಳಗಾವಿಯಲ್ಲಿ, ಶಾಲಾ–ಕಾಲೇಜುಗಳ ಕ್ಯಾಂಪಸ್‌ನ ಹೊರಗಡೆ ಹೋಟೆಲ್‌ಗಳಲ್ಲಿ ಮತ್ತು ಪಾನ್ ಶಾಪ್‌ಗಳಲ್ಲಿ ಈ ವಸ್ತುಗಳು ಸಿಗುತ್ತಿರುವುದು ಅನೇಕ ಸಂದರ್ಭಗಳಲ್ಲಿ ವರದಿಯಾಗಿವೆ. ಯುವಕರು, ಶಾಲಾ ಮಕ್ಕಳು ಮಾದಕ ವಸ್ತುಗಳ ಚಟಕ್ಕೆ ಒಳಗಾಗುತ್ತಿದ್ದಾರೆ. ಇದನ್ನು ತಡೆಹಿಡಿಯುವ ರೀತಿಯಲ್ಲಿ ಯಾವ ಒಂದು ಸಮಗ್ರ ನೀತಿಯನ್ನು ತರುತ್ತಾರೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಬಯಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾದಕ ವಸ್ತು ಸೇವನೆ ಸಮಾಜದಲ್ಲಿ ಇರುವಂತಹ ಒಂದು ಪಿಡುಗಾಗಿದೆ. ಈ ವಿಷಯದಲ್ಲಿ ಎಷ್ಟು ಕೇಸುಗಳು ದಾಖಲಾಗಿವೆ, ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೇವೆ ಎನ್ನುವ ವಿವರಗಳನ್ನು ಕೊಟ್ಟಿದ್ದೇವೆ. ಈಗೇನಾಗಿದೆ ಎಂದರೆ ಸಿಂಥೆಟಿಕ್ ಡ್ರಗ್ ಬಂದ ಮೇಲೆ ಅತ್ಯಂತ ಸಣ್ಣ ಸಣ್ಣ ಪ್ರಮಾಣದಲ್ಲಿ ಈ ಡ್ರಗ್‌ಅನ್ನು ಮಕ್ಕಳಿಗೆ, ಶಾಲಾ ವಿದ್ಯಾರ್ಥಿಗಳಿಗೆ ಕೊಡುವಂಥದ್ದು ಆಗುತ್ತಿದೆ. **(ಮುಂದು)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(477)18.03.2021 ಬಿಕೆಪಿ/ಆರ್.ಎನ್ 11.20**

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು):-**

It is a synthetic drug. ನಾನು ಕಳೆದ ಬಾರಿ ಈ ಸದನದಲ್ಲಿ ಹೇಳಿದ್ದೆ. 1mm/1 mm ಇರುವಂತಹ Lysergic acid diethylamide (LSD) paper ಗೆ ಎರಡೂವರೆ ಸಾವಿರದಿಂದ ಮೂರು ಸಾವಿರ ರೂಪಾಯಿಗಳು ಆಗುತ್ತದೆ. ಒಂದು ಸಣ್ಣ ಪೇಪರ್‌ಗೆ ಅಷ್ಟು ಆಗುತ್ತದೆ. ಅಷ್ಟೊಂದು ಸಣ್ಣ ಪ್ರಮಾಣದಲ್ಲಿ ನಡೆಯುತ್ತಿರುವುದರಿಂದ ಅವರು ಚಾಕೊಲೇಟ್‌ನಲ್ಲಿ ಅಥವಾ ಚಾಕ್‌ನಲ್ಲಿ ಅಥವಾ ಬಿಸ್ಕೆಟ್ ಹೀಗೆ ಎಲ್ಲಾ ರೂಪದಲ್ಲಿ ತರುತ್ತಿರುವುದನ್ನು ನಾನು ನೋಡಿದ್ದೇನೆ. ಇದನ್ನು ವ್ಯಾಪಕವಾಗಿ ಎಲ್ಲೆಲ್ಲಿ ಇದು ನಡೆಯುತ್ತಿದೆ ಅಲ್ಲೆಲ್ಲಾ raid ಮಾಡಿದ್ದೇವೆ, ಕೇಸ್ ಹಾಕಿದ್ದೇವೆ ಇದೆಲ್ಲಾ ಮಾಡಿದ್ದೇವೆ. ಆದರೆ, ಇದನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದರೆ ಇವತ್ತು ನಮ್ಮ ಇಲಾಖೆಯ ಜೊತೆಗೆ ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪಾಲಕರುಗಳ ಜೊತೆಗೆ ಕೈಜೋಡಿಸುವುದು ಬಹಳ ಅವಶ್ಯಕತೆಯಿದೆ. ಅದಕ್ಕಾಗಿ ಮತ್ತು ಜಾಗ್ರತೆ ಮೂಡಿಸುವ ಸಲುವಾಗಿ ಮಾಧ್ಯಮಗಳ ಅವಶ್ಯಕತೆ ಸಹ ಬಹಳ ಇದೆ. ನಾವು ಈಗಾಗಲೇ ಎಲ್ಲಾ ಶಾಲೆಗಳಿಗೆ ಅಂದರೆ ಶಿಕ್ಷಣ ಇಲಾಖೆಗೆ ಕೊಟ್ಟಿದ್ದೇವೆ ಮತ್ತು ಹಲವಾರು ಶಿಕ್ಷಣ ಸಂಸ್ಥೆಗಳಿಗೂ ಕೂಡ ನಿರ್ದೇಶನ ಕೊಟ್ಟಿದ್ದೇವೆ. ನಿಮ್ಮ ಶಾಲಾ ಆವರಣ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು, ಡ್ರಗ್ ಮುಕ್ತವಾಗಿ ಇಟ್ಟುಕೊಳ್ಳಬೇಕು ಹಾಗೂ ಶಾಲೆಯ ಹೊರಗಡೆಗೆ ಇರುವಂತಹ ಅಂಗಡಿಗಳ ಜವಾಬ್ದಾರಿ ಕೂಡ ನಿಮ್ಮದೇ ಎನ್ನುವಂತಹ ಮಾತನ್ನು ಹೇಳಿದ್ದೇನೆ, ಈ ಬಗ್ಗೆ ಒಂದು ಸಭೆಯನ್ನು ಸಹಿತ ನಾವು ಮಾಡಿ ಹೇಳಿದ್ದೇವೆ. ಆ ಸಭೆಯಲ್ಲಿ ಕೆಲವು ಶಾಲೆಯ ಮ್ಯಾನೇಜ್‌ಮೆಂಟ್‌ನವರು ಕೆಲವು objections ಕೂಡ ತೆಗೆದಿದ್ದಾರೆ, ಅದಕ್ಕೆ ನಾನು ಬಹಳ ಕಠಿಣವಾಗಿ ಹೇಳಿದ್ದೇನೆ. ಶಾಲೆಗೆ ಬರುವ ಮಕ್ಕಳ ನೈತಿಕತೆಯನ್ನು ಉಳಿಸಿಕೊಳ್ಳುವಂತಹ ಅಥವಾ ಹಾಳು ಮಾಡುವಂತಹ ಈ ಡ್ರಗ್ ಸೇವನೆಯನ್ನು ನಿಮ್ಮ campus ನಲ್ಲಿ ಮಾಡಿದರೆ ಖಂಡಿತವಾಗಿಯೂ ಕೂಡ ಮ್ಯಾನೇಜ್‌ಮೆಂಟ್ ಮೇಲೆ ಸಹಿತ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದೇನೆ. ಹೀಗಾಗಿ ಇದು ವಿಶೇಷವಾಗಿ ಬೆಂಗಳೂರು ಮತ್ತು ಇತರೆ ದೊಡ್ಡ ದೊಡ್ಡ ನಗರಗಳಲ್ಲಿ ಎಲ್ಲಿದೆ, ಅದು ಶಾಲೆಯಲ್ಲಿ ಕಲಿಯುವುದು ಅಷ್ಟೇ ಅಲ್ಲ, ಇದು ಎಲ್ಲಾ ವರ್ಗದ ಜನರ ಮಧ್ಯದಲ್ಲಿ ಇದೆ. ಸ್ಲಂನಲ್ಲಿಯೂ ಕೂಡ ಇದರ ವ್ಯಾಪಾರವಾಗುತ್ತದೆ. ಅತೀ ಉನ್ನತ ಮಟ್ಟದಲ್ಲಿ ಕೂಡ ಡ್ರಗ್ಸ್‌ನ ವ್ಯಾಪಾರವಾಗುತ್ತದೆ. ಹೀಗಾಗಿ ನಾವು ಎಲ್ಲಾ ಕಡೆಯಲ್ಲಿಯೂ ವ್ಯಾಪಕವಾಗಿ ಕ್ರಮ ಕೈಗೊಳ್ಳುತ್ತಿದ್ದೇವೆ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ಸಣ್ಣ ಪೊಲೀಸ್ ಸ್ಟೇಷನ್‌ನಲ್ಲಿ Narcotics ಸಂಬಂಧಿಸಿದಂತಯೂ ಕೂಡ ಕ್ರಮ ಕೈಗೊಳ್ಳಲು ಸೇರಿಸಿದ್ದೇವೆ. Narcotics and Anti-Narcotic Drives ಕೂಡ ನಾವು ಮಾಡುತ್ತಿದ್ದೇವೆ. ವಿಶೇಷವಾಗಿ ಈ ಬಾರ್ಡರ್ ಜಿಲ್ಲೆಗಳೇನಿದೆ, ಬೆಳಗಾಂ ಹಾಗೂ ಬೆಳಗಾಂನಲ್ಲಿ ಗೋವಾ ಮತ್ತು ಮಹಾರಾಷ್ಟ್ರದಿಂದ ಬರುವಂತಹದ್ದು, ಈ ಕಡೆಯಲ್ಲಿ ಬೀದರ್ ಮತ್ತು ಗುಲ್ಬರ್ಗದಲ್ಲಿ, ಮಂಗಳೂರಿನಲ್ಲಿ ಹೀಗೆ ಇವುಗಳ ಮೇಲೆ ಹೆಚ್ಚಿನ ನಿಗಾವನ್ನು ಕೂಡ ನಾವು ಇಟ್ಟಿದ್ದೇವೆ. ಖಂಡಿತವಾಗಿಯೂ ನಾವು ನೀವು ಎಲ್ಲರೂ ಕೈಜೋಡಿಸಿ ಇದಕ್ಕೆ ಕ್ರಮ ಕೈಗೊಳ್ಳಬೇಕು. ಮಾಧ್ಯಮಗಳು ವಿಶೇಷವಾದಂತಹ ಅಭಿಯಾನ ಮಾಡಿ ಅವರ ಜೊತೆಗೆ ನಾವು ಅಂದರೆ ಇಲಾಖೆಗಳೂ ಸಹಿತ ಸೇರಿ ಅಭಿಯಾನ ಮಾಡುವುದಕ್ಕೆ ಈಗಾಗಲೇ ಘೋಷಣೆ ಮಾಡಿದ್ದೇವೆ. ಇದು ಎಲ್ಲವನ್ನೂ Anti-Drug Policy ಯಲ್ಲಿ ತರಬೇಕೆಂದು ತೀರ್ಮಾನ ಮಾಡಿದ್ದೇವೆ. ಇದನ್ನು ಬರುವಂತಹ ದಿನಗಳಲ್ಲಿ ಸದನದ ಮುಂದೆ ಆ Anti-Drug Policy ಕೂಡ ನಾನು ಸಮಗ್ರವಾಗಿ ತರುವವನಿದ್ದೇನೆ. Narcotic Drugs and Psychotropic Substances (NDPS Act), ಕಾನೂನಿನಲ್ಲಿ ಕೂಡ ಬದಲಾವಣೆ ಅಂದರೆ ರೂಲ್ಸ್‌ನಲ್ಲಿ ಅದು Central Act ಇರುವುದರಿಂದ ನಾವು ಏನನ್ನೂ ಮಾಡುವುದಕ್ಕಾಗುವುದಿಲ್ಲ. ಆದರೆ, ರೂಲ್ಸ್‌ನಲ್ಲಿ ಹಲವಾರು ಈ ಕೇಸ್‌ಗಳನ್ನು ಹಾಕಿದಾಗ ಅದರ ತಪಾಸಣೆ ಮಾಡುವಾಗ ಬಹಳಷ್ಟು ಅಡಚಣೆಗಳು ಅದರಲ್ಲಿವೆ. ನಾವು ತಪಾಸಣೆ ಮಾಡುವವರು ಮೊದಲು ತಪಾಸಣೆಗೊಳಗಾಗಬೇಕು. ಆಮೇಲೆ Magistrate ಮುಂದೆ ನಾವು ಅದನ್ನು ಹಾಜರುಪಡಿಸಬೇಕು. ಆಮೇಲೆ ತಪಾಸಣೆ ಮಾಡಬೇಕು. ಈ ರೀತಿಯ ಅಡಚಣೆಗಳನ್ನು ನಿವಾರಣೆ ಮಾಡಲು ರೂಲ್ಸ್‌ನಲ್ಲಿಯೂ ಕೂಡ ಬದಲಾವಣೆ ಮಾಡುವುದಕ್ಕೆ ಈಗಾಗಲೇ ನಮ್ಮ ಇಲಾಖೆಗೆ ಸೂಚನೆ ಕೊಟ್ಟಿದ್ದೇನೆ. ಅದನ್ನೂ ಕೂಡ NDPS rules ನಲ್ಲಿ ಬದಲಾವಣೆ ಮಾಡುವಂತಹ ಅಧಿಕಾರ ರಾಜ್ಯಗಳಿಗೆ ಇದೆ. ಆ ರೂಲ್ಸ್‌ಅನ್ನು ಬದಲಾವಣೆ ಮಾಡುವುದಕ್ಕೆ ಅಂದರೆ Act ನಲ್ಲಿ ಬದಲಾವಣೆ ತರಬೇಕೆಂದರೆ ಕೇಂದ್ರಕ್ಕೆ ಹೋಗಬೇಕಾಗುತ್ತದೆ. ರೂಲ್ಸ್‌ನಲ್ಲಿ ಅಂದರೆ ಅದನ್ನು implement ಮಾಡುವ ಸಲುವಾಗಿ ನಮ್ಮ ವಿಧಿವಿಧಾನಗಳಲ್ಲಿ ಕೆಲವು ಬದಲಾವಣೆಗಳನ್ನು ತರುವುದಕ್ಕೆ ಅವಕಾಶವಿದೆ. ಅದನ್ನೂ ಕೂಡ ಖಂಡಿತವಾಗಿಯೂ ಮಾಡುತ್ತೇನೆ. ಮಾನ್ಯ ಸಭಾಪತಿಯವರೆ, ವಿಶೇಷವಾಗಿ ಬೆಳಗಾಂ ಬಗ್ಗೆ ಏನು ಕೇಳಿದ್ದಾರೆ, ಮತ್ತೊಮ್ಮೆ ನಾನು ಅಧಿಕಾರಿಗಳಿಗೆ ಈ ಬಗ್ಗೆ ಸೂಚನೆ ಕೊಟ್ಟು ವಿಶೇಷವಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಲಾ-ಕಾಲೇಜುಗಳು ಅಕ್ಕಪಕ್ಕದಲ್ಲಿರುವುದಕ್ಕೆ ಸಂಪೂರ್ಣ ಡ್ರೈವ್ ಮಾಡುವುದಕ್ಕೆ ಆದೇಶವನ್ನು ಕೊಡುತ್ತೇನೆ.

**ಶ್ರೀ ಎಸ್.ಆರ್ ಪಾಟೀಲ್:-** ಮಾನ್ಯ ಸಭಾಪತಿಯವರೆ, ಬೆಂಗಳೂರಿನಲ್ಲಿ ಹುಕ್ಕಾ ಪಾರ್ಲರ್‌ಗಳನ್ನು ಬ್ಯಾನ್ ಮಾಡಿಸಿ. ಅದರಿಂದಲೂ ಯುವಜನತೆಯ ಸ್ಥಿತಿ ಹದಗೆಡುತ್ತಿದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಇದರ ಬಗ್ಗೆ ಅಂದರೆ ಹುಕ್ಕಾ ಪಾರ್ಲರ್ ಬಗ್ಗೆ ನಾನು ಕೆಳಮನೆಯಲ್ಲಿ ಉತ್ತರ ಕೊಡುತ್ತಿದ್ದೆ. ಇದು ಹುಕ್ಕಾ ಪಾರ್ಲರ್ ಏನಾಗಿದೆ ಎಂದರೆ ಲೈಸೆನ್ಸ್ ಅನ್ನು ಬಿ.ಬಿ.ಎಂ.ಪಿ.ಯವರು ಕೊಡುತ್ತಿದ್ದಾರೆ. ಆದ್ದರಿಂದ, ಅವರು supervision ಮಾಡುತ್ತಿರುತ್ತಾರೆ. ಅಲ್ಲಿ ಏನಾದರೂ ಮಾದಕ ವಸ್ತುಗಳು ಇದ್ದರೆ ನಾವೆಲ್ಲರೂ raid ಮಾಡುತ್ತೇವೆ. ಆದರೆ, ನಾನು ಒಂದು ತೀರ್ಮಾನಕ್ಕೆ ಬಂದಿದ್ದೇನೆ. ಬಿ.ಬಿ.ಎಂ.ಪಿ. ಮತ್ತು ನಮ್ಮ ಪೊಲೀಸ್ ಕಮೀಷನರ್ ಇವರಿಬ್ಬರಿಗೂ ಸೂಚನೆ ಕೊಟ್ಟಿದ್ದೇವೆ. ಈ ಹುಕ್ಕಾ ಪಾರ್ಲರ್‌ಅನ್ನು ಬ್ಯಾನ್ ಮಾಡುವುದಕ್ಕೆ ನಾವು ಕ್ರಮಗಳನ್ನು ಜರುಗಿಸಬೇಕು ಎನ್ನುವಂತಹ ತೀರ್ಮಾನಕ್ಕೆ ಬಂದಿದ್ದೇವೆ. ಶೀಘ್ರದಲ್ಲಿಯೇ ಆ ಕೆಲಸವನ್ನು ಮಾಡುತ್ತೇವೆ. ಅದಕ್ಕೆ ಸಾಕಷ್ಟು ಪ್ರಭಾವಿಗಳು ವಿರೋಧಿಗಳೆಲ್ಲಾ ಬಂದರೂ ಕೂಡ ಅದು ಯಾವುದನ್ನೂ ಲೆಕ್ಕಿಸದೇ ಈ ಕೆಲಸವನ್ನು ಮಾಡುವುದಕ್ಕೆ ನಾನು ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ಈ ವಿಚಾರದ ಬಗ್ಗೆ ಈಗಾಗಲೇ ಕೆಳಮನೆಯಲ್ಲಿ ನಾನು ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1511**

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರದೀಪ್ ಶೆಟ್ಟರ್:-** ಮಾನ್ಯ ಸಭಾಪತಿಗಳೇ, ಇವತ್ತು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಇತ್ತೀಚೆಗೆ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗುತ್ತಿವೆ. ಇದು ಬಹಳ ವರ್ಷಗಳಿಂದ ನಾನಾ ಸರ್ಕಾರಗಳು ಇದ್ದಾಗಿನಿಂದ ಆಗುತ್ತಿದೆ. ನಾನು ಇವತ್ತು ಮಾನ್ಯ ಸಭಾಪತಿಗಳ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ. ನಾವು ಲೋಕಸೇವಾ ಆಯೋಗದ ಸದಸ್ಯರು ಮತ್ತು ಹಲವಾರು ನಿಗಮಗಳಿಗೆ ಸದಸ್ಯರುಗಳನ್ನು ನಾವು ಸರ್ಕಾರದಿಂದ ಮಾಡುತ್ತೇವಲ್ಲಾ ಅದನ್ನು ಸಂಪೂರ್ಣವಾಗಿ ಬಂದ್ ಮಾಡಿಬಿಡಿ. ಏನೂ ಇರುವ ಆಗಿಲ್ಲ. ಏಕೆಂದರೆ, ಪೂರ್ಣವಾಗಿ ದುಡ್ಡಿನ ವ್ಯವಹಾರ ನಡೆದಿದೆ. ನ್ಯಾಯವಾಗಿ ಏನು ಕಷ್ಟಪಟ್ಟು ಆ ಬಡ ವಿದ್ಯಾರ್ಥಿಗಳು ಓದಿರುತ್ತಾರೆ, ಮೆರಿಟ್ ಮೇಲೆ ಪಾಸ್ ಆಗರುತ್ತಾರೆ. ಅಷ್ಟನ್ನು ಬಿಡದೆ ಅವರನನ್ನು interview ಎಂದು ಹೇಳಿ ಆ ಮೌಖಿಕ ಪರೀಕ್ಷೆಯಲ್ಲಿ ರೊಕ್ಕ ತೆಗೆದುಕೊಂಡು 95 ಮಾರ್ಕ್ಸ್, 85 ಮಾರ್ಕ್ಸ್ ಹೀಗೆ ಏನು ಕೊಡುತ್ತಾರೆ. ಈ ವಿಷಯವಾಗಿ ನಾನು ಒಂದೆರಡು ಮೂರು ಸಲ ಯಾರದ್ದೋ ಒಂದು ವಿಚಾರದಲ್ಲಿ influence ಮಾಡಿದ್ದೆ. ಈ ದುಡ್ಡಿನ ವಿಷಯ ಬಂದಕೂಡಲೇ ನಾನು ದೂರ ಸರಿದೆ. ಅವರಿಗೆ ಬೇಡಪ್ಪ! ಇದು ಆಗುವ ಹಾಗೆ ಇಲ್ಲ. ಸುಮ್ಮನೆ ಅವರೂ ಸಿಕ್ಕಿ ಹಾಕಿಕೊಳ್ಳುತ್ತಾರೆ, ನೀವೂ ಸಿಕ್ಕಿ ಹಾಕಿಕೊಳ್ಳುತ್ತೀರಿ, ಆದ್ದರಿಂದ ಈ ವಿಚಾರ ಬೇಡಪ್ಪ ಎಂದು ಹೇಳಿದೆ. ಅದ್ದರಿಂದ ಈ ಮೌಖಿಕ ಪರೀಕ್ಷೆಯನ್ನು ತೆಗೆದುಬಿಡಬೇಕು. ಇವತ್ತು ಸಾಕಷ್ಟು ವಿದ್ಯಾರ್ಥಿಗಳು ಇದರಿಂದ ಉದ್ಯೋಗ ವಂಚಿತರಾಗುತ್ತಿದ್ದಾರೆ. ನೀವು online exam conduct ಮಾಡ್ರಿ. ಆಮೇಲೆ computerized tick ಮಾಡುವುದರ ಮೇಲೆ ಮಾರ್ಕ್ಸ್ ಇರುತ್ತವೆ, ಅದರ ಮೇಲೆ ಮಾಡಿ. ಕೊನೆಗೆ ಅವರು average ಅಂದರೆ PCM, B-Pharma, BA, ಹೀಗೆ ಡಿಗ್ರಿಗಳ ಸ್ಕೋರ್ ನೋಡಿ ನೇರವಾಗಿ ನೇಮಕ ಮಾಡಿ. ನೂರಕ್ಕೆ ನೂರು ಅಂಕಗಳನ್ನು ಪಡೆದವರು 10 ಮಂದಿ ಇದ್ದರೆ, ಆ 10 ಮಂದಿಯನ್ನು ಲೋಕಸೇವಾ ಆಯೋಗದವರು ಸೆಲೆಕ್ಟ್ ಮಾಡಿ. ಸುಮ್ಮನೆ ಮೌಖಿಕ ಪರೀಕ್ಷೆಗೆ ಕರೆಯುತ್ತಾರೆ. ಅವರಿಂದ ದುಡ್ಡು ಮಾಡುವುದಕ್ಕೆ ಲೋಕಸೇವಾ ಆಯೋಗದಿಂದ ಕರೆಯುವುದು. ನಾನು ಎಲ್ಲಾ ಪಕ್ಷದ ಸರ್ಕಾರಗಳಿಗೂ ಹೇಳುತ್ತಿದ್ದೇನೆ. ಈ ಲೋಕಸೇವಾ ಆಯೋಗವೇನಿದೆ ಇದನ್ನು ಮುಚ್ಚಿಬಿಡಿ. ಏಕೆಂದರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಎಲ್ಲಾ security ಇದೆ. ಇಲ್ಲಿ ಎಲ್ಲಾ ಇದ್ದಾರೆ. ದಿನದ 24 ಗಂಟೆಯೂ ಸಶಕ್ತ ಪೊಲೀಸ್ ಭದ್ರತೆಯಿದೆ. ಪೊಲೀಸ್ ವರಿಷ್ಠಾಧಿಕಾರಿಗಳ ಸೂಚನೆಯ ಪ್ರಕಾರ ನಡೆಯುತ್ತಿದೆ. ಆದರೂ ಪೇಪರ್ ಲೀಕ್ ಆಗುತ್ತಿದೆ. ಇಂತಹ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವ್ಯವಹಾರವಾಗಬಾರದು ಎಂದರೆ ಮೊದಲು ಕೆ.ಪಿ.ಎಸ್.ಸಿ.ಯನ್ನು ಮುಚ್ಚಬೇಕು. ಆಮೇಲೆ ನೇರವಾಗಿ ವಿದ್ಯಾರ್ಥಿಗಳು ಏನು ತಾವುಗಳು ಕಷ್ಟಪಟ್ಟು ಓದಿ ಬರೆದು ಮಾರ್ಕ್ಸ್ ತೆಗೆದುಕೊಂಡಿರುತ್ತಾರಲ್ಲಾ, ಅದರ ಮೇಲೆ selection ಆಗಬೇಕು. ಹಾಗೆ ಆದಾಗ ಮಾತ್ರ ಪ್ರತಿಯೊಬ್ಬನೂ ಕಷ್ಟಪಟ್ಟು ಓದಿದವನು ನ್ಯಾಯವಾಗಿ ನೌಕರಿಗೆ ಹೋಗುತ್ತಾನೆ. ಹೀಗೆ interview ಮತ್ತು ಮೌಖಿಕ ಪರೀಕ್ಷೆ ಎಂದು ದುಡ್ಡು ತಿನ್ನುವಂತಹ ಕೆಲಸ ಬಂದ್ ಆಗಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:** ಮಾನ್ಯ ಅಧ್ಯಕ್ಷರೆ, ಕೆ.ಪಿ.ಎಸ್.ಸಿ. ಹಲವಾರು ವರ್ಷಗಳಿಂದ ಬಹಳಷ್ಟು ಚರ್ಚೆಯಲ್ಲಿದೆ. ತಪ್ಪು ವಿಷಯಕ್ಕೆ ಚರ್ಚೆಯಲ್ಲಿದೆ. ಯಾವುದೇ ಪರೀಕ್ಷೆ ನಡೆದರೂ ಕೂಡ ಅದರಲ್ಲಿ ಅವ್ಯವಹಾರವಿದೆ ಎನ್ನುವಂತಹ ಆರೋಪಗಳು compulsory ಯಾಗಿ ಬರುತ್ತಿವೆ. ಅದರಲ್ಲಿ ಎರಡು ರೀತಿಯಿದೆ. ಒಂದು ನಿಜವಾಗಲೂ ಕೂಡ ಅರ್ಹತೆ ಇರುವಂತಹ ವಿದ್ಯಾರ್ಥಿಗಳಿಗೆ, ಬಹಳ ಕಷ್ಟಪಟ್ಟು ಓದಿರುವಂತಹ ವಿದ್ಯಾರ್ಥಿಗಳಿಗೆ ಕೆಲವು ಸಂದರ್ಭಗಳಲ್ಲಿ ಅವರ ಮೌಖಿಕ ಪರೀಕ್ಷೆಯಲ್ಲಿ, ಇನ್ನೊಂದರಲ್ಲಿ manipulate ಮಾಡಿರುವಂತಹದ್ದು ಕೂಡ ಸತ್ಯವಿದೆ. ಇನ್ನೂ ಕೆಲವರು ಯಾರು ಉತ್ತೀರ್ಣರಾಗುವುದಿಲ್ಲವೋ ಅವರೆಲ್ಲರೂ ಸಹಜವಾಗಿ general ಆರೋಪವನ್ನೂ ಕೂಡ ಮಾಡುತ್ತಾರೆ. ಯಾರು ಅನುತ್ತೀರ್ಣರಾಗುತ್ತಾರೋ ಅವರೆಲ್ಲರೂ ಕೂಡ ಆರೋಪ ಮಾಡುತ್ತಾರೆ. ಈ ಎರಡು ರೀತಿಯ ಆರೋಪಗಳಿವೆ. ಇಲ್ಲಿ ಮಾನ್ಯ ಪ್ರದೀಪ್ ಶೆಟ್ಟರ್ ಎತ್ತಿರುವಂತಹ ಪ್ರಶ್ನೆ ಏನೆಂದರೆ, ಪ್ರಶ್ನೆ ಪತ್ರಿಕೆ ಲೀಕ್ ಆಗಿರುವಂತಹದ್ದು. ಇಲ್ಲಿ ನಾವು ಹಲವಾರು securities ಅನ್ನು, ಎಲ್ಲವನ್ನೂ ಕೂಡ ನಾವು ಮಾಡಿದ್ದೇವೆ. ಈ ಬಾರಿಗೆ ಲೀಕ್ ಆಗಿರುವಂತಹದ್ದು ಆ security ಯಲ್ಲಿ ಅಲ್ಲ. ಅಲ್ಲಿ ಒಳಗಡೆ ಇರುವಂತಹ ಕೆ.ಪಿ.ಎಸ್.ಸಿ. ಸಿಬ್ಬಂದಿಯವರು ಯಾರ ಹತ್ತಿರ ಆ ಕೋಡ್ ಇರುತ್ತದೆ, ಯಾರು confidential ಆಗಿ ಇಟ್ಟುಕೊಳ್ಳಬೇಕು, ಆ ಒಂದು ಸೆಕ್ಷನ್‌ನಲ್ಲಿಯೇ ಇವತ್ತು ಲೀಕ್ ಆಗಿರುವಂತಹದ್ದು. ಅವರಿಗೆ ಅರೆಸ್ಟ್ ಕೂಡ ಮಾಡಿದ್ದೇವೆ ಮತ್ತು ಅವರಿಗೆ ಸಂಬಂಧಪಟ್ಟ ಎಲ್ಲರನ್ನೂ ಕೂಡ ಇವತ್ತು ವಿಚಾರಣೆಯನ್ನೂ ಮಾಡುತ್ತಿದ್ದೇವೆ. ಹೀಗಾಗಿ ನಾವು ಮರು ಚಿಂತನೆ ಮಾಡಬೇಕಾಗಿದೆ. ಇಲ್ಲಿ ಹೇಗಿದೆ ಎಂದರೆ, ಆ security staff section ಏನಿದೆ, ಅದು ಛೇರ್ಮನ್‌ಗೂ ಸಹಿತ ಏನೂ ಗೊತ್ತಾಗಬಾರದು ಮತ್ತು ಕಾರ್ಯದರ್ಶಿಗೂ ಕೂಡ ಏನೂ ಗೊತ್ತಾಗಬಾರದು ಅಷ್ಟೊಂದು confidential ಆಗಿ ಇಟ್ಟುಕೊಳ್ಳಬೇಕೆನ್ನುವ ದೃಷ್ಟಿಯಿಂದ ಅವರಿಗೆ ಆ ಒಂದು independence ಕೊಡಲಾಗಿದೆ. ಆದರೆ, ದುರ್ದೈವದಿಂದ ಅಂತಹ ಸಿಬ್ಬಂದಿಯವರೇ ಇವತ್ತು ಆ ಕೋಡ್‌ಅನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ತೆಗೆದುಕೊಂಡಿದ್ದಾರೆ. ಹೇಗೆ ತೆಗೆದುಕೊಂಡಿದ್ದಾರೆ ಎನ್ನುವಂತಹ ವಿಚಾರಣೆಗೆ ಬಂದಾಗ ಅದು ಯಾವುದೋ ಒಂದು ಪೆನ್‌ಡ್ರೈವ್‌ನಲ್ಲಿ ಯಾರ ಕಡೆಗೆ ಪೆನ್‌ಡ್ರೈವ್ ಇರಬೇಕಾಗಿತ್ತು ಅವರ ಕಡೆಯಿಂದ ತೆಗೆದುಕೊಂಡಿದ್ದಾರೆ. ಪೆನ್‌ಡ್ರೈವ್ ಇದ್ದವನು ನಾನು ಕೊಟ್ಟಿಲ್ಲವೆಂದು ಹೇಳುತ್ತಾನೆ. ಈ ರೀತಿಯ ವಿಚಾರಣೆ ನಡೆಯುತ್ತಿದೆ. ಈ ರೀತಿಯ ಸತ್ಯಾಸತ್ಯತೆ ಹೊರಗಡೆಗೆ ಬರುತ್ತದೆ. ಹೀಗಾಗಿ ಮಾನ್ಯ ಸಭಾಪತಿಯವರೆ, ಈ ಪರೀಕ್ಷಾ ವಿಧಾನದಲ್ಲಿ ಮರು ಚಿಂತನೆಯಾಗಬೇಕಾದುದು ಖಂಡಿತವಾಗಿಯೂ ಅವಶ್ಯಕತೆಯಿದೆ. ಈ ಪರೀಕ್ಷಾ ವಿಧಾನದಲ್ಲಿ ಮರುಚಿಂತನೆಯಾಗುವಂತಹದ್ದು ಖಂಡಿತವಾಗಿಯೂ ಅವಶ್ಯಕತೆಯಿದೆ. ಅದು ನಮ್ಮ ಚಿಂತನೆಯಲ್ಲಿ ಹೇಳುವುದಾದರೆ ಯಾವುದಾದರೂ SDC, FDC Exam ಕರೆದರೆ ಲಕ್ಷಗಟ್ಟಲೆ ವಿದ್ಯಾರ್ಥಿಗಳು ಒಂದು ಲಕ್ಷ – ಎರಡು ಲಕ್ಷ ಅರ್ಜಿಗಳನ್ನು ಹಾಕುತ್ತಾರೆ. ನಿರೀಕ್ಷೆ ಬಹಳ ಇರುತ್ತದೆ. ಆಗಲಿಲ್ಲವೆಂದಾಗ ಈ ರೀತಿಯ ಕೂಗುಗಳು ಬರುತ್ತವೆ.

**(ಮುಂದು)**

**(478) 18.03.2021 11.30 ಎಸ್‌ವಿ–ವಿಕೆ**

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು):–**

ಆದ್ದರಿಂದ ಪೂರ್ವಭಾವಿಯಾಗಿ ಆನ್‌ಲೈನ್‌ನಲ್ಲಿಯೇ ಒಂದು ಕಿರು ಪರೀಕ್ಷೆಯನ್ನು ನಡೆಸಬೇಕು ಎನ್ನುವ ಯೋಚನೆಯಿದೆ. ಎರಡನೆಯದಾಗಿ ಅಂಕಗಳ ಮೇಲೆಯೇ ನಿರ್ಧಾರ ಮಾಡಬೇಕೆನ್ನುವುದನ್ನು ಮಾನ್ಯ ಸದಸ್ಯರು ಹೇಳಿದರು. ಅಂಕಗಳ ಮೇಲೆ ಮಾಡಿದರೂ ಕೂಡ ಸರ್ಕಾರಿ ನೌಕರಿಯಲ್ಲಿ personal performance Jನ್ನುವುದು ಕೂಡ ಬಹಳ ಮುಖ್ಯವಾಗುತ್ತದೆ. ಹೀಗಾಗಿ ಆ ಒಂದು ವಿಚಾರದಲ್ಲಿ ಚಿಂತನೆ ನಡೆದಿದೆ. ಮೂರನೆಯದಾಗಿ oral marks ಕಡಿಮೆಯಾಗಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಖಂಡಿತವಾಗಿಯೂ ಅದರಲ್ಲಿ ಜಾಸ್ತಿ discretion ಇರಬಾರದು. ಎಲ್ಲಿ discretion ಇರುತ್ತದೆಯೋ ಅಲ್ಲಿ ತಮ್ಮ discretion ಅನ್ನು ಸದ್ಬಳಕೆ ಮಾಡದಿರುವ ಪ್ರಕರಣಗಳನ್ನು ನಾವು ನೋಡಿದ್ದೇವೆ. ಈ ಎಲ್ಲಾ ಬದಲಾವಣೆಗಳನ್ನು ತೀವ್ರಗತಿಯಲ್ಲಿ ತರಬೇಕೆನ್ನುವ ಚಿಂತನೆಯನ್ನು ಸರ್ಕಾರ ಮಾಡುತ್ತಿದೆ.

ಕರ್ನಾಟಕ ಲೋಕಸೇವಾ ಆಯೋಗ ಮತ್ತು ಕೇಂದ್ರ ಲೋಕಸೇವಾ ಆಯೋಗಗಳು ಸಂವಿಧಾನಾತ್ಮಕವಾಗಿ ಸೃಜನೆಗೊಂಡಿರುವಂತಹ ಸಂಸ್ಥೆಗಳಾಗಿವೆ. ಇವುಗಳ ಉದ್ದೇಶ ಒಳ್ಳೆಯದಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾಲಕ್ರಮೇಣ ಅವುಗಳ ಕಾರ್ಯವಿಧಾನದಲ್ಲಿ deteriorate ಆಗಿರುವುದು ಸತ್ಯ. ಇದನ್ನು ಸರಿ ಪಡಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ತಪ್ಪಿತಸ್ಥರು ಯಾರಿದ್ದಾರೆಯೋ ಅವರನ್ನು ಶಿಕ್ಷೆಗೆ ಒಳಪಡಿಸಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ 1502**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದ್ದು, ಪ್ರಸ್ತಾವನೆಯು ಪ್ರಾಥಮಿಕ ತನಿಖಾ ಹಂತದಲ್ಲಿದೆ ಎಂದು ಹೇಳಿದ್ದಾರೆ. ಸುಮಾರು ಏಳೆಂಟು ತಿಂಗಳ ಹಿಂದೆ ನೀರಾವರಿ ಮಂತ್ರಿಗಳು ಮಸ್ಕಿಗೆ ಬಂದಾಗ ತಿಂತಿಣಿ ಬ್ರಿಡ್ಜ್ ಪ್ರದೇಶಕ್ಕೆ ಭೇಟಿ ನೀಡಿದ್ದರು. ಏಕೆಂದರೆ ಸಾವಿರಾರು ರೈತರು tail end ಗೆ ನೀರು ಬರುತ್ತಿಲ್ಲ ಎನ್ನುವ ಪ್ರಸ್ತಾವನೆಯನ್ನು ಇಟ್ಟಿದ್ದರು. ಸಾಕಷ್ಟು ವರ್ಷಗಳಿಂದ ಕೂಡ 15, 16, 17, 18ನೇ distributaries, NRBC (*Narayanpur Right Bank Canal*) ಯಲ್ಲಿ ಸುಮಾರು 35,000 ಹೆಕ್ಟೇರ್‌ಗಳಿಗೆ ಇಂದಿನವರೆವಿಗೂ ನೀರು ತಲುಪುತ್ತಿಲ್ಲ. ಅದು 72,000 ಹೆಕ್ಟೇರ್ ನೀರಾವರಿಯಾಗುವಂತಹ ಪ್ರದೇಶ. ಅದರಲ್ಲಿ 60,000 ಹೆಕ್ಟೇರ್‌ಗಳು ಸುಮಾರು ನಾಲ್ಕು distributaries ಗಳಲ್ಲಿಯೇ ಬರುತ್ತದೆ. ಕಾಲುವೆ ನಿರ್ಮಾಣವಾಗಿ 18-20 ವರ್ಷಗಳಾಗಿದ್ದರೂ ಕೂಡ ಸುಮಾರು 25-30,000 ಹೆಕ್ಟೇರ್ ಭೂಮಿಗೆ ಒಂದು ಹನಿ ನೀರು ಕೂಡ ಮುಟ್ಟುತ್ತಿಲ್ಲ. ಎಲ್ಲಾ ರೈತರೂ ಪ್ರತಿ ವರ್ಷ ಪ್ರತಿಭಟನೆಯನ್ನು ಮಾಡಿದ ನಂತರ ಈ ವರ್ಷದಲ್ಲಿಯೇ ಮುಗಿಸಿಕೊಡುತ್ತೇವೆ ಎಂದು ಹೇಳಿದ್ದರು. Balancing reservoir ಮಾಡಿ ಇಲ್ಲಿ ಸುಮಾರು 25-30 ಟಿ.ಎಂ.ಸಿ ನೀರು ಶೇಖರಣೆಯಾಗುವ ಸಾಧ್ಯತೆ ಇದ್ದು, ತಕ್ಷಣವೇ ಆ ಕಾಮಗಾರಿಯನ್ನು ಪ್ರಾರಂಭ ಮಾಡಿ tail end ರೈತರ ಜಮೀನುಗಳ ನೀರಿನ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿದ್ದರು.

ನನ್ನ ಪ್ರಶ್ನೆ ಒಂದ್ಸಲ ಕಡೆಯಿರಲಿ. Irrigation ಬಹಳ important portfolio ಆಗಿದೆ. ಸಮರ್ಥರಾದವರು ನಿಭಾಯಿಸಲಿಲ್ಲ ಎಂದರೆ ಕಷ್ಟವಾಗುತ್ತದೆ. ಇದುವರೆವಿಗೂ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಮಾತನಾಡಿದರು. ಅವರು 1 ಲಕ್ಷ ಕೋಟಿ ಬೇಕೆಂದರು. 20 ಲಕ್ಷ ಕೋಟಿ ಬೇಕೆಂದು ನಾನು ಹೇಳುತ್ತೇನೆ. ಒಂದು ಟೆಂಡರ್ 100 ಕೋಟಿಗೆ ಪ್ರಾರಂಭವಾಗಿ ನಂತರ upgradation ಆಗಿ 500 ಕೋಟಿಗಳಿಗೆ ಮುಕ್ತಾಯವಾಗುತ್ತದೆ.

ಗಾಣಧಾಳ ಬಳಿ 0.75 ಟಿ.ಎಂ.ಸಿ.ಯ ಒಂದು ಪ್ರಸ್ತಾವನೆ ಬಂದು ನಾಲ್ಕಾರು ವರ್ಷಗಳು ಕಳೆದಿವೆ. ಶ್ರೀ ಅಂಜುಂ ಪರ್ವೇಜ್ ಎಂಬುವವರು ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಅವರು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲವನ್ನೂ ಮಾಡಿ ಕಳುಹಿಸಿದ್ದರು. ಅದನ್ನು ಹಾಗೆಯೇ ಮೂಲೆಗುಂಪು ಮಾಡಲಾಗಿದೆ. ಪುನಃ ಪ್ರಸ್ತಾವನೆ ಮಾಡುತ್ತೇವೆಂದು ಹೇಳಿದ್ದು, ಅದು ಇನ್ನೂ ಪ್ರಸ್ತಾವನೆಯ ಹಂತದಲ್ಲಿಯೇ ಇದೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ನಾರಾಯಣಪುರ ನಾಲೆಯ ಕೊನೆಯ ಹಂತಕ್ಕೆ ನೀರು ಬರುತ್ತಿಲ್ಲದ ಕಾರಣಕ್ಕಾಗಿ ಅಲ್ಲಿ ರೈತರಿಗೆ ತೊಂದರೆಯಾಗಿದೆ ಎಂದು ಹೇಳಿದರು. Balancing reservoir ಎಂದು ಅವರು ಹೇಳಿದರು. ಅದು balancing reservoir ಅಲ್ಲ. ಕೇವಲ reservoir. ತಿಂತಿಣಿ ಬ್ರಿಡ್ಜ್ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ 30 ಟಿ.ಎಂ.ಸಿ. ನೀರು ಸಂಗ್ರಹವಾಗುವಂತಹ ಒಂದು reservoir ಅನ್ನು ಕಟ್ಟಬೇಕೆನ್ನುವ ವಿಚಾರದಿಂದ 2020–21ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯನ್ನು ಮಾಡಿದ್ದಾರೆ. ಆದರೆ ಅದು ಪ್ರಾಥಮಿಕ ಹಂತದಲ್ಲಿದೆ. Feasibility report ಅನ್ನು ಸಿದ್ಧಪಡಿಸುವುದಕ್ಕೆ ಸೂಚನೆಯನ್ನು ಕೊಡಲಾಗಿದೆ. Feasibility report ಬಂದ ತಕ್ಷಣ immediately DPR ಅನ್ನು ಮಾಡಲಿಕ್ಕೆ ಸೂಚನೆಯನ್ನು ಕೊಡಲಾಗುತ್ತದೆ. ಆ ಹಂತದಲ್ಲಿದೆ.

ನೀರಿನ ಲಭ್ಯತೆ ಮತ್ತು ಹಂಚಿಕೆ ಅಷ್ಟೇ ಅಲ್ಲದೆ ಅನುದಾನದ ಹಂಚಿಕೆ ಕೂಡ ಆಗಬೇಕಾಗುತ್ತದೆ. ಮಾನ್ಯ ಸದಸ್ಯರ ಕಳಕಳಿ ನಮಗೆ ಅರ್ಥವಾಗಿದೆ. ಕೇವಲ ಕರ್ನಾಟಕದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಪಟ್ಟಂತಲ್ಲ. ಇಡೀ ದೇಶದಲ್ಲಿ ಯಾವುದೇ ಯೋಜನೆಯಾಗಿರಲಿ, ಆ ಯೋಜನೆಯ ಕೊನೆಯ ಹಂತಕ್ಕೆ ನೀರು ಹೋಗದೆ ಇರುವುದು ಸರ್ವೇಸಾಮಾನ್ಯವಾಗಿದೆ. ಯಾವ ಕಾರಣಕ್ಕಾಗಿ ಅದು ಆಗುತ್ತಿಲ್ಲವೆಂದರೆ ಮೇಲ್ಭಾಗದಲ್ಲಿರತಕ್ಕ ರೈತರು ತಮಗೆಷ್ಟು ನೀರು ಬೇಕೋ ಅಷ್ಟು ನೀರನ್ನು ಉಪಯೋಗ ಮಾಡಿಕೊಂಡು ಮುಂದಿರತಕ್ಕಂತಹ ರೈತನೂ ನಮ್ಮ ಸಹೋದರ, ಅವನಿಗೂ ನೀರು ಹೋಗಲಿ ಎನ್ನುವ ಕಾಳಜಿ–ಕಳಕಳಿ ಬಹಳ ಕಡಿಮೆಯಾಗಿದೆ. ಅದಕ್ಕಾಗಿ ನಾರಾಯಣಪುರ ನಾಲೆಯ ಕೊನೆಯ ಹಂತ ನೀರು ಸಿಗದೆ suffer ಆಗುತ್ತಿದೆ. ಈ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಕೊಡಲಿಕ್ಕೆ ಸರ್ಕಾರ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಉಪ ಮುಖ್ಯಮಂತ್ರಿಯವರೇ, ಉತ್ತರದಲ್ಲಿ ತಾವೇ balancing reservoir ಎಂದು ಕೊಟ್ಟಿದ್ದೀರಿ. ತಾವು ಮಾತನಾಡುವಾಗ reservoir ಎಂದು ಹೇಳಿದಿರಿ. ಅದು balancing reservoir ಹೌದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಇಟಗಿಯವರೇ, ಇದು ಅಂತರರಾಜ್ಯ ನದಿಯಾಗಿದೆ. ದಯವಿಟ್ಟು ನೀವು ಅರ್ಥ ಮಾಡಿಕೊಳ್ಳಿ. ಸೂಕ್ಷ್ಮತೆ ಇದ್ದು, ಅದರ ಬಗ್ಗೆ ಹೆಚ್ಚು ಚರ್ಚೆಗೆ ಹೋಗುವುದು ಬೇಕಾಗಿರುವುದಿಲ್ಲ. ಅಲ್ಲಿ ಒಂದು reservoir ಆಗಬೇಕೆನ್ನುವುದು ನಿಮ್ಮ ಕಳಕಳಿಯಾಗಿದೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರು ಸಿಗಬೇಕೆನ್ನುವ ನಿಮ್ಮ ಕಾಳಜಿಯು ಸರ್ಕಾರದ ಕಾಳಜಿಯೂ ಆಗಿದೆ. ಆ ಕಾರಣಕ್ಕಾಗಿಯೇ 2020-21ನೇ ಸಾಲಿನ ಆಯವ್ಯಯದಲ್ಲಿ ಅದನ್ನು ಘೋಷಣೆ ಮಾಡಲಾಗಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಉಪ ಮುಖ್ಯಮಂತ್ರಿಯವರೇ, ತಾವು ಮಾಡುತ್ತೀರಿ ಎನ್ನುವ ನಂಬಿಕೆ ನಮಗಿದೆ. ಕಳೆದ ಬಾರಿ ಅಲ್ಲಿನ ರಸ್ತೆಯ ಬಗ್ಗೆ ತಮ್ಮಗೆ ಪ್ರಶ್ನೆ ಕೇಳಿದ್ದೆನು. ನಾನಿದ್ದಾಗಲೇ ಮಾಡಿ ಕೊಡುತ್ತೇನೆ ಎಂದು ತಾವು ಇದೇ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದಿರಿ. ತಡವಾಗಿಯಾದರೂ ಅದು ಈಗ ಪ್ರಾರಂಭವಾಗಿದೆ. ಕಳೆದ ಬಾರಿಯೂ ಬಜೆಟ್‌ನಲ್ಲಿಯೇ ಘೋಷಣೆ ಮಾಡಿದ್ದಿರಿ. ಈ ವರ್ಷ ಇದಕ್ಕೆ ಹಣ ಕೊಟ್ಟು ಮಂಜೂರಾತಿ ಕೊಡುವಂತಹ ಕೆಲಸ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಇಟಗಿಯವರೇ, ಅವಶ್ಯವಾಗಿ ಮಾಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1526**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರವನ್ನು ಒದಗಿಸಿದೆ. ಸ್ಪಷ್ಟವಾಗಿಯೂ ಹೇಳಿದ್ದಾರೆ, ಬುದ್ಧಿವಂತಿಕೆಯಿಂದಲೂ ಹೇಳಿದ್ದಾರೆ. 8811 ಟ್ರಾನ್ಸ್‌ಫಾರ್ಮರ್‌ಗಳನ್ನು ರಸ್ತೆ ಬದಿಯಲ್ಲಿ ಹಾಕಲಾಗಿದೆ ಎಂದು ಹೇಳುತ್ತಾರೆ. ಅದರಲ್ಲಿ 4358 ಟ್ರಾನ್ಸ್‌ಫಾರ್ಮರ್‌ಗಳಿಂದ ಅಡಚಣೆಯಾಗುತ್ತಿರುವುದನ್ನು ಒಪ್ಪಿಕೊಂಡಿದ್ದಾರೆ. ನಾನು ಹಿಂದಿನ ಸರ್ಕಾರವಿದ್ದಾಗಲೂ ಸಹ ಇದೇ ಪ್ರಶ್ನೆಯನ್ನು ಕೇಳಿದ್ದೆನು. ಆಗಲೂ ಇದೇ ರೀತಿಯ ಉತ್ತರವನ್ನು ಕೊಡಲಾಗಿತ್ತು. ಇಲ್ಲಿಯವರೆವಿಗೆ ಎರಡು ಟ್ರಾನ್ಸ್‌ಫಾರ್ಮರ್‌ಗಳನ್ನು ಮಾತ್ರ ಸ್ಥಳಾಂತರಿಸಿದ್ದಾರೆ. 3196 ಟ್ರಾನ್ಸ್‌ಫಾರ್ಮರ್‌ಗಳ ವಿನ್ಯಾಸವನ್ನು ಬದಲಾಯಿಸಿದ್ದೇವೆಂದು ಹೇಳಿದ್ದಾರೆಯೇ ಹೊರತು ಸ್ಥಳಾಂತರಿಸಿದೆ ಎಂದು ಹೇಳಿರುವುದಿಲ್ಲ. ಕೇವಲ ಎರಡು ಟ್ರಾನ್ಸ್‌ಫಾರ್ಮರ್‌ಗಳನ್ನು ಮಾತ್ರ ಸ್ಥಳಾಂತರಿಸಲಾಗಿದೆಯೆಂದು ಹೇಳುತ್ತಾರೆ.

ಕೋಟ್ಯಂತರ ರೂಪಾಯಿಗಳ ವೆಚ್ಚದಲ್ಲಿ ಬಹಳ ಚೆನ್ನಾಗಿ ಟೆಂಡರ್‌ಶ್ಯೂರ್ ರಸ್ತೆಗಳನ್ನು ಮಾಡಲಾಗಿದ್ದು, ಅದರ ಪಕ್ಕದಲ್ಲಿ ಈ ರೀತಿಯಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಲಾಗಿದೆ. ಬೇಕಾದಷ್ಟು ಸರ್ಕಾರಿ ಜಾಗ, ಖಾಸಗಿ ಜಾಗ ಇರುತ್ತದೆ. ಸ್ಥಳಾಂತರಗೊಳಿಸುವುದರಿಂದ ತೊಂದರೆಯೇನೂ ಆಗುವುದಿಲ್ಲ. ಕಳೆದ ನಾಲ್ಕು ವರ್ಷಗಳಿಂದಲೂ ನಾನು ಪ್ರಯತ್ನಿಸಿದ್ದು, ಎರಡೇ ಎರಡು ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಿದ್ದಾರೆ. ಅವುಗಳ ವಿನ್ಯಾಸ ಬದಲಾವಣೆ ಇಲಾಖೆಗೆ ಹಾಗೂ ಸರ್ಕಾರಕ್ಕೆ ಬಿಟ್ಟ ವಿಷಯ.

ಫುಟ್‌ಪಾತ್ ಮೇಲಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಕೂಡಲೇ ಸ್ಥಳಾಂತರಿಸಬೇಕು ಎನ್ನುವುದು ನನ್ನ ಪ್ರಶ್ನೆ. ಈಗಾಗಲೇ ಕರ್ನಾಟಕ ಉಚ್ಚ ನ್ಯಾಯಾಲಯವೂ ಕೂಡ ಹೇಳಿದೆ. *"Did you permit transformers to be installed on footpaths?"* High Court asked BBMP. *"Did Bescom take BBMP nod to install transformers on footpaths."*

**ಸಭಾಪತಿಯವರು:–** ನ್ಯಾಯಾಲಯದ ಆದೇಶವಾಗಿದೆಯಲ್ಲವೇ? ಮಾನ್ಯ ಸಚಿವರೇ, ಉತ್ತರವನ್ನು ಹೇಳಿ.

**ಶ್ರೀ ಕೆ.ಗೋವಿಂದರಾಜ್:–** ಹೌದು ಮಾನ್ಯ ಸಭಾಪತಿಯವರೇ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜು ಅವರು ಎತ್ತಿರುವುದು ಬಹಳ pertinent question. ಫುಟ್‌ಪಾತ್‌ಗಳ ಮೇಲೆ ಟ್ರಾನ್ಸ್‌ಫಾರ್ಮರ್‌ಗಳಿರುವುದು ಸತ್ಯ. ಇದು ಮೊದಲಿನಿಂದಲೂ ಇದೆ. ಸುಮಾರು 30–40 ವರ್ಷಗಳ ಹಿಂದೆ ಫುಟ್‌ಪಾತ್‌ಗಳ ಮೇಲೆ ಹೆಚ್ಚು ಜನರು ಇರಲಿಲ್ಲ. ಬೆಂಗಳೂರು ನಗರದಲ್ಲಿ ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ ಆ ರೀತಿ ಮಾಡಿರುವುದು ಸತ್ಯ. ಒಟ್ಟು 8811 ಟ್ರಾನ್ಸ್‌ಫಾರ್ಮರ್‌ಗಳಿದ್ದವು. ಅದರಲ್ಲಿ ನಿಜವಾಗಿಯೂ ಅಡಚಣೆಯಾಗುತ್ತಿರುವುದನ್ನು ಗುರುತಿಸಲಾಗಿದ್ದು, ಅವುಗಳ ಸಂಖ್ಯೆ 4,358.

ಹಳೆಯ ವಿನ್ಯಾಸದಲ್ಲಿ ನಾಲ್ಕು steel base ಮೇಲೆ ಟ್ರಾನ್ಸ್‌ಫಾರ್ಮರ್ ಇರುತ್ತಿದ್ದುದನ್ನು ನಾವು ನೋಡಿದ್ದೇವೆ. **(ಮುಂದು)**

**(479) 18.03.2021, 11 .40 KG.VK**

**ಶ್ರೀ ಎಸ್.ಆರ್.ಬೊಮ್ಮಾಯಿ(ಮುಂದು):–**

ಹೀಗಾಗಿ, ಅದಕ್ಕೆ ಬಹಳ ಜಾಗವನ್ನು ತೆಗೆದುಕೊಳ್ಳುತ್ತಿತ್ತು. ಈಗ ವಿನ್ಯಾಸ ಬದಲಾವಣೆ ಮಾಡಿ spun pole ನಲ್ಲಿ ನಿಲ್ಲಿಸಿ ಬಹಳ ಎತ್ತರದ ಮೇಲೆ transformer ಅನ್ನು shift ಮಾಡುವಂತಹ scientific ಆಗಿ ಹೊಸದೊಂದು ಪದ್ಧತಿ ಬಂದಿದೆ. ಅದರ ಕೆಳಗಡೆ ಪಾದಚಾರಿಗಳು ಓಡಾಡಬಹುದು. ಈ ತರಹ 3194 transformer ಗಳನ್ನು shift ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಈಗ ಬೆಂಗಳೂರು ನಗರದಲ್ಲಿ underground cable ಮಾಡುವಂತಹ ಯೋಜನೆಯನ್ನು ಸಹ ಮಾಡುತ್ತಿದ್ದೇವೆ.

**ಶ್ರೀ ಕೆ.ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು underground cable ಯೋಜನೆ ಬಗ್ಗೆ ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ, ಒಂದು ಉದಾಹರಣೆಯನ್ನು ಹೇಳುತ್ತೇನೆ. 2017ನೇ ಸಾಲಿನಲ್ಲಿ Pilot project ಎಂಬ ಹೆಸರಿನಲ್ಲಿ 16 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇಂದಿರಾನಗರದಲ್ಲಿ underground cabling ಮಾಡಿದರು. ಆದರೆ, ಇದುವರೆಗೂ poles ಹಾಕಿಲ್ಲ. 16 ಕೋಟಿ ರೂಪಾಯಿಗಳಿಗೆ cable ಹಾಕಿರುವುದು ಹಾಗೆಯೇ ಇದೆ. ಈ ಬಗ್ಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯವರನ್ನು ಕೇಳಿದರೆ. ಬಿ.ಬಿ.ಎಂ.ಪಿ.,ಯವರು ಹಾಕಬೇಕೆಂದು ಹೇಳುತ್ತಾರೆ. ಬಿ.ಬಿ.ಎಂ.ಪಿ.,ಯವರನ್ನು ಕೇಳಿದರೆ ಬಜೆಟ್ ಇಲ್ಲವೆಂದು ಹೇಳುತ್ತಾರೆ. ಇದಕ್ಕೆ ಯಾರು ಹೊಣೆ? ಈ ಯೋಜನೆಗೆ 16 ಕೋಟಿ ರೂಪಾಯಿಗಳು ಆಗಿದೆ. ಇದಕ್ಕೆ ಏನು ಮಾಡಬೇಕು ಹೇಳಿ?

**ಶ್ರೀ ಎಸ್.ಆರ್.ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವಂತಹ ವಿಷಯ ಬೇರೆ ಇದೆ. ನಾನು transformer shifting ವಿಷಯದ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. Underground cabling ನಲ್ಲಿಯೂ ಸಹ 622 ಈ ತರಹದ transformer ಗಳು ಬರುತ್ತವೆ. ಅವುಗಳನ್ನು ಸಹ spun pipe ನಲ್ಲಿ ಹಾಕಿ ಮೇಲೆ ಅಳವಡಿಸುವುದಕ್ಕೆ ಕೆಲಸವನ್ನು ತೆಗೆದುಕೊಂಡಿದ್ದೇವೆ. ಈ ಕೆಲಸ ಆಗಬೇಕಾಗಿದೆ. ಇನ್ನು 540 ಬಾಕಿ ಉಳಿದಿವೆ. ಅವುಗಳನ್ನು ಸಹ shift ಮಾಡುವುದಕ್ಕೆ ಒಂದು ಕಾರ್ಯಕ್ರಮವನ್ನು ರಚಿಸುತ್ತೇವೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಎಸ್.ಆರ್.ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಆಯಿತು. ಖಂಡಿತವಾಗಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1571**
**(ಉತ್ತರ ಒದಗಿಸಲಾಗಿದೆ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ ಇಲಾಖೆಯಲ್ಲಿ ಕಲಬುರಗಿ ಜಿಲ್ಲೆಗೆ ಸಂಬಂಧಪಟ್ಟಂತೆ, ಖರ್ಚು ವೆಚ್ಚಗಳ ಅಂಕಿ-ಅಂಶಗಳ ಬಗ್ಗೆ ಕೇಳಿದ್ದೆ. ಮಾನ್ಯ ಸಚಿವರು ಉತ್ತರವನ್ನು ವಿವರವಾಗಿ ಒದಗಿಸಿದ್ದಾರೆ. ಕಲಬುರಗಿ ಜಿಲ್ಲೆಯಲ್ಲಿ ಮತ್ತು ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಲ್ಯಾಣ ಕರ್ನಾಟಕ ಮಂಡಳಿಯ ಹಣವನ್ನು ಕೊಟ್ಟರೂ ಸಹ, ಯೋಜನೆ ಇಲಾಖೆಯಲ್ಲಿ ಆ ಹಣವನ್ನು ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ. ಆ ಇಲಾಖೆಯಲ್ಲಿ ಸಿಬ್ಬಂದಿಯೇ ಇಲ್ಲ. ನಮ್ಮದು District Headquarter, Divisional Headquarter. ಹಾಗಾಗಿ, ಅಲ್ಲಿ ಒಬ್ಬ Assistant Director ರವರಿಂದ ಕೆಲಸ ನಡೆಯುತ್ತಿದೆ. ನಮ್ಮ ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಈ ಇಲಾಖೆಯಲ್ಲಿ ಇದೇ ಪರಿಸ್ಥಿತಿ ಇದೆ. ಹಾಗಾಗಿ, ಅದು ಸಮಸ್ಯೆ ಆಗಿದೆ. ಕಲಬುರಗಿ ಜಿಲ್ಲೆಯಲ್ಲಿ ಬಹಳ ಹಳೆಯ ಕಾಲದ stadium ಇದೆ. ಆ stadium ನಲ್ಲಿ ಸಾರ್ವಜನಿಕರು ಕುಳಿತುಕೊಳ್ಳುವುದಕ್ಕೆ ಸರಿಯಾದಂತಹ ವ್ಯವಸ್ಥೆ ಇಲ್ಲ. ಇದನ್ನು ಮಾನ್ಯ ಸಚಿವರು ಯೋಜನೆ ಇಲಾಖೆಯಿಂದ ಮಾಡಿಕೊಡಬೇಕು. ನಮ್ಮ ಜಿಲ್ಲೆ Divisional Headquarter ಇರುವುದರಿಂದ, ಕ್ರೀಡಾಪಟುಗಳು ಬಹಳಷ್ಟು ಜನರು ಬರುತ್ತಾರೆ. ಆದರೆ, ಅಲ್ಲಿಗೆ ಬಂದಂತಹ ಕ್ರೀಡಾಪಟುಗಳಿಗೆ ವಸತಿ ಸೌಕರ್ಯ ಇಲ್ಲ. ಹಾಗಾಗಿ, ಒಂದು ಹಾಸ್ಟಲ್‌ನ್ನು ಸಹ ನಿರ್ಮಾಣ ಮಾಡಬೇಕು. ಮಾನ್ಯ ಸಚಿವರು ಈ ಹಿಂದೆಯೂ ಸಹ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ಮಾನ್ಯ ಸಚಿವರು ಕಲಬುರಗಿಯಲ್ಲಿ ladies hostel ಅನ್ನು ಮಾಡಲು 150 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇನೆಂದು ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದರು. ಆದರೆ, ಅದು ಸಹ ಇಲ್ಲಿಯವರೆಗೆ ಆಗಿಲ್ಲ. ಆದ್ದರಿಂದ, ಈ ಎಲ್ಲಾ ಸಂಗತಿಗಳನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ ಎಲ್ಲಾ ಕಾಮಗಾರಿಗಳನ್ನು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಬೇಕು. ನಮ್ಮಲ್ಲಿ ಅನೇಕ ಜನರು ಕ್ರೀಡಾಪಟುಗಳು ಇದ್ದಾರೆ. ಆದರೆ, coaches ಗಳು ಇಲ್ಲ. Coach ಗಳು ಇಲ್ಲವೆಂದರೆ, ಕ್ರೀಡಾಪಟುಗಳಿಗೆ ಏನು ಉಪಯೋಗವಾಗುತ್ತದೆ? ಹಾಗಾಗಿ, coaches selection ಗಳನ್ನು ಸಹ ಆಯ್ಕೆ ಮಾಡಿಕೊಡಬೇಕು.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಒಂದು ಗಂಟೆಯ ಕಾಲಾವಧಿ ಚರ್ಚೆಗೆ ಹಾಕಿದರೆ ಬಹಳ ಒಳ್ಳೆಯದು. ಇದರ ಬಗ್ಗೆ ಸಾಕಷ್ಟು ಮಾತನಾಡಬಹುದು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ನಾರಾಯಣಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು ಹೇಳುತ್ತಿರುವ ವಿಷಯ ನಿಜ ಇದೆ. ಏಕೆಂದರೆ, ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಮತ್ತು coach ಗಳು ಇಲ್ಲ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಹೆಚ್ಚಿನ ಅನುದಾನವನ್ನು ಪಡೆದು ಆದಷ್ಟು ಶೀಘ್ರದಲ್ಲಿ ಇದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ 1574**
**(ಉತ್ತರ ಒದಗಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ಮೇಲ್ಸೇತುವೆ ನಿರ್ಮಾಣ ಕಾರ್ಯ ಆರಂಭಗೊಂಡು ಎರಡು ವರ್ಷ ಕಳೆದಿದ್ದರೂ, ಕಾಮಗಾರಿ ಇದುವರೆಗೂ ಪೂರ್ಣಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ. ಮಾನ್ಯ ಸಚಿವರು ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯ ಸ್ಥಳದಲ್ಲಿ ಭೂಸ್ವಾಧೀನ, ವಿದ್ಯುತ್ ಕಂಬಗಳ ಸ್ಥಳಾಂತರ, ಅರಣ್ಯ ಇಲಾಖೆಯ ಗಿಡಮರಗಳನ್ನು ತೆರವುಗೊಳಿಸಲು ವಿಳಂಬವಾಗಿದ್ದರಿಂದ, 2018 ಮತ್ತು 2019 ರ ಸಾಲುಗಳಲ್ಲಿ ಹೆಚ್ಚಿನ ಮಳೆಯಿಂದಾಗಿ ಹಾಗೂ 2020 ರಲ್ಲಿ ದೇಶಾದ್ಯಂತ ಲಾಕ್‌ಡೌನ್ ವಿಧಿಸಲಾಗಿದ್ದರಿಂದ ಕಾಮಗಾರಿಯು ವಿಳಂಬವಾಗಿರುತ್ತದೆಂದು ಉತ್ತರ ನೀಡಿದ್ದಾರೆ.

ಮಾನ್ಯ ಸಭಾಪತಿಯವರೇ, ನನಗೆ ತಿಳಿದ ಮಟ್ಟಿಗೆ ಇದು 2016 ರಲ್ಲಿ ಶಂಕುಸ್ಥಾಪನೆಯಾಗಿದೆ. ನಾನು ಎರಡು ವರ್ಷ ಕಳೆದಿದ್ದರೂ ಸಹ, ಕಾಮಗಾರಿ ಪೂರ್ಣಗೊಂಡಿಲ್ಲವೆಂದು ಕೇಳಿದ್ದೆ. ಆದರೆ, ನಾಲ್ಕು ವರ್ಷ ಕಳೆದಿದೆ. ಈ ಕಾಮಗಾರಿಯನ್ನು ವಿಳಂಬ ಮಾಡುತ್ತಿದ್ದರೆ, material cost ಯಾವ ಮಟ್ಟಕ್ಕೆ ಹೋಗುತ್ತದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಅರಣ್ಯ ಇಲಾಖೆ ಗಿಡಮರಗಳನ್ನು ತೆಗೆಯುವುದು ಎಂದರೆ, ನನಗೆ ಅದರ ಬಗ್ಗೆ ಆಶ್ಚರ್ಯವಾಗುತ್ತದೆ. ಏಕೆಂದರೆ, ಅದು ಸರ್ಕಾರದೊಳಗೆ ಇರುವಂತಹ ಇಲಾಖೆಯಾಗಿದ್ದು ಅವರಿಗೆ ಒಂದು ಕೆಲಸವಾಗಬೇಕೆಂದರೆ, ಅನುಮತಿ ಕೊಡುವುದಕ್ಕೆ ಏಕೆ ಇಷ್ಟೊಂದು ತಡಮಾಡುತ್ತಾರೆ? ಮಳೆಗಾಲದಲ್ಲಿ ದ್ವೀಪದಂತಾಗುವ ಭಾಗಮಂಡಲದಲ್ಲಿ ಸಾರ್ವಜನಿಕರಿಗೆ ಹಾಗೂ ಭಕ್ತಾಧಿಗಳಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸುವ ಸಲುವಾಗಿ ಯಾವ ಕಾಲಮಿತಿಯೊಳಗೆ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು? ಎಂಬ ಪ್ರಶ್ನೆಗೆ, ಮಾನ್ಯ ಸಚಿವರು ಪ್ರಸುತ್ತ ಕಾಮಗಾರಿಯು ಪ್ರಗತಿಯಲ್ಲಿದ್ದು, ಜೂನ್-2022 ರೊಳಗೆ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದೆಂದು ಉತ್ತರವನ್ನು ನೀಡಿದ್ದಾರೆ. ಇದರ ಅಂಕಿ-ಅಂಶಗಳ ಪ್ರಕಾರ, ಈಗಾಗಲೇ 10 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಇನ್ನು ಬಾಕಿ 10 ಕೋಟಿ ರೂಪಾಯಿಗಳು ಇದೆ. ಎರಡು ತಿಂಗಳು ಮಾತ್ರ ಬಾಕಿ ಇದೆ. ಈ ಎರಡು ತಿಂಗಳಲ್ಲಿ 10 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಯಾವ ರೀತಿ ಮಾಡುತ್ತಾರೆಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಕೊಡಗು ಜಿಲ್ಲೆ ಬಹಳ ಚೆನ್ನಾಗಿ ಗೊತ್ತಿದೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ಕಾಮಗಾರಿಗಳು ಬಹಳ ವಿಳಂಬವಾಗಿದ್ದರಿಂದ ಸಾರ್ವಜನಿಕರಿಗೆ ಬಹಳ ಕಷ್ಟವಾಗಿದೆ. ನಾನು ಕೊಡಗಿನ ಭಕ್ತರ ಬಗ್ಗೆ ಮಾತನಾಡುತ್ತಿದ್ದೇನೆ. ಭಕ್ತರಿಗೆ ಹೋಗುವುದಕ್ಕೆ ಕಷ್ಟವಾಗಿದೆ. ಆದ್ದರಿಂದ, ಮೇಲ್ಸೇತುವೆಯನ್ನು ಬಹಳ ಬೇಗ ಮಾಡಿಕೊಡಬೇಕು. ಮಾನ್ಯ ಸಚಿವರು ಇಲಾಖೆಯ ಅಧಿಕಾರಿಗಳಿಗೆ ಸ್ವಲ್ಪ ಚುರುಕು ಮುಟ್ಟಿಸಬೇಕಾಗುತ್ತದೆ. ಈ ಕೆಲಸ ಕಾವೇರಿ ನೀರಾವರಿ ನಿಗಮದವರದ್ದು. ಅವರಿಗೆ ಏನು ಇಚ್ಛಾಶಕ್ತಿಯ ಕೊರತೆ ಎಂದು ನನಗೂ ಅರ್ಥವಾಗುತ್ತಿಲ್ಲ. ಸರ್ಕಾರ ಹೇಳಿದ ಅವಧಿಯಲ್ಲಿ ಆ ಕಾಮಗಾರಿಯನ್ನು ಪೂರ್ಣಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಅನುಮಾನವಿದೆ. ಹಾಗಾಗಿ, ಅವರು ಸರ್ಕಾರಕ್ಕೆ ಏಕೆ ಈ ಸುಳ್ಳು ಮಾಹಿತಿಯನ್ನು ಕೊಡುತ್ತಾರೆಂದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಗೋವಿಂದ ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ) (ಮುಖ್ಯ ಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, land acquisition and electrical pole shifting forest ನಲ್ಲಿ ಸ್ವಲ್ಪ ವಿಳಂಬವಾಗಿದ್ದು ನಿಜ. ಕಳೆದ ವರ್ಷ ಕೊಡಗಿನಲ್ಲಿ ಹೆಚ್ಚು ಮಳೆಯಾಗಿದ್ದರಿಂದ working season ಸಿಗಲಿಲ್ಲ. ಹೀಗಾಗಿ, ವಿಳಂಬವಾಗಿದೆ. ಮಾನ್ಯ ಸದಸ್ಯರು ಉತ್ತರವನ್ನು ತಪ್ಪಾಗಿ ತಿಳಿದುಕೊಂಡಿದ್ದಾರೆ. ನಾವು ಎರಡು ತಿಂಗಳಿನಲ್ಲಿ ಮುಗಿಸುತ್ತೇವೆಂದು ಹೇಳಿಲ್ಲ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ಜೂನ್-2022ರೊಳಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದೆಂದು ಹೇಳಿದ್ದೇವೆ. ಇನ್ನು ಸುಮಾರು 14 ರಿಂದ 15 ತಿಂಗಳ ಕಾಲವಕಾಶವಿದೆ. ಹಾಗಾಗಿ, ಖಂಡಿತವಾಗಿಯೂ ಸರ್ಕಾರ ಆ ಅವಧಿಯಲ್ಲಿ ಪೂರ್ಣಗೊಳಿಸಿ ಕೊಡುತ್ತದೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ಜೂನ್-2022ರೊಳಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದೆಂದು ಹೇಳಿದ್ದಾರೆ.

**ಶ್ರೀ ಗೋವಿಂದ ಕಾರಜೋಳ:-** ಮಾನ್ಯ ಸಭಾಪತಿಯವರೇ, ಅದು ವಿಳಂಬವಾಗಿದೆ. ವಿಳಂಬವಾಗಿದ್ದಕ್ಕೆ ಕಾರಣಗಳನ್ನು ಹೇಳಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಅದನ್ನು ಸರಿಮಾಡಿಕೊಡಿ.

**ಶ್ರೀ ಗೋವಿಂದ ಕಾರಜೋಳ:-** ಮಾನ್ಯ ಸಭಾಪತಿಯವರೇ, ಅದು 29.62 ಕೋಟಿ ರೂಪಾಯಿಗಳ ವೆಚ್ಚದ ಮೇಸ್ಸೇತುವೆ ಕಾಮಗಾರಿ. ಅದು ಕಾವೇರಿ ನದಿಗೆ. ಈಗಾಗಲೇ 10.19 ಕೋಟಿ ರೂಪಾಯಿಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖರ್ಚು ಮಾಡಿದ್ದೇವೆ. ಬಾಕಿ ಹಣವನ್ನು ಸಹ ಬಿಡುಗಡೆ ಮಾಡುತ್ತೇವೆ. ಸದರಿ ಕಾಮಗಾರಿಯನ್ನು ನಿಗದಿತ ಅವಧಿ ಎಂದರೆ, ಜೂನ್, 2022ರೊಳಗೆ ಮುಗಿಸಿಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1587**

**(ಉತ್ತರ ಒದಗಿಸಲಾಗಿದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ (ಶ್ರೀ ಜಿ.ರಘು ಆಚಾರ್‌ರವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಅವಕಾಶ ಮಾಡಿಕೊಟ್ಟಿದಕ್ಕಾಗಿ ಧನ್ಯವಾದಗಳು. ಮೊದಲನೆಯದಾಗಿ, ಬೆಂಗಳೂರು ನಗರ ಅಭಿವೃದ್ಧಿ ಇಲಾಖೆಗೆ ಬರುವ ವಿವಿಧ ಪ್ರಾಧಿಕಾರಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ನಡೆದಿರುವ ಸಭೆಗಳ ಸಂಖ್ಯೆ ಎಷ್ಟು ಎಂಬ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಎರಡನೆಯದಾಗಿ, ಈ ಪ್ರಾಧಿಕಾರಗಳ ಸಭೆಯಲ್ಲಿ ಕೈಗೊಂಡಿರುವ ನಿರ್ಣಯಗಳನ್ನು ಅನುಷ್ಠಾನ ಮಾಡುವಲ್ಲಿ ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಈ ಲೋಪದೋಷ ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಅದರ ಮಾಹಿತಿಯನ್ನು ಒದಗಿಸುವಂತೆ ಕೇಳಿದ್ದೆ. ಅದಕ್ಕೆ ಸಭೆಯ ನಿರ್ಣಯಗಳನ್ನು ಅನುಷ್ಠಾನ ಮಾಡುವಲ್ಲಿ ವಿಳಂಬವಾಗಿರುವುದಿಲ್ಲವೆಂದು ಉತ್ತರವನ್ನು ನೀಡಿದ್ದಾರೆ. ಇದು ಸತ್ಯಕ್ಕೆ ದೂರವಾಗಿದೆ. ಏಕೆಂದರೆ, ಅವರು ನೀಡಿರುವಂತಹ ಉತ್ತರದಿಂದ ಯೋಜನಾ ಪ್ರಾಧಿಕಾರದ ವರಿಷ್ಠರು ಕಳೆದ ಎರಡು ವರ್ಷಗಳಿಂದ ಎರಡು ಅಥವಾ ಮೂರು ಸಭೆಗಳನ್ನು ಮಾತ್ರ ಮಾಡಿರುವುದು ಕಂಡುಬರುತ್ತದೆ. ಈ ಯೋಜನಾ ಪ್ರಾಧಿಕಾರಿಗಳು ಸುಮಾರು ಎರಡು ತಿಂಗಳಿಗೊಮ್ಮೆ ಸಭೆಗಳನ್ನು ಮಾಡಿದರೆ, ಬಡಾವಣೆ ಮಾಡುವ ಸಂಸ್ಥೆಗಳಿಗೆ ಹಾಗೂ ನಾಗರೀಕರು ನಿವೇಶನಗಳ ಖಾತೆಯನ್ನು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. **(ಮುಂದು)**

**(480) 18-03-2021(11-50)ಎಂವಿ-ಬಿಎನ್‌ಎಸ್**

**ಶ್ರೀ ಎಂ.ಎ.ಗೋಪಾಲಸ್ವಾಮಿ (ಮುಂದು):–**

ನಾಗರಿಕರು ನಿವೇಶನವನ್ನು ಖಾತೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಮತ್ತು ಅದರ ಜೊತೆಗೆ ಪಾರದರ್ಶಕತೆ ಸಹ ಇರುತ್ತದೆ. ಏಕೆಂದರೆ, ಅಕ್ರಮ ಬಡಾವಣೆ ಮತ್ತು ರೆವಿನ್ಯೂ ಲೇಔಟ್ ಇವುಗಳನ್ನು ಉಪ ನೋಂದಾಣಾಧಿಕಾರಿಯವರು ಹಿಡಿದಿಟ್ಟುಕೊಂಡಿರುವುದರಿಂದ ನಿವೇಶನಗಳ ಬಿಡುಗಡೆಗೆ ತಡವಾಗುತ್ತದೆ. ಇಂತಹ ಸಂದರ್ಭದಲ್ಲಿ ಅಕ್ರಮಕ್ಕೆ ಅವಕಾಶವಾಗುತ್ತದೆ. ಹಾಗಾಗಿ ನಿವೇಶನದಾರರಿಗೂ ಮತ್ತು ಬಡಾವಣೆ ಮಾಡುವಂತಹ ಸಂಸ್ಥೆಗಳಿಗೂ ಸಹ ಅನ್ಯಾಯವಾಗುತ್ತದೆ. ಇವುಗಳು ಯಾವುದೂ ಸಹ ವಿಳಂಬವಾಗದಂತೆ ಇದಕ್ಕೆ ಸಂಬಂಧಪಟ್ಟಂತೆ ಕ್ರಮ ಜರುಗಿಸಬೇಕು. ಪ್ರತಿ ವರ್ಷ ಕನಿಷ್ಟಪಕ್ಷ ಆರು ಸಭೆಗಳನ್ನಾದರೂ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ, (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ ಒಟ್ಟು 12 ಪ್ರಾಧಿಕಾರಗಳಿವೆ. ಪ್ರಾಧಿಕಾರಗಳ ಸಭೆ ಎಷ್ಟು ಆಗಬೇಕು ಮತ್ತು ಅಷ್ಟು ಸಭೆಗಳು ಆಗಿಲ್ಲ ಎನ್ನುವುದು ಅಂಕಿಸಂಖ್ಯೆಗಳಲ್ಲಿ ಗೊತ್ತಾಗುತ್ತದೆ. ಏಕೆಂದರೆ, ಅಲ್ಲಿ ಆಗುವಂತಹ ನಿರ್ಣಯಗಳು ಅನುಷ್ಠಾನವಾಗುತ್ತವೆ. ಅದು ಮಾನ್ಯ ಸದಸ್ಯರಿಗೂ ಸಹ ಗೊತ್ತಿದೆ. ಆದರೆ, ಸಭೆಗಳು ಕಡಿಮೆಯಾದಾಗ ಹಲವಾರು ವಿಷಯಗಳು ಹಾಗೆಯೇ ಉಳಿದು ಬಿಡುತ್ತವೆ. ಹೀಗಾಗಿ ಅನುಷ್ಠಾನಕ್ಕೆ ಸ್ವಲ್ಪ ತೊಂದರೆಯಾಗಿದೆ. ಆದುದರಿಂದ ನಾನು ಸರ್ಕಾರದ ವತಿಯಿಂದ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಭೆಗಳು ಏನಿದೆ, ಇವುಗಳನ್ನು ಹೆಚ್ಚಿಗೆ ಮಾಡುವುದಕ್ಕೆ ಖಂಡಿತವಾಗಿ ಸೂಚನೆಯನ್ನು ನೀಡುತ್ತೇನೆ. ಕೆಲವು ಅಧಿಕಾರಗಳು ಪ್ರಾಧಿಕಾರದಲ್ಲೇ ಇರುತ್ತವೆ. ಅವುಗಳನ್ನು ಕೂಡಲೇ ಅನುಷ್ಠಾನ ಮಾಡುವುದಕ್ಕೂ ಸಹ ಸೂಚನೆಯನ್ನು ಕೊಡುತ್ತೇನೆ. ಇನ್ನು ಕಾನೂನಾತ್ಮಕವಾಗಿ ಸರ್ಕಾರದ ಮಟ್ಟದಲ್ಲಿ ಏನೇ ಇದ್ದರೂ ಕೂಡ ಅವುಗಳನ್ನು ಸಹ ಬಗೆಹರಿಸಿ, ನಿಗದಿತ ಸಮಯದಲ್ಲಿ ಈ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸೂಚನೆಯನ್ನು ಕೊಡುತ್ತೇನೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-**ಮಾನ್ಯ ಸಭಾಪತಿಯವರೇ, ದಯವಿಟ್ಟು ಎರಡು ತಿಂಗಳಿಗೊಮ್ಮೆಯಾದರೂ ಸಭೆ ಮಾಡುವುದಕ್ಕೆ ತಿಳಿಸಲಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಹೆಚ್ಚಿನ ಸಭೆ ಮಾಡುವಂತಹ ಅವಶ್ಯಕತೆ ಇದೆ. ಖಂಡಿತವಾಗಿ ಕಡ್ಡಾಯವಾಗಿ ಹೆಚ್ಚಿನ ಸಭೆಗಳನ್ನು ಮಾಡಬೇಕೆಂದು ಸೂಚನೆಯನ್ನು ಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1527**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ||ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರವಾದ ಉತ್ತರವನ್ನು ಒದಗಿಸಿದ್ದಾರೆ. ಒಂದು ಹಂತದಲ್ಲಿ Assistant Engineer ಗಳನ್ನು promotion ಮಾಡಲಾಗಿದೆ. ಇನ್ನು ಕೇವಲ Article 371(ಜೆ) ಅಡಿಯಲ್ಲಿ Assistant Engineer ಗಳು promotion ಗಾಗಿ ಕಾಯುತ್ತಿದ್ದಾರೆ. ಅವರನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಕಾರಣ ಇಷ್ಟೆ, ಅವರಿಗೆ ಪದೋನ್ನತಿ ಕೊಡುವುದರಿಂದ ಸರ್ಕಾರಕ್ಕೆ ಯಾವುದೇ ರೀತಿಯಾದ ಹಣಕಾಸಿನ ಹೊಣೆ ಆಗುವುದಿಲ್ಲ. ಆದುದರಿಂದ ಇದನ್ನು ತಕ್ಷಣವೆ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಜೇಷ್ಠತಾ ಪಟ್ಟಿಯನ್ನು ಮಾಡುತ್ತಿದ್ದೇವೆ. ಆ ಜೇಷ್ಠತಾ ಪಟ್ಟಿ ಅಂತಿಮವಾದ ಮೇಲೆ, ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 32ರ ಅಡಿಯಲ್ಲಿ ಇನ್ನು ಬಾಕಿ ಉಳಿದುಕೊಂಡಿರುವ ಸುಮಾರು 43 ಜನರಿಗೂ ಸಹ ಪದೋನ್ನತಿ ಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1563**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಪೊಲೀಸ್ ಇಲಾಖೆಯಲ್ಲಿ Constable ಮತ್ತು Head Constable ಗಳು ನಿಗದಿತ ಅವಧಿಗಿಂತ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸುತ್ತಿದ್ದು, ಅವರಿಗೆ ಏನಾದರೂ 'ಶಿಫ್ಟ್ ಡ್ಯೂಟಿ' ಅಳವಡಿಸುತ್ತಾರೆಯೆ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ಅವರು ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ಪೊಲೀಸ್ ಕಾನ್ಸ್‌ಟೇಬಲ್‌ಗಳು ಹಲವಾರು ಸಂದರ್ಭಗಳಲ್ಲಿ ನಿಗದಿತ ಅವಧಿಗಿಂತ ಹೆಚ್ಚು ಸೇವೆಗಳನ್ನು ಮಾಡುತ್ತಿರುವುದು ಎಲ್ಲರಿಗೂ ಸಹ ತಿಳಿದಿರುವಂಥದ್ದು. ಈ ರೀತಿ ಮಾಡುತ್ತಿರುವುದರಿಂದ ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಅತ್ಯಂತ ಹೆಚ್ಚು ದುಷ್ಪರಿಣಾಮವನ್ನು ಬೀರುತ್ತಿದೆ. ಆ ಹಿನ್ನೆಲೆಯಲ್ಲಿ ಅವರು ತಮ್ಮ ಕುಟುಂಬದ ಸದಸ್ಯರ ಜೊತೆ ಒಡನಾಟ ಕೂಡ ಎಲ್ಲೋ ಒಂದು ಕಡೆ ಒತ್ತಡದಿಂದ ಕೂಡಿರುತ್ತದೆ. ಇಂತಹ ಒತ್ತಡದ ಹಿನ್ನೆಲೆಯಲ್ಲಿ ಅವರು ಸಾರ್ವಜನಿಕರ ಜೊತೆ ವ್ಯವಹರಿಸುವಾಗ ಅದರ ಪರಿಣಾಮವಾಗುತ್ತದೆ. ಈ ದೃಷ್ಟಿಯಿಂದ ಪೊಲೀಸ್‌ನವರು ಎಂದರೆ ಏನೋ ಒಂದು ರೀತಿಯ ಅಭಿಪ್ರಾಯವಿರುತ್ತದೆ. ಸಾಮಾನ್ಯರಾದ ಈ ಕಾನ್ಸ್‌ಟೇಬಲ್‌ಗಳು ತೀರಾ ಒತ್ತಡದಲ್ಲಿರುತ್ತಾರೆ. ಆದುದರಿಂದ ಶಿಫ್ಟ್ ಡ್ಯೂಟಿಯನ್ನು ಅಳವಡಿಸಿಕೊಂಡು, ಅದಕ್ಕೆ ಸರಿಯಾದಂತಹ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ಸಚಿವರನ್ನು ಆಗ್ರಹಿಸುತ್ತೇನೆ.

ಮತ್ತೊಂದು ಬಹಳ ಪ್ರಮುಖವಾದ ಪ್ರಶ್ನೆಯೇನೆಂದರೆ, ಪೊಲೀಸ್ ಇಲಾಖೆಯಲ್ಲಿ ಇರುವಂತಹ ಸಬ್ ಇನ್ಸ್‌ಪೆಕ್ಟರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್‌ಗಳಿಗೆ ರೊಟೇಷನ್ ಸಿಸ್ಟಮ್ ಅನ್ನು ತಂದರೆ ಒಳ್ಳೆಯದು. ಏಕೆಂದರೆ, ಪೊಲೀಸ್ ಇಲಾಖೆಯಲ್ಲಿ ಕೇವಲ ಸಿವಿಲ್ ಮತ್ತು law and order ಮಾತ್ರ ಇರುವುದಿಲ್ಲ. ಅದರ ಜೊತೆ ಸಿ.ಓ.ಡಿ., ಸಿ.ಐ.ಡಿ., ಕ್ರೈಮ್, ಟ್ರಾಫಿಕ್, ಬೆಸ್ಕಾಂ ವಿಜಿಲೆನ್ಸ್, ಇಂಟಲಿಜೆನ್ಸ್, ಎಸ್.ಆರ್.ಪಿ., ಡಿ.ಸಿ.ಆರ್.ಬಿ., ವಿ.ಐ.ಪಿ. ಸೆಕ್ಯೂರಿಟಿ ಎಂದು ಹತ್ತು ಹಲವಾರು ವಿಭಾಗಗಳಿವೆ. ಅದರಲ್ಲಿ ಕೆಲವು ವಿಭಾಗಗಳಿಗೆ ಮಹತ್ವವಿದೆ. ಮತ್ತೆ ಕೆಲವು ವಿಭಾಗಗಳಿಗೆ ಮಹತ್ವವಿಲ್ಲ. ಈಗ ಮಹತ್ವ ಎಂದರೆ, ಹಣಕಾಸು ವಿಚಾರ ಅಂದರೆ ಗಿಂಬಳ ಬರುವಂತಹ ವಿಚಾರದಲ್ಲಿ. ಕೆಲವು ವಿಭಾಗಗಳು ಗಿಂಬಳ ಹುಟ್ಟಿಸುತ್ತವೆ. ಮತ್ತೆ ಕೆಲವು ವಿಭಾಗಗಳು ಕೇವಲ ಸಂಬಳಕ್ಕೆ ಅಷ್ಟೆ ಕೆಲಸ ಮಾಡುವಂಥದ್ದು. ಆದರೆ, ಅದರಲ್ಲಿ ವಿ.ಐ.ಪಿ. ಸೆಕ್ಯೂರಿಟಿ ಬಹಳ ಮಹತ್ವವಾದಂತಹ ಹುದ್ದೆ. ಕೇವಲ law and order ಮಾಡುವಂಥದ್ದು ಅಷ್ಟೆ ಅಲ್ಲ. ಆದರೆ, ಅದರಲ್ಲಿ ಗಿಂಬಳ ಬರುವುದಿಲ್ಲ. ಆದರೆ, ಇಲ್ಲಿ ಯಾರಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜಕೀಯವಾದಂತಹ ಪ್ರಭಾವ ಮತ್ತು ಜಾತಿಯ ಪ್ರಭಾವವಿದೆ ಅಂತಹವರು ಮಾತ್ರ ಈ ಎಕ್ಸಿಕ್ಯೂಟಿವ್ ಹುದ್ದೆಯಲ್ಲಿ ಅವರ ಪೂರ್ತಿ ಸೇವೆಯನ್ನು ಕಳೆಯುತ್ತಾರೆ. ಬೆಂಗಳೂರಿನ ಕಲಾಸಿಪಾಳ್ಯ ಅಥವಾ ಬೇರೆ ಸ್ಟೇಷನ್‌ಗಳಲ್ಲಿ ಯಾವಾಗಲೂ ಅವರು ಅಲ್ಲೇ ಇರುತ್ತಾರೆ. ಕೆಲವರಿಗೆ ಆ ಹುದ್ದೆಯನ್ನು ನಿರ್ವಹಿಸುವಂತಹ ಅರ್ಹತೆ ಇದ್ದರೂ ಕೂಡ ಅವರು ಹಣ ಕೊಡುವಂತಹ ಮತ್ತು ಶಿಫಾರಸ್ಸು ಮಾಡಿಸುವಂತಹ ಅರ್ಹತೆ ಇಲ್ಲದೇ ಇದ್ದರೆ, ಅವರಿಗೆ ಯಾವೊತ್ತೂ ಕೂಡ ಅವಕಾಶವಿಲ್ಲ. ಅವರು ಎಲೆ ಮರೆಕಾಯಿ ರೀತಿಯಾಗುತ್ತಾರೆ. ಉದಾಹರಣೆಗೆ; ಇವತ್ತು ಶಿಕ್ಷಕರಿಗೆ ಕೌನ್ಸಿಲಿಂಗ್ ವ್ಯವಸ್ಥೆ ತಂದು ಯಾವುದೇ ಒತ್ತಡಕ್ಕೆ ಒಳಗಾಗದ ರೀತಿಯಲ್ಲಿ ಪಾರದರ್ಶಕವಾಗಿ ಶಿಕ್ಷಕರ ವರ್ಗಾವಣೆ ನಡೆಯುತ್ತಿದೆ. ಆದರೆ, ಇಲ್ಲಿ ಆ ರೀತಿ ಏಕೆ ಅದು ಉದ್ಭವಿಸುವುದಿಲ್ಲವೆಂದು ಮಾನ್ಯ ಸಚಿವರು ಉತ್ತರ ನೀಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ರವಿಯವರಿಗೆ ನಮ್ಮ ಇಲಾಖೆಯ ಬಗ್ಗೆ ಇರುವಂತಹ ಕಳಕಳಿಯ ಬಗ್ಗೆ ನನಗೆ ಬಹಳ ಸಂತೋಷವಾಗಿದೆ. He is very much interested in the welfare. ಮಾನ್ಯ ಸದಸ್ಯರ ಬಗ್ಗೆ ಚೆನ್ನಾಗಿ ಗೊತ್ತಿರುವುದರಿಂದ ಈ ಮಾತನ್ನು ಹೇಳಿದ್ದೇನೆ. ಅವರು ಈ ಮಾತನ್ನು ಬಹಳ ಹಗುರವಾಗಿ ತೆಗೆದುಕೊಳ್ಳಲಿ. ಈಗ ಇರುವ ಪ್ರಶ್ನೆ ಎಂದರೆ, ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ shift basis ಮಾಡಬೇಕು ಎಂದು. ಈಗ 8 ಗಂಟೆಗಳನ್ನು ILO (International Labour Organization) ದಲ್ಲಿ ಬಹಳಷ್ಟು ಚರ್ಚೆ ಮಾಡಿದ ಮೇಲೆ ಅದನ್ನು ನಿಗದಿಪಡಿಸಿರುವುದು. ಎಲ್ಲಾ ಇಲಾಖೆಗಳಲ್ಲೂ ಕೂಡ ಅದಕ್ಕೆ ಮಾನ್ಯತೆಯನ್ನು ಕೊಟ್ಟಿದ್ದೇವೆ. ಇಲ್ಲೂ ಕೂಡ ಅದಕ್ಕೆ ಮಾನ್ಯತೆ ಕೊಡಬೇಕೆಂದು, ಒಬ್ಬ ಮನುಷ್ಯ ಎಷ್ಟು ಗಂಟೆ ನಿರಂತರವಾಗಿ ಕೆಲಸ ಮಾಡಬಹುದು ಎನ್ನುವಂತಹ ಹಿನ್ನೆಲೆಯಲ್ಲಿ ಇರುವುದು. ಪೊಲೀಸರು ಮಾಡುವಂತಹ ಕೆಲವು ಕೆಲಸ ಕಾರ್ಯಗಳು ಅವು ಯಾವ ಸಂದರ್ಭದಲ್ಲಿ ಪ್ರಾರಂಭವಾಗಿ ಮತ್ತು ಅದು ಎಷ್ಟು ಹೊತ್ತಿನವರೆಗೆ ನಡೆಯುತ್ತದೆ ಎಂದು ಹೇಳುವುದು ಕಷ್ಟ. ಕಾನೂನು ಮತ್ತು ಸುವ್ಯವಸ್ಥೆಯನ್ನು ನಿರ್ವಹಣೆ ಮಾಡುವುದು ಬಹಳ ಮುಖ್ಯ. ಈಗ ಅವರ ಡ್ಯೂಟಿ ಮುಗಿಯುತ್ತಿದೆ ಎನ್ನುವ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಬಂದಾಗ, he has to take up that responsibility. ಅದಕ್ಕೆ ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಿ ಶಾಂತಿ ಸುವ್ಯವಸ್ಥೆ ಕಾಪಾಡುವಂತಹ ಜವಾಬ್ದಾರಿಯನ್ನು ಕೂಡ ಕೊಟ್ಟಿದ್ದೇವೆ. ಅವರು ಈ ಹಿನ್ನೆಲೆಯಲ್ಲಿ ತಮ್ಮ ಕೆಲಸ ಕಾರ್ಯಗಳನ್ನು ಮಾಡುತ್ತಾರೆ ಎಂಬುದು basic. ಇನ್ನು ಒಟ್ಟಾರೆ ಸುಮಾರು 23

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾವಿರ ಹುದ್ದೆಗಳು ಖಾಲಿಯಿವೆ. ನಾವು ಕಳೆದ ವರ್ಷದಿಂದ ದೊಡ್ಡ ಪ್ರಮಾಣದಲ್ಲಿ ಹುದ್ದೆಗಳನ್ನು ತುಂಬುವಂತಹ ಪ್ರಯತ್ನ ಮಾಡುತ್ತಿದ್ದೇವೆ. ಈಗಾಗಲೇ 16 ಸಾವಿರಕ್ಕಿಂತಲೂ ಹೆಚ್ಚು ಕಾನ್ಸ್‌ಟೇಬಲ್ ಮತ್ತು ಪಿಎಸ್‌ಐ ವಿವಿಧ ರೀತಿಯ ಮತ್ತು ಎಲ್ಲಾ ವಿಭಾಗಗಳಲ್ಲಿ ನೇಮಕಾತಿಯನ್ನು ಪ್ರಾರಂಭ ಮಾಡಿದ್ದೇವೆ. ಈಗಾಗಲೇ ಎರಡು ಬ್ಯಾಚ್‌ಗಳು ಮುಗಿದಿವೆ. ಮೊದಲ ಬಾರಿಗೆ ನಿರಂತರವಾಗಿ ಹುದ್ದೆಗಳನ್ನು ತುಂಬುವಂತಹ ಕೆಲಸ ಎಂದೂ ಆಗಿರಲಿಲ್ಲ. ಆದರೆ, ನಾವು ದೊಡ್ಡ ಪ್ರಮಾಣದಲ್ಲಿ ಈ ಹುದ್ದೆಗಳಿಗೆ ನೇಮಕಾತಿ ಮಾಡುತ್ತಿದ್ದೇವೆ. Once we reach the comfortable position, ಮಾನ್ಯ ಸದಸ್ಯರು ನೀಡಿರುವಂತಹ ಸಲಹೆಯನ್ನು ಪರಿಶೀಲನೆ ಮಾಡಿ ಅದನ್ನು ಅನುಷ್ಠಾನ ಮಾಡಿದ ಮೇಲೆ, ಅದರ ಕಾರ್ಯವಿಧಾನವನ್ನು ಹಮ್ಮಿಕೊಳ್ಳಬಹುದು. ಎಲ್ಲಿಯವರೆಗೆ ಖಾಲಿ ಹುದ್ದೆಗಳಿರುತ್ತವೆ ಅಲ್ಲಿಯವರೆಗೆ ಇದನ್ನು ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಏಕೆಂದರೆ, ಡ್ಯೂಟಿಯ ಸಂದರ್ಭದಲ್ಲಿ ಮಾಡುವಂಥದ್ದು ಬಹಳ ಮುಖ್ಯ. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ, one day complete off ಕೊಟ್ಟು ಬಿಡುತ್ತೇವೆ. ಅವರು ಕೆಲವೊಮ್ಮೆ 9 ಗಂಟೆ ಮತ್ತು 10 ಗಂಟೆಗಳ ಸಮಯ ಡ್ಯೂಟಿ ಮಾಡಿರುವುದರಿಂದ ಅವರಿಗೆ one day off ಕೊಡುವಂತಹ ವ್ಯವಸ್ಥೆ ಮೊದಲಿನಿಂದಲೂ ಇದೆ. ಆದುದರಿಂದ ಹುದ್ದೆಗಳನ್ನು ತುಂಬುವಂತಹ ಆಧಾರದ ಮೇಲೆ ಮಾನ್ಯ ಸದಸ್ಯರ ಸಲಹೆಯನ್ನು ಮುಂದೆ ಪರಿಶೀಲನೆ ಮಾಡುತ್ತೇವೆ.

ಎರಡನೆಯದಾಗಿ, ರೊಟೇಷನ್ ಪದ್ಧತಿಯ ಬಗ್ಗೆ ಹೇಳಿದ್ದಾರೆ. ಈಗ Executive number ಜಾಸ್ತಿ ಇದೆ ಮತ್ತು Non-Executive number ಕಡಿಮೆ ಇದೆ. ಆದರೂ ಕೂಡ ಅವರವರ ಒಂದು ಕಾರ್ಯಕ್ಷಮತೆಯ ಆಧಾರದ ಮೇಲೆ ಒಬ್ಬೊಬ್ಬರು ಇಂಟೆಲಿಜೆನ್ಸ್‌ನಲ್ಲಿ ಇರುತ್ತಾರೆ, ಮತ್ತೊಂದರಲ್ಲಿ ಇರುತ್ತಾರೆ. ನಾವು ಅವರನ್ನು ಅವರ ಕಾರ್ಯಕ್ಷಮತೆಯ ಆಧಾರದ ಮೇಲೆ ನಿಯೋಜನೆ ಮಾಡಿರುತ್ತೇವೆ. ಈಗಿರುವಂತಹ ವ್ಯವಸ್ಥೆಯಲ್ಲಿ ಈಗ ಅಧಿಕಾರ ಪೊಲೀಸ್ ಇಲಾಖೆಯ Administrative Board ನಲ್ಲಿ ಇದೆ. ಅದು ಮಾನ್ಯ ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಆಗುತ್ತಿದೆ. ಈ ಹಿಂದೆ ನಾವು ಅಧಿಕಾರದಲ್ಲಿದ್ದಾಗ ಕನಿಷ್ಟಪಕ್ಷ ಎರಡು ವರ್ಷಗಳಿಗೆ ಒಮ್ಮೆ ಬದಲಾವಣೆಯಾಗಬೇಕು ಎಂದು ಇತ್ತು. ಆ ನಂತರ ಬಂದ ಸರ್ಕಾರ ಒಂದು ವರ್ಷ ಇರಬೇಕು ಆ ನಂತರ ಬದಲಾಗಬೇಕೆಂದು ಇದೆ. ಇಲ್ಲಿ ಎರಡು ರೀತಿಯ ವಾದವಿದೆ. ಅವರನ್ನು ಅಲ್ಲಿ ಒಂದೇ ವರ್ಷ ಇಟ್ಟರೆ, ಅವರು ಅಲ್ಲಿಗೆ ಬಂದು ಸೆಟಲ್ ಆಗಿ ಕೆಲಸ ಮಾಡಬೇಕು ಎನ್ನುವಷ್ಟರಲ್ಲಿ ಮತ್ತೆ ಅವರನ್ನು ಶಿಫ್ಟ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಿಬಿಟ್ಟರೆ, ಪೊಲೀಸ್‌ನ ಒಂದು administrative stability ಹೋಗುತ್ತದೆ ಎಂಬ ವಾದ ಕೂಡ ಇದೆ. ಬಹಳಷ್ಟು ಜನರು ಅದನ್ನು ಎರಡು ವರ್ಷಗಳಿಗೆ ಹೆಚ್ಚಿಸಿ ಎನ್ನುವಂತಹ ಒಂದು ಅಭಿಪ್ರಾಯ ಸಹ ಇದೆ. ಹೀಗಾಗಿ ಆ ರೊಟೇಷನ್ ಅನ್ನು ಸಮರ್ಪಕವಾಗಿ ಮಾಡುವ ಸಲುವಾಗಿ ಮಾನ್ಯ ಸುಪ್ರೀಂ ಕೋರ್ಟ್ ಯಾವ ರೀತಿಯ ಗೈಡ್‌ಲೈನ್ಸ್ ಕೊಟ್ಟಿದೆ, ಆ ಪ್ರಕಾರ ಮಾಡುತ್ತೇವೆ.

**(ಮುಂದು)**

(481) 12.00 18.03.2021 ಎಲ್‌ಎಲ್/ಬಿಎನ್‌ಎಸ್

**ಶ್ರೀ ಬಸವರಾಜ ಬೊಮ್ಮಾಯಿ(ಮುಂದುವರೆದಿದ್ದು...)**

ಆದಷ್ಟು ರೊಟೇಷನ್ ಮಾಡುವಂತಹ ಕೆಲಸ ಮಾಡುತ್ತೇವೆ. ಅಂದರೆ, ಎಕ್ಸಿಕ್ಯೂಟೀವ್ ಹುದ್ದೆಗಳಲ್ಲಿ ಕೆಲವು ಅಧಿಕಾರಿಗಳು in continuous terms ಇರುತ್ತಾರೆಂದು ಮಾನ್ಯ ಸದಸ್ಯರು ಏನು ಹೇಳುತ್ತಾರೆ. ಅದು ಕೆಲವು ಸಂದರ್ಭಗಳಲ್ಲಿ ಆಗಿರುವುದು ಹಿಂದಿನ ದಾಖಲೆಗಳನ್ನು ನೋಡಿದರೆ ಅದು ಗೊತ್ತಾಗುತ್ತದೆ. ಆದಷ್ಟು ರೊಟೇಷನ್ ಮಾಡುವಂಥದ್ದು ಮತ್ತು ಬೆಂಗಳೂರು ನಗರದಲ್ಲಿಯೇ 5 ವರ್ಷ ಆದ ಮೇಲೆ ಹೊರಗಡೆ ಸೇವೆ ಸಲ್ಲಿಸಬೇಕು ಎನ್ನುವಂತಹ ಕಾನೂನನ್ನು ಮಾಡಲಾಗಿರುತ್ತದೆ. ಹೀಗಾಗಿ, ಬೆಂಗಳೂರು ನಗರದಲ್ಲಿ 5 ವರ್ಷಗಳಿಗಿಂತಲೂ ಹೆಚ್ಚು ಕಾಲ ಯಾರೂ ಸೇವೆ ಸಲ್ಲಿಸಬಾರದೆಂಬ ಕಾನೂನು ಈಗಾಗಲೇ ಜಾರಿಯಲ್ಲಿದೆ. ಇದನ್ನು ನಾವು ಕಟ್ಟುನಿಟ್ಟಾಗಿ ಮಾಡುತ್ತೇವೆ. ಆದಷ್ಟು ಗರಿಷ್ಠ ಮಟ್ಟದಲ್ಲಿ ರೊಟೇಷನ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

**ಶ್ರೀ ಕೆ. ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಪ್ರತಿ ವರ್ಷ ಮಾಡುವ ಬದಲಾಗಿ once in two years ಮಾಡಬೇಕು.

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ನಾನು ತಮ್ಮ ಹೆಸರನ್ನು ಕರೆದಾಗ ತಾವು ತಮ್ಮ ಪ್ರಶ್ನೆಯನ್ನು ಕೇಳಿದರೆ ಸರಿ. ಅದರಂತೆ, ಮುಂದಿನ ಬಾರಿ ತಮ್ಮ ಪ್ರಶ್ನೆಯನ್ನು ಕೇಳುವುದಕ್ಕೆ ನಾನು ಅನುಮತಿಸಿದಾಗ ತಾವು ಸದನದಲ್ಲಿ ಹಾಜರಿಲ್ಲದಿದ್ದರೆ, ನಂತರ ತಮಗೆ ಅವಕಾಶ ನೀಡುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:1554**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅದು ನನ್ನ ಪ್ರಶ್ನೆಗೆ ಸಮಾಧಾನಕರವಾದ ಉತ್ತರವಾಗಿಲ್ಲ. ಹಾಗಾಗಿ, ನಾನು ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಅದರಂತೆ, ಚಿಕ್ಕಮಗಳೂರು ಜಿಲ್ಲೆಯ ಬೆಳವಾಡಿ ದೊಡ್ಡಕೆರೆ ಅಭಿವೃದ್ಧಿ ಕಾಮಗಾರಿಗಳ ಮೂಲಕ ನೀರಾವರಿ ಮಾಡುವುದಕ್ಕಾಗಿ ಒಂದು ಯೋಜನೆಯನ್ನು ರೂಪಿಸುತ್ತಾರೆ. ಅದು ಪ್ರಾರಂಭದಲ್ಲಿ 4.19 ಕೋಟಿ ರೂಪಾಯಿ ವೆಚ್ಚದ ಅಂದಾಜು ಯೋಜನೆಯಾಗಿ, ಪ್ಲಾನ್ ಸಹ ಸಿದ್ಧವಾಗಿರುತ್ತದೆ. ಕಾಲಾನಂತರದಲ್ಲಿ ಆ ಯೋಜನೆಗೆ ಅಷ್ಟು ಹಣ ಸಾಕಾಗುವುದಿಲ್ಲವೆಂದು 2018ರ ಯೋಜನೆ ಪರಿಷ್ಕೃತ ಅಂದಾಜು ಮೊತ್ತ 17.50 ಕೋಟಿ ರೂಪಾಯಿಗಳಾಗುತ್ತದೆ. ಸಾಮಾನ್ಯವಾಗಿ ಕಾಲುವೆಗಳನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಇವೊತ್ತಿನ ದಿವಸದ ಟೆಕ್ನಾಲಜಿ ಪ್ರಕಾರ ಇಂಜಿನಿಯರ್‌ಗಳು ಅಲ್ಲಿನ ಮಣ್ಣು ಹೇಗಿದೆ ಅಂದರೆ, ಅದು ಟಠಠಜ, ಠುಟ ಆಗಿದೆಯೇ ಅಥವಾ ಬಹಳ ಗಟ್ಟಿ ಇದೆಯೇ ಇದೆಲ್ಲವನ್ನೂ ನೋಡಿಕೊಂಡು ಪ್ಲಾನ್ ಎಸ್ಟಿಮೇಷನ್ ಮಾಡಬೇಕಾಗುತ್ತದೆ. ಈ ಕೆಲಸವನ್ನು ಇಂಜಿನೀಯರ್‌ಗಳು ಮಾಡದೇ ಇದ್ದುದರಿಂದ, ಆ ಯೋಜನೆಯ ಮೊತ್ತ ಹೆಚ್ಚಾಗಿರುತ್ತದೆ. ಒಂದು ವೇಳೆ ಆ ಯೋಜನೆ ಪೂರ್ಣವಾಗಿದೆಯೇ ಎಂದು ನೋಡುವುದಾದರೆ, ಆ ಯೋಜನೆ ಸಹ ಪೂರ್ಣವಾಗಿರುವುದಿಲ್ಲ. ತದನಂತರ, ನಾಲೆಯನ್ನು ಗುರುತ್ವಾಕರ್ಷಣೆಯ ಮೂಲಕ ನೀರು ಹರಿಯುವ ಸಲುವಾಗಿ ಅದರ ವಿನ್ಯಾಸಗೊಳಿಸಲ್ಪಟ್ಟ ತಳಮಟ್ಟಕ್ಕೆ ಅನೇಕ ಸರಪಳಿಗಳಲ್ಲಿ ಭೂ ಅಗೆತ ಮಾಡಿರಲಿಲ್ಲ ಹಾಗೂ 2019-20ರಲ್ಲಿ ಉದ್ದೇಶಿತ ಸರಬರಾಜು ಕೆರೆಯಿಂದ ನಾಲೆಗಳಿಗೆ ನೀರು ಸಲೀಸಾಗಿ ಹರಿಯುವಂತೆ ಮಾಡುವ ಬದಲಾಗಿ ನೀರನ್ನು ಪಂಪ್ ಮಾಡುವ ಮೂಲಕ ನೀರು ಸರಬರಾಜು ಮಾಡಲಾಗಿತ್ತು. ಆದರೆ, ಈ ಯೋಜನೆಯಲ್ಲಿ ನೀರು ಸರಬರಾಜಿಗೆ ಕಾಲುವೆ ಪ್ಲಾನ್ ಮಾಡಿದ್ದು ಏತಕ್ಕಾಗಿ ಅಥವಾ ಪಂಪ್ ಮೂಲಕ ನೀರು ಸರಬರಾಜು ಮಾಡಿದ್ದು ಏತಕ್ಕಾಗಿ ಎಂದು ಕೇಳಬಯಸುತ್ತೇನೆ. ಒಟ್ಟಾರೆಯಾಗಿ, ಈ ಯೋಜನೆಗೆ ಸರಿಯಾದ ಪ್ಲಾನ್ ಮಾಡದೇ ಇದ್ದುದರಿಂದ ಸರ್ಕಾರಕ್ಕೆ ಹೆಚ್ಚು ವೆಚ್ಚ ಆಗಿರುತ್ತದೆ. ಹಾಗಾಗಿ, ಈ ಎಲ್ಲಾ ಬೆಳವಣಿಗೆಗೆ ಕಾರಣವಾದ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ? ಈ ಯೋಜನೆಯಲ್ಲಿ ಏತಕ್ಕಾಗಿ ಸರಿಯಾದ ಪ್ಲಾನ್ ಮಾಡಲಿಲ್ಲ ಎಂಬ ಬಗ್ಗೆ ನಾನು ಸರ್ಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಣ್ಣ ನೀರಾವರಿ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಈ ಯೋಜನೆ ಬಹಳ ಸುದೀರ್ಘವಾಗಿ 2007–08ರಲ್ಲಿ ಆಗಿರುವಂತಹ ಕಾಮಗಾರಿಯಾಗಿರುತ್ತದೆ. ಈ ಕಾಮಗಾರಿ ಬೇರೆ ಬೇರೆ ಕಾರಣಗಳಿಗಾಗಿ ಮುಂದುವರೆದು, 2017ರಲ್ಲಿ ಆ ಯೋಜನಾ ವರದಿಯನ್ನು ಪರಿಷ್ಕರಿಸಲಾಯಿತು. ಆ ಯೋಜನಾ ವರದಿ ಮಾಡುವ ಹಂತದಲ್ಲಿ ನೀರು ಹರಿಯುವಂತಹ ಭೂಭಾಗದ ಮತ್ತಷ್ಟು ವಿಸ್ತೀರ್ಣ ತೆಗೆದುಕೊಳ್ಳಬೇಕೆಂದು ಯೋಚಿಸಲಾಯಿತು. ಆ ಹಿನ್ನೆಲೆಯಲ್ಲಿ ಈ ಯೋಜನೆಯ ವೆಚ್ಚಗಳನ್ನು ತಾಂತ್ರಿಕ ಸಮಿತಿಯಲ್ಲಿ ಜಾಸ್ತಿ ಮಾಡಲಾಯಿತು. ಈ ಮಧ್ಯೆ ನೀರು ಹರಿಯುವಂತಹ ಕಾಲುವೆ ಕುಸಿಯುವುದಕ್ಕೆ ಪ್ರಾರಂಭವಾದ ಹಿನ್ನೆಲೆಯಲ್ಲಿ ಅದನ್ನು ವಿಸ್ತರಣೆಗೊಳಿಸಬೇಕೆಂಬ ಯೋಜನೆಯನ್ನು ಸಹ ರೂಪಿಸಲಾಯಿತು. ಅದಕ್ಕೆ ಸಂಬಂಧಪಟ್ಟ ಫೋಟೋ ಕಾಪಿಗಳು ಇರುತ್ತವೆ. ಇದು ಸುದೀರ್ಘವಾಗಿ 15 ವರ್ಷಗಳ ಕಾಮಗಾರಿಯಾಗಿರುತ್ತದೆ. ಅದರಂತೆ, 2007ರಿಂದ 2021ರವರೆಗಿನ ಒಟ್ಟು ಕಾಮಗಾರಿಗಳ ಮೊತ್ತದಲ್ಲಿ ಹೆಚ್ಚು ಮೊತ್ತ ಪರಿಷ್ಕರಣೆ ಆಗಿರುವುದು ನಿಜ. ಮಾನ್ಯ ರವಿಕುಮಾರ್‌ರವರು ಹೇಳಿರುವಂತಹ ಉಲ್ಲೇಖಗಳನ್ನು ಗಮನದಲ್ಲಿಟ್ಟುಕೊಂಡು ಈ ಕಾಮಗಾರಿಯಲ್ಲಿ ಏನಾದರೂ ತಪ್ಪುಗಳು ಆಗಿದ್ದರೆ ಅವುಗಳನ್ನು ಸರಿಪಡಿಸಲಾಗುತ್ತದೆ. ಎರಡನೆಯದಾಗಿ, ಏತ ನೀರಾವರಿಯನ್ನು ಎರಡನೆ ಬಾರಿ ಏತಕ್ಕಾಗಿ ಮಾಡಲಾಗಿದೆಯೆಂದು ಮತ್ತೊಂದು ಪ್ರಶ್ನೆಯನ್ನು ಅವರು ಕೇಳಿದ್ದಾರೆ. ಅದರಂತೆ, ಆ ಕಾಲುವೆಗಳು ಕುಸಿದು ಬಿದ್ದ ಹಿನ್ನೆಲೆಯಲ್ಲಿ ನೀರನ್ನು ಪಂಪ್ ಮಾಡಬೇಕಾದಂತಹ ಅನಿವಾರ್ಯತೆ ಇದ್ದುದರಿಂದ, ಮತ್ತೊಮ್ಮೆ ಏತ ನೀರಾವರಿಯ ಎರಡನೆ ಹಂತವನ್ನು ಕೈಗೆತ್ತಿಕೊಳ್ಳುವುದಕ್ಕೆ ಬೇಕಾದಂತಹ ಯೋಜನೆಯನ್ನು ರೂಪಿಸಲಾಗಿದೆ. ಅಲ್ಲಿ ಮೆದು ಬಂಡೆ ಒಡೆದು ಹೋಗಿದ್ದು ಮತ್ತು ಮಣ್ಣು ಮಿಶ್ರಿತವಾಗಿ ಕೆಳಗೆ ಬಿದ್ದಿರುವ ಬಗ್ಗೆ ಫೋಟೋಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಇದರ ಜೊತೆಗೆ, ಮಾನ್ಯ ಸದಸ್ಯರು ಈ ಯೋಜನೆಗೆ ಸಂಬಂಧಪಟ್ಟಂತೆ ಏನು ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ; ಅದರಂತೆ, ಅಲ್ಲಿ ಏನು ತಪ್ಪು ನಡೆದಿದೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ನಮ್ಮ ಊರಿಗೆ ಸಂಬಂಧಪಟ್ಟಿರುವುದರಿಂದ...

**ಸಭಾಪತಿಯವರು:–** ಮಾನ್ಯ ಭೋಜೇಗೌಡರವರೇ, ಈ ಪ್ರಶ್ನೆಯಲ್ಲಿ ತಾವು ಏತಕ್ಕೆ ಮಧ್ಯೆ ಮಾತನಾಡುತ್ತೀರಿ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದು ನನ್ನ ಊರಿಗೆ ಸಂಬಂಧಿಸಿದೆ.

**ಸಭಾಪತಿಯವರು:–** ದಯಮಾಡಿ ತಾವು ಕುಳಿತುಕೊಳ್ಳಿ. ಇದು ತಮ್ಮ ಪ್ರಶ್ನೆಯಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ರವಿಕುಮಾರ್‌ರವರು ಏತಕ್ಕೆ ಈ ಪ್ರಶ್ನೆ ಕೇಳಿದ್ದಾರೆಂದು ನನಗೆ ಗೊತ್ತಿದೆ.

**(ಗೊಂದಲ)**

**ಸಭಾಪತಿಯವರು:–** ಇಲ್ಲ ಆಗುವುದಿಲ್ಲ. ಮುಂದಿನ ಪ್ರಶ್ನೆ 5ನೇ ಪಟ್ಟಿಯಿಂದ ತಡೆಹಿಡಿಯಲಾದ ಶ್ರೀ ಸುನೀಲ್ ವಲ್ಯಾಪುರೆಯವರ ಪ್ರಶ್ನೆ ಸಂಖ್ಯೆ:399.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ತಡೆಹಿಡಿಯಲಾದ**
**ಪ್ರಶ್ನೆ ಸಂಖ್ಯೆ:399**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ವಲ್ಯಾಪುರೆ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಇವೊತ್ತಿನ ದಿವಸ ಗನ್ ಲೈಸನ್ಸ್ ಪಡೆಯಬೇಕಾದರೆ ಬಹಳಷ್ಟು ಕಷ್ಟಗಳು ಇವೆ. ಆ ಗನ್ ಲೈಸನ್ಸ್ ಪಡೆದುಕೊಂಡಿರುವಂತಹವರು ಕ್ರಿಮಿನಲ್ ಕೇಸ್‌ನಲ್ಲಿ ಎಷ್ಟು ಜನ ಭಾಗಿಯಾಗಿದ್ದಾರೆ, ಅಂತಹವರು ಇವೊತ್ತಿನ ದಿವಸ ಗನ್ ಲೈಸನ್ಸ್ ಪಡೆಯುತ್ತಿದ್ದಾರೆ. ಎರಡನೆಯದಾಗಿ, ಗನ್ ಲೈಸನ್ಸ್ ನಿಗದಿತ ಅವಧಿಯಲ್ಲಿ ನವೀಕರಣ ಮಾಡಿಕೊಳ್ಳಬೇಕಾಗುತ್ತದೆ. ಆದರೆ, ಕೆಲವರು ಗನ್ ಲೈಸನ್ಸ್ ನವೀಕರಣ ಮಾಡಿಕೊಳ್ಳದೇ ಗನ್ ಇಟ್ಟುಕೊಂಡು ಓಡಾಡುತ್ತಿದ್ದಾರೆ. ಆ ರೀತಿ ನವೀಕರಣ ಆಗದೇ ಇರುವಂತಹ ಗನ್ ಅನ್ನು ಸಂಬಂಧಪಟ್ಟ ಇಲಾಖೆಗೆ ಒಪ್ಪಿಸಬೇಕಾಗುತ್ತದೆ. ಆದರೆ, ಕೆಲವರು ಲೈಸನ್ಸ್ ನವೀಕರಣ ಮಾಡಿಕೊಳ್ಳದೇ ಹಾಗೆಯೇ ತಿರುಗಾಡುತ್ತಿದ್ದಾರೆ. ಮೂರನೆಯದಾಗಿ, ಇವೊತ್ತಿನ ದಿವಸ ಬಹುತೇಕ ಜನರು ‚ಠತಿ ಠಜಿಜಿ ಮಾಡುವುದಕ್ಕಾಗಿ ಗನ್ ಲೈಸನ್ಸ್ ಪಡೆದು ತಿರುಗಾಡುವುದು ಸಾಮಾನ್ಯ ವಾಡಿಕೆ ಆಗಿರುತ್ತದೆ. ಇದನ್ನು ಕೂಡ ಸರ್ಕಾರ ಸೂಕ್ಷ್ಮ ರೀತಿಯಲ್ಲಿ ಗಮನಿಸಬೇಕು. ಇದರ ಜೊತೆಗೆ, 30 ವರ್ಷ ಮೇಲ್ಪಟ್ಟವರಿಗೆ ಗನ್ ಲೈಸನ್ಸ್ ಕೊಡುತ್ತಿದ್ದು, ನಂತರ ಅವರು ಸಾಯುವವರೆಗೂ ಗನ್ ಲೈಸನ್ಸ್‌ನ್ನು ಪಡೆಯುವ ಅಧಿಕಾರವನ್ನು ಕೊಡಲಾಗಿರುತ್ತದೆ. ಆದರೆ, ಸರ್ಕಾರಿ ನೌಕರರು 60 ವರ್ಷ ವಯೋಮಾನವನ್ನು ಮೀರಿದ ಕೂಡಲೇ ನಿವೃತ್ತಿ ಹೊಂದಬೇಕಾಗುತ್ತದೆ. ಆದರೆ, ಗನ್ ಲೈಸನ್ಸ್ ಪಡೆದವರು 90 ವರ್ಷ ಅಥವಾ ಆತ ಜೀವಂತ ಇರುವವರೆಗೂ ಆತ ಗನ್ ಲೈಸನ್ಸ್ ಪಡೆಯಬಹುದಾಗಿರುತ್ತದೆ. ಹಾಗಾಗಿ, ಆತ ತನ್ನ 90ನೇ ವಯಸ್ಸಿನಲ್ಲಿ ಹೇಗೆ ಗನ್ ಲೈಸನ್ಸ್ ಇಟ್ಟುಕೊಳ್ಳುವುದಕ್ಕಾಗುತ್ತದೆ? ಇದನ್ನು ಕೂಡ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಇದರ ಜೊತೆ ಜೊತೆಯಲ್ಲಿ criminal activities ಏನು ನಡೆಯುತ್ತಿವೆ, ಇವೊತ್ತಿನ ದಿವಸ ಹೊರರಾಜ್ಯಗಳ ಕ್ರಿಮಿನಲ್ ಕೇಸ್‌ಗಳಲ್ಲಿ ಭಾಗಿಯಾಗಿರುವವರು ಬಹಳಷ್ಟು ಜನ ಇದ್ದಾರೆ. ಉದಾಹರಣೆಗೆ, ನಮ್ಮ ರಾಜ್ಯದಲ್ಲಿ ಬೆಟ್ಟಿಂಗ್ ಪ್ರಕರಣಗಳು ಜಾಸ್ತಿಯಾಗುತ್ತಿವೆ. ಆ ಬೆಟ್ಟಿಂಗ್ ಪ್ರಕರಣಗಳಲ್ಲಿ ಹೊರರಾಜ್ಯದ ಪೊಲೀಸರು ಬಂದು ಅರೆಸ್ಟ್ ಮಾಡಿಕೊಂಡು ಹೋಗುತ್ತಿರುತ್ತಾರೆ. ಅಂತಹವರು ಸಹ ಇವೊತ್ತಿನ ದಿವಸ ಗನ್ ಹಿಡಿದುಕೊಂಡು ಓಡಾಡುತ್ತಾರೆ. ಯಾರು ಓ.ಸಿ. ನಡೆಸುತ್ತಾರೆ ಅಂತಹವರು ನಮ್ಮ ಜಿಲ್ಲೆಯಲ್ಲಿ ಯಾರು ಬೆಟ್ಟಿಂಗ್ ನಡೆಸುತ್ತಾರೆ ಅವರು ಗನ್ ಇಟ್ಟುಕೊಂಡು ಓಡಾಡುತ್ತಿರುತ್ತಾರೆ. ಅಲ್ಲದೇ, ಇವರು ತಮ್ಮ ರಕ್ಷಣೆಗಾಗಿ ಗನ್ ತೆಗೆದುಕೊಳ್ಳುತ್ತಾರೋ ಅಥವಾ ಯಾರಿಗೆ ರಕ್ಷಣೆ ಕೊಡುವುದಕ್ಕಾಗಿ ಗನ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳುತ್ತಾರೋ ಅದು ಅರ್ಥವಾಗುವುದಿಲ್ಲ. ಹಾಗಾಗಿ, ಸರ್ಕಾರ ಆಡಳಿತಾತ್ಮಕ ದೃಷ್ಟಿಯಿಂದ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಇದರ ಬಗ್ಗೆಯೂ ಸಹ ಗಮನಹರಿಸಬೇಕು. ಇದರ ಜೊತೆಯಲ್ಲಿ ಗನ್ ಲೈಸನ್ಸ್ ನೀಡುವಾಗ, ಅಖಖ (Civil Rifle Training) ಎನ್ನುವ ತರಬೇತಿಯನ್ನು ಕಡ್ಡಾಯ ಮಾಡಲಾಗಿರುತ್ತದೆ. ಆದರೂ ಕೆಲವು ಕಡೆಗಳಲ್ಲಿ ಸಿ.ಆರ್.ಟಿ. ಲೈಸನ್ಸ್ ತೆಗೆದುಕೊಳ್ಳದೇ ಇರುವವರು ಸಹ ಗನ್ ಲೈಸನ್ಸ್ ಪಡೆಯುತ್ತಿದ್ದಾರೆ. ಇದನ್ನು ಸಹ ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರ ಜೊತೆಯಲ್ಲಿ ಗನ್ ಲೈಸನ್ಸ್ ನೀಡುವಾಗ ನಾಗರಿಕ ವೇದಿಕೆಯನ್ನು ಮಾಡಿ, ಅದರಲ್ಲಿ ಜಿಲ್ಲಾಧಿಕಾರಿಯವರು, ಐ.ಪಿ.ಎಸ್. ಅಧಿಕಾರಿಯವರಾದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರು, ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರ ಒಂದು ಸಮಿತಿ ರಚನೆ ಮಾಡಿ, ಆ ಸಮಿತಿ ಶಿಫಾರಸ್ಸಿನ ಮೇರೆಗೆ ಗನ್ ಲೈಸನ್ಸ್ ನೀಡುವಂತಹ ಪ್ರಯತ್ನವನ್ನು ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಗನ್ ಲೈಸನ್ಸ್ ಕೊಡುವಂತಹ ಪ್ರಕ್ರಿಯೆಗೆ ಭಾರತ ಸರ್ಕಾರದ ಆಕ್ಟ್ ಪ್ರಕಾರ ನಾವು ಗನ್ ಲೈಸನ್ಸ್ ನೀಡುತ್ತೇವೆ. ಹಾಗಾಗಿ, ಮನಸೋ ಇಚ್ಛೆ ಯಾರಿಗೆಂದರೆ ಅವರಿಗೆ ಗನ್ ಲೈಸನ್ಸ್ ನೀಡುವುದಕ್ಕೆ ಬರುವುದಿಲ್ಲ. ಗನ್ ಲೈಸನ್ಸ್ ಕೊಡುವಂತಹ ಸಂದರ್ಭದಲ್ಲಿ ಹಲವಾರು ಕಠಿಣ ನಿಬಂಧನೆಗಳಿರುತ್ತವೆ. In fact, ಗನ್ ಲೈಸನ್ಸ್ ನೀಡುವಾಗ ಬಹಳಷ್ಟು ನಿಬಂಧನೆಗಳನ್ನು ಹಾಕಿದ್ದಾರೆ. ಇದರಿಂದಾಗಿ, ನಮಗೆ ಜರೂರಾಗಿ ಗನ್ ಲೈಸನ್ಸ್ ಅಥವಾ ಅದರ ನವೀಕರಣ ಆಗುವುದಿಲ್ಲವೆಂಬ ಬಗ್ಗೆ ಬಹಳಷ್ಟು ದೂರುಗಳು ಇರುತ್ತವೆ.

**(ಮುಂದು)**

**(482) 18.03.2021 12.10 ವೈಎಲ್-ಜಿಆರ್**

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು):-**

ಹೀಗಾಗಿ ಯಾರಿಗೆ ಗನ್ ಲೈಸೆನ್ಸ್ ನೀಡುತ್ತೇವೆಯೋ ಅವರಿಗೆ ಸಂಬಂಧಪಟ್ಟಂತೆ ನಮ್ಮ ರಾಜ್ಯದಲ್ಲಿ ಅಥವಾ ಬೇರೆ ರಾಜ್ಯದಲ್ಲಿ ಯಾವುದಾದರೂ ಪೊಲೀಸ್ ಪ್ರಕರಣ ಇರುತ್ತದೆಯೇ ಎಂಬ ಬಗ್ಗೆ ಪರಿಶೀಲನೆ ಹಾಗೂ ಅವರ ವೈದ್ಯಕೀಯ ಪರಿಶೀಲನೆ, ಎಲ್ಲವನ್ನೂ ಗಮನಿಸಿ ಆಯುಧ ಪರವಾನಗಿ ನೀಡಲಾಗುವುದು. Arms Act,1959, ಕಾಯ್ದೆಯ ಸೆಕ್ಷನ್ 13 ಮತ್ತು 14 ಪ್ರಕಾರ ಆಯುಧ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರವಾನಗಿ ನೀಡಲಾಗುವುದು. ಈಗಾಗಲೇ ಮಾನ್ಯ ಸದಸ್ಯರು ಆಯುಧ ಪರವಾನಗಿಯನ್ನು ಕೆಲವರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ತಿಳಿಸಿರುವುದರಿಂದ ಖಂಡಿತವಾಗಿ ಅದರ ಕಡೆ ಗಮನಹರಿಸುತ್ತೇವೆ. ಯಾವುದೇ ಕಾನೂನು ಸ್ಪೆಷಲಿಟಿ ಇದ್ದರೂ, ಕೆಲವರು ದುರುಪಯೋಗಪಡಿಸಿಕೊಳ್ಳುವ ಪ್ರಯತ್ನ ಮಾಡಿದ್ದು, ಈಗಾಗಲೇ ಅಂಥವರ ಮೇಲೆ ಸಾಕಷ್ಟು ಪ್ರಕರಣ ದಾಖಲಿಸಲಾಗಿದೆ. Misuse of arm license ಎಂದು ಬಹಳ ಗಂಭೀರವಾದುದಾಗಿದ್ದು, ಅದಕ್ಕೆ ಉಗ್ರವಾದ ಶಿಕ್ಷೆ ಇರುತ್ತದೆ. ಅದರ ಪ್ರಕಾರ ಶಿಕ್ಷೆಗೆ ಒಳಪಡಿಸಲಾಗುವುದು. ನಮ್ಮ ಜಿಲ್ಲೆಯವರು ಯಾರಾದರೂ ಆಯುಧ ಪರವಾನಗಿಯನ್ನು ದುರುಪಯೋಗಪಡಿಸಿಕೊಂಡಿರುವ ಸೂಚನೆ ಕಂಡು ಬಂದರೆ ಅವರ ಮೇಲೆ ಕ್ರಮವನ್ನು ಜರುಗಿಸಲಾಗುವುದು. ಜೊತೆಗೆ ಕಡ್ಡಾಯವಾಗಿ ತರಬೇತಿ ನೀಡಿದೇ ಆಯುಧ ನೀಡುವ ಪ್ರಶ್ನೆಯೇ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 684**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕಾಂತರಾಜ್ (ಬಿ.ಎಂ.ಎಲ್):-** ಮಾನ್ಯ ಸಭಾಪತಿಯವರೇ, ನಾನು ಮೆಟ್ರೋ ವಿಷಯಕ್ಕೆ ಸಂಬಂಧಿಸಿದಂತೆ, ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ, ನಮ್ಮ ಕನ್ನಡಿಗರಿಗೆ ಮೆಟ್ರೋನಲ್ಲಿ ಕೆಲಸ ನೀಡಬೇಕು, ಏನೇನು ಮಾನದಂಡಗಳನ್ನು ಅಳವಡಿಸಿ ಕೆಲಸ ನೀಡಲಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದೆನು. ಗುತ್ತಿಗೆ ಆಧಾರದ ಮೇಲೆ ಕೆಲಸ ನೀಡಿದರೂ ನಿಯಮ ಪ್ರಕಾರ ಪತ್ರಿಕಾ ಪ್ರಕಟಣೆ ಹೊರಡಿಸಿ ಕೆಲಸ ನೀಡಬೇಕು. ಆದರೆ, ನನಗೆ ಬಂದಿರುವಂಥ ಮಾಹಿತಿ ಏನೆಂದರೆ, 2017ನೇ ಸಾಲಿನಿಂದ 752 ಹುದ್ದೆಗಳಿಗೆ ನೇಮಕ ಮಾಡಲಾಗಿದ್ದು, ಅದರಲ್ಲಿ 641 ಹುದ್ದೆಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಪತ್ರಿಕಾ ಪ್ರಕಟಣೆ ನೀಡದೇ ನೇಮಕ ಮಾಡಿಕೊಳ್ಳಲಾಗಿದೆ ಎಂಬ ಮಾಹಿತಿ ನನಗೆ ಬಂದಿದೆ ಮತ್ತು ಇದರಿಂದ ಕನ್ನಡಿಗರಿಗೆ ಅನ್ಯಾಯವಾಗಿದೆ. ಜೊತೆಗೆ ಈ ಅಧಿಕಾರಿಗಳನ್ನು ಪೇಪರ್ ಹಾಯುವುದಕ್ಕೆ ಕಳುಹಿಸಬೇಕು. ಏಕೆಂದರೆ, ನಾನು ಯಾವ ದಿನಾಂಕಗಳಲ್ಲಿ ಪತ್ರಿಕಾ ಪ್ರಕಟಣೆ ನೀಡಲಾಗಿದೆ ಎಂಬ ಪ್ರಶ್ನೆಯನ್ನು ಕೇಳಿದರೆ, ಪತ್ರಿಕೆಯ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿ ಕಳುಹಿಸಲಾಗಿದೆ ವಿನಃ ಯಾವ್ಯಾವ ಪತ್ರಿಕೆಯಲ್ಲಿ ಹೊರಡಿಸಲಾಗಿದೆ ಎನ್ನುವುದನ್ನು ತಿಳಿಸಿರುವುದಿಲ್ಲ. ಏತಕ್ಕಾಗಿ ಈ ರೀತಿಯ ಉತ್ತರವನ್ನು ನೀಡುತ್ತಾರೆ. ಅಧಿಕಾರಿಗಳಿಗೆ ಜವಾಬ್ದಾರಿ ಇಲ್ಲವೇ? ಹಾಗಾಗಿ ಮಾನ್ಯ ಸಚಿವರು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು. ನಾವು ಕೇಳುವ ಪ್ರಶ್ನೆಗೆ ಸುಮ್ಮನೆ ಕಾಟಚಾರದ ಉತ್ತರವನ್ನು ನೀಡುತ್ತಾರೆ. ಜೊತೆಗೆ ಸದನ ಸಮಿತಿ ಮಾಡಿ, ಇದರ ಬಗ್ಗೆ ಪರಿಶೀಲನೆ ಮಾಡಬೇಕು. ಬೇರೆ ರಾಜ್ಯದವರಿಗೆ ಮೆಟ್ರೋನಲ್ಲಿ ಕೆಲಸ ಕಲ್ಪಿಸಲಾಗಿದ್ದು, ಅವರಿಗೆ ಒಂದು ಲಕ್ಷ, ಎಪ್ಪತ್ತು ಸಾವಿರ, ಎಂಭತ್ತು ಸಾವಿರ ಸಂಬಳ ಪಡೆಯುತ್ತಿದ್ದಾರೆ. ಆದರೆ ನಮ್ಮ ಕರ್ನಾಟಕದ ನೌಕರರಿಗೆ ಹದಿನೈದು ಸಾವಿರ, ಇಪ್ಪತ್ತು ಸಾವಿರ, ಮೂವತ್ತು ಸಾವಿರ ಮಾತ್ರ ಸಂಬಳ ನೀಡಲಾಗುತ್ತಿದೆ. ಈ ರೀತಿಯ ತಾರತಮ್ಯ ಏತಕ್ಕೆ ಮಾಡುತ್ತಾರೆ? ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುವವರು ಎಂಬ ಒಂದೇ ಒಂದು ಭಾವನೆಯಿಂದ,...

**ಸಭಾಪತಿಯವರು:-** ಆಗಲಿ, ಏನು ಮಾಡಬೇಕೆಂದು ಹೇಳಿ.

**ಶ್ರೀ ಬಸವರಾಜ ಬೊಮ್ಮಾಯಿ(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಇದೇ ಸದನದ ಮೂಲಕ ಈಗಾಗಲೇ ವಿವರವಾದ ಉತ್ತರವನ್ನು ನೀಡಲಾಗಿದೆ. ಯಾವ್ಯಾವ ಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಲಾಗಿದೆ ಎಂದು ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಪೂರ್ಣ ವಿವರವನ್ನು ಸಹ ಒದಗಿಸಲಾಗಿದೆ.

**ಸಭಾಪತಿಯವರು:–** ಪತ್ರಿಕೆಗಳಿಗೆ ಸಂಬಂಧಿಸಿದಂತೆ ಮಾತ್ರ ಮಾಹಿತಿ ನೀಡಿದ್ದಾರೆ, ಪತ್ರಿಕೆಯ ಹೆಸರು ಇರುವುದಿಲ್ಲ ಎಂಬುದು ಮಾನ್ಯ ಸದಸ್ಯರು ವಾದ.

**ಶ್ರೀ ಬಸವರಾಜ ಬೊಮ್ಮಾಯಿ:–** ಆಗಲಿ. ಪತ್ರಿಕೆ ಹೆಸರು ಅವರಿಗೆ ನೀಡಬೇಕಾಗಿದೆ.

**ಶ್ರೀ ಕಾಂತರಾಜ್ (ಬಿ.ಎಂ.ಎಲ್):–** ಮಾನ್ಯ ಸಭಾಪತಿಯವರೇ, ಹೌದು ಪತ್ರಿಕೆಗಳ ಹೆಸರು ಇರುವುದಿಲ್ಲ. ಕಂಪನಿಯಲ್ಲಿ ಗುತ್ತಿಗೆ ಅಡಿಯಲ್ಲಿ 1107 ಅಧಿಕಾರಿ / ಸಿಬ್ಬಂದಿಗಳನ್ನು ತೆಗೆದುಕೊಳ್ಳಲಾಗಿದೆ ಎನ್ನುವಂಥ ಉತ್ತರವನ್ನು ನೀಡಿದ್ದಾರೆ. ಅವರು ನೀಡಿರುವ ಮಾಹಿತಿಯಲ್ಲಿ ಚಿಕ್ಕದಾಗಿ ನಮೂದಿಸಿ ನೀಡಿದ್ದರು. ಆದರೆ, ನಾನು ಸಹ count ಮಾಡಿ ನೋಡಿದರೆ ಇದರಲ್ಲಿ ಕೇವಲ 600 ಜನರಿಗೆ ಮಾತ್ರ ಸಂಬಂಧಿಸಿದ್ದಾಗಿದೆ.

**ಸಭಾಪತಿಯವರು:–** ಆಗಲಿ. ಸರ್ಕಾರ ಏನು ಮಾಡಬೇಕೆಂದು ಹೇಳಿ. ಕನ್ನಡಿಗರಿಗೆ ಕೆಲಸ ನೀಡಬೇಕೆಂದು ನಿಮ್ಮ ವಾದ ಅಲ್ಲವೇ?

**ಶ್ರೀ ಕಾಂತರಾಜ್ (ಬಿ.ಎಂ.ಎಲ್):–** ಮಾನ್ಯ ಸಭಾಪತಿಯವರೇ, ಹೌದು. ಆದರೆ, ಖಂಡಿತವಾಗಿ ಕನ್ನಡಿಗರಿಗೆ ಕೆಲಸ ನೀಡುವುದಕ್ಕೆ ಅಧಿಕಾರಿಗಳಿಂದ ಸಾಧ್ಯವಿಲ್ಲ. ಮಾನ್ಯ ಸಚಿವರಿಗೆ ಅಧಿಕಾರಿಗಳನ್ನು ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ. ಅಧಿಕಾರಿಗಳು ಸಹ ಮಾನ್ಯ ಸಚಿವರ ನಿಯಂತ್ರಣಕ್ಕೆ ಬರಲು ಸಾಧ್ಯವಿಲ್ಲ. ಹಾಗಾಗಿ ದಯವಿಟ್ಟು ಸದನ ಸಮಿತಿ ರಚನೆ ಮಾಡಿ, ಇದರ ಬಗ್ಗೆ ವಿಚಾರಣೆ ನಡೆಸಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಇದಕ್ಕೆಲ್ಲಾ ಏತಕ್ಕೆ ಸದನ ಸಮಿತಿ.

**ಶ್ರೀ ಕಾಂತರಾಜ್ (ಬಿ.ಎಂ.ಎಲ್):–** ಮಾನ್ಯ ಸಭಾಪತಿಯವರೇ, ಕನ್ನಡಿಗರಿಗೆ ಅನ್ಯಾಯವಾಗಿದೆ. ಇದು ನಮ್ಮ ನೆಲ. ನಮ್ಮ ಜನರಿಗೆ ಮಾಡಲಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಇದೊಂದು ಕಂಪನಿಯಾಗಿದೆ. It is a joint venture Company. Government of India and Government of Karnataka ವತಿಯಿಂದ ನಡೆಯುವಂಥದು. ಇದರಲ್ಲಿ ಉನ್ನತ ತಜ್ಞ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿಕಾರಿ / ಸಿಬ್ಬಂದಿಗಳು ಇದ್ದಾಗ, ಬೇರೆ-ಬೇರೆ ಸಂಬಳವನ್ನು ನಿಗದಿಪಡಿಸಲಾಗುತ್ತದೆ. ಜೊತೆಗೆ casual labourers ಇದ್ದಾಗ ಅವರಿಗೆ ಎಷ್ಟು ಸಂಬಳ ನೀಡಬೇಕೋ, ಅಷ್ಟು ಸಂಬಳವನ್ನು ನೀಡಲಾಗುವುದು. ಪತ್ರಿಕಾ ಪ್ರಕಟಣೆ ಮಾಡಿ, ಗುತ್ತಿಗೆ ನೌಕರರನ್ನು ನೇಮಕ ಮಾಡಿಕೊಳ್ಳಬೇಕೆಂಬುದು ಮಾನ್ಯ ಸದಸ್ಯರು ಪ್ರಶ್ನೆಯಾಗಿದ್ದು, ಅವರ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗಾಗಲೇ ಪತ್ರಿಕಾ ಪ್ರಕಟಣೆ ಮಾಹಿತಿಯನ್ನು ನೀಡಲಾಗಿದ್ದು, ನಿರ್ದಿಷ್ಟವಾಗಿ ಪತ್ರಿಕೆಯ ಹೆಸರನ್ನು ಕೇಳಿದ್ದಾರೆ. ಪ್ರಮುಖವಾದ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಬೇಕೆಂದು ಅವರ ವಾದವಾಗಿದ್ದು, ನಾನು ಅವರ ಮಾತನ್ನು ಒಪ್ಪುತ್ತೇನೆ. ಯಾವ್ಯಾವ ದಿನಾಂಕದಂದು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದೆ ಎಂಬುದರ ವಿವರವನ್ನು ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ. ಯಾವ ಗುತ್ತಿಗೆದಾರರು ನೇಮಕ ಮಾಡಿಕೊಂಡಿದ್ದಾರೆ, ಅದರಲ್ಲಿ ಗುತ್ತಿಗೆ ಆಧಾರದ ಮೇಲೆ ಎಷ್ಟು ಕನ್ನಡಿಗರಿದ್ದಾರೆ ಎಂಬುದನ್ನು ಹೆಸರು ಸಮೇತ ಮಾಹಿತಿಯನ್ನು ಒದಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ ಎಂದು ಹೇಳುತ್ತಿರುವುದು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಹೌದು. ಗುತ್ತಿಗೆ ಆಧಾರದ ಮೇಲೆ ಎಷ್ಟು ಜನ ಕನ್ನಡಿಗರಿದ್ದಾರೆ, ಯಾವ್ಯಾವ ಹುದ್ದೆಯಲ್ಲಿದ್ದಾರೆ ಎಂಬುದರ ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತೇನೆ.

**ಸಭಾಪತಿಯವರು:-** ಮೊದಲು ಸರಿಯಾದ ಮಾಹಿತಿ ನೀಡಲಿ. ಆನಂತರ ಮಾತನಾಡಿ.

**ಶ್ರೀ ಕಾಂತರಾಜ್ (ಬಿ.ಎಂ.ಎಲ್):-** ಮಾನ್ಯ ಸಭಾಪತಿಯವರೇ, ನಾನು ಈ ಪ್ರಶ್ನೆಯನ್ನು....

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾಹಿತಿ ನೀಡಿದ ಮೇಲೆ ಚರ್ಚೆ ಮಾಡಲಿ.

**ಶ್ರೀ ಕಾಂತರಾಜ್(ಬಿ.ಎಂ.ಎಲ್):-** ಮಾನ್ಯ ಸಭಾಪತಿಯವರೇ, ಅವರು ಟೆಂಡರ್ ಕರೆದಿರುವುದಿಲ್ಲವೇ?

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಸುಮ್ಮನೆ ಪದೇ-ಪದೇ ಮಾತನಾಡುವುದು ಸರಿಹೋಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಒಂದು ನಿಮಿಷ. ಮಾನ್ಯ ಸಚಿವರು ಮಾಹಿತಿ ನೀಡುತ್ತೇವೆ ಎಂದು ಹೇಳುತ್ತಿದ್ದಾರೆ. ಅವರ ಮಾಹಿತಿಯನ್ನು ನೋಡಿ. ನಂತರ ಸಮಧಾನಕಾರವಾಗಲಿಲ್ಲವೆಂದರೆ, ಅದಕ್ಕೆ ಪತ್ರ ನೀಡಿ. ನಾನು ಅದನ್ನು ಕನ್ವರ್ಟ್ ಮಾಡಿ ತಿಳಿಸುತ್ತೇನೆ.

**ಶ್ರೀ ಕಾಂತರಾಜ್ (ಬಿ.ಎಂ.ಎಲ್):–** ಮಾನ್ಯ ಸಭಾಪತಿಯವರೇ, ಸದನ ಸಮಿತಿ ರಚನೆ ಮಾಡಲಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಸದನ ಸಮಿತಿ ಅವಶ್ಯಕವಾಗಿಲ್ಲ.

**ಸಭಾಪತಿಯವರು:–** ಮೊದಲು ಮಾಹಿತಿ ನೀಡಲಿ. ನಂತರ ತಾವು ಪತ್ರ ನೀಡಿ.

**ಶ್ರೀ ಕಾಂತರಾಜ್ (ಬಿ.ಎಂ.ಎಲ್):–** ಮಾನ್ಯ ಸಭಾಪತಿಯವರೇ, ಇದರಲ್ಲಿ ಮತ್ತೊಂದು ವಿಚಾರಕ್ಕೆ ಸಂಬಂಧಿಸಿದಂತೆ ಲೋಪವಾಗಿದೆ.

**ಸಭಾಪತಿಯವರು:–** ಆಗಲಿ, ಮೊದಲು ಪತ್ರ ನೀಡಿ. ಆಮೇಲೆ ಏನು ಮಾಡಬೇಕೆಂದು ನಾನು ತಿಳಿಸುತ್ತೇನೆ. ಈ ವಿಚಾರವಾಗಿ ಕನ್ವರ್ಟ್ ಮಾಡೋಣ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಕನ್ವರ್ಟ್ ಮಾಡುವ ಅವಶ್ಯಕತೆ ಇಲ್ಲ. ಈಗಾಗಲೇ ಉತ್ತರ ಒದಗಿಸಲಾಗಿದೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಪತ್ರ ನೀಡಲಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಎರಡನೇ ಬಾರಿ ಆಗಿದೆ ದಯವಿಟ್ಟು ಬೇಡ.

**ಸಭಾಪತಿಯವರು:–** ಮಾನ್ಯ ಸದಸ್ಯರು ಪತ್ರ ನೀಡಲಿ. ಆಮೇಲೆ ಏನು ಮಾಡಬೇಕೆಂದು ನೋಡೋಣ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 672**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮೊದಲನೆ ಪ್ರಶ್ನೆಗೆ ಅತ್ಯಂತ ತಪ್ಪಾಗಿ ಉತ್ತರ ನೀಡಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿನ ನೀರಾವರಿ ನಾಲೆಗಳು ದುರಸ್ಥಿಯಾಗದೆ ದುಸ್ಥಿತಿಗೆ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವಂಥದ್ದು ನನ್ನ ಮೊದಲನೆ ಪ್ರಶ್ನೆಯಾಗಿದೆ. ಅದಕ್ಕೆ 'ಮಂಡ್ಯ ಜಿಲ್ಲೆಯಲ್ಲಿನ ಅವಶ್ಯವಿರುವ ನೀರಾವರಿ ನಾಲೆಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೊಂಡು ನಾಲೆಗಳಲ್ಲಿ ನೀರಿನ ಸಾಗಣೆ ಕ್ಷಮತೆಯನ್ನು ಅಭಿವೃದ್ಧಿಗೊಳಿಸುವ ಮುಖೇನ ಸಮರ್ಪಕವಾಗಿ ನೀರನ್ನು ಹರಿಸಲಾಗುತ್ತಿದೆ' ಎಂದು ಉತ್ತರ ನೀಡಿದ್ದಾರೆ. ನಮ್ಮ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, ನಾರಾಯಣಪುರದ ಪರಿಸ್ಥಿತಿಯೇ ನಮಗೂ ಆಗುತ್ತಿದೆ. ಕೆ.ಆರ್.ಎಸ್. ಅಣೆಕಟ್ಟಿನ tail end ಭಾಗವೇನಿದೆ, ಮದ್ದೂರು ಮತ್ತು ಮಳವಳ್ಳಿ ಭಾಗದಲ್ಲಿನ ಜನರು ಮೇಲ್ಭಾಗದಲ್ಲೆಲ್ಲಾ ಬೆಳೆ ಬೆಳೆಯುತ್ತಿದ್ದು, ನಾಟಿ ಮಾಡಿ ಕಳೆ ಕೀಳುವಂಥ ಸಂದರ್ಭದಲ್ಲಿ ಒಂದೂವರೆ, ಎರಡು ತಿಂಗಳು ಬಿಟ್ಟು ನಾವುಗಳೆಲ್ಲಾ ಒಟ್ಟಿಗೆ ಬ್ಯಾಟಿಂಗ್ ಮಾಡುವುದಕ್ಕೆ ಹೋಗಬೇಕು. ಇಲಾಖೆಯವರು ಆಧುನೀಕರಣ ಮಾಡಿದ್ದಾರೆ ನಿಜ. ಆದರೆ, ಮೇಲ್ಭಾಗಕ್ಕೆ ಮಾಡಿದ್ದಾರೆ tail end ಭಾಗದಲ್ಲಿ ಮಾಡಿಲ್ಲ. ವಿ.ಸಿ.ನಾಲಾ ಮತ್ತು ಶಿಂಷಾ ಅಚ್ಚುಕಟ್ಟಿನ ಬಗ್ಗೆ ಕೇಳಿದ್ದು, ಅವರು ಮುಖ್ಯ ಭಾಗದಲ್ಲಿ ವಿ.ಸಿ.ನಾಲಾ ಆಧುನೀಕರಣ ಮಾಡಿದ್ದೇವೆ ಎಂದು ಹೇಳುತ್ತಾರೆ. What about sub-canal and what about distributaries? Distributaries ಗಳನ್ನು ಸರಿಮಾಡಲಿಲ್ಲವೆಂದರೆ,... ಈ ಮೊದಲು ನೀರನ್ನು ಒದಗಿಸುವ ಮೊದಲು ಕಾಲುವೆಗಳಲ್ಲಿ silt ತೆಗೆಯಲಾಗುತ್ತಿತ್ತು. ಈಗ silting ಗೆ ಹಣ ನೀಡದೇ ಇರುವುದರಿಂದ ಅವರು ಕಾಲುವೆಗಳಲ್ಲಿ silt ತೆಗೆಯುವುದಿಲ್ಲ. ಇದರಿಂದಾಗಿ ನೀರು ಮುಂದಕ್ಕೆ ಹರಿಯುವುದಿಲ್ಲ. ಹಾಗಾಗಿ tail end ಭಾಗದ ರೈತರ ಕಷ್ಟ ಹೇಳಿಕೊಳ್ಳದಂತಾಗಿದೆ. ಮೇಲ್ಭಾಗದವರು ಎರಡು ಬಾರಿ, ಮೂರು ಬಾರಿ ನೀರನ್ನು ಹಾಯಿಸಿಕೊಳ್ಳುತ್ತಾರೆ, ನಮಗೆ ಒಂದು ಬಾರಿಯು ನೀರು ಸಿಗುವುದಿಲ್ಲ. ಹಾಗಾಗಿ ವಾಸ್ತವವಾಗಿ tail end ಕಡೆ ಆಧುನೀಕರಣವಾಗಬೇಕಾಗಿದೆ. ಅವರು ಮೇಲ್ಭಾಗದಲ್ಲಿ ಮಾತ್ರ ಮಾಡುತ್ತಾರೆ. ಹಾಗಾಗಿ ಕಡೆಯ ಭಾಗದ ಉಪ ಕಾಲುವೆಗಳ / ಕಾಲುವೆಗಳ / ನಾಲೆಗಳ ಆಧುನೀಕರಣವಾಗಿಲ್ಲ. ಆ ಭಾಗದ ರೈತರು ಬಹಳ ಕಷ್ಟದಲ್ಲಿದ್ದಾರೆ. ಹಾಗಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ದಯವಿಟ್ಟು ಕಟ್ಟ ಕಡೆಯ ಭಾಗದ ನಾಲೆಗಳನ್ನು ಆಧುನೀಕರಣ ಮಾಡಬೇಕೆನ್ನುವುದು ನನ್ನ ಆಗ್ರಹವಾಗಿದ್ದು, ಮಾನ್ಯ ಸಚಿವರು ಸ್ಪಷ್ಟವಾದ ಉತ್ತರ ನೀಡಬೇಕು.

**ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಈಗಾಗಲೇ ವಿ.ಸಿ. ನಾಲಾ ಕಾಮಗಾರಿಯು 15.28 K.M., progress ನಲ್ಲಿದ್ದು, ಬಾಕಿ ಇರುವ 158.73 ಕಿ.ಮೀ. ಉದ್ದದ ಆಧುನೀಕರಣ ಕಾಮಗಾರಿಗಳನ್ನು ರೂ.317.46 ಕೋಟಿ ಮೊತ್ತದ ಪ್ರಸ್ತಾವನೆಯನ್ನು ತಯಾರಿಸಲಾಗಿದೆ. ಅದಕ್ಕೆ ಸಂಬಂಧಿಸಿದಂತೆ ತಾಂತ್ರಿಕವಾಗಿ ಪರಿಶೀಲನೆಯಾಗುತ್ತಿದೆ. ಖಂಡಿತವಾಗಿಯು tail end ಗೆ ನೀರು ಹರಿಸುವಂಥ ಕೆಲಸವನ್ನು ಸರ್ಕಾರ ಮಾಡುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾಲೆಗಳು ಹಾಳಾಗಿದೆ ಅಲ್ಲವೇ? ಅದರ ಬಗ್ಗೆ ಹೇಳಲಿ.

**ಸಭಾಪತಿಯವರು:-** ಮೊದಲು ಸಂಪೂರ್ಣವಾಗಿ ಅವರ ಮಾತನ್ನು ಕೇಳಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಈ ಮೊದಲು ನಾಲೆಗಳ ದುರಸ್ಥಿಗೆ ಹಣ ನೀಡಲಾಗುತ್ತಿತ್ತು, ನಾಲೆಗಳಲ್ಲಿ ಹೂಳು ತೆಗೆಯುತ್ತಿದ್ದರು ಎನ್ನುವಂಥ ಪ್ರಮುಖ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ, ಮುಖ್ಯ ಕಾಲುವೆಯನ್ನು ಮಾತ್ರ ಇಲಾಖೆಯಿಂದ ನಿರ್ವಹಣೆ ಮಾಡಲಾಗುತ್ತಿತ್ತು. ಉಳಿದ distributary and field canal ಗಳನ್ನು ಆಯಾಯ ನೀರು ಬಳಕೆದಾರರ ಸಹಕಾರ ಸಂಘಗಳಿಂದ ಮಾಡಿಸುವಂತೆ ರೈತರ ವ್ಯಾಪ್ತಿಗೆ ನೀಡಿದ್ದೇವೆ. ರೈತರು ನೀರು ಬಳಕೆದಾರರ ಸಹಕಾರ ಸಂಘಗಳಿಂದ ಮಾಡಿಸಿಕೊಳ್ಳುತ್ತಾರೆ. ಸೊಸೈಟಿಗಳ ಮೂಲಕ ನೀರಿನ ತೆರಿಗೆಯನ್ನು ವಸೂಲಿ ಮಾಡಿ, ನಿರ್ವಹಣೆ ಮಾಡುವಂಥ ಕೆಲಸವನ್ನು ರೈತರೆ ಮಾಡಬೇಕಾಗಿದೆ. ಈ ಸೊಸೈಟಿಗಳೇನಿವೆ, ಇದು ಸಹಕಾರ ಕ್ಷೇತ್ರದಿಂದ ನೋಂದಣಿಯಾಗಿರುತ್ತದೆ. ಈ ಹೊಸ ವ್ಯವಸ್ಥೆಯನ್ನು ಜಾರಿಗೆ ತಂದ ಮೇಲೆ ಮಾಹಿತಿ ಇರುವಂಥ ಹಳ್ಳಿಗಳ ರೈತರು ಉತ್ಸಾಹದಲ್ಲಿ ಸೊಸೈಟಿಗಳನ್ನು ಮಾಡಿಕೊಂಡು ಸುಮ್ಮನೆ ಕುಳಿತುಬಿಟ್ಟಿದ್ದು, ಕಾಲುವೆಗಳನ್ನು ನಿರ್ವಹಣೆ ಮಾಡುತ್ತಿಲ್ಲ.

**(ಮುಂದು)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(483) 18.03.2021/12.20/ಎಸ್‌ಕೆ-ಜಿಆರ್**

**ಶ್ರೀ ಗೋವಿಂದ ಎಂ. ಕಾರಜೋಳ (ಮುಂದು):-**

ಮೊದಲು ಏನು ಪದ್ಧತಿ ಇತ್ತು ಎಂದರೆ, ನೀರಾವರಿ ಇಲಾಖೆಯಿಂದ Project Directors, Supervisors, Work Inspectors, Engineers ಇರುತ್ತಿದ್ದರು. ಆಗ ಇಲಾಖೆಯಿಂದ ನಿರ್ವಹಣೆ ಚೆನ್ನಾಗಿ ಆಗುತ್ತಿತ್ತು. ಆದ್ದರಿಂದ ಯಾವುದೇ ತೊಂದರೆಯಾಗುತ್ತಿರಲಿಲ್ಲ, tail end ವರೆಗೂ ನೀರು ಮುಟ್ಟುತ್ತಿತ್ತು.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಂಡ್ಯ ಜಿಲ್ಲೆಯ ಬಗ್ಗೆ ಮಾತ್ರ ಹೇಳಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಂಡ್ಯ ಜಿಲ್ಲೆಯ ಬಗ್ಗೆಯೂ ಹೇಳುತ್ತೇನೆ ಮತ್ತು ರಾಜ್ಯದ ಬಗ್ಗೆಯೂ ಹೇಳುತ್ತೇನೆ

**ಸಭಾಪತಿಯವರು:-** ಮಾನ್ಯ ಸಚಿವರೇ, ರಾಜ್ಯದ ಬಗ್ಗೆ ಬೇಡ. ಬರೀ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳಿ. ನಮಗೆ ಸಮಯವಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, tail end ನವರೆಗೂ ನೀರು ಮುಟ್ಟುವಂತಹ ವ್ಯವಸ್ಥೆ ಇತ್ತು. ಈಗ ಇದು ಸೊಸೈಟಿಯಾದ ಮೇಲೆ ಮತ್ತು ಅದರ ನಿರ್ವಹಣೆಯಿಲ್ಲದೇ ಇವತ್ತು ಕಾಲುವೆಗಳು ಹಾಳಾಗಿವೆ. ನಾನು ಆ ಕಡೆ ಭಾಗದಲ್ಲಿ ಕುಳಿತಾಗಲೂ ಕೂಡ ಹೇಳಿದ್ದೆ. ನೀರು ಬಳಕೆದಾರರ ಸಹಕಾರ ಸಂಘಗಳನ್ನು ಸಮಾಪ್ತಿಗೊಳಿಸಿ, ಮೊದಲಿದ್ದಂತಹ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಹೇಳಿ ನಾನು ಕೆಳಮನೆಯಲ್ಲಿ ಒತ್ತಾಯ ಮಾಡಿದ್ದೆ. ಇವತ್ತು ಸಹಕಾರ ಸಂಘಗಳು ಸರಿಯಾಗಿ ನಿರ್ವಹಣೆ ಮಾಡದೇ ಇದ್ದುದರಿಂದ tail end ಗೆ ನೀರು ಹೋಗುತ್ತಿಲ್ಲ. ಇವತ್ತು ವಿ.ಸಿ., ನಾಲೆಗಳ ಸುಮಾರು 317 ಕೋಟಿ ರೂಪಾಯಿಗಳ ಅಂದಾಜು ಪತ್ರಿಕೆ ಏನೊಂದು ರೆಡಿಯಾಗಿದೆ. ಅದು technical scrutiny ಆದಮೇಲೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ. ವಿ.ಸಿ., ನಾಲೆಯ ದುರಸ್ತಿ ಕಾಮಗಾರಿ..

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ವಿ.ಸಿ. ನಾಲೆ ಮತ್ತು ಶಿಂಷಾ ನಾಲೆ ಎರಡನ್ನೂ ಮಾಡಿಕೊಡಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಕ್ಷಮಿಸಿ ಎರಡೂ ಕೆಲಸವನ್ನು ಮಾಡಿಕೊಡುವಂಹದ್ದು, ಸರ್ಕಾರದ್ದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 631**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಮಿಳುನಾಡು ನಿಗದಿಗಿಂತ ಹೆಚ್ಚು ನೀರನ್ನು ಅಕ್ರಮವಾಗಿ ಬಳಸಿಕೊಂಡು ನದಿ ಜೋಡಣೆ ಯೋಜನೆಯನ್ನು ಪ್ರಾರಂಭ ಮಾಡಲು ಹೊರಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಎರಡನೇ ಪ್ರಶ್ನೆ ಏನೆಂದರೆ, ಬಂದಿದ್ದಲ್ಲಿ ಇದನ್ನು ತಕ್ಷಣ ನಿಲ್ಲಿಸಲು ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾನೂನು ಕ್ರಮಗಳೇನು ಎಂಬ ಪ್ರಶ್ನೆಯನ್ನು ಕೇಳಿದ್ದೆ. ಆದರೆ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇನು ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಉತ್ತರದಲ್ಲಿ ಏನಿದೆ ಎಂದರೆ, ತಮಿಳುನಾಡು ರಾಜ್ಯವು ಕೇಂದ್ರ ಸರ್ಕಾರಕ್ಕೆ ಸದರಿ ಯೋಜನೆಗೆ ತಾತ್ವಿಕ ಅನುಮೋದನೆ ಹಾಗೂ ಆರ್ಥಿಕ ನೆರವು ಕೋರಿ ಬರೆದಿರುವ ದಿನಾಂಕ 05.01.2021 ಪತ್ರವು ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದಿಂದ ರಾಜ್ಯದ ಅಭಿಪ್ರಾಯಕ್ಕಾಗಿ ಸ್ವೀಕೃತವಾಗಿದೆ. ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದಿಂದ ಜನವರಿ 5ನೇ ತಾರೀಖಿನಂದು ಸರ್ಕಾರಕ್ಕೆ ಪತ್ರ ಬಂದಿದೆ. ಅದಕ್ಕೆ reply ಅನ್ನು ದಿನಾಂಕ 17.02.2021 ರಂದು ಕೊಡುತ್ತಾರೆ. ಆದರೆ ಸರ್ಕಾರ ಪತ್ರವನ್ನು ಪಡೆದುಕೊಂಡು, ಅದಕ್ಕೆ ಉತ್ತರ ಬರೆಯುವುದಕ್ಕೆ ಒಂದು ತಿಂಗಳು ಹನ್ನೆರಡು ದಿವಸಗಳ ಸಮಯವನ್ನು ತೆಗೆದುಕೊಳ್ಳುತ್ತಾರೆ. ಸರ್ಕಾರ ಜನವರಿ 5 ನೇ ತಾರೀಖಿನಲ್ಲಿ ಪತ್ರವನ್ನು ಪಡೆದುಕೊಂಡಿದ್ದು, ಮಾರ್ಚ್ 1 ನೇ ತಾರೀಖು ಇದಕ್ಕೆ ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತೇವೆಂದು ಸುಮಾರು ಎರಡು ತಿಂಗಳಾದ ಮೇಲೆ ಪತ್ರವನ್ನು ಬರೆಯುತ್ತದೆ. ಇನ್ನು ಮುಂದುವರೆದು ಹೇಳುವುದೇನೆಂದರೆ, ಸದರಿ ಯೋಜನೆಯ ಬಗ್ಗೆ ರಾಜ್ಯವು ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ದಿನಾಂಕ 21.02.2021 ರಂದು ಜಲ ಸಂಪನ್ಮೂಲ ಸಚಿವರು ನವದೆಹಲಿಯಲ್ಲಿ ಕಾನೂನು ಮತ್ತು ತಾಂತ್ರಿಕ ಪರಿಣಿತರೊಂದಿಗೆ ಸಭೆ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ತಮಿಳುನಾಡು ಸರ್ಕಾರ 20ನೇ ತಾರೀಖು ಈ ಯೋಜನೆಗೆ ಅಡಿಗಲ್ಲು ಹಾಕುತ್ತಾರೆ. ಕಾಮಗಾರಿಯನ್ನು ಪ್ರಾರಂಭ ಮಾಡುತ್ತಾರೆ. ಯಾವುದೇ ಒಂದು ಅನುಮತಿಯನ್ನು ತೆಗೆದುಕೊಳ್ಳುವುದಿಲ್ಲ. ಕೇಂದ್ರ ಸರ್ಕಾರದ ಅನುಮತಿಯೂ ಸಿಗುವುದಿಲ್ಲ. Dispute ಇರತಕ್ಕಂಥ ಈ ನಾಲ್ಕು ರಾಜ್ಯಗಳಿಂದ ನಿರಾಪೇಕ್ಷಣಾ ಪತ್ರವನ್ನು ತೆಗೆದುಕೊಳ್ಳುವುದಿಲ್ಲ. ಯಾವ ಧೈರ್ಯದ ಆಧಾರದ ಮೇಲೆ ತಮಿಳುನಾಡು ಸರ್ಕಾರ ಅಡಿಗಲ್ಲನ್ನು ಹಾಕಿ ಕೆಲಸವನ್ನು ಪ್ರಾರಂಭ ಮಾಡುತ್ತಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಜೀವನದಿಯಾಗಿರುವಂತಹ ಕಾವೇರಿಗೆ ಸರ್ಕಾರ ಯಾವ ರೀತಿಯಾಗಿ ಪ್ರತಿಭಟನೆ ಮಾಡಬೇಕಾಗಿತ್ತು ಮತ್ತು ಏತಕ್ಕಾಗಿ ಪ್ರತಿಭಟನೆ ಮಾಡುವುದರಲ್ಲಿ ಹಿಂದುಳಿದಿದ್ದೀರಾ? ನಮ್ಮ ಹಕ್ಕೊತ್ತಾಯವನ್ನು ಕೇಳಲೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇಕಲ್ಲವೇ? ಇದಕ್ಕೆ ಪ್ರತಿಭಟನೆಯಾದರೂ ತೋರಿಸಬೇಕಲ್ಲವೇ? ಕೇಂದ್ರ ಸರ್ಕಾರದಲ್ಲಿರುವಂತಹ ಕಾನೂನುಗಳು ಈ ರಾಷ್ಟ್ರದಲ್ಲಿರುವ ಎಲ್ಲಾ ರಾಜ್ಯಗಳಿಗೂ ಒಂದೇ ಕಾನೂನು. ಅದಕ್ಕೆ ಕಾನೂನಿನ ತಿಲಾಂಜಲಿಯನ್ನು ನೀಡಿ, ತಮಿಳುನಾಡು ಸರ್ಕಾರ ಈ ಯೋಜನೆಗೆ ಅಡಿಗಲ್ಲು ಹಾಕುತ್ತದೆ ಎಂದರೆ, ಇದಕ್ಕೆ ಎಷ್ಟು ಧೈರ್ಯವಿರಬಹುದು? ಇದಕ್ಕೆ ಪ್ರತಿಭಟನೆ ಏನು ಎಂದು ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ) (ಮುಖ್ಯಮಂತ್ರಿಗಳ ಪರವಾಗಿ):-**ಮಾನ್ಯ ಸಭಾಪತಿಯವರೇ, ಇದೇ ಸದನದಲ್ಲಿ ನಿಯಮ 68ರಲ್ಲಿ ಶ್ರೀ ಶ್ರೀಕಂಠೇಗೌಡರು, ಶ್ರೀ ಕೆ.ಎ. ತಿಪ್ಪೇಸ್ವಾಮಿ ಮತ್ತು ಶ್ರೀ ಎಸ್.ಆರ್ ಪಾಟೀಲ್‌ರವರು ಇನ್ನುಳಿದ ಮಾನ್ಯ ಸದಸ್ಯರೆಲ್ಲರೂ ಇದರ ಬಗ್ಗೆ ಗಂಟೆಗಟ್ಟಲೆ ಚರ್ಚಿಸಿದ್ದಾರೆ. ಅದಕ್ಕೆ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಅದೇ ಉತ್ತರವನ್ನು ಇವತ್ತು ಅವರಿಗೂ ಕೊಟ್ಟಿದ್ದೇನೆ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ತಮಿಳುನಾಡು ರಾಜ್ಯದಲ್ಲಿ ಚುನಾವಣೆ ಬಂದಿದೆ ಎಂದು ಹೇಳಿ, ಗಡಿಬಿಡಿ ಮಾಡಿ ಅಡಿಗಲ್ಲು ಮಾಡಿರಬಹುದು. ಅದಕ್ಕೆ ಯಾವುದೇ ರೀತಿಯ ಕಾನೂನಾತ್ಮಕವಾದಂತಹ ಅವಕಾಶವಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಪ್ಪಿಗೆಯನ್ನು ಕೊಟ್ಟಿಲ್ಲ. ಹಾಗಾಗಿ ಯಾವುದೇ ಯೋಜನೆಗೆ legal sanctity ಇಲ್ಲ. ಅದಕ್ಕಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮೊನ್ನೆ ತಾನೇ ಗಂಟೆಗಟ್ಟಲೆ ಚರ್ಚೆಯಾಗಿದೆ.

**ಸಭಾಪತಿಯವರು:-** ನಿಯಮ 68ರಲ್ಲಿ ಚರ್ಚೆಯಾಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ನಿಯಮ 68 ಮೇಲೆ ಮಾನ್ಯ ಸದಸ್ಯರೆಲ್ಲರೂ ಚರ್ಚೆ ಮಾಡಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಇದು ತುಂಬಾ ಗಂಭೀರವಾದಂತಹ ವಿಷಯವಾಗಿದೆ. ತಾವು ಇದರ ಬಗ್ಗೆ ಉತ್ತರವನ್ನು ಕೊಟ್ಟಿದ್ದೀರಾ.

**ಶ್ರೀ ಗೋವಿಂದ ಎಂ. ಕಾರಜೋಳ:-** ಈ ವಿಷಯದ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಮಾತನಾಡಿದ್ದಾರೆ. ಮಾನ್ಯ ಸಭಾಪತಿಯವರೇ ಈ ಸದನದಲ್ಲಿ ಕಾನೂನು ಸಚಿವರು ಸಹ ಇದ್ದಾರೆ. ಅವರು Technical Team ಅನ್ನು ಕರೆದುಕೊಂಡು meeting ಅನ್ನು ಮಾಡಿದ್ದಾರೆ. ಮಾನ್ಯ ಸಚಿವರು ಅದರ ಬಗ್ಗೆ ಉತ್ತರವನ್ನು ಕೊಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಕಾವೇರಿ ಟ್ರಿಬ್ಯೂನಲ್ ಆದ ಮೇಲೆ, ಆ ಟ್ರಿಬ್ಯೂನಲ್ ಎಲ್ಲಿಯೂ ಕೂಡ ಹೆಚ್ಚುವರಿ ನೀರಿನ ಬಗ್ಗೆ ಪ್ರಸ್ತಾವನೆ ಮಾಡಿಲ್ಲ. ಹಾಗಾಗಿ ಹೆಚ್ಚುವರಿ ನೀರು ಹಂಚಿಕೆ ಮಾಡುವ ಪ್ರಶ್ನೆಯೇ ಇಲ್ಲ. ಹೆಚ್ಚುವರಿ ನೀರು ಹಂಚಿಕೆ ಆಗಬೇಕಾದರೆ, ಎಲ್ಲಾ ರಾಜ್ಯಗಳ ಒಪ್ಪಿಗೆ ಬೇಕಾಗುತ್ತದೆ. ಆದಾಗ್ಯೂ ಕೂಡ ತಮಿಳುನಾಡು ಸರ್ಕಾರ ಅಕ್ರಮವಾಗಿ ಮಾಡುವಂತಹ ಪ್ರಯತ್ನ ಮಾಡಿದೆ. ಇದರ ಬಗ್ಗೆ ಆಕ್ಷೇಪಣೆಯನ್ನು ನಾವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದೇವೆ ಮತ್ತು CWC (Central Water Commission) ಗೂ ಆಕ್ಷೇಪಣೆಯನ್ನು ಸಲ್ಲಿಸಿದ್ದೇವೆ. ಆದಾಗ್ಯೂ ಕೂಡ ತಮಿಳುನಾಡು ಸರ್ಕಾರ ಮಾಡಿದ್ದರಿಂದ ಅದಕ್ಕೆ ಕಾನೂನಾತ್ಮಕವಾಗಿ ನಿಲ್ಲಿಸಬೇಕೆಂಬ ತೀರ್ಮಾನವನ್ನು ಕೂಡ ಮಾಡಿದ್ದೇವೆ. ನಾವು ಎರಡು ಬಾರಿ ಕಾನೂನು ತಜ್ಞರ ಜೊತೆ ಚರ್ಚೆ ಮಾಡಿ, ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಇದರ ವಿರುದ್ಧ ದಾವೆ ಹೂಡಬೇಕೆಂಬುದರ ಬಗ್ಗೆ ತೀರ್ಮಾನವನ್ನು ಮಾಡಿ, ಈಗಾಗಲೇ ಡ್ರಾಫ್ಟಿಂಗ್ ಸ್ಟೇಜ್‌ನಲ್ಲಿ ಇದೆ. ಅದರ ವಿರುದ್ಧವಾಗಿ ಮೂಲ ದಾವಾವನ್ನು ಹೂಡಲು ಅತಿ ಶೀಘ್ರದಲ್ಲಿ ಕಡತ ತಯಾರು ಮಾಡುತ್ತಿದ್ದೇವೆ. ಮಧುರೈ ನ್ಯಾಯಾಲಯದಲ್ಲಿ ಅಲ್ಲಿರುವ ಒಬ್ಬ ರೈತ ಪಿ.ಎಲ್.ಐ., ಹಾಕಿ, ಇದರ ಮೇಲೆ ತೀರ್ಪನ್ನು ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಿದ್ದಾರೆ. ಅವರು ನಮ್ಮನ್ನು ಪಾರ್ಟಿಯಾಗಿ ಮಾಡಿಲ್ಲ. ಅದರೂ ಕೂಡ ನಾವು implead ಆಗಿ ಅಲ್ಲಿಯೂ ಕೂಡ objections ಸಲ್ಲಿಸುವಂತಹದ್ದರ ಬಗ್ಗೆ ತೀರ್ಮಾನ ಮಾಡಿದ್ದೇವೆ. ಕಾನೂನಾತ್ಮಕವಾಗಿ ಇದನ್ನು ಯಾವ ರೀತಿ ನಿಲ್ಲಿಸಬೇಕೋ, ಖಂಡಿತವಾಗಿಯೂ ನಿಲ್ಲಿಸುತ್ತೇವೆ. ಇದು ಆಗದ ಹಾಗೇ ನೋಡಿಕೊಳ್ಳುತ್ತೇವೆ. ರಾಜ್ಯದ ಹಿತಾಸಕ್ತಿಗೆ ಕಾವೇರಿ ಜಲಾನಯನ ಪ್ರದೇಶದ ನಮ್ಮ ನೀರಿನ ಹಕ್ಕಿಗೆ ಯಾವ ರೀತಿಯ ಬಾಧ್ಯತೆಯಾಗದಂತೆ ನಮ್ಮ ಸರ್ಕಾರ ಕಾನೂನಾತ್ಮಕವಾದಂತಹ ಸಮರವನ್ನು ಮಾಡುತ್ತದೆ.

**ಸಭಾಪತಿಯವರು:-** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಭಾಪತಿಯವರೇ ಒಂದು ನಿಮಿಷ. CWC ಮುಂದೆ ತಾವು ಒಂದು stand ತೆಗೆದುಕೊಳ್ಳಬೇಕು. ಅದು ಹೆಚ್ಚುವರಿ ನೀರು ಅಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:–** ಮಾನ್ಯ ತಿಪ್ಪೇಸ್ವಾಮಿಯವರೇ ನಾನು ಯಾರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಆದರೆ ತಮಗೆ ಹೇಗೆ ಕೊಡಲಿ?

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಚಿವರು ಉತ್ತರವನ್ನು ಚೆನ್ನಾಗಿ ಹೇಳಿದ್ದಾರೆ. ಆದರೆ ಹೆಚ್ಚುವರಿ ನೀರು ಎಂದು ಹೇಳುತ್ತಿದ್ದೀರಾ. The entire basin is…

**ಸಭಾಪತಿಯವರು:–** ತಾವು ಮೊನ್ನೆ ತಾನೇ ಸಾಕಷ್ಟು ಮಾತನಾಡಿದ್ದೀರಾ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ರಾಜ್ಯದ ...

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, surplus ಇಲ್ಲ ಎಂದು ನಾನು ಅದನ್ನೇ ಹೇಳಿದ್ದೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ತಮ್ಮ ಉತ್ತರದಲ್ಲಿ ಆ ರೀತಿ ಇಲ್ಲ. ನೀರಿನ ಬಳಕೆಗಾಗಿ ಎನ್ನುವುದು ಬೇಡ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ತಿಪ್ಪೇಸ್ವಾಮಿಯವರೇ, ತಮ್ಮಷ್ಟು ಕಾವೇರಿಯ ಬಗ್ಗೆ ಓದಿಕೊಂಡಿಲ್ಲ. ಅದರ ಬಗ್ಗೆ ನಾನು ಸ್ವಲ್ಪವಾದರೂ ಓದಿಕೊಂಡಿದ್ದೇನೆಂಬ ಬಗ್ಗೆ ತಾವು ಒಪ್ಪಿಕೊಳ್ಳುತ್ತೀರಾ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ನಾನು ಓದಿಕೊಂಡಿದ್ದೀರಾ ಎಂದು ಹೇಳುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ,

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, deficit basin ಎಂದು ಈಗಾಗಲೇ prove ಆಗಿದೆ. ಅವರು surplus water utilise ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದು ಸಾಧ್ಯವಿಲ್ಲ, ಕಾನೂನಾತ್ಮಕವಾಗಿ ಸರಿಯಿಲ್ಲ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಕಾನೂನು ಪ್ರಕಾರ ಇಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:–** ತಾವು ಹೇಳಿದ್ದನ್ನೇ ನಾನು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಇನ್ನು ಮುಗಿಸಿಲ್ಲ.

**ಸಭಾಪತಿಯವರು:–** ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರಲ್ಲ ಅಷ್ಟೇ ಸಾಕು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಪ್ರಶ್ನೆ ಸಂಖ್ಯೆ 689**
**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ವಿದ್ಯುತ್ ಕಾಯಿದೆ ತಿದ್ದುಪಡಿ 2020 ಖಾಸಗೀಕರಣವನ್ನು ರಾಜ್ಯ ಸರ್ಕಾರ ಒಪ್ಪಿಕೊಂಡರೆ, ಅದು ರೈತರ ಮರಣ ಶಾಸನವಾಗುತ್ತದೆ. ಈ ವಿದ್ಯುತ್ ಕಾಯಿದೆ ತಿದ್ದುಪಡಿ 2020 ಕ್ಕೆ ಈ ರಾಜ್ಯದ ತನ್ನದೇ ಆದ ಇಲಾಖೆಯ ನೌಕರರು, ಅಧಿಕಾರಿಗಳು ವಿರೋಧ ವ್ಯಕ್ತಪಡಿಸಿದ್ದಾರೆ. ಸದರಿ ಮನವಿಗಳಲ್ಲಿ ವಿದ್ಯುಚ್ಛಕ್ತಿ concurrent ವಿಷಯವಾಗಿದ್ದು, ಕೇಂದ್ರ ಸರ್ಕಾರವು ಏಕ ಪಕ್ಷೀಯವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸಾಧುವಾಗಿಲ್ಲದೆ ಕೆಳಕಂಡ ತಿದ್ದುಪಡಿಗಳು ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿ ಮತ್ತು ಹಕ್ಕುಗಳನ್ನು ಕಸಿದುಕೊಳ್ಳುತ್ತಿದೆ ಎಂದು ನೌಕರರು ಮತ್ತು ಅಧಿಕಾರಿಗಳ ಸಂಘದವರು ಆಕ್ಷೇಪಿಸಿರುತ್ತಾರೆ; ಇದಲ್ಲದೇ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಮತ್ತು ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಕಲ್ಪಿಸುವಿಕೆ ಬಗ್ಗೆ ಕೇಂದ್ರ ಸರ್ಕಾರವೂ ಸಹ ಸ್ಪಷ್ಟೀಕರಣ ನೀಡಿದ್ದು, ಉಚಿತ ವಿದ್ಯುತ್ ಸರಬರಾಜಿನ ವ್ಯವಸ್ಥೆಯನ್ನು ಯಾವುದೇ ಕಾರಣಕ್ಕೂ ಸ್ಥಗಿತಗೊಳಿಸಲಾಗುವುದಿಲ್ಲವೆಂದು ತಿಳಿಸಿರುತ್ತದೆ ಹಾಗೂ ಕಾಲಕಾಲಕ್ಕೆ ಸರ್ಕಾರದಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಹಾಯಧನ ಬಿಡುಗಡೆ ಮಾಡಲು Direct Benefit Transfer (DBT) ಸಹಾಯವಾಗಲಿದೆಯೆಂದು ದಿನಾಂಕ 25.06.2020ರ ಪತ್ರದಲ್ಲಿ ಕೇಂದ್ರ ಸರ್ಕಾರವು ತಿಳಿಸಿರುತ್ತದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. Direct Benefit Transfer (DBT) ಎನ್ನುವಂತಹದ್ದು ನಂಬಿಕೆಗೆ ಯೋಗ್ಯವಾದ ವ್ಯವಸ್ಥೆಯಲ್ಲ. ಅದನ್ನು ತಾವೇ ಒಪ್ಪಿಕೊಂಡಿದ್ದೀರಿ. ಆದ್ದರಿಂದ ಸರ್ಕಾರದ ಸ್ಪಷ್ಟ ನಿಲುವು ಯಾವುದೇ ಕಾರಣಕ್ಕೂ ನಮ್ಮ ರಾಜ್ಯ ಈ ಖಾಸಗೀಕರಣ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದಿಲ್ಲ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದೀರಾ.

**(ಮುಂದು)**

**(484) 18.03.2021, 12.30, ಟಿಸಿಹೆಚ್-ಎಂಡಿ**

**ಶ್ರೀ ಬಸವರಾಜ ಬೊಮ್ಮಾಯಿ (ಗೃಹ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, Karnataka Electricity Act, 2003 ಕ್ಕೆ ತಿದ್ದುಪಡಿ ಏನು ಒಂದು Draft Standard Bidding Documents ಮತ್ತು ಇತರ ಅಮೆಂಡ್‌ಮೆಂಟ್‌ಗಳನ್ನು ತರುವ ಪ್ರಯತ್ನ ಏನಿದೆ, ಇದರಲ್ಲಿ ಎರಡು ಭಾಗ ಇದೆ. ವಿದ್ಯುಚ್ಛಕ್ತಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರಬರಾಜಿನಲ್ಲಿ ಕ್ಷಮತೆಯನ್ನು ತರಬೇಕು ಮತ್ತು ಈಗಿರುವಂಥ ವ್ಯವಸ್ಥೆಯಲ್ಲಿ ಬಹಳಷ್ಟು distribution level ನಲ್ಲಿ ಏನು ಸಮಸ್ಯೆಗಳಿವೆ, ಅದನ್ನು ಸರಿಪಡಿಸುವಂಥ ಉದ್ದೇಶದಲ್ಲಿ ಒಂದು ಭಾಗ ಇದೆ. ಇನ್ನೊಂದರಲ್ಲಿ ಕೆಲವು ಖಾಸಗಿ ಜನರಿಗೆ ಇದರಲ್ಲಿ ಭಾಗವಹಿಸುವಂಥ ಅವಕಾಶಗಳನ್ನು ಕೊಟ್ಟರೆ, ಇದು ಇನ್ನೂ improvement ಆಗುತ್ತದೆ ಎನ್ನುವಂಥ ಎರಡು ವಿಚಾರಗಳಿವೆ. As per the constitutional provision. Concurrent list ಇರುವುದರಿಂದ, ಅವರು ಏಕ ಪಕ್ಷೀಯವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. Central Act ಗೆ ಅವರೇನು ಅಮೆಂಡ್‌ಮೆಂಟ್ ತರುತ್ತಿದ್ದಾರೆ, ಆದರೂ ಕೂಡ ನಮ್ಮ ರಾಜ್ಯದ ಅಭಿಪ್ರಾಯವನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಆ objection ನಾವು ಈಗಾಗಲೇ ಮಾಡಿದ್ದೇವೆ. ಅದಕ್ಕೆ ನಮ್ಮ ಆಕ್ಷೇಪಣೆ ಬಹಳ ಸ್ಪಷ್ಟವಾಗಿದೆ. ವಿಶೇಷವಾಗಿ ರೈತರ ಪಂಪ್‌ಸೆಟ್, ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿಗಳಿಗೆ ನಮ್ಮ ರಾಜ್ಯ ಸರ್ಕಾರ ಸಬ್ಸಿಡಿಯನ್ನು ಕೊಡುತ್ತದೆ. ಕೇಂದ್ರ ಸರ್ಕಾರ ಸಬ್ಸಿಡಿ ಕೊಡುವುದಿಲ್ಲ. ಅವರುಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನಾವು ಮಾಡುತ್ತೇವೆ. DBT (Direct Benefit Transfer) ಕೂಡ ನಾವು ಒಪ್ಪಿಕೊಂಡಿಲ್ಲ. ನಾವೇಕೆ ಒಪ್ಪಿಕೊಂಡಿಲ್ಲವೆಂದರೆ, ಇವತ್ತು DBT ಮಾಡಬೇಕೆಂದರೆ, ಅವರ consumption ನ್ನು ನಾವು ಗುರ್ತಿಸಬೇಕು. ಅದನ್ನು ಗುರ್ತಿಸಬೇಕೆಂದರೆ ಮೀಟರ್ ಅಳವಡಿಸಬೇಕು. ಅದು ಕಷ್ಟಸಾಧ್ಯ ಇರುವುದರಿಂದ, ಈಗ ಇರುವಂಥ ವ್ಯವಸ್ಥೆಯಲ್ಲಿ ನಾವು ಮುಂದುವರೆಯುತ್ತೇವೆ ಎನ್ನುವಂಥ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇವೆ. ಹೀಗಾಗಿ, ನಮ್ಮ ವಿದ್ಯುಚ್ಛಕ್ತಿ ಮಂಡಳಿಗಳ ನೌಕರರ ಒಂದು ಆತಂಕ ಏನಿದೆ, ಅವರ ಜಾಬ್ ಸೆಕ್ಯೂರಿಟಿ ಬಗ್ಗೆಯೂ ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಬಡವರ ಯೋಜನೆಗಳ ಬಗ್ಗೆ ಕೂಡ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಆದ್ದರಿಂದ ಯಾವುದೇ ಆತಂಕಪಡುವಂಥ ಅವಶ್ಯಕತೆಯಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಅಂದರೆ ತಾವು ಅದನ್ನು ತೆಗೆಯುವುದಿಲ್ಲವೆಂದಾಯಿತು. ಇಲ್ಲಿ ಅದಕ್ಕೆ ಗೊಂದಲ ಬೇಡ. ಮಾನ್ಯ ಸಚಿವರು ಮತ್ತೆ ಅದಕ್ಕೂ ಮತ್ತು ಇದಕ್ಕೂ ಸರಿಯಾಗುತ್ತದೆಂದು ಹೇಳಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗ ನಾನೇನು ಹೇಳುತ್ತೇನೆಂದರೆ, ಕೆಲವು ಸುಧಾರಣೆಗಳನ್ನು ಮಾಡುವುದಕ್ಕೆ ಅವಕಾಶಗಳನ್ನು ಮಾಡಿಕೊಡಬೇಕು. ಅದರ ಅರ್ಥವೇನೆಂದರೆ, ನಾವು ಬಡವರ ಯೋಜನೆಗಳಲ್ಲಾಗಲಿ ಅಥವಾ ನೌಕರರ ಹಿತಾಸಕ್ತಿಯಲ್ಲಾಗಲೀ ನಾವು ಅದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

objection ಮಾಡಿಬಿಟ್ಟಿದ್ದೇವೆ. ನಾವು ಒಪ್ಪಿಕೊಂಡಿಲ್ಲ. ಉದಾಹರಣೆ ಸಹಿತವಾಗಿ ನಾವು ಸ್ಪಷ್ಟವಾಗಿ ಹೇಳಿದ್ದೇವೆ, ಮಾನ್ಯ ಸದಸ್ಯರು ನೋಡಬೇಕು.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ನಾನು ನೋಡಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ನೀವು ಈ ರೀತಿ clause ನ್ನು ತರುವುದಕ್ಕೆ ಸಾಧ್ಯವಿಲ್ಲ. ನಾವು ಅದಕ್ಕೆ ಒಪ್ಪಿಕೊಂಡಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಹೀಗಾಗಿ, ಈಗ ಇರುವಂಥ ವ್ಯವಸ್ಥೆ ಮುಂದುವರೆಯುತ್ತವೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಏಕೆಂದರೆ, ತಾವೇನು ಇದರಲ್ಲಿ ಸುಧಾರಣೆ ಮಾಡಬೇಕು ಎನ್ನತಕ್ಕಂಥದ್ದಿದೆ ಅದನ್ನು ರಾಜ್ಯ ಸರ್ಕಾರದಿಂದಲೇ ಮಾಡುವುದಕ್ಕೆ ಸಾಧ್ಯವಿದೆ. ಈ ವಿಧೇಯಕವನ್ನು ಒಪ್ಪಿಕೊಳ್ಳಬೇಕು ಎನ್ನತಕ್ಕಂಥದ್ದಲ್ಲ. ಒಂದುವೇಳೆ, ತಾವು ಅವರ ಕೈಗೆ ಅಧಿಕಾರವನ್ನು ಕೊಟ್ಟರೆ. . .

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಈಗ ನಮ್ಮ ರಾಜ್ಯದ concurrent list ನಲ್ಲಿ ನಮ್ಮ State Act and Central Act ಇರುತ್ತದೆ.

**Sri S.R.PATIL:-** State and the Central Government both have got the power.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, concurrent list ಏನಾದರೂ ಅಮೆಂಡ್ ಮಾಡಬೇಕಾದರೆ ಕೇಂದ್ರ ಸರ್ಕಾರ, ಎಲ್ಲಾ ರಾಜ್ಯಗಳ ಒಪ್ಪಿಗೆ ಪಡೆಯಬೇಕು. ಶೇ.50 ಗಿಂತ ಹೆಚ್ಚಿಗೆ ರಾಜ್ಯಗಳ ಒಪ್ಪಿಗೆ ಬಂದಾಗ ಮಾತ್ರ ಅದನ್ನು ಮಾಡುವುದಕ್ಕೆ ಸಾಧ್ಯ ಇದೆ. ಹೀಗಾಗಿ, ಅದನ್ನು objection ಮಾಡುವುದಕ್ಕೆ ನಮ್ಮ ರಾಜ್ಯಕ್ಕೆ ಅಧಿಕಾರ ಇದೆ. ಆ ಅಬ್ಜೆಕ್ಷನ್‌ನ್ನು ನಾವು ಮಾಡಿದ್ದೇವೆ. ನಮ್ಮ stand ಬಹಳ clear ಇದೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 18ನೇ ಮಾರ್ಚ್ 2021ರ ಸಮೂಹ–4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 129 ಪ್ರಶ್ನೆಗಳ ಪೈಕಿ, 45 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಲಿಖಿತ ಮೂಲಕ ನೀಡಲಾದ ಉತ್ತರಗಳ ಪಟ್ಟಿಯನ್ನು ಲಗತ್ತಿಸಿದೆ)**

**ಸಭಾಪತಿಯವರು:–** ಮಂಡಿಸಲಾಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸದನದಲ್ಲಿ ಹಾಜರಿರಬೇಕಾದ ಮಾನ್ಯ ಸಚಿವರುಗಳ ಹಾಗೂ ಅಧಿಕಾರಿಗಳ ಪಟ್ಟಿ**

ಈ ದಿನ ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಮಾನ್ಯ ಸಚಿವರುಗಳೆಂದರೆ, ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಇವರು ನನ್ನ ಅನುಮತಿಯನ್ನು ಪಡೆದುಕೊಂಡಿದ್ದಾರೆ; ಶ್ರೀ ಆರ್.ಅಶೋಕ್, ಮಾನ್ಯ ಕಂದಾಯ ಸಚಿವರು; ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಮುಜರಾಯಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು; ಶ್ರೀ ಉಮೇಶ್ ವಿ.ಕತ್ತಿ, ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು; ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ, ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು; ಶ್ರೀ ಆರ್.ಶಂಕರ್, ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು; ಶ್ರೀ ಶ್ರೀಮಂತ್ ಬಾಳಾ ಸಾಹಿಬ್ ಪಾಟೀಲ್, ಮಾನ್ಯ ಜವಳಿ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಶ್ರೀ ಆನಂದ್‌ಸಿಂಗ್, ಮಾನ್ಯ ಮೂಲಭೂತ ಸೌಲಭ್ಯಗಳು, ಹಜ್ ಮತ್ತು ವಕ್ಫ್ ಸಚಿವರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುರುಗೇಶ್ ಆರ್.ನಿರಾಣಿಯವರು ಆಸ್ಪತ್ರೆಗೆ ಹೋಗಿ ಬರುತ್ತೇನೆಂದು ಹೇಳಿದ್ದಾರೆ, ಬರುತ್ತಾರೆ.

**ಸಭಾಪತಿಯವರು:–** ಸಭಾನಾಯಕರೇ, ನೋಡಿ, ನಾನು ಹೇಳಬಾರದು, ಆದರೂ ಹೇಳುತ್ತೇನೆ. ನಾನು ಸದನದಲ್ಲಿ ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ಯಾರೋ ಒಬ್ಬರು Private Secretary or Clerk `ನನಗೆ ಪತ್ರ ಕೊಟ್ಟರೆ, ನಾನು ಒಪ್ಪುವುದಿಲ್ಲ. ಅವರು ಉತ್ತರ ಏನು ಕೊಟ್ಟಿದ್ದಾರೆ ಗೊತ್ತೇ? ಒಬ್ಬರು Private Secretary ಯವರು ನನಗೆ ಪತ್ರ ಕೊಟ್ಟಿದ್ದಾರೆ. ಮೊನ್ನೆ ತಾನೆ ಈ ರೀತಿ ಆಗಬಾರದೆಂದು ಹೇಳಿದ್ದೇನೆ. ಸಭಾಪತಿಯವರಿಗೆ ಒಬ್ಬರು Private Secretary ರವರು ಪತ್ರ ಬರೆಯುವ ಅವಶ್ಯಕತೆ ಇದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅವರು ನನಗೆ ಹೇಳಿ ಹೋಗಿದ್ದಾರೆ..

**ಸಭಾಪತಿಯವರು:–** ಸಭಾನಾಯಕರೇ, ಮತ್ತೆ ಅದನ್ನು ನನಗೆ ಏಕೆ ಕೊಡಬೇಕು? ನೀವೇ ಇದನ್ನು ತೆಗೆದುಕೊಂಡು ನೋಡಿ. ಮಾನ್ಯ ಸಚಿವರ Private Secretary ರವರು ನನಗೆ ಪತ್ರ ಕೊಟ್ಟರೆ ಹೇಗೆ? ಈ ರೀತಿ ಕೊಟ್ಟರೆ ಈ ಸದನಕ್ಕೆ ಗೌರವ ಇರುತ್ತದೆಯೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಒಬ್ಬರು Attender ಕಡೆಯಿಂದ ಒಂದು ಪತ್ರ ಬರೆಸಿ, ಆಗ ಸರಿಯಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಚಿವರ Private Secretary ರವರು ಪತ್ರ ಕೊಡುವುದಲ್ಲ, ಮಾನ್ಯ ಸಚಿವರೇ ಪತ್ರ ಕೊಡಬೇಕು. ಅದೇನು ಕೊಟ್ಟಿದ್ದಾರೋ ಗೊತ್ತಿಲ್ಲ.

**ಸಭಾಪತಿಯವರು:–** ನೀವೇ ನೋಡಿ, ಯಾರೋ ಒಬ್ಬರು Private Secretary ರವರಿಂದ ನನಗೆ ಪತ್ರ ಕಳುಹಿಸಿದ್ದಾರೆ. ಈ ರೀತಿ ಆಗಬಾರದೆಂದು ಮೊನ್ನೆ ಹೇಳಿದ್ದೇನೆ. ಈ ರೀತಿ ಇನ್ನೊಂದು ಬಾರಿ ನನಗೆ ಕೊಟ್ಟರೆ, ನಾನು ಬೇರೆಯೇ ಹೇಳಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಮತ್ತೊಬ್ಬರು Private Secretary ರವರು ತಮಗೆ ಪತ್ರ ಬರೆದಿದ್ದಾರೆಯೇ?

**ಸಭಾಪತಿಯವರು:–** ಹೌದು ರೀ. ಇದು ಏನು ಸದನವೋ, ಅಲ್ಲವೋ? ಮಂತ್ರಿಗಳಾದವರಿಗೆ ಜವಾಬ್ದಾರಿ ಇರಬೇಕು. ಇನ್ನೊಮ್ಮೆ ಈ ರೀತಿ ಯಾರಾದರೂ ಅಧಿಕಾರಿ ನನಗೆ ಪತ್ರ ಬರೆದರೆ, ನೇರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ. ಇದಕ್ಕೆ ಒಂದು ಕಿಮ್ಮತ್ತು ಬೇಡವೇ? ಮಾನ್ಯ ಸಭಾನಾಯಕರೇ, ದಯಮಾಡಿ ಸನದ ಘನತೆ–ಗೌರವವನ್ನು ಎತ್ತಿಹಿಡಿಯುವುದನ್ನು ಕಲಿಯುವುದಕ್ಕೆ ಹೇಳಿ. ನೇರವಾಗಿ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿ. ನಾನು ಎರಡನೇ ಬಾರಿಗೆ ಹೇಳುತ್ತಿದ್ದೇನೆ. ಇನ್ನು ಮುಂದೆ ಈ ರೀತಿ ಬಂದರೆ, ನಾನು ನೇರವಾಗಿ ಹೇಳಿಬಿಡುತ್ತೇನೆ. ಈಗ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ. ಆ ಪತ್ರ ಬರೆದಿರುವ ಅಧಿಕಾರಿಯ ಮೇಲೆ ಕ್ರಮ ಜರುಗಿಸಿ.

**ಸಭಾಪತಿಯವರು:–** ಇದು last. ಇನ್ನೊಮ್ಮೆ ಬಂದರೆ ನಾನು ಹೇಳುತ್ತೇನೆ.

**ಅಧಿವೇಶನ ಪ್ರಾರಂಭದಿಂದ ಮಧ್ಯಾಹ್ನದವರೆಗೆ ಹಾಜರಿರುವ ಅಧಿಕಾರಿಗಳು:**

ಶ್ರೀ ಸಿ.ಮೃತ್ಯುಂಜಯ ಸ್ವಾಮಿ, ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ; ಶ್ರೀ ಎಚ್.ಆರ್.ಮಹಾದೇವ್, ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ; ಶ್ರೀ ಜೆ.ವಿ.ನಂದನ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಮಾರ್, ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ; ಶ್ರೀಮತಿ ಹೇಮಲತಾ, ಸರ್ಕಾರದ ಉಪ ಕಾರ್ಯದರ್ಶಿ (ತಾಂತ್ರಿಕ) ಸಾರ್ವಜನಿಕ ಉದ್ದಿಮೆಗಳ ಇಲಾಖೆ.

**ಅಧಿವೇಶನ ಮಧ್ಯಾಹ್ನದಿಂದ ಮುಕ್ತಾಯದವರೆಗೆ ಹಾಜರಿರುವ ಅಧಿಕಾರಿಗಳು:**

ಶ್ರೀ ಎಸ್.ವೈ.ವಟಾವಟಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಸಂಪನ್ಮೂಲ ಇಲಾಖೆ; ಶ್ರೀ ಅನಿಲ್‌ಕುಮಾರ್, ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ; ಶ್ರೀಮತಿ ಎಮ್.ಶಿಲ್ಪ, ಸರ್ಕಾರದ ಜಂಟಿ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ. ಶ್ರೀ ಶಿವರುದ್ರಪ್ಪ, ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಪ್ರಾಥಮಿಕ, ಪ್ರೌಢ, ಉನ್ನತ ಶಿಕ್ಷಣ, ಕನ್ನಡ ಸಂಸ್ಕೃತಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಮತ್ತು ಪ್ರವಾಸೋದ್ಯಮ ಇಲಾಖೆ. ಇಷ್ಟು ಅಧಿಕಾರಿಗಳು ಮಧ್ಯಾಹ್ನದ ನಂತರ ಹಾಜರಿರಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ಅ)ವಿಷಯ:- ಕಲ್ಯಾಣ ಕರ್ನಾಟಕದಲ್ಲಿ ಮಕ್ಕಳು, ಗರ್ಭಿಣಿಯರು ಅಪೌಷ್ಟಿಕತೆಯಿಂದ ಬಳಲುತ್ತಿರುವ ಬಗ್ಗೆ.

----

**ಶ್ರೀ ಕೆ. ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ರಾಜ್ಯದಲ್ಲೇ ಕಲ್ಯಾಣ ಕರ್ನಾಟಕದಲ್ಲಿ ಅತಿ ಹೆಚ್ಚು ಮುಂದಿ ಮಕ್ಕಳು, ಬಾಣಂತಿಯರು, ಗರ್ಭಿಣಿಯರು ರಕ್ತಹೀನತೆಯಿಂದ ಬಳಲುತ್ತಿದ್ದು, ಅಪೌಷ್ಟಿಕತೆಯ ನಿವಾರಣೆಗಾಗಿ ಪ್ರತಿ ವರ್ಷ ನೂರು ಕೋಟಿ ರೂಪಾಯಿಗಳನ್ನು ಕಲ್ಯಾಣ ಕರ್ನಾಟಕ ಭಾಗಕ್ಕೆ ನೀಡುತ್ತಿರುವುದಾಗಿ ಸರ್ಕಾರ ಹೇಳುತ್ತಾ ಬಂದಿದೆ. ಹಾಗಿದ್ದರೆ ಇಷ್ಟು ಹಣ ಎಲ್ಲಿ ಹೋಗುತ್ತಿದೆ ಎಂಬುದು ಚಿದಂಬರ ರಹಸ್ಯವಾಗಿದೆ.

ಕೇಂದ್ರ ಸರ್ಕಾರದ ಪ್ರಸಕ್ತ ಸಾಲಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ, ರಾಜ್ಯದ ಮಕ್ಕಳಲ್ಲಿ ರಕ್ತಹೀನತೆ ಪ್ರಮಾಣ ಶೇ.59ರಷ್ಟಿದ್ದರೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೇ.72ರಷ್ಟಿದೆ. ಕಳೆದ ಮೂರು ವರ್ಷಗಳಲ್ಲಿ ಇದರ ನಿವಾರಣೆಗಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಭಾರಿ ಪ್ರಮಾಣದ ಅನುದಾನ ಬಂದರೂ ಅಪೌಷ್ಟಿಕತೆ ಕಡಿಮೆಯಾಗದೆ ಮತ್ತಷ್ಟು ಹೆಚ್ಚಾಗಿರುವುದು ಇಲಾಖೆಯ ವೈಫಲ್ಯವನ್ನು ಎತ್ತಿ ತೋರಿಸುತ್ತಿದೆ.

ಮಕ್ಕಳ ಅಪೌಷ್ಟಿಕತೆಯನ್ನು ಲೆಕ್ಕಹಾಕಿದರೆ ಕಲಬುರಗಿ ಜಿಲ್ಲೆಯಲ್ಲಿ ಶೇ.36.2, ಬೀದರ್‌ನಲ್ಲಿ ಶೇ.36.1, ರಾಯಚೂರಿನಲ್ಲಿ ಶೇ.40.7, ಕೊಪ್ಪಳದಲ್ಲಿ ಶೇ.45.8, ಯಾದಗಿರಿಯಲ್ಲಿ ಶೇ.45.2, ಬಳ್ಳಾರಿಯಲ್ಲಿ ಶೇ.36 ಒಟ್ಟಾರೆ ರಾಜ್ಯದ ಸರಾಸರಿ ಶೇ.32.9 ಇರುತ್ತದೆ.

ಸರ್ಕಾರ ಮಕ್ಕಳ ಮತ್ತು ಗರ್ಭಿಣಿಯರ ಮತ್ತು ಬಾಣಂತಿಯರ ಅಪೌಷ್ಟಿಕತೆ ಸಲುವಾಗಿ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ, ಇನ್ನು ಮುಂದೆ ಕೈಗೊಳ್ಳುತ್ತದೆ ಎಂಬ ವಿಷಯದ ಬಗ್ಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಸಿ.ಕೊಂಡಯ್ಯನವರು ಶೂನ್ಯವೇಳೆಯಲ್ಲಿ ಕೇಳಿದಂಥ ಪ್ರಶ್ನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

**ಸಭಾಪತಿಯವರು:-** ಆದಷ್ಟು ಬೇಗ ಉತ್ತರ ಕೊಡಿಸಿ.

**ಆ)ವಿಷಯ:-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.143ರಲ್ಲಿ ಬರುವ ಬಿ.ಬಿ.ಎಂ.ಪಿ ಸ್ವತ್ತುಗಳ ಬಗ್ಗೆ.

----

ಶ್ರೀ **ಪಿ.ಆರ್.ರಮೇಶ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ 143ರಲ್ಲಿ ಬರುವ ಬಿ.ಬಿ.ಎಂ.ಪಿ ಸ್ವತ್ತುಗಳಾದ,

1) ಆರ್.ವಿ.ರಸ್ತೆಯಲ್ಲಿರುವ ವಿಶ್ವೇಶ್ವರಪುರ ಮಾರಮ್ಮ ದೇವಸ್ಥಾನದ ಅಂಗಳ.
2) ಲಾಲ್‌ಬಾಗ್ ಫೋರ್ಟ್ ರಸ್ತೆಯಲ್ಲಿರುವ ನಂದಿನಿ ಹೋಟೆಲ್ ಹಾಗೂ ಬಿ.ಬಿ.ಎಂ.ಪಿ ಅಂಗಡಿ ಮಳಿಗೆ ಈ ಮದ್ಯೆ ಇರುವ ತ್ರಿಕೋನ ಆಕಾರದ ನಿವೇಶನ.
3) ನಾಗರಕಟ್ಟೆ ರಸ್ತೆಯ (ರೋಷನ್ ಬೇಗ್ ರಸ್ತೆ) ಅಶ್ವತ್ಥಕಟ್ಟೆ, ಆಂಜನೇಯ ದೇವಸ್ಥಾನ ಸುತ್ತ ಇರುವ ಕಟ್ಟಡಗಳು.
4) ಸಜ್ಜನರಾವ್ ಸರ್ಕಲ್ ಹತ್ತಿರ ಡೈಯೋಗನಲ್ ರಸ್ತೆ ಹಾಗೂ ಕನ್ನಿಕಾ ಪರಮೇಶ್ವರಿ ರಸ್ತೆ ಮದ್ಯೆ ಇರುವ ತಿಕೋನ ಆಕಾರದ ನಿವೇಶನ.

ಈ ಎಲ್ಲಾ ನಾಲ್ಕು ನಿವೇಶನಗಳು ಸುಮಾರು 25 ವರ್ಷಗಳಿಂದ ಪಾಲಿಕೆ ಸ್ವಾಧೀನಕ್ಕೆ ಪಡೆಯದೇ ಖಾಸಗಿ ವ್ಯಕ್ತಿಗಳ ಜೊತೆಗೆ ಕೈಜೋಡಿಸಿ ಸಾರ್ವಜನಿಕ ಸ್ವತ್ತನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಹಾಗೂ ಪಾಲಿಕೆ ಸ್ವಾಧೀನಪಡಿಸಿಕೊಳ್ಳಲು ವಿಳಂಬ ನೀತಿ ಹಾಗೂ ಧೋರಣೆ ಕುರಿತು ಪ್ರಸ್ತಾಪಿಸಿ ಅಗತ್ಯ ಮತ್ತು ಸೂಕ್ತ ಕ್ರಮಕೈಗೊಳ್ಳಲು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸರ್ಕಾರವನ್ನು ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಆರ್.ರಮೇಶ್‌ರವರು ಶೂನ್ಯವೇಳೆಯಲ್ಲಿ ಕೇಳಿದಂಥ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಲಾಗುವುದು.

**ಇ)ವಿಷಯ:-** ಉತ್ತರ ಕನ್ನಡ ಜಿಲ್ಲೆ ಜೊಯಿಡಾ ತಾಲ್ಲೂಕಿನ ಅಂಬೇವಾಡಿಯಿಂದ ಮೌಳಿಂಗವರೆಗಿನ ರಸ್ತೆ ಹಾಳಾಗಿರುವ ಬಗ್ಗೆ.

----

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಕಾರವಾರ ಜಿಲ್ಲೆಯ ಜೋಯಿಡ ತಾಲ್ಲೂಕಿನ ಅಂಬೇವಾಡಿಯಿಂದ ಮೌಳಿಂಗೆವರೆಗಿನ ಅಂದಾಜು 5 ಕಿ.ಮೀ ರಸ್ತೆಯು ಸಂಪೂರ್ಣವಾಗಿ ಹಾಳಾಗಿದ್ದು, ಇಲ್ಲಿ ದಿನನಿತ್ಯ ಬರುವ ಸಾವಿರಾರು ಪ್ರವಾಸಿಗರು ಹಾಳಾಗಿರುವ ಈ ರಸ್ತೆಯಿಂದ ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈಗಾಗಲೇ ಅತೀ ಹೆಚ್ಚು ಪ್ರವಾಸಿಗರನ್ನು ಸೆಳೆಯುವ ಈ ಮೌಳಿಂಗೆ ಪ್ರದೇಶ ಅರಣ್ಯದಿಂದ ಕೂಡಿದ್ದು, ಹಾಗೂ ಕಾಳಿ ನದಿ ಹರಿಯುವ ಪ್ರದೇಶವಾಗಿರುತ್ತದೆ. ಇಲ್ಲಿ ಅನೇಕ ರೆಸಾರ್ಟ್‌ಗಳು ಮತ್ತು ಹೋಮ್‌ಸ್ಟೇಗಳು ಪ್ರವಾಸೋದ್ಯಮ ಸಹಕಾರದಿಂದ ಪ್ರಾರಂಭ ಆಗಿರುವುದಲ್ಲದೆ, ಅರಣ್ಯ ಇಲಾಖೆಯಿಂದ ಕೂಡ ಈಕೋ ಪಾರ್ಕ್ ಎಂಬ ಅತ್ಯಂತ ಗಮನ ಸೆಳೆಯುವ ಪಾರ್ಕ್ ನಿರ್ಮಾಣವಾಗಿರುತ್ತದೆ. ಆದ್ದರಿಂದ ಈ ಸ್ಥಳಕ್ಕೆ ನಮ್ಮ ರಾಜ್ಯದಿಂದ ಹಾಗೂ ಬೇರೆ ಬೇರೆ ರಾಜ್ಯಗಳಿಂದ ಸಾವಿರಾರು ಪ್ರವಾಸಿಗರು ವಾರದ ಕೊನೆಯ ದಿನಗಳಲ್ಲಿ ಬರುತ್ತಿದ್ದು, ಅವರು ಈ ಪ್ರವಾಸಿ ತಾಣದ ರಸ್ತೆ ಸಂಪೂರ್ಣ ಹಾಳಾಗಿರುವುದರಿಂದ ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದು, ಈ ಬಗ್ಗೆ ಅಲ್ಲಿನ ಗ್ರಾಮಸ್ಥರು ಕೂಡ ಮೇಲಿಂದ ಮೇಲೆ ರಸ್ತೆ ಹಾಳಾಗಿರುವ ಬಗ್ಗೆ ರಿಪೇರಿ ಮಾಡಿಸಿಕೊಡಲು ಪ್ರತಿಭಟನೆಯನ್ನು ಮಾಡುತ್ತಿದ್ದಾರೆ.

ಇವೆಲ್ಲಾ ಕಾರಣಗಳಿಂದ ಈಗಾಗಲೇ ಅನೇಕ ಪ್ರವಾಸಿ ತಾಣದ ಅಭಿವೃದ್ಧಿಗೆ ಸಹಕರಿಸಿರುವ ಸರ್ಕಾರ ಈ ಪ್ರವಾಸಿ ತಾಣದ ಹಾಗೂ ದಿನನಿತ್ಯ ಬರುವ ಪ್ರವಾಸಿಗರ ಹಿತದೃಷ್ಟಿಯಿಂದ ಈಗಾಗಲೇ ಹಾಳಾಗಿರುವ ಈ 5 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಿಕೊಡಬೇಕೆಂದು ಸರ್ಕಾರವನ್ನು ವಿನಂತಿಸುತ್ತೇನೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(485)18.3.2021/12.40/ಎಂ.ಎಂ-ಎಂ.ಡಿ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಕಾಂತ್ ಎಲ್. ಘೋಟ್ನೇಕರ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಉಪಮುಖ್ಯಮಂತ್ರಿಯವರು ಮತ್ತು ಲೋಕೋಪಯೋಗಿ ಇಲಾಖೆ ಸಚಿವರಿಂದ ಉತ್ತರ ಕೊಡಿಸಲಾಗುವುದು.

**ಈ) ವಿಷಯ:- ಮಂಡ್ಯ ಜಿಲ್ಲೆಯಲ್ಲಿ ಕಳಪೆ ಗುಣಮಟ್ಟದ ಬೆಲ್ಲ ಉತ್ಪಾದನೆಯಿಂದ ಕೇರಳ ಮತ್ತು ಗುಜರಾತ್ ರಾಜ್ಯ ಬೆಲ್ಲ ಖರೀದಿ ನಿಷೇಧಿಸಿರುವ ಬಗ್ಗೆ.**

- - - - -

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸಕ್ಕರೆ ನಾಡು ಎಂದು ಕರೆಸಿಕೊಳ್ಳುವ ಮಂಡ್ಯ ಜಿಲ್ಲೆಯು ಬೆಲ್ಲ ಉತ್ಪಾದನೆಯಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ಜಿಲ್ಲೆಯಲ್ಲಿ 500ಕ್ಕೂ ಹೆಚ್ಚು ಆಲೆ ಮನೆಗಳು ಬೆಲ್ಲ ಉತ್ಪಾದನೆಯಲ್ಲಿ ತೊಡಗಿವೆ. ಆದರೆ ಇತ್ತೀಚೆಗೆ ಕೆಲವೇ ಕೆಲವು ಆಲೆ ಮನೆಗಳು ಕಳಪೆ ಗುಣಮಟ್ಟದ ರಾಸಾಯನಿಕಯುಕ್ತ ಬೆಲ್ಲ ಉತ್ಪಾದನೆ ಮಾಡುವ ಕುಖ್ಯಾತಿಯನ್ನು ಪಡೆಯುತ್ತಿದೆ. ನೆರೆಯ ಕೇರಳಾ ರಾಜ್ಯದ ಪಡಿತರ ಯೋಜನೆಯಡಿ ವಿತರಣೆಗೆ “ಮಂಡ್ಯ ಬೆಲ್ಲವೆಂಬ” ಬ್ರಾಂಡಿನಡಿಯಲ್ಲಿ ಎ.ಪಿ.ಎಂ.ಸಿ ವರ್ತಕರು ಬೆಲ್ಲ ಸರಬರಾಜು ಮಾಡುತ್ತಿದ್ದರು. ಆದರೆ ಕೇರಳ ರಾಜ್ಯವು ಮಂಡ್ಯ ಬೆಲ್ಲವನ್ನು ಮಾನವ ಬಳಕೆಗೆ ಯೋಗ್ಯವಲ್ಲ ಎಂಬ ಕಾರಣ ನೀಡಿ ಅಲ್ಲಿನ ಸರ್ಕಾರವು ಮಂಡ್ಯ ಬೆಲ್ಲವನ್ನು ತಿರಸ್ಕರಿಸಿದೆ. ಈಗಾಗಲೇ ಗುಜರಾತ್ ರಾಜ್ಯವು ಕೂಡ ಈ ಖರೀದಿಯನ್ನು ನಿಷೇಧ ಮಾಡಿದೆ. ಕೇರಳವು ನಿಷೇಧ ಮಾಡಿದ 2ನೇ ರಾಜ್ಯವಾಗಿದೆ. ಬೆಲ್ಲ ತಯಾರಿಕೆಯಲ್ಲಿ ನಿಷೇಧಿತ ರಾಸಾಯನಿಕ ಹಾಗೂ ಸಕ್ಕರೆ ಬಳಸಲಾಗಿದೆ ಎಂಬ ಅಂಶ ಪತ್ತೆಯಾಗಿರುವುದರಿಂದ ಕೇರಳ ಸರ್ಕಾರ ಈ ಖರೀದಿಯನ್ನು ಸ್ಥಗಿತಗೊಳಿಸಿದೆ.

ಒಂದು ಟನ್ ಕಬ್ಬಿನಿಂದ 40-50 ಬೆಲ್ಲವನ್ನು ತಯಾರಿಸಬಹುದು. ಅದರ ಜೊತೆಗೆ ಬೇರೆ ರಾಜ್ಯದ ಕಳಪೆ ಬೆಲ್ಲ ಮತ್ತು ಕಳಪೆ ಸಕ್ಕರೆಯನ್ನು ಬೆರೆಸಿ ಪುನರ್ ಉತ್ಪಾದನೆಯನ್ನು ಮಾಡುವ ಪ್ರಕ್ರಿಯೆ ನಡೆದಿದೆ. ಇದು ಹೊರರಾಜ್ಯಗಳಿಂದ ಬಂದು ಆಲೆ ಮನೆಯನ್ನು ನಡೆಸುತ್ತಿರುವ ಕೆಲವರ ಕುಚೋದ್ಯದ ಕೆಲಸವಾಗಿದೆ. ಕೆಲವು ವರ್ತಕರು ಈ ಕಾರ್ಯದಲ್ಲಿ ತೊಡಗಿದ್ದಾರೆ. ಈ ಮೂಲಕ ಮಂಡ್ಯ ಜಿಲ್ಲೆಯ ಮಂಡ್ಯ ಬ್ರ್ಯಾಂಡ್ ಹೆಸರನ್ನು ಹಾಳು ಮಾಡುತ್ತಿದ್ದಾರೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ರೀತಿ ಕಳಪೆ ಗುಣಮಟ್ಟದ ಬೆಲ್ಲ ಸೇವನೆಯು ಮಾನವನ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳನ್ನು ಬೀರುವ ಆತಂಕ ಜನರಲ್ಲಿದೆ. ಅಲ್ಲದೆ ಆತ್ಮ ನಿರ್ಭರ ಭಾರತ ಯೋಜನೆಯ 'ಒಂದು ಜಿಲ್ಲೆ ಒಂದು ಉತ್ಪನ್ನ'ದಡಿ ಮಂಡ್ಯ ಬೆಲ್ಲ ಆಯ್ಕೆಯಾಗಿದೆ. ಈ ಕುಕೃತ್ಯದಿಂದಾಗಿ ಈ ಯೋಜನೆಯ ಜಾರಿಗೆ ಕೂಡ ಹಿನ್ನಡೆಯಾಗಿದೆ.

ಇತ್ತೀಚಿಗೆ ಮನುಷ್ಯ ಸೇವಿಸುವ ಆಹಾರ ಪದಾರ್ಥಗಳು ಕಲುಷಿತಗೊಳ್ಳುತ್ತಿದ್ದು ಇದರಿಂದ ಜನ ಸಾಮಾನ್ಯರ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮಗಳು ಉಂಟಾಗುತ್ತಿದೆ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಈ ಬಗ್ಗೆ ಗಂಭೀರವಾಗಿ ಗಮನಹರಿಸಿ ಕಳಪೆ ಗುಣಮಟ್ಟದ ಆಹಾರ ಸಾಮಗ್ರಿಗಳ ಉತ್ಪಾದನೆಗೆ ಕಡಿವಾಣ ಹಾಕಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇದರ ವಿವರವಾದ ವರದಿ 'ಪ್ರಜಾವಾಣಿ' ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಟಿ. ಶ್ರೀಕಂಠೇಗೌಡರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

**ಉ) ವಿಷಯ:- ಮೈಸೂರಿನಲ್ಲಿರುವ ರಾಷ್ಟ್ರಕವಿ ಕುವೆಂಪುರವರ ಮನೆ "ಉದಯರವಿ"ಯನ್ನು ರಾಷ್ಟ್ರೀಯ ಸ್ಮಾರಕವಾಗಿ ಪರಿವರ್ತಿಸುವ ಬಗ್ಗೆ**

\- - - - -

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಕೆಳಕಂಡ ಸಾರ್ವಜನಿಕ ಮಹತ್ವದ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ವಿನಂತಿ ಮಾಡುತ್ತೇನೆ.

ಮೈಸೂರು ನಗರದ, ವಾಣಿವಿಲಾಸಪುರಂ ಬಡಾವಣೆಯಲ್ಲಿರುವ, ಕನ್ನಡ ನಾಡು, ನುಡಿ, ಸಾಹಿತ್ಯದ ಹೆಮ್ಮೆಯ ಪ್ರತೀಕ, ಪದ್ಮಭೂಷಣ ರಾಷ್ಟ್ರಕವಿ ಕುವೆಂಪು ಅವರ ಉದಯರವಿ ಮನೆಯನ್ನು ರಾಷ್ಟ್ರೀಯ ಸ್ಮಾರಕವಾಗಿ ಪರಿವರ್ತಿಸುವ ಬಗ್ಗೆ 2018-19ನೇ ಸಾಲಿನ ಆಯವ್ಯಯದಲ್ಲೇ ಘೋಷಣೆ ಮಾಡಿದ್ದರೂ, ಇದುವರೆಗೆ ಯಾವುದೇ ಕೆಲಸ ಆಗಿಲ್ಲ. ಇದರಿಂದ ಕುವೆಂಪು ಅಭಿಮಾನಿಗಳಿಗೆ, ಕನ್ನಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಹಿತಿಗಳು, ಕಲಾವಿದರು ಹಾಗೂ ಕನ್ನಡ ನಾಡಿನ ಜನತೆಗೆ ಬಹಳ ನಿರಾಸೆಯಾಗಿದೆ. ಉದಯರವಿ ಮನೆಯು ಈಚೆಗೆ ಶಿಥಿಲವಾಗುತ್ತಿದ್ದು, ಅತ್ಯಂತ ಮಹತ್ವಪೂರ್ಣವಾದ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವುಳ್ಳ ಈ ಮನೆಯನ್ನು, ಕುವೆಂಪು ಅವರ ಕುಟುಂಬದವರು ವಾರಸುದಾರರೊಡನೆ ಚರ್ಚಿಸಿ, ರಾಷ್ಟ್ರೀಯ ಸ್ಮಾರಕವನ್ನಾಗಿ ಪರಿವರ್ತಿಸಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಈ ಮನೆಗೆ ಭೂದಾನ ಚಳವಳಿಯ ಪ್ರವರ್ತಕ ವಿನೋಬಾಬಾವೆ ಸೇರಿದಂತೆ ಅನೇಕ ಪ್ರಮುಖ ಯುಗಪ್ರವರ್ತಕರು, ಸಾಧುಸಂತರು, ಸಾಹಿತಿಗಳು, ಕಲಾವಿದರು ಭೇಟಿ ನೀಡಿ ಕುವೆಂಪು ಅವರೊಡನೆ ಚರ್ಚಿಸಿದ್ದಾರೆ. ಕುವೆಂಪು ಅವರು ಈ ಮನೆಯಲ್ಲಿಯೇ ಕುಳಿತು ತಮ್ಮ ಎಲ್ಲಾ ಕೃತಿಗಳನ್ನು ರಚಿಸಿದ್ದಾರೆ. ಕುವೆಂಪು ಅವರಂತಹ ಸಾಹಿತ್ಯ ಋಷಿಗೆ ಇದು ಒಂದು ತಪೋವನವಾಗಿತ್ತು. ಈ ಕಟ್ಟಡದಲ್ಲಿ ಕುವೆಂಪು ಅವರ ಎಲ್ಲ ಕೃತಿಗಳು, ಅವರ ಹಸ್ತಪ್ರತಿಗಳು, ಅವರು ಉಪಯೋಗಿಸುತ್ತಿದ್ದ ವಸ್ತುಗಳು, ಅವರು ಬರೆದ ಪತ್ರಗಳು, ಅವರಿಗೆ ಬಂದಿರುವ ಪತ್ರಗಳು, ಅನೇಕ ಅಪರೂಪದ ಛಾಯಾಚಿತ್ರಗಳು ಎಲ್ಲವನ್ನೂ ವ್ಯವಸ್ಥಿತವಾಗಿ ಸಂರಕ್ಷಿಸಿ, ಜೋಡಿಸಿ, ಇಂದಿನ ಪೀಳಿಗೆಯವರಿಗೆ ಸ್ಫೂರ್ತಿದಾಯಕವಾಗುವ ಹಾಗೆ ಇಡಬೇಕು. ಮನೆಯ ಆವರಣದಲ್ಲಿ ಕುವೆಂಪು ಕನ್ನಡ ಸಾಹಿತ್ಯ ಮಾರಾಟ ಮಳಿಗೆಯನ್ನೂ ಆರಂಭಿಸಬೇಕು. ಮೈಸೂರು ನಗರದ ಪ್ರಮುಖ ಪ್ರವಾಸಿ ತಾಣ ಕುವೆಂಪು ಅವರ ಉದಯರವಿ ಮನೆ ಆಗಬೇಕು. ಈ ಬಗ್ಗೆ ಮಾನ್ಯ ಮಾಜಿ ಮುಖ್ಯಮಂತ್ರಿಯವರಾದ ಎಸ್.ಎಂ. ಕೃಷ್ಣ ಅವರು ಒತ್ತಾಯಿಸಿದ್ದಾರೆ. ಹಾಗೂ ಮೈಸೂರಿನಲ್ಲಿರುವ ಎಲ್ಲ ಸಾಹಿತಿಗಳು ಕಲಾವಿದರು ಅಭಿಮಾನಿಗಳು ಈ ಬಗ್ಗೆ ಮೊದಲಿನಿಂದಲೂ ಸರ್ಕಾರಕ್ಕೆ ಮನವಿ ಮಾಡಿಕೊಂಡು ಬರುತ್ತಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಕುವೆಂಪು ಅವರ ಕುಟುಂಬದ ಸದಸ್ಯರ ಜೊತೆ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸಂದೇಶ್ ನಾಗರಾಜುರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಊ) ವಿಷಯ:- ಕೇಂದ್ರ ಸರ್ಕಾರದ ಜಲಜೀವನ ಮಿಷನ್ ಯೋಜನೆ ಅಡಿಯಲ್ಲಿ ಗ್ರಾಮೀಣ ಪ್ರದೇಶಗಳ ಮನೆಮನೆಗೂ ನೀರು ಪೂರೈಕೆಯಲ್ಲಿ ರಾಜ್ಯ ಹಿಂದುಳಿದಿರುವ ಬಗ್ಗೆ.**

- - - - -

**ಶ್ರೀ ಯು.ಬಿ. ವೆಂಕಟೇಶ್(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕೇಂದ್ರ ಸರ್ಕಾರದ ಜಲಜೀವನ ಮಿಷನ್ ಯೋಜನೆಯಡಿ ಗ್ರಾಮೀಣ ಪ್ರದೇಶಗಳ ಪ್ರತಿ ಮನೆಗೂ ನಲ್ಲಿಯ ಮೂಲಕ ನೀರು ಪೂರೈಸುವಲ್ಲಿ ಕರ್ನಾಟಕವು ಇತರ ರಾಜ್ಯಗಳಿಗಿಂತ ಸಾಕಷ್ಟು ಹಿಂದೆ ಉಳಿದಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ.

ಕೇಂದ್ರ ಸರ್ಕಾರದ ಸಮೀಕ್ಷೆಯ ಪ್ರಕಾರ, ರಾಷ್ಟ್ರಾದ್ಯಂತ ಗ್ರಾಮೀಣರ ಮನೆಗಳ ನೀರು ಪೂರೈಕೆಯ ಪ್ರಮಾಣ ಶೇ. 36.83ರಷ್ಟಿದ್ದರೆ, ಕರ್ನಾಟಕದ ಶೇ.29.91 ರಷ್ಟಿದೆ. ಗ್ರಾಮಗಳಲ್ಲಿ ಮಾತ್ರ ನಲ್ಲಿಗಳ ಮೂಲಕ ನೀರು ಪೂರೈಕೆ ಇದೆ ಎಂಬುದಾಗಿ ಜಲಶಕ್ತಿ ಸಚಿವಾಲಯವು ಹೇಳಿರುತ್ತದೆ.

ಮನೆ ಮನೆಗೆ ನೀರು ಪೂರೈಸುವಲ್ಲಿ ಕರ್ನಾಟಕವು 19ನೇ ಸ್ಥಾನದಲ್ಲಿದ್ದು, ನೆರೆಯ ಗೋವಾ ಮತ್ತು ತೆಲಂಗಾಣಗಳು ಗ್ರಾಮೀಣ ಪ್ರದೇಶದ ಪ್ರತಿ ಮನೆಗೂ ನೀರು ಒದಗಿಸಿ ಶೇ.100ರಷ್ಟು ಸಾಧನೆ ತೋರಿ ಮೊದಲನೇ ಸ್ಥಾನದಲ್ಲಿದ್ದು ಕರ್ನಾಟಕ ಕಳಪೆ ಸಾಧನೆಯನ್ನು ಮಾಡಿರುತ್ತದೆ.

ಕೇಂದ್ರ ಸರ್ಕಾರದ ಜಲಜೀವನ್ ಮಿಷನ್ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ರಾಜ್ಯ ಸರ್ಕಾರ ವಹಿಸಿರುವ ನಿರ್ಲಕ್ಷ್ಯ ಮನೋಭಾವ ಹಾಗೂ ವೈಫಲ್ಯತೆಗೆ ಕಾರಣಗಳೇನು ಎಂಬ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಯು.ಬಿ. ವೆಂಕಟೇಶ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

**ಋ) ವಿಷಯ:- ರಾಯಚೂರು ಜಿಲ್ಲೆ ಮಾನ್ವಿ, ಸಿರವಾರ ಮತ್ತು ರಾಯಚೂರು ತಾಲ್ಲೂಕಿನಲ್ಲಿ ತುಂಗಭದ್ರ ನಾಲೆಯಿಂದ ನೀರು ಬರದಿರುವುದರಿಂದ ರೈತರಿಗೆ ತೊಂದರೆಯಾಗಿರುವ ಬಗ್ಗೆ.**

- - - - -

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಯಚೂರು ಜಿಲ್ಲೆಯ ಮಾನ್ವಿ, ಸಿರವಾರ ಮತ್ತು ರಾಯಚೂರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾಲ್ಲೂಕಿನಲ್ಲಿ ತುಂಗಭದ್ರಾ ನಾಲೆಯಲ್ಲಿ ರೈತರಿಗೆ ನೀರು ಬರದ ಕಾರಣ ಧರಣಿ ನಡೆಸಿರುತ್ತಾರೆ. ಈಗಾಗಲೇ ಕರ್ನಾಟಕ ನೀರಾವರಿ ನಿಗಮ ನಿಯಮಿತ ವ್ಯವಸ್ಥಾಪಕ ನಿರ್ದೇಶಕರು ಮಾರ್ಚ್ 30ರವರೆಗೆ ನೀರು ಕೊಡುತ್ತೇನೆಂದು ಐಸಿಸಿ ಸಭೆಯಲ್ಲಿ ಹೇಳಿದ್ದಾರೆ. ಇದನ್ನು ನಂಬಿ ರೈತರು ಬೆಳೆಗಳನ್ನು ಹಾಕಿರುತ್ತಾರೆ. ಈಗ ಬೆಳೆದ ಬೆಳೆಗಳಿಗೆ ನೀರು ಬರದೆ ಇರುವುದರಿಂದ ಬೆಳೆಗಳು ಒಣಗುತ್ತಿದ್ದು, ರೈತರಿಗೆ ಬಹಳ ನಷ್ಟ ಉಂಟಾಗಲಿದೆ. ಈ ಸಮಸ್ಯೆ ಬಗೆಹರಿಸಲು ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಮತ್ತು ಜಿಲ್ಲಾಧಿಕಾರಿ ರಾಯಚೂರು ಮತ್ತು ಎಸ್.ಪಿ., ರಾಯಚೂರು ಇವರಿಗೆ ರೈತರ ಜಮೀನಿಗೆ ನಾಲೆಗಳ ಮುಖಾಂತರ ನೀರು ಹರಿಸಲು ನಿರ್ದೇಶನ ನೀಡಿ ಆದೇಶಿಸಬೇಕೆಂದು ವಿನಂತಿಸಲಾಗಿದೆ ಮತ್ತು ತುರ್ತಾಗಿ ನಾಲೆಗಳ ಮುಖಾಂತರ ರೈತರ ಜಮೀನಿಗೆ ನೀರು ಹರಿಸಲು ತುರ್ತಾಗಿ ಕ್ರಮ ಜರುಗಿಸದಿದ್ದರೆ ಮಾನ್ವಿ, ಸಿರವಾರ, ರಾಯಚೂರು ತಾಲ್ಲೂಕಿನ ರೈತರಿಗೆ ಬಹಳ ನಷ್ಟ ಉಂಟಾಗುತ್ತೆ ಅಲ್ಲದೆ ರಾಯಚೂರು ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ. ಈ ಕೂಡಲೇ ಕ್ರಮ ಜರುಗಿಸಲು ಮಾನ್ಯ ಮುಖ್ಯಮಂತ್ರಿಗಳಿಗೆ ಕೋರಲಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಸವರಾಜ ಪಾಟೀಲ್ ಇಟಗಿಯವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಜಲಸಂಪನ್ಮೂಲ ಸಚಿವರಿಂದ ಉತ್ತರವನ್ನು ಕೊಡಿಸಲಾಗುವುದು.

**3.ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ**

**ಅ) ವಿಷಯ: ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಳ ಮಾಡುವ ಬಗ್ಗೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ದಿನಾಂಕ 16.3.2021 ರಂದು ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಪರವಾಗಿ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಇಂದು 20 ಪ್ರಶ್ನೆಗಳನ್ನು ಚರ್ಚೆಗೆ ತೆಗೆದುಕೊಂಡಿದ್ದು 20 ಪ್ರಶ್ನೆಗಳಿಗೂ ಉತ್ತರ ಬಂದಿದೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ಚುಕ್ಕೆರಹಿತ ಪ್ರಶ್ನೆಗಳನ್ನು ಕೇಳಿದ್ದೆ. 10-15 ದಿವಸಗಳಾದರೂ ಉತ್ತರ ಬಂದಿಲ್ಲ. 04 ಚುಕ್ಕೆರಹಿತ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಉತ್ತರ ಕಳುಹಿಸಿದ್ದಾರೆ.

**ಸಭಾಪತಿಯವರು:-** ಉತ್ತರಗಳನ್ನು ಆದಷ್ಟು ಬೇಗ ತರಿಸಿಕೊಡಬೇಕೆಂದು ಹೇಳಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಉತ್ತರಗಳನ್ನು ತರಿಸಿಕೊಡುತ್ತೇನೆ.

**ಸಭಾಪತಿಯವರು:-** ಈಗ ವರದಿಯನ್ನೊಪ್ಪಿಸುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 4.ವರದಿಯನ್ನೊಪ್ಪಿಸುವುದು

**ಶ್ರೀ ಎಂ.ಕೆ. ಪ್ರಾಣೇಶ್ (ಉಪಸಭಾಪತಿಯವರು):–** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿಯ ಅಧ್ಯಕ್ಷನಾದ ನಾನು 2019–20ನೇ ಸಾಲಿನ ಸಮಿತಿಯ 28ನೇ ವರದಿಯನ್ನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 215ರ ರೀತ್ಯಾ ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:–** ವರದಿಯನ್ನೊಪ್ಪಿಸಲಾಯಿತು.

**ಸಭಾಪತಿಯವರು:–** ಈಗ ವಿತ್ತೀಯ ಕಾರ್ಯಕಲಾಪಗಳು. ಮಾನ್ಯ ಸದಸ್ಯರಾದ ಎಸ್.ಎಲ್. ಭೋಜೇಗೌಡರು ಮಾತನಾಡುವುದು.

## 5. ವಿತ್ತೀಯ ಕಾರ್ಯಕಲಾಪ

### 2021–22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಮುಖ್ಯಮಂತ್ರಿಗಳು ತಮ್ಮ 8ನೇ ಆಯವ್ಯಯವನ್ನು ಅಂದರೆ 2021–22ನೇ ಸಾಲಿನ ಆಯವ್ಯಯವನ್ನು ಮಂಡಿಸಿರುವಂತಹ ಸಂದರ್ಭದಲ್ಲಿ ಶ್ರೀ ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗ ಕವನದೊಂದಿಗೆ ಪ್ರಾರಂಭ ಮಾಡಿದ್ದಾರೆ.

**(ಮುಂದು)**

**(486) 18–03–2021/ 12–50/ ಕೆಹೆಚ್–ಎಕೆ**

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):–**

**'ಸರ್ವ ಜನಾಂಗದ ಶಾಂತಿಯ ತೋಟ'** ಎಂಬ ವಾಕ್ಯವನ್ನು ರಾಷ್ಟ್ರಕವಿ ಕುವೆಂಪುರವರು ಮಾಡಿಕೊಟ್ಟಿದ್ದಾರೆ. ಈ ಆಯವ್ಯಯದಲ್ಲಿ ನಾನು ಇನ್ನು ಒಂದು ಮಾತನ್ನು ಸೇರಿಸುವುದಕ್ಕೆ ಇಷ್ಟಪಡುತ್ತೇನೆ. ಸುಮಾರು 945 ಕಗ್ಗಗಳನ್ನು ಒಳಗೊಂಡಿರುವಂತಹ ಮಾನ್ಯ ಡಿ.ವಿ.ಗುಂಡಪ್ಪನವರ ಕವನದಲ್ಲಿ ಇವರಿಗೆ 'ಆಧುನಿಕ ಸರ್ವಜ್ಞ' ಎಂದು ಕರೆಯುತ್ತಾರೆ. ಸಾಹಿತ್ಯ ಮತ್ತು ಪತ್ರಿಕೋದ್ಯಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾರ್ವಜನಿಕ ಜೀವನದಲ್ಲಿ ಸುಮಾರು 7 ದಶಕಗಳನ್ನು ಕಂಡಿರುವಂತಹ ಮಹಾನ್ ಸಾಹಿತಿ ಇವರು ಹೇಳುತ್ತಾರೆ.

"ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು
ದೊರೆತುದ ಹಾಸದವೆಂದುಣ್ಣ ಗೊಣಗಿಡದೆ
ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ
ಹೊರಡು ಕರೆ ಬರಲಳದೆ ಮಂಕುತಿಮ್ಮ"

ಎಂದು ಹೇಳುತ್ತಾರೆ.

"ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ"

ಈ ನಾಣ್ಣುಡಿ ಎಷ್ಟು ಅರ್ಥಗರ್ಭಿತವಾಗಿದೆ. ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಈ ಸಾಲುಗಳು ನನಗೆ ಸದಾ ಸ್ಫೂರ್ತಿ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ನಾವು ಯಾವ ಕೆಲಸವನ್ನು ಮಾಡಿದರೂ ಚಿಕ್ಕದು, ದೊಡ್ಡದು ಎಂದು ಹೇಳಬಾರದು. ಮನಸ್ಸಿಟ್ಟು ಶ್ರದ್ಧೆಯಿಂದ ಮಾಡಬೇಕು. ನಿಷ್ಠೆಯಿಂದ ಮಾಡುವ ಕೆಲಸ ಭಗವಂತನ ಪ್ರಸಾದ ಎಂದು ಮಾಡಬೇಕು. ಗೊಣಗಬಾರದು, ಬರೀ ನಾನು, ನನ್ನದು ಎನ್ನದೇ, ಕುಟುಂಬ ಎನ್ನುವ ಬಗ್ಗೆ ಯೋಚನೆ ಮಾಡಬಾರದು. ಲೋಕದ ಭಾರವನ್ನು ಹೊರಬೇಕು. ಪರಮಾರ್ಥವನ್ನು ಬಿಡದೇ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವುಗಳನ್ನು ಗಟ್ಟಿಯಾಗಿಟ್ಟುಕೊಂಡು ಕೆಲಸ ಮಾಡಬೇಕು. ಕರೆ ಬಂದಾಗ ಕಣ್ಣೀರು ಸುರಿಸದೇ ಸುಖವಾಗಿ ಭಗವಂತನ ಕಡೆಗೆ ಹೋಗಬೇಕು. ಕರ್ತವ್ಯ ನಿಷ್ಠೆಯಿಂದ ಭಗವಂತ ಕೊಟ್ಟ ಪ್ರಸಾದ ಎಂದು ಕೆಲಸ ಮಾಡಬೇಕೆಂದು ಮಂಕುತಿಮ್ಮನ ಕಗ್ಗದಲ್ಲಿ ಹೇಳಿದ್ದಾರೆ. ಲೋಕ ನನಗೆ ಅನ್ನವನ್ನು ಕೊಟ್ಟಿದೆ, ಲೋಕದ ಭಾರವನ್ನು ನಾನು ಹೊರಬೇಕು, ನನ್ನ ಜೀವನ ಕಷ್ಟ, ನಿಷ್ಠೆ, ಫಲಿತಾಂಶ ಬಂದಾಗ ಹಾಗೂ ವಿಶೇಷವಾದ ಕೆಲಸವನ್ನು ಮಾಡಿದಾಗ ವಿಶೇಷ ಸಾಮರ್ಥ್ಯ ಸಿಗುತ್ತದೆ. ಆಗ ಭಗವಂತನಿಗೆ ತೃಪ್ತಿಯಾಗುತ್ತದೆ ಎಂದು ಮಂಕುತಿಮ್ಮನ ಕಗ್ಗದಲ್ಲಿ ಹೇಳುತ್ತಾರೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಮಂಕುತಿಮ್ಮನ ಕಗ್ಗವನ್ನು 'ಭಗವದ್ಗೀತೆ' ಗೆ ಹೋಲಿಸುತ್ತಾರೆ. ಭಗವದ್ಗೀತೆಕ್ಕಿಂತ ಇನ್ನು ದೊಡ್ಡ ಗ್ರಂಥ ಎಂದರೆ, ನಮ್ಮ ಸಂವಿಧಾನ. ನಮ್ಮ ಸಂವಿಧಾನ ಮಹಾನ್ ಗ್ರಂಥ. ಆ ಸಂವಿಧಾನದ ಅಡಿಯಲ್ಲಿ ಕೆಲಸ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿರುವಂತಹ ಸಂದರ್ಭದಲ್ಲಿ ಭಗವದ್ಗೀತೆಗೆ ನಾವು ಎಷ್ಟು ಪ್ರಾಧ್ಯಾನತೆಯನ್ನು ಕೊಡುತ್ತೇವೆಯೋ, ಅದಕ್ಕಿಂತ ಹೆಚ್ಚಿನ ಪ್ರಾಧ್ಯಾನತೆಯನ್ನು ಸಂವಿಧಾನಕ್ಕೆ ಕೊಟ್ಟು, ಸಂವಿಧಾನಗಳ ಆಶಯಗಳಿಗೆ ಬದ್ಧವಾಗಿ ನಾವು ಕೆಲಸ ಮಾಡಬೇಕಾಗಿದೆ. ಸಂವಿಧಾನಗಳ ಆಶಯಗಳಿಗೆ ನಾವು ಕೆಲಸ ಮಾಡಬೇಕಾದಂತಹ ಸಂದರ್ಭದಲ್ಲಿ ಎಲ್ಲಿಯೂ ಲೋಪ ಬರದೇ ಇರುವಂತಹ ರೀತಿಯಲ್ಲಿ 'ಪಾಮರರಿಂದ ಪಂಡಿತ'ರವರೆಗೆ ಈ ಬಜೆಟ್ ಅನುಕೂಲವಾಗಬೇಕಾಗುತ್ತದೆ. ಇದರ ಆಶಯಗಳನ್ನು ಇಟ್ಟುಕೊಂಡು ಕೆಲಸ ಮಾಡುವಾಗ 'ಪಾಮರರಿಂದ ಪಂಡಿತ'ರವರೆಗೆ ಎಲ್ಲಿಯೂ ಕೂಡ ಲೋಪವಾಗದೇ ಇರುವ ರೀತಿಯಲ್ಲಿ ನಾವು ಕೆಲಸ ಮಾಡುವಾಗ ಸಂವಿಧಾನಕ್ಕೆ ಕೊಟ್ಟಂತಹ ಬಹು ದೊಡ್ಡ ಗೌರವ ಎಂದು ನಾವು ಭಾವಿಸಬೇಕಾಗುತ್ತದೆ. ನಾನು 2020ರ ಮಾರ್ಚ್ 5ನೇ ತಾರೀಖು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮಂಡಿಸಿದಂತಹ 7ನೇ ಬಜೆಟ್‌ನಲ್ಲಿರುವ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಮಹಿಳಾ ದಿನಾಚರಣೆಯ ದಿನ 8ನೇ ಬಜೆಟ್ ಅನ್ನು ಮಂಡನೆ ಮಾಡಿ ಸುಮಾರು 60 ಸಾವಿರ ಮಹಿಳೆಯರಿಗೆ ಉದ್ಯೋಗವನ್ನು ಒದಗಿಸುವಂತಹ ಕೆಲಸ ಆಗುತ್ತದೆ ಎಂದು 2021–22ನೇ ಸಾಲಿನ ಬಜೆಟ್‌ನಲ್ಲಿ ಹೇಳಿದ್ದಾರೆ. ಇದರ ಬಗ್ಗೆ ನಂತರ ಮಾತನಾಡುತ್ತೇನೆ. ಕಳೆದ ಬಾರಿಯ ಬಜೆಟ್‌ನಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾವಿಯಲ್ಲಿ ಮತ್ತು ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ನೂತನ ಜವಳಿ ಪಾರ್ಕ್ ಅನ್ನು ಪ್ರಾರಂಭಿಸಲಾಗುವುದು. ಇದ್ದರಿಂದ ಸುಮಾರು 3 ಸಾವಿರ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ ಎಂದು ಹೇಳಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರಾದ ಎಂ.ಕೆ.ಪ್ರಾಣೇಶ್‌ರವರು ಸಭಾಪೀಠವನ್ನು ಅಲಂಕರಿಸಿದರು)**

ಇದರ ಬಗ್ಗೆ ನಾವು ಗಮನಹರಿಸಬೇಕಾಗುತ್ತದೆ. 2020 ನೇ ಸಾಲಿನ ಬಜೆಟ್‌ಗೆ ನಾವು ನೀವೆಲ್ಲಾ ಸೇರಿ ಒಪ್ಪಿಗೆ ಕೊಟ್ಟಿರುವಂತಹ ಬಜೆಟ್ ಆಗಿದೆ. ಹಾವೇರಿ ಜಿಲ್ಲೆಯ ಶಿಗ್ಗಾವಿಯಲ್ಲಿ ಮತ್ತು ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ನೂತನ ಜವಳಿ ಪಾರ್ಕ್ ಅನ್ನು ಪ್ರಾರಂಭಿಸಲಾಗುವುದು ಎಂದು ಹೇಳಿದ್ದಾರೆ. ಮಾನ್ಯ ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರು ಅದೇ ಜಿಲ್ಲೆಯಲ್ಲಿ ಇದ್ದಾರೆ. ಅವರನ್ನು ಕೇಳಿ. ಅಲ್ಲಿ ಇನ್ನು ಜಾಗವನ್ನು ಗುರುತು ಮಾಡಲಿಲ್ಲ. ಮತ್ತೆ ಇದರಲ್ಲಿ 3 ಸಾವಿರ ಜನರಿಗೆ ಉದ್ಯೋಗ ಕೊಡುವುದು ಎಲ್ಲಿಂದ ಬಂತು? ಇದರ ಬಗ್ಗೆ ನಮಗೆ ದೊಡ್ಡದಾಗಿ ಹೇಳಿದ್ದೀರಿ. ತಾವು ಯಾರ ಕಣ್ಣು ಒರೆಸುವುದಕ್ಕೆ ಹೇಳಿದ್ದೀರಿ. ಇದರ ಬಗ್ಗೆ ಏನಾಯಿತು? ದಯಮಾಡಿ, ಇದಕ್ಕೆ ಉತ್ತರವನ್ನು ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ರೀತಿಯಾದರೆ ಹೇಗೆ? ನಾನು ಬಜೆಟ್‌ಗೆ ಬಹಳ ಗೌರವ ಕೊಡುತ್ತೇನೆ. ನಾನು ಭಗವದ್ಗೀತೆ ಎಂದು ಏಕೆ ಹೇಳಿದೆ?

"ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ"

ಎಲ್ಲರೊಳಗೊಂದಾಗು ಮಂಕುತಿಮ್ಮ ಇದೇ ನನಗೆ ಸ್ಫೂರ್ತಿ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದರು.

**ಉಪ ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ಯಾವುದೇ ಸಾಹಿತಿಗಳಿಗಿಂತಲೂ ಕಡಿಮೆ ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ ರೀತಿಯಾದರೆ ಹೇಗೆ? ದಯಮಾಡಿ, ನಾನು ಏಕೆ ಹೇಳುತ್ತಿದ್ದೇನೆ ಎಂದರೆ, 3 ಸಾವಿರ ಹುದ್ದೆಗಳನ್ನು ಸೃಷ್ಟಿ ಮಾಡುವಂತಹ ಯೋಜನೆ ಒಂದು taluk head quarter ನಲ್ಲಿ ಬಂದಿದೆ ಎಂದು ಸಂತೋಷವಾಗಿ ಕಾರ್ಕಳ ತಾಲ್ಲೂಕಿನವರು ಬಹಳ ಖುಷಿಯಾಗಿದ್ದರು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಮಾನ್ಯ ಉಪಸಭಾಪತಿಯವರು ಮಧ್ಯೆ ಮಧ್ಯೆ ಸ್ವಲ್ಪ ಟಾಂಗ್ ಕೊಡುತ್ತಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಸ್ವಲ್ಪ ಪ್ರಯತ್ನ ಮಾಡುತ್ತೇನೆ ಸ್ವಾಮಿ. ನಾನು ಇನ್ನೂ ಎಳಸು.

**ಉಪ ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ಯಾವುದರಲ್ಲಿ ಎಳಸು ಎಂದು ಹೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ದಯಮಾಡಿ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದು ಕಳೆದ ಬಾರಿ 2020-21ನೇ ಸಾಲಿನ ಬಜೆಟ್‌ನಲ್ಲಿ ಹೇಳಿರುವಂತಹದ್ದು. ಅದೇ ರೀತಿ horticulture

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಹೇಳುತ್ತಾ 10 ಶೀತಲ ಗೃಹಗಳ ಬಗ್ಗೆ ಕೊನೆಯ ಬಾರಿಯ ಬಜೆಟ್‌ನಲ್ಲಿ ಹೇಳಿದ್ದಾರೆ. ಅದರಲ್ಲಿ ಏನು ಪ್ರಗತಿಯಾಗಿದೆ ಎನ್ನುವ ವಿಚಾರದಲ್ಲಿ "ಸುಮಾರು ತೋಟಗಾರಿಕೆ ಬೆಳೆಗಳ ಅಸಮರ್ಪಕ ಕೊಯ್ಲೋತ್ತರ ನಿರ್ವಹಣೆ ಹಾಗೂ ಶೀತಲ ಗೃಹಗಳ ಕೊರತೆಯಿಂದ ಆಗುತ್ತಿರುವ ನಷ್ಟದ ಪ್ರಮಾಣವನ್ನು ಕಡಿಮೆಗೊಳಿಸಲು ಬೇಡಿಕೆಯಿರುವ ಜಿಲ್ಲೆಗಳ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ 5000 ಮೆಟ್ರಿಕ್ ಟನ್ ಸಾಮರ್ಥ್ಯದ 10 ಶೀತಲ ಗೃಹಗಳನ್ನು 75 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣ ಮಾಡಲಾಗುವುದು" ಎಂದು ಹೇಳಿದ್ದಾರೆ. ಕೋಲಾರ ಜಿಲ್ಲೆಯಿಂದ ಬಂದಿರುವಂತಹ ಎಂ.ಎಲ್.ಸಿ., ಬಹಳ ಜನರು ಇದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಬಗ್ಗೆ ತಮಗೆ ಗೊತ್ತಿದೆ. ಶಿವಮೊಗ್ಗ, ಕೋಲಾರ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಹಾಗೂ ಕೆಲವು ಒಳ್ಳೆ ಒಳ್ಳೆಯ ತಾಲ್ಲೂಕುಗಳಲ್ಲಿ ಇರುವಂತಹ ನೀರಾವರಿ ಜಾಗದಲ್ಲಿ ಬಹಳಷ್ಟು ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಾರೆ. ಕೋಲಾರ ಜಿಲ್ಲೆಗೆ ನಾವು ನೀರನ್ನು ಕೊಟ್ಟಿದ್ದೇವೆ. **(ಮುಂದು)**

**(487) 18/03/2021/ಎಸ್‌ಪಿಆರ್/ಎಕೆ/1:00** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):-**

ಇದರ ಬಗ್ಗೆ ಏನಾಯಿತೆಂದು ದಯಮಾಡಿ ತಿಳಿಸಬೇಕು. ಕಳೆದ ವರ್ಷದ ಆಯವ್ಯಯದಲ್ಲಿ ಸುಮಾರು 400 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬೆಂಗಳೂರು ನಗರದ ಆನಂದರಾವ್ ವೃತ್ತದಲ್ಲಿ 25 ಅಂತಸ್ತಿನ ಬಹುಮಹಡಿ ಕಟ್ಟಡವನ್ನು ನಿರ್ಮಿಸಿ, ಅದರೊಳಗೆ ಎಲ್ಲಾ ಸರ್ಕಾರಿ ಕಛೇರಿಗಳು ಬರುತ್ತವೆ ಎಂದು ಘೋಷಣೆ ಮಾಡಿ, ಹಣವನ್ನೂ ಸಹ ಮೀಸಲಿಟ್ಟಿದ್ದರು. ಆದರೆ ಆ ಹಣ ಏನಾಯಿತು? ಸದರಿ ಕಟ್ಟಡವನ್ನು ನಿರ್ಮಿಸಲಾಗಿದೆಯೇ ಅಥವಾ ಅಲ್ಲಿ ಯಾವುದಾದರೂ ಜಾಗ ಉಂಟೇ? ಇನ್ನೂ ಎಂ.ಓ.ಯು. ಸಹ ಆಗಿಲ್ಲ. ಕಳೆದ ಬಾರಿಯ ಆಯವ್ಯಯದಲ್ಲಿ ಈ ರೀತಿಯಾಗಿ ಘೋಷಿಸಲಾಗಿದೆ.

> ಬೆಂಗಳೂರಿನ ಆನಂದರಾವ್ ವೃತ್ತದಲ್ಲಿ ಸರ್ಕಾರದ ಕಛೇರಿಗಳನ್ನು ಒಂದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ 25 ಅಂತಸ್ತುಗಳ ಬಹುಮಹಡಿಯ "ಅವಳಿ ಗೋಪುರ"ವನ್ನು 400 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ 2020-21 ನೇ ಸಾಲಿನಲ್ಲಿ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಕ್ರಮವಹಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಾನು ಅದೇ ರಸ್ತೆಯಲ್ಲಿ ಓಡಾಡುತ್ತಿದ್ದು, ನನಗೆ ಅವಳಿ ಗೋಪುರಗಳು ಕಂಡಿರುವುದಿಲ್ಲ. ಒಂದು ವೇಳೆ ನಿಮಗೇನಾದರೂ ಕಾಣಿಸಿದರೆ ದಯಮಾಡಿ ನನಗೆ ತಿಳಿಸಿ. ಇದನ್ನು ಘೋಷಿಸಿ ಒಂದು ವರ್ಷ ಕಳೆದು ಪುನಃ ಬೇರೆ ವರ್ಷದ ಆಯವ್ಯಯವನ್ನು ಮಂಡಿಸಲಾಗಿದೆ. ಆದರೆ ಅದಕ್ಕೆ ಸಂಬಂಧಪಟ್ಟಂತೆ ಇನ್ನೂ ಎಂ.ಓ.ಯು. ಸಹ ಆಗಿಲ್ಲ. 1,250 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಕ್ರಮವಾಗಿ 60:40 ರ ಅನುಪಾತದಲ್ಲಿ ಎಂ.ಓ.ಯು. ಅನ್ನು ಮಾಡಿಕೊಳ್ಳಲು ಯಾರೋ ಮುಂದೆ ಬಂದಿದ್ದಾರೆಂದು ನಾನು ಕೇಳಿದ್ದೇನೆ. ಕಳೆದ ವರ್ಷದಲ್ಲಿ ಮೀಸಲಿಟ್ಟ 400 ಕೋಟಿ ರೂಪಾಯಿಗಳು ಏನಾಯಿತು? ಈ ವಿಚಾರದ ಬಗ್ಗೆಯೂ ಸಹ ತಿಳಿಸಬೇಕು.

‘ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಪಾವಿನಕುರ್ವೆ/ಬೇಲೆಕೇರಿ ಬಂದರನ್ನು ಖಾಸಗಿ ಸಹಭಾಗಿತ್ವದಲ್ಲಿ ಸುಮಾರು 2,500 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಬಿಡ್ ಆಹ್ವಾನಿಸಲಾಗುವುದು’ ಎಂಬುದಾಗಿ ಕಳೆದ ವರ್ಷದ ಆಯವ್ಯಯದಲ್ಲಿ ಘೋಷಿಸಲಾಗಿತ್ತು. ಇದನ್ನು ಇನ್ನೂ ತೆರೆಯಲಿಲ್ಲ ಹಾಗೂ ಯಾವುದೇ ರೀತಿಯ ರೂಪುರೇಷೆಗಳನ್ನು ಇನ್ನೂ ಸಹ ಸಿದ್ಧಪಡಿಸಿಲ್ಲ. ಸದರಿ 2,500 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ನೀಡಿದೆಯೇ ಅಥವಾ ರಾಜ್ಯ ಸರ್ಕಾರ ನೀಡಿದೆಯೇ ಎಂಬ ಅಂಶದ ಬಗ್ಗೆ ನಾನು ಕೇಳುವುದಕ್ಕೆ ಬಯಸುತ್ತೇನೆ.

ಮುಂದುವರೆದು ಸಣ್ಣ ಮತ್ತು ಮಧ್ಯಮ ಕಾಫಿ ಮತ್ತು ಟೀ ಬೆಳೆಗಾರರ 10 ಹೆಚ್.ಪಿ.ವರೆಗಿನ ಪಂಪ್ ಸೆಟ್‌ಗಳ ವಿದ್ಯುತ್ ಶುಲ್ಕವನ್ನು ಮರುಪಾವತಿಸಲು ಒಂದು ಯೋಜನೆಯನ್ನು ರೂಪಿಸಲಾಗುವುದು ಎಂದು ಉಲ್ಲೇಖಿಸಲಾಗಿದೆ. ಕಾಫಿ ಮತ್ತು ಟೀ ಬೆಳೆಗಾರರ ಸಮಸ್ಯೆ ಏನು ಎಂದು ತಮಗೆ ತಿಳಿದಿದೆ. ಯಾವುದೇ ರೈತರ ಸಮಸ್ಯೆಗಳು ವಿಭಿನ್ನವಾಗಿಲ್ಲ. ಅದರಲ್ಲೂ ವಿಶೇಷವಾಗಿ ಕಾಫಿ ಬೆಳೆಗಾರರ ಸಮಸ್ಯೆಯಂತೂ ಇವತ್ತಿನ ದಿವಸ ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿದೆ. ಇದೇ ವಿಚಾರವಾಗಿ ಇತ್ತೀಚೆಗೆ ಶ್ರೀಮತಿ ಎಸ್.ವೀಣಾ ಅಚ್ಚಯ್ಯರವರು ಪ್ರಶ್ನೆಯೊಂದನ್ನು ಕೇಳಿದ್ದರು. ಮಾನ್ಯ ಸದಸ್ಯರು 10 ಹೆಚ್.ಪಿ.ವರೆಗಿನ ಮೋಟರ್‌ನ ವಿದ್ಯುತ್ ಶುಲ್ಕವನ್ನು ಮನ್ನಾ ಮಾಡಬೇಕೆಂದು ಸರ್ಕಾರವನ್ನು ಕೇಳಿದರು. ಇದನ್ನು ಎಲ್ಲಿ ಮಾಡಲಾಗಿದೆ. ಇದರ ಬಗ್ಗೆ ಇವತ್ತಿನವರೆಗೆ ಯಾವುದೇ ರೀತಿಯ ಸರ್ಕಾರಿ ಆದೇಶಗಳು ಹೊರಬಂದಿರುವುದಿಲ್ಲ. ಇದರ ಬಗ್ಗೆ ಸರ್ಕಾರವು ಗಮನಹರಿಸಬೇಕೆಂದು ನಾನು ಹೇಳುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳೆದ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡ ಘೋಷಣೆಯನ್ನು ಮಾಡಲಾಗಿತ್ತು.

> ಬೆಂಗಳೂರು ಜಲಮಂಡಲಿಯ ತ್ಯಾಜ್ಯ ನೀರು ಸಂಸ್ಕರಣೆಯ ಸಾಮರ್ಥ್ಯವು 2016-17ರಲ್ಲಿ 721 ದಶಲಕ್ಷ ಲೀಟರ್ ಇದ್ದು, 2019-20ರ ಅಂತ್ಯಕ್ಕೆ 1137 ದಶಲಕ್ಷ ಲೀಟರ್‌ಗೆ ಹೆಚ್ಚಿಸಲಾಗಿರುತ್ತದೆ. ಈ ಸಾಮರ್ಥ್ಯವನ್ನು 2020-21ನೇ ಸಾಲಿನ ಅಂತ್ಯಕ್ಕೆ 1587 ದಶಲಕ್ಷ ಲೀಟರ್‌ಗೆ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ. ಹಳೆಯ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು 1000 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪುನರುಜ್ಜೀವನ ಹಾಗೂ ನವೀಕರಿಸಲಾಗುವುದು. ಇದರಿಂದ ಬೆಂಗಳೂರು ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಪೂರ್ಣ ಪ್ರಮಾಣದಲ್ಲಿ ಸಂಸ್ಕರಿಸಬಹುದಾಗಿದ್ದು, ಇದರಿಂದ ನಗರದ ಎಲ್ಲಾ ಕೆರೆಗಳ ಗತವೈಭವವು ಮರುಕಳಿಸಿದಂತಾಗುತ್ತದೆ.

ಆಯವ್ಯಯವನ್ನು ಸಿದ್ಧಪಡಿಸುವಾಗ, ಇಲಾಖೆಯ ಅಧಿಕಾರಿಗಳು ಬಹಳ ಚೆನ್ನಾಗಿ ಶಬ್ದಗಳನ್ನು ಜೋಡಿಸಿ ಸಿದ್ಧಪಡಿಸುತ್ತಾರೆ. ಕೆಲವೊಂದು ಬಾರಿ ಅಂಕಿಗಳನ್ನು ವ್ಯತ್ಯಾಸ ಮಾಡಿ, ಹಿಂದಿನ ವರ್ಷ ಮತ್ತು ಮುಂದಿನ ವರ್ಷಗಳಲ್ಲಿ ಅವುಗಳನ್ನು ಸೇರಿಸುತ್ತಾರೆ. ಕೆಲವೊಮ್ಮೆ ಮಧ್ಯದಲ್ಲಿಯೂ ಸಹ ಅಂಕಿಗಳನ್ನು ಸೇರಿಸುತ್ತಾರೆ. ಇಲ್ಲಿ ಕೇವಲ ಅಂಕಿಗಳಷ್ಟೇ ವ್ಯತ್ಯಾಸವಾಗಿದ್ದು, ಯಾವುದೇ ರೀತಿಯ ಕೆಲಸಗಳಾಗಿರುವುದಿಲ್ಲ. ಬೆಂಗಳೂರಿನ ಸದಸ್ಯರು ಇದರ ಬಗ್ಗೆ ತಿಳಿಸಬೇಕು ಏಕೆಂದರೆ, ನಾನು ಬೆಂಗಳೂರಿನವನಲ್ಲ. ಇದರ ಬಗ್ಗೆ ನನಗೆ ಗೊತ್ತಿಲ್ಲ. ಮಾನ್ಯ ನಾರಾಯಣಸ್ವಾಮಿಯವರೇ, ಬೆಂಗಳೂರಿನ ಗತವೈಭವವು ಯಾವ ಕೆರೆಯಲ್ಲಿ ಮರುಕಳಿಸುತ್ತಿದೆ ಎಂಬುದು ನನಗೆ ತಿಳಿದಿಲ್ಲ. ಅದು ಸಾವಿರ ಕೋಟಿ ರೂಪಾಯಿಗಳ ಯೋಜನೆಯಾಗಿದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇಲಾಖೆಯ ಅಧಿಕಾರಿಗಳು ಬರೆದುಕೊಟ್ಟಿರುವುದನ್ನು ಮಂತ್ರಿಗಳು ಓದುವುದಲ್ಲ. ಸಂವಿಧಾನದ ಆಶಯಗಳಿಗನುಗುಣವಾಗಿ ನಾವು ಕೆಲಸಗಳನ್ನು ಮಾಡಬೇಕಾಗುತ್ತದೆ. ಮಹಾನ್ ಸಾಹಿತಿಗಳಾದ ದಿವಂಗತ ಡಿ.ವಿ.ಗುಂಡಪ್ಪರವರ ವಾಚನವನ್ನು ಇಲ್ಲಿ ಪ್ರಸ್ತಾಪಿಸಿದ ಮೇಲೆ, ಎಲ್ಲರ ಬಾಳಿನಲ್ಲಿ ಬೆಲ್ಲ-ಸಕ್ಕರೆಯಾಗಲೇ ಬೇಕು. ಮಾನ್ಯ ಮುಖ್ಯಮಂತ್ರಿಗಳು ಎಲ್ಲರ ಬಾಳಿನಲ್ಲಿ ಬೆಲ್ಲ-ಸಕ್ಕರೆಯಂತಾಗಬೇಕು ವಿನಾ ಕಹಿಯಾಗಬಾರದು. ಇಂತಹ ಮಹತ್ವಾಕಾಂಕ್ಷೆಯಿಂದ ಪ್ರಸ್ತುತ ಆಯವ್ಯಯವನ್ನು ಅವರು ಮಂಡಿಸಿದ್ದಾರೆ. ಶ್ರೀಯುತ ಬಿ.ಎಸ್.ಯಡಿಯೂರಪ್ಪನವರು ರೈತ ಪರ ಹೋರಾಟದಿಂದ ಬಂದವರಾಗಿದ್ದಾರೆ. ಅವರು ಯಾವುದೇ ಅಧಿಕಾರವನ್ನು ಹೋರಾಟದಿಂದ ಪಡೆದುಕೊಂಡಿದ್ದಾರೆ. ಅವರು ಬಹಳ ಕಷ್ಟಪಟ್ಟು ದುಡಿಮೆ ಮಾಡಿದವರಾಗಿದ್ದಾರೆ. ಹೀಗಾಗಿ ಅವರು ಮಂಡಿಸಿದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆಯವ್ಯಯವು ಯಾವತ್ತಿಗೂ ಸಹ ಹುಸಿಯಾಗಬಾರದು ಎಂಬ ಭಾವನೆ ನನ್ನದಾಗಿದೆ. ಅವರು ಮಂಡಿಸಿದ ಆಯವ್ಯಯವು ಅಕ್ಷರಶಃ ಸತ್ಯವಾಗಿರಬೇಕು ಎನ್ನುವುದು ನನ್ನ ಮನದಾಳದ ಮಾತಾಗಿದೆ. **“ಹೃದಯ ಹೃದಯಗಳ ವಾತ್ಸಲ್ಯಕ್ಕೆ ಕೊಂಡಿಯ ಅವಶ್ಯಕತೆ ಇದೆ ಅದು ಯಾವಾಗ ಎಂದರೆ ಒಬ್ಬರೊಬ್ಬರನ್ನು ಅರಿತಾಗ ಮಾತ್ರ”** ಎನ್ನುವ ನಾಣ್ಣುಡಿಗೆ ಒತ್ತು ಕೊಟ್ಟು ಕೆಲಸವನ್ನು ಮಾಡುವ ಸರ್ವ ಶಕ್ತಿಯನ್ನು ಹೊಂದಿದ ಶ್ರೀಯುತ ಯಡಿಯೂರಪ್ಪನವರು ಅಧಿಕಾರಿಗಳು ಬರೆದಿರುವುದನ್ನು ಓದುವ ಕೆಲಸಗಳನ್ನು ಮಾಡಬಾರದು. ಇಲಾಖೆಯ ಅಧಿಕಾರಿಗಳು ಬರೆದು ಕೊಟ್ಟಿರುವುದನ್ನು ಜಾರಿಗೊಳಿಸುವಾಗ ಕರಾರುವಕ್ಕಾಗಿ ಶ್ರೀಯುತರು ಮುನ್ನುಡಿಯನ್ನು ಬರೆಯಲೇಬೇಕಾಗುತ್ತದೆ. 8 ನೇ ಆಯವ್ಯಯವನ್ನು ಮಂಡಿಸಿದ ಕೀರ್ತಿ ಶ್ರೀ ಬಿ.ಎಸ್.ಯಡಿಯೂರಪ್ಪನವರದ್ದು ಎಂಬುದಾಗಿ ಹೇಳುತ್ತಾರೆ. ಆದರೆ ಶ್ರೀ ಸಿದ್ಧರಾಮಯ್ಯನವರು 13 ಆಯವ್ಯಯಗಳನ್ನು ಮಂಡಿಸಿದ್ದಾರೆ. 8 ಅಲ್ಲ, 80 ಆಯವ್ಯಗಳನ್ನು ಮಂಡಿಸಿದ್ದರೂ what is the result? What is the outcome of the budget? That is very important. ಘೋಷಣೆಯಾಗಿರುವ ಯೋಜನೆಗಳು ಜಾರಿಗೆ ಬರದಿದ್ದರೆ, 8 ಆಯವ್ಯಗಳನ್ನು ಮಂಡಿಸಿದ್ದರೇನು? 80 ಆಯವ್ಯಗಳನ್ನು ಮಂಡಿಸಿದ್ದರೇನು? ಹೀಗಾಗಿ ಘೋಷಿಸಿದ ಯೋಜನೆಗಳ ಬಗ್ಗೆ ಬೆಳಕನ್ನು ಚೆಲ್ಲಬೇಕಾಗುತ್ತದೆ ಹಾಗೂ ಇದರ ಬಗ್ಗೆ ಯೋಚನೆಯನ್ನು ಮಾಡಬೇಕಾಗುತ್ತದೆ. ನಾಳೆಯ ದಿನ ಇದರ ಬಗ್ಗೆ ಜನ ಮಾತನಾಡಬಾರದು. ಆಯವ್ಯಯದಲ್ಲಿ ಘೋಷಿಸಿದ್ದಾರೆ ಎಂದರೆ, ಅದು ಒಂದು ಅಥವಾ ಎರಡು ವರ್ಷದಲ್ಲಿ ಜಾರಿಯಾಗಲೇಬೇಕು. ಆದರೆ ಕೆಲವು ಯೋಜನೆಗಳನ್ನು ಇನ್ನೂ ಸಹ ಪ್ರಾರಂಭಿಸಿಲ್ಲ.

ಕಳೆದ ಸಾಲಿನ ಆಯವ್ಯಯದಲ್ಲಿ ಪತ್ರಕರ್ತರ ಕ್ಷೇಮಾಭಿವೃದ್ಧಿಗಾಗಿ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ ಐದು ಕೋಟಿ ರೂಪಾಯಿಗಳನ್ನು ನೀಡಲಾಗುವುದು ಎಂಬುದಾಗಿ ಘೋಷಿಸಿದ್ದರು. ಆ ಪೈಕಿ 20 ಪತ್ರಕರ್ತರಿಗೆ ನೀಡಿದ್ದು, ಕಳೆದ ವರ್ಷದಲ್ಲಿಯೇ ಇನ್ನೂ 11 ಪತ್ರಕರ್ತರಿಗೆ ನೀಡುವುದು ಬಾಕಿ ಇರುತ್ತದೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿಯೂ ಸಹ ಪತ್ರಕರ್ತರ ಕ್ಷೇಮಾಭಿವೃದ್ಧಿಗಾಗಿ ಐದು ಕೋಟಿ ರೂಪಾಯಿಗಳನ್ನು ಮೀಸಲಿಡಲಾಗುವುದು ಎಂದು ತಿಳಿಸಿದ್ದಾರೆ. ಇದನ್ನು ಹೆಚ್ಚುವರಿಯಾಗಿ ಇನ್ನೂ ಐದು ಕೋಟಿ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಪತ್ರಕರ್ತರಿಗೆ ಖಾಸಗಿಯಾಗಿಯೂ ಸಹ ಅನುದಾನವನ್ನು ನೀಡಿದ್ದಾರೆ. ಹೀಗಾಗಿ ಆಯವ್ಯಯದಲ್ಲಿ ಐದು ಕೋಟಿ ರೂಪಾಯಿಗಳನ್ನು ಎಂಬುದಾಗಿ ತೋರಿಸಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸಂಗತಿಯು ನನಗೆ ತಿಳಿದಿಲ್ಲ. ಐತಿಹಾಸಿಕ ಪ್ರವಾಸಿ ತಾಣವಾದ ಬಾದಾಮಿಯ ಸಮಗ್ರ ಅಭಿವೃದ್ಧಿಗಾಗಿ 25 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಯೋಜನೆ ರೂಪಿಸಿ ಅನುಷ್ಠಾನಗೊಳಿಸಲಾಗುವುದು ಎಂಬುದಾಗಿ ಕಳೆದ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿತ್ತು. ಸದನದಲ್ಲಿ ಬಾದಾಮಿ ಕ್ಷೇತ್ರದವರು ಇದ್ದರೆ ದಯಮಾಡಿ ಇದರ ಬಗ್ಗೆ ತಿಳಿಸಬೇಕು. ಇದಕ್ಕೆ ಸಂಬಂಧಪಟ್ಟಂತೆ ನಾನು ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ಎಲ್ಲಾ ಜಿಲ್ಲಾಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಸ್ವಲ್ಪಮಟ್ಟಿಗೆ ಮಾಹಿತಿಯನ್ನು ಕಲೆಹಾಕುವಂತಹ ಪ್ರಯತ್ನವನ್ನು ನಾನು ಮಾಡಿದ್ದೇನೆ. ಸಂಗ್ರಹಿಸಿದ ಎಲ್ಲಾ ಮಾಹಿತಿಯನ್ನು ನಾನು ಇಟ್ಟುಕೊಂಡಿದ್ದೇನೆ. ನಂತರದಲ್ಲಿ ಅವುಗಳನ್ನು ತೋರಿಸುತ್ತೇನೆ. ಹೀಗೆ ಘೋಷಿಸಿದ ಯೋಜನೆಗಳ ಬಗ್ಗೆ ಈಗಲಾದರೂ ಕೆಲಸಗಳನ್ನು ಮಾಡಬೇಕು. ಅನುದಾನವನ್ನು ಮೀಸಲಿರಿಸಿ ಆಯವ್ಯಯದಲ್ಲಿ ಘೋಷಿಸಲಾಗಿರುತ್ತದೆ. ಹೀಗಾಗಿ ಇಂತಹ ಯೋಜನೆಗಳ ಕೆಲಸಗಳನ್ನು ಪ್ರಾರಂಭಿಸಲಿ, ನಂತರದಲ್ಲಿ ಅವುಗಳು ಯಾವಾಗ ಪೂರ್ಣಗೊಳ್ಳುತ್ತವೆಯೋ ನೋಡೋಣ.

ಹಿಂದಿನ ಸಾಲಿನ ಆಯವ್ಯಯದಲ್ಲಿ ಶೋಲಾ ಅರಣ್ಯ, ತಾವರೆಕೊಪ್ಪ ಹುಲಿಧಾಮದ ಬಗ್ಗೆ ಸಹ ಘೋಷಿಸಲಾಗಿತ್ತು. ಆ ಭಾಗವನ್ನು ಪ್ರತಿನಿಧಿಸುವ ಶ್ರೀ ಎಸ್.ರುದ್ರೇಗೌಡರು ಪ್ರಸ್ತುತ ಸದನದಲ್ಲಿದ್ದಾರೆ. ರಣಹದ್ದು ಸಂತತಿಯನ್ನು ಅಭಿವೃದ್ಧಿ ಪಡಿಸಲು ರಾಮನಗರ ಜಿಲ್ಲೆಯಲ್ಲಿ 2.5 ಕೋಟಿ ರೂಪಾಯಿಗಳ ಯೋಜನೆಯನ್ನು ಘೋಷಿಸಿದ್ದಾರೆ. ಮಂಗಗಳ ಪುನರ್ವಸತಿ ಕೇಂದ್ರವನ್ನು ಮಾಡಬೇಕೆಂದು ಯೋಜನೆ ರೂಪಿಸಲಾಗಿದೆ. ಅದಕ್ಕೆ ಸಂಬಂಧಿತ ಸಭೆಯಲ್ಲಿ ನನ್ನ ಜೊತೆಗೆ ಮಾನ್ಯ ಉಪಸಭಾಪತಿಗಳೂ ಸಹ ಭಾಗವಹಿಸಿದ್ದರು. ಆ ಸಭೆಯಲ್ಲಿ ಬಹಳಷ್ಟು ಮಂತ್ರಿಗಳು ಮತ್ತು ಎಂ.ಎಲ್.ಎ. ಗಳೂ ಸಹ ಇದ್ದರು. ಶ್ರೀ ಬಿ.ಎಸ್.ಯಡಿಯೂರಪ್ಪನವರು ಒಳ್ಳೆಯ ಪ್ರಮುಖವಾದ ಸಭೆಯನ್ನು ಕರೆದಿದ್ದರು. ಅದರಲ್ಲಿ ಎಲ್ಲಾ ಅಧಿಕಾರಿಗಳು ಭಾಗವಹಿಸಿದ್ದರು. ಮಂಗಗಳ ಪುನರ್ವಸತಿಗಾಗಿ ಸುಮಾರು 6.5 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಕಳೆದ ಬಾರಿಯ ಆಯವ್ಯಯದಲ್ಲಿ ಮೀಸಲಿಟ್ಟಿದ್ದರು. ನಾನು ಯಾವ ಕಾರಣಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, you also hail from pure

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Malnad region. ನಾನು ಪೂರ್ತಿ ಮಲೆನಾಡು ಭಾಗದಿಂದ ಬಂದವನಲ್ಲ. ಇವತ್ತಿನ ದಿವಸ ಈ ಪರಿಸ್ಥಿತಿ ಏಕೆ ಬಂದಿದೆ ಎಂದು ಹೇಳಿದರೆ, ನಾನು ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳ ಮೇಲೆ ನೇರವಾಗಿ ಹೇಳಬಯಸುತ್ತೇನೆ. ಯಾವುದೇ ಅರಣ್ಯದಲ್ಲಿ ಶೋಲಾ ಅರಣ್ಯ ಅಥವಾ ದಟ್ಟವಾಗಿ ಇದ್ದ ಕಾಡುಗಳಲ್ಲಿ ಸಾವಿರಾರು ಹಣ್ಣಿನ ಗಿಡಗಳಿದ್ದವು. ಅದೇ ರೀತಿಯಾಗಿ ರಸ್ತೆಯ ಬದಿಗಳಲ್ಲಿ ಸಾವಿರಾರು ಹಣ್ಣಿನ ಗಿಡಗಳಿದ್ದವು. ಆ ಪೈಕಿ ನೇರಳೆ, ಹತ್ತಿ ಮತ್ತು ಹುಣಸೇ ಮರಗಳಿರಬಹುದು. ಇವತ್ತಿನ ದಿವಸ ಅಂತಹ ಒಂದೇ ಒಂದು ಮರ ಸಹ ಇಲ್ಲ.

(ಮುಂದು)

**(488)18–03–2021(01–10)ಬಿಎಸ್‌ಡಿ–ಆರ್‌ಎನ್**

**ಶ್ರೀ ಎಸ್.ಎಲ್. ಭೋಜೇಗೌಡ (ಮುಂದು):–**

ಚಾರ್ಮಾಡಿ ಅಥವಾ ಶಿರಾಡಿ ಘಾಟ್‌ಗಳಲ್ಲಿ ಮಂಗಗಳ ಪರಿಸ್ಥಿತಿ ನೋಡಿದರೆ ಹೊಟ್ಟೆ ಹುರಿಯುತ್ತದೆ. ಯಾರೋ ಕಾರ್‌ನಲ್ಲಿ ಹೋಗುವವರು ಬಾಳೆಹಣ್ಣು ಇನ್ನೊಂದು ಹಾಕುತ್ತಾರೆ ಎಂದು ಕಟ್ಟೆಗಳ ಮೇಲೆ ಉದ್ದಕ್ಕೂ ಕುಳಿತಿರುತ್ತವೆ. ಇದರ ಶಾಪ ಅಧಿಕಾರಿ ವರ್ಗದವರಿಗೆ ಖಂಡಿತ ತಟ್ಟುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇದು ಹುಡುಗಾಟ ಅಲ್ಲ. ಚಾರ್ಮಾಡಿಯಂತಹ Ghat section, thickly and dense forest ಇರುವಲ್ಲಿ ಒಂದು ಹಣ್ಣಿನ ಗಿಡ ಇಲ್ಲ ಎಂದರೆ ಹೇಗೆ? ಇಡೀ ಅಕೇಶಿಯಾ, ನೀಲಗಿರಿ ಮರ ಕಾಣುತ್ತದೆ. ಅಧಿಕಾರಿಗಳನ್ನು Social forestry ಬೆಳೆಸಲು ಇದಕ್ಕಾಗಿ ಇಟ್ಟಿದ್ದಾರೆಯೇ? ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ನರ್ಸರಿಗಳಲ್ಲಿ ಅಕೇಶಿಯಾ, ನೀಲಗಿರಿ ಮರಗಳನ್ನು ಬೆಳೆಯಲು ನಾಚಿಕೆಯಾಗುವುದಿಲ್ಲವೇ? ಬ್ಯಾನ್ ಆಗಿದ್ದರೂ ನರ್ಸರಿಗಳಲ್ಲಿ ಬೆಳೆಯುತ್ತಿದ್ದಾರೆ. ಜನತೆ ಮತ್ತು ಜನಪ್ರತಿನಿಧಿಗಳು ಈಗಲಾದರೂ ಎಚ್ಚೆತ್ತುಕೊಳ್ಳಬೇಕಾಗುತ್ತದೆ. ನೀಲಗಿರಿ, ಅಕೇಶಿಯಾ ಮರಗಳನ್ನು ಹಾಕುವುದನ್ನು ಸಂಪೂರ್ಣವಾಗಿ ಖಂಡಿಸಬೇಕು ಮತ್ತು ಯಾವ ಕಾರಣಕ್ಕೂ ನರ್ಸರಿಗಳಲ್ಲಿ ಕೊಡಬಾರದು. ಕುದುರೆಮುಖ, ಕಳಸ, ಹೊರನಾಡು ಕಡೆ ನೋಡಿದಾಗ ಮೇಲೆ ಉದ್ದಕ್ಕೂ ಅಕೇಶಿಯಾ, ನೀಲಗಿರಿ ಮರಗಳು ಕಾಣುತ್ತವೆ. ಒಂದು ಸಾರಿ ಮಳೆ, ಗಾಳಿ ಹೊಡೆದರೆ ಪೂರ್ಣವಾಗಿ ನೆಲಕ್ಕೆ ಬೀಳುತ್ತವೆ. ಅದರಿಂದ ಏನು ಲಾಭ ಇದೆ? ಇದರಿಂದ ಸಾರ್ವಜನಿಕರಿಗೆ, ಸಮಾಜಕ್ಕೆ ಅಥವಾ ಪ್ರಾಣಿ–ಪಕ್ಷಿಗಳಿಗೆ ಲಾಭ ಇದೆಯೇ? ಇವರು Shola ಅರಣ್ಯವನ್ನು ಉಳಿಸುತ್ತಾರಂತೆ! ನಾಚಿಕೆಯಾಗಬೇಕು. Shola ಅರಣ್ಯ ಯಾವ ರೀತಿ ಇದೆ ಎಂದು ಮುಳ್ಳಯ್ಯನಗಿರಿಗೆ ಬಂದು ನೋಡಲಿ, ಇವತ್ತಿಗೂ ಕೂಡ ಅಲ್ಲಿನ ಸ್ಥಳೀಯ ಜನರಿಂದ ಸ್ವಲ್ಪ ಸ್ವಲ್ಪ ಉಳಿದಿದೆ. ಇನ್ನೂ ಕಾಲ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಿಂಚಿಲ್ಲ. ಬೇರೆ ಜಾಗಗಳ ಬಗ್ಗೆ ನನಗೆ ಗೊತ್ತಿಲ್ಲ. Especially, ಪಶ್ಚಿಮ ಘಟ್ಟದ ಪ್ರದೇಶದಿಂದ up to ಉತ್ತರ ಕನ್ನಡ, ಕೊಡಗಿನಿಂದ ಪ್ರಾರಂಭವಾಗಿ ಎಲ್ಲಿಯೂ ಒಂದೇ ಒಂದು ಅಕೇಶಿಯಾ ಮತ್ತು ನೀಲಗಿರಿ ಮರ ನೆಡದಂತೆ ಬಂದ್ ಮಾಡಬೇಕು. ಮುಂದಿನ ನಮ್ಮ ಪೀಳಿಗೆಗೆ ಅನ್ಯಾಯ ಮಾಡದೇ ನ್ಯಾಯ ಕೊಡಬೇಕೆಂದರೆ ಈ ಕೆಲಸ ಆಗಬೇಕಾಗಿದೆ. ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ನಾವು Ecological balance ಮಾಡಬೇಕು. ಹತ್ತು ಹುಲಿಗಳು ಇದ್ದಾಗ ಕಾಡು ಹಂದಿಗಳು ಅದರ ಆಹಾರವಾಗಿದ್ದು, ನಾವು ಕಾಡು ಹಂದಿಗಳಿಗೆ ಗುಂಡಿಟ್ಟು ಹೊಡೆಯುವುದಕ್ಕೆ ಹೋಗಬಾರದು. ಕಾಡು ಹಂದಿಗಳು ಹುಲಿ, ಚಿರತೆಗಳ ಆಹಾರವಾಗಿದೆ. ಹುಲಿ ಚಿರತೆಗಳ ಆಹಾರವನ್ನು ಮನುಷ್ಯರು ತಿಂದರೆ Ecological balance ಹೇಗೆ ಆಗುತ್ತದೆ? ಜಿಂಕೆಗಳು ಇರಬೇಕು, ಅವುಗಳನ್ನೂ ತಿನ್ನಬೇಕು. Ecological balance ಮಾಡದಿದ್ದರೆ ಹುಲಿ, ಚಿರತೆಗಳು ನಾಡಿಗೆ ಬರುತ್ತವೆ. ಆಗುಂಬೆ ಘಾಟ್ ಮತ್ತು ತೀರ್ಥಹಳ್ಳಿ ರಸ್ತೆಯಲ್ಲಿ ಎಷ್ಟು ಬಿದಿರುಗಳು ಇದ್ದವು, ಕುದುರೆಮುಖದಲ್ಲಿ ಎಷ್ಟು ಬಿದಿರು ಇತ್ತು. ಬಿದಿರು ಇಲ್ಲದಿದ್ದರೆ ಆನೆಗಳು ಎಲ್ಲಿಗೆ ಹೋಗಬೇಕು? ಕಬ್ಬಿನ ಗದ್ದೆಯನ್ನು ಹುಡುಕಿಕೊಂಡು ಬರುತ್ತವೆ. ಇವತ್ತು ಪ್ರಾಣಿಗಳಿಗೆ ಕುಡಿಯುವ ನೀರು ಸಿಗುತ್ತಿಲ್ಲ, ಇದರ ಬಗ್ಗೆ ಅರಣ್ಯ ಇಲಾಖೆಯವರು ಒಳಗೆ ಹೋಗಿ ನೋಡಿದ್ದಾರೆಯೇ? Beautiful Guest House ಅನ್ನು ಅವರಿಗೆ ಬೇಕಾದ ರೀತಿ ಕಟ್ಟಿರುತ್ತಾರೆ, ನಾನೂ ನೋಡಿದ್ದೇನೆ. ಅದು ಅವರಿಗೆ ಮಾತ್ರ ಸೀಮಿತವಾಗಿರುತ್ತದೆ. ಉಳಿದವರ್‍ಯಾರು ಹೋಗುವುದಕ್ಕೂ ಆಗುವುದಿಲ್ಲ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, 2017ನೇ ಇಸವಿಯಲ್ಲಿ ಅಕೇಶಿಯಾ, ನೀಲಗಿರಿಯನ್ನು ಬ್ಯಾನ್ ಮಾಡಿ ಇರುವ ನೀಲಗಿರಿಯನ್ನು ತೆಗೆಯಬೇಕು ಎಂದು ಕಾನೂನನ್ನು ತರಲಾಗಿದೆ. ವಿಶೇಷವಾಗಿ ಬಯಲು ಸೀಮೆ ಜಿಲ್ಲೆಗಳಲ್ಲಿ ನೀಲಗಿರಿ ಬೆಳೆಯುತ್ತಿದ್ದು, ಅಂತರಜಲ ಪಾತಾಳಕ್ಕೆ ಹೋಗಿರುವುದರಿಂದ ಅದನ್ನು total ban ಮಾಡಬೇಕೆಂದು ಕಾನೂನು ತಂದು ನಾಲ್ಕು ವರ್ಷಗಳು ಆಗಿದೆ. ಇದುವರೆಗೂ ಅರಣ್ಯ ಇಲಾಖೆಯವರು ಒಂದೇ ಒಂದು ಗಿಡವನ್ನು ತೆರವುಗೊಳಿಸಿಲ್ಲ. ಇನ್ನೂ ಅರಣ್ಯ ಇಲಾಖೆಯವರು ನೀಲಗಿರಿ ನರ್ಸರಿಗಳನ್ನು ನಡೆಸುತ್ತಿದ್ದಾರೆ. ಮಾನ್ಯ ಸದಸ್ಯರು ಬಹಳ ಸಮಂಜಸವಾದ ಅಂಶವನ್ನು ಹೇಳಿದ್ದು, ಅವರ ಕಡೆ ಅಕೇಶಿಯಾ, ನೀಲಗಿರಿ ಇನ್ನೂ ಇದ್ದು, ಅದು ಮರಗಳ ಮಧ್ಯದಲ್ಲಿದೆ. ನಮ್ಮ ಕಡೆ ಬರೀ ಅಕೇಶಿಯಾ, ನೀಲಗಿರಿ ಮರಗಳು ಎಕರೆಗಟ್ಟಳೆ ಕಾಣುತ್ತದೆ. ಅದು ಕೆರೆ ಅಥವಾ ರೈತರ ಜಮೀನುಗಳಲ್ಲಿ ಇರಬಹುದು. ದಯವಿಟ್ಟು ಕಾನೂನು ತರುವುದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಏಕೆಂದು ಸರ್ಕಾರ ಹೇಳಬೇಕು. ಕಾನೂನಿನ implementation ಸರ್ಕಾರದಲ್ಲಿ ಎಲ್ಲಿದೆ? ನಾಲ್ಕು ವರ್ಷಗಳಿಂದ at least ಎಷ್ಟು ಮರಗಳನ್ನು ತೆರವುಗೊಳಿಸಿದ್ದಾರೆ. ಎಷ್ಟು ಮರಗಳನ್ನು ತೆಗೆಸಿದ್ದಾರೆ ಎಂದಾದರೂ ಸದನಕ್ಕೆ ಹೇಳಬೇಕೆಂದು ಆಗ್ರಹಿಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಯಾರನ್ನೂ ವಿರೋಧ ಮಾಡುವ ವಿಚಾರವಾಗಿರದೇ ಬಹಳ ಗಂಭೀರವಾದ ವಿಚಾರವಾಗಿದೆ. ಇದರಲ್ಲಿ ನಮ್ಮ ಜೀವನದ ಪ್ರಶ್ನೆ ಇದೆ. ನಮ್ಮದು ಬಿಡಿ, ಮುಂದಿನ ಪೀಳಿಗೆಗೆ ಏನಾದರೂ ಕೊಡಬೇಕಲ್ಲವೇ? ಅದನ್ನು ಈಗಲಿಂದಲೇ ಪ್ರಯತ್ನ ಮಾಡಬಾರದೇ? ರಣಹದ್ದುಗಳ ಸಂತತಿ ಇಲ್ಲ, ಏಕೆ ಇಲ್ಲ? ಅವು ವಾಸ ಮಾಡುವ ಕಲ್ಲುಬಂಡೆ, ದೊಡ್ಡ ದೊಡ್ಡ ಎತ್ತರದ ಪ್ರದೇಶಗಳಲ್ಲಿ ನಾವು crushers ಮಾಡಿಕೊಂಡು ಕುಳಿತಿದ್ದೇವೆ. ಅವು ಉಳಿಯುವುದು ಎಲ್ಲಿ? ರಾಮನಗರದಲ್ಲಿ ಉತ್ಪತ್ತಿ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ರೂ.2.5 ಕೋಟಿಗಳನ್ನು ಇಟ್ಟರು, ಅಧಿಕಾರಿಗಳು ಅದರ ಬಗ್ಗೆ ಕಿಂಚಿತ್ ಕಾಳಜಿ ತೋರಿದ್ದಾರೆಯೇ? ರೂ.2.5 ಕೋಟಿ ಏನಾಯಿತು? ರೂ.6.5 ಕೋಟಿ ಮಂಗಗಳ ಪುನರ್ವಸತಿ ಮಾಡಬೇಕೆಂದು ಹೇಳಿದರು. ಅಧಿಕಾರಿ ವರ್ಗದವರು ಮಂಗಗಳ ಪುನರ್ವಸತಿಗೆ ಏನೂ ಮಾಡಬಾರದು, ಒಳ್ಳೆಯ ಹಣ್ಣಿನ ಗಿಡಗಳನ್ನು ಎಲ್ಲಾ ಕಡೆ ಬೆಳೆಸಿದರೆ automatic ಅಲ್ಲಿಗೆ ಹೋಗುತ್ತವೆ. ಮುಂಚೆ ಅಡಿಕೆ ತೋಟದಲ್ಲಿ ಒಳ್ಳೊಳ್ಳೆಯ ಹಲಸಿನ ಮರ, ಹಣ್ಣಿನ ಮರಗಳು ಇದ್ದವು, ಈಗ ಹಣ್ಣಿನ ಮರಗಳು ಇಲ್ಲದೇ ಇರುವುದರಿಂದ ಅಡಿಕೆ ತೋಟಕ್ಕೆ ಬಂದು ಹೊಂಬಾಳೆ ಒಡೆದು ಬೀಳುತ್ತವೆ, ಏನು ಮಾಡುವುದು? ಎಳೆನೀರನ್ನು ಕಿತ್ತು ಒಂದನ್ನು ಕುಡಿದರೆ 12 ಎಳೆನೀರನ್ನು ಕೆಳಗೆ ಹಾಕುತ್ತವೆ. ಅಡಿಕೆ ಸಣ್ಣ ಪಿಸುರು ಕಾಯಿಗಳಲ್ಲಿ ಒಳ್ಳೆಯ ರುಚಿ ಇರುವುದರಿಂದ ಅದನ್ನು ಕಿತ್ತು ತಿಂದು waste ಮಾಡುತ್ತವೆ. ರೈತರಿಗೂ ಇದರಿಂದ ನಷ್ಟ. ಇದು ಹುಡುಗಾಟವೇ! ಕೋವಿ ಹಿಡಿದುಕೊಂಡು ಮಂಗವನ್ನು ಹೊಡೆಯುವುದೇ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವುದನ್ನು ನೋಡಿ, ಕೋಟ್ಯಾಂತರ ರೂಪಾಯಿಗಳು ಇರುವುದರಿಂದ ಟೆಂಡರ್ ಕರೆದು ಮಾಡಿಬಿಡುತ್ತಾರೆ.

**ಡಾ: ವೈ.ಎ. ನಾರಾಯಣಸ್ವಾಮಿ:-** ಆ ಟೆಂಡರ್ ಅನ್ನು ಮಾನ್ಯ ಮರಿತಿಬ್ಬೇಗೌಡರಿಗೆ ಕೊಡುತ್ತಾರೆ. ಅವರಿಗೆ ಹದ್ದು ಬೆಳೆಸುವ ಗುತ್ತಿಗೆ ಕೊಡೋಣ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಬಹಳ ನೋವಿನಿಂದ ಹೇಳುತ್ತಿದ್ದು, ಕುದುರೆಮುಖದಲ್ಲಿ ಆವತ್ತಿನ ಕಾಲದಲ್ಲಿ ಮಾನ್ಯ ಸಂಪತ್ ಅಯ್ಯಂಗಾರ್‌ರವರ ವಿಚಾರವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಓದಿದ್ದೇನೆ. ಕುದುರೆಯಲ್ಲಿ ಹೋಗಬೇಕಾದರೆ ಕುದುರೆ ಲಾಳಕ್ಕೆ ಅದಿರು ಅಂಟುತ್ತಿದ್ದನ್ನು ನೋಡಿ, ಏನು ಈ ರೀತಿ ಅಂಟುತ್ತಿದೆ, ಕುದುರೆ ಕಾಲನ್ನು ಎತ್ತುವುದಕ್ಕೆ ಆಗುತ್ತಿಲ್ಲವಲ್ಲ ಎಂದು ನೋಡಿದಾಗ ಕಬ್ಬಿಣದ ಲಾಳಕ್ಕೆ ಅದಿರು ಅಂಟಿಕೊಳ್ಳುತ್ತಿರುವುದನ್ನು ನೋಡಿ, ಅದರ ಮೇಲೆ ಕುದುರೆ ಮುಖ ಎಂದು ಹೆಸರು ಬಂತು. ನಂತರ ಇರಾನ್‌ನವರು ಸೇರಿದಂತೆ ಎಲ್ಲರೂ ಬಂದು ಎಲ್ಲವನ್ನು ತೆಗೆದುಕೊಂಡು ಹೋದರು. ಎಲ್ಲವೂ ಆಗಿಹೋಯಿತು. ಸುದೀರ್ಘವಾದ ಹೋರಾಟದಲ್ಲಿ ಸುಪ್ರಿಂಕೋರ್ಟ್ ಸಹ decision ಕೊಟ್ಟು ನಂತರದಲ್ಲಿ Kudremukh Iron Ore Company ಸಂಪೂರ್ಣ ಬಂದ್ ಆಯಿತು. ಇಡೀ ಪಟ್ಟಣ ಪ್ರದೇಶ ಹೋಯಿತು. ಶಾಲಾ ಕಾಲೇಜುಗಳು, ಕಲ್ಯಾಣ ಮಂಟಪ, ಎಲ್ಲವೂ ಹಾಳು ಬಿದ್ದಿವೆ. ಇವತ್ತು wildlife ರೀತಿ ಆಗಿದೆ. ಇರಲಿ ಸಂತೋಷ. ಅವರಿಗೂ ಒಂದು ಜಾಗ ಆಗಲಿ. ಅವರು ಅಲ್ಲಿ ಇರಬೇಕು. ನಾವು ಎಲ್ಲಾ ಕಡೆ ಇದ್ದೇವೆ. ಅವರೂ ಇರಬೇಕು. ಆ wildlife ಆದ ಜಾಗದಲ್ಲಿ ಎಷ್ಟು ಚೆನ್ನಾಗಿ ಕಾಣುತ್ತಿದೆ ಎಂದರೆ ಬಹಳ ಹಸಿರಾಗಿದೆ. ಆದರೆ ಇವರಿಗೆ ಗಿಡ-ಮರ ನೆಡುವುದಕ್ಕೆ ಏನು ಹೊತ್ತು ಬಂದಿದೆ? ಗಿಡ ಮರ ನೆಡಲಿ. ಅಲ್ಲಿ ಎಂತೆಂತಹ valuable trees ಗಳು ಇದ್ದವು. ಅಲ್ಲಿನ ಮಣ್ಣಿನಲ್ಲಿ ಬೀಜ ಬಿಸಾಕಿದರೆ ಗಿಡ ಬರುತ್ತದೆ.

**ಶ್ರೀ ಮರಿತಿಬ್ಬೇಗೌಡಃ-** ಮಾನ್ಯ ಭೋಜೇಗೌಡರೆ, Social forestry ಬೆಳೆಸುವವರು ಏನು ಮಾಡುತ್ತಿದ್ದಾರೆ ಎಂದು ಕೇಳಬೇಕು. Social forestry ನಿಂದ ಗಿಡ ನೆಡುವ ಬಗ್ಗೆ ಯಾವ ಕಾರ್ಯಕ್ರಮ ಮಾಡುತ್ತಿದ್ದಾರೆ?

**ಉಪ ಸಭಾಪತಿಯವರುಃ-** ಮಾನ್ಯ ಮರಿತಿಬ್ಬೇಗೌಡರು ನಿನ್ನೆ ಮಾತನಾಡಿ ಇತಿಹಾಸ ನಿರ್ಮಾಣ ಮಾಡಿದ್ದಾರೆ. ಮಾನ್ಯ ಸದಸ್ಯರು ಮಾತನಾಡಲಿ ಬಿಡಿ.

**ಶ್ರೀ ಮರಿತಿಬ್ಬೇಗೌಡಃ-** ಏಕೆಂದರೆ ಪರಿಸರ, ಪ್ರಾಣಿ-ಪಕ್ಷಿಗಳು ಮತ್ತು ಮನುಷ್ಯರ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅದಕ್ಕಾಗಿ Social forestry ನವರು ಏನು ಮಾಡುತ್ತಿದ್ದಾರೆ? ಅವರಿಗೆ ಗಿಡ ಹಾಕುವುದೇ ಕೆಲಸವಾಗಿದೆ. ಆ ಬಗ್ಗೆ ಕೇಳಿ ಎಂದು ಹೇಳಿದೆ.

**ಶ್ರೀ ಎಸ್.ಎಲ್. ಭೋಜೇಗೌಡಃ-** ಈ ವರ್ಷ 10 ಲಕ್ಷ ಗಿಡ ನೆಡುವ ಕಾರ್ಯಕ್ರಮ ಎಂದು ಮಳೆ ಬೀಳುವ ಜೂನ್ ತಿಂಗಳಲ್ಲಿ ನಾವು-ನೀವೆಲ್ಲರೂ ಅರಣ್ಯಾಧಿಕಾರಿಗಳ ಜೊತೆ ಭಾಗವಹಿಸಿ, ಅದರ ಫೋಟೋ ತೆಗೆಸಿದ್ದು ಆಯಿತು. ಪ್ರತಿ ವರ್ಷ 10 ಲಕ್ಷ ಗಿಡ ಹಾಕುವುದು ಎಲ್ಲಿ ಹೋಗುತ್ತದೆ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(489)/18.03.2021/1.20/ಹೆಚ್‌ವಿ:ಆರ್‌ಎನ್**

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಪ್ರತಿ ವರ್ಷ 10 ಲಕ್ಷ ಸಸಿಗಳನ್ನು ನೆಟ್ಟರೇ 5 ವರ್ಷಗಳಿಗೆ 50 ಲಕ್ಷ ಸಸಿಗಳನ್ನು ನೆಡಬೇಕಾಗುತ್ತದೆ. ಅಷ್ಟು ಪ್ರಮಾಣದ ಗಿಡಗಳು ಎಲ್ಲಿಗೆ ಹೋಗಿವೆ? ನಾನು ನೋಡಿದಂತೆ ಇವರು ನೆಟ್ಟಿರುವ ಸಸಿಗಳು ಎಲ್ಲಿಯೂ ಕಾಣುತ್ತಿಲ್ಲ. ಶಾಲಾ ಮಕ್ಕಳು, ತಮ್ಮ ಶಾಲಾ ಕಾಪೌಂಡ್‌ನಲ್ಲಿ ಗಿಡಗಳನ್ನು ನೆಟ್ಟು ಅವುಗಳಿಗೆ ನೀರುಣಿಸಿ ರಕ್ಷಿಸಿಕೊಂಡು ಬಂದಿರುವುದನ್ನು ಬಿಟ್ಟರೆ, ಸರ್ಕಾರದ ಕಡೆಯಿಂದ ಸಸಿ ನೆಡುವ ಕಾರ್ಯಕ್ರಮ ಯಶಸ್ವಿಯಾಗಲಿಲ್ಲ. ಒಂದು ಗಿಡಕ್ಕೆ 120 ರೂಪಾಯಿ ಬಿಲ್ ಮಾಡುತ್ತಾರೆ. ಆ ಪ್ರಕಾರ ಪ್ರತಿ ವರ್ಷ 10 ಲಕ್ಷ ಸಸಿ ನೆಟ್ಟರೆ 5 ವರ್ಷಕ್ಕೆ ಎಷ್ಟು ವೆಚ್ಚವಾಗುತ್ತದೆ ಎನ್ನುವುದನ್ನು ತಾವೇ ಲೆಕ್ಕಾಚಾರ ಮಾಡಬೇಕಾಗುತ್ತದೆ. ಇದರ ಜೊತೆಗೆ ಆ ಸಸಿಗಳಿಗೆ ಬ್ಯಾರಿಕೇಡ್‌ಗಳನ್ನು ಹಾಕುತ್ತಾರೆ. ಈ ಬ್ಯಾರಿಕೇಡ್‌ಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡುತ್ತಾರೆ. ಇದೊಂದು ಹಗಲು ದರೋಡೆಯಾಗಿದೆ.

**ಡಾ॥ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಇದು ಸಸಿ ನೆಡುವ ಕಾರ್ಯಕ್ರಮವಾಗಿದೆ. ಸಸಿಗಳನ್ನು ಬೆಳೆಸುವ ಕಾರ್ಯಕ್ರಮವಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಈ ಬ್ಯಾರಿಕೇಡ್‌ಗಳನ್ನು ಹಾಕುವುದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿದೆ. ಪ್ರತಿ ವರ್ಷ ಲಕ್ಷಾಂತರ ಸಸಿಗಳನ್ನು ನೆಡಲಾಗುತ್ತಿದೆ ಆ ಸಸಿಗಳು ಏನಾಗಿವೆ? ಎಂದು ಅವರು ಅಧಿಕಾರಿಗಳನ್ನು ಕೇಳಬೇಕಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಒಬ್ಬನೇ ಒಬ್ಬ ಅಧಿಕಾರಿಯ ಮೇಲೆ ಶಿಸ್ತು ಕ್ರಮವನ್ನು ಜರುಗಿಸಿಲ್ಲ, ಆ ಬಗ್ಗೆ ತನಿಖೆ ನಡೆಸಿಲ್ಲ. ಆದರೆ, ಪ್ರತಿ ಆಯವ್ಯಯದಲ್ಲಿ ಈ ಕಾರ್ಯಕ್ರಮವನ್ನು ತೋರಿಸುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ, ಫಿಲ್ಮಂ ಸಿಟಿ ಬಗ್ಗೆ ಪ್ರಸ್ತಾಪ ಮಾಡಿದ್ದರು. ಚಿತ್ರ ನಿರ್ಮಾಪಕರಾಗಿರುವ ಮಾನ್ಯ ಸಂದೇಶ್ ನಾಗರಾಜ್‌ರವರು ಈ ಸದನದಲ್ಲಿದ್ದಾರೆ. 2020-21ನೇ ಸಾಲಿನ ಆಯವ್ಯಯದಲ್ಲಿ 'ನಟನಾ ಕೌಶಲ್ಯಕ್ಕೆ ಪ್ರಸಿದ್ಧಿಯಾಗಿರುವ ಕರ್ನಾಟಕದಲ್ಲಿ ಜಾಗತಿಕ ಗುಣಮಟ್ಟದ ಫಿಲ್ಮಂ ಸಿಟಿಯನ್ನು ಬೆಂಗಳೂರಿನಲ್ಲಿ ಒಟ್ಟು 500 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಸ್ಥಾಪಿಸಲಾಗುವುದು' ಎಂದು ಘೋಷಿಸಿದ್ದಾರೆ. ಈಗ ಅದು ಯಾವ ಹಂತದಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳೆದ ಬಾರಿಯ ಆಯವ್ಯಯದಲ್ಲಿ 'ನಾಡು-ನುಡಿ ಸಂಸ್ಕೃತಿಯ ಬೆಳವಣಿಗೆಯ ದೃಷ್ಟಿಯಿಂದ ಬೆಂಗಳೂರು ನಗರದ ನಾಲ್ಕೂ ದಿಕ್ಕಿನಲ್ಲಿ ರವೀಂದ್ರ ಕಲಾಕ್ಷೇತ್ರದ ಮಾದರಿಯಲ್ಲಿ ಕಲಾಕ್ಷೇತ್ರಗಳನ್ನು 60 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಗುವುದು' ಎಂದು ಹೇಳಿದ್ದರು. ಅದರ ಬಗ್ಗೆ ಇಲ್ಲಿಯವರೆವಿಗೂ ಯಾವುದೇ ರೂಪುರೇಷೆಗಳು ತಯಾರಾಗಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಆಯವ್ಯಯದ ಮೇಲೆ ಮಾತನಾಡುತ್ತಿದ್ದಾರೆ. ಅವರ ಮಾತುಗಳನ್ನು ನೋಟ್ ಮಾಡಿಕೊಳ್ಳುವುದಕ್ಕೆ ಆಡಳಿತ ಪಕ್ಷದ ಮುಂದಿನ ಸಾಲಿನಲ್ಲಿ ಸಭಾನಾಯಕರು ಹಾಗೂ ಯಾವ ಸಚಿವರು ಉಪಸ್ಥಿತರಿಲ್ಲ. ಮಾನ್ಯ ಭೋಜೇಗೌಡರು ಅರಣ್ಯೀಕರಣದ ಬಗ್ಗೆ ಮತ್ತು ಪಶುಪ್ರಾಣಿಗಳ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಮನುಷ್ಯಕುಲ ಮತ್ತು ಜೀವಸಂಕುಲ ಉಳಿಯಬೇಕಾದರೆ, ಅರಣ್ಯಗಳು ಬೇಕಾಗುತ್ತದೆ. ಅವರು ಮಾತನಾಡುವುದನ್ನು ಕೇಳಿಸಿಕೊಳ್ಳುವುದಕ್ಕೆ ಆಡಳಿತ ಪಕ್ಷದ ಮುಂದಿನ ಸಾಲಿನಲ್ಲಿ ಯಾರೂ ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನನ್ನ ಮಾತು ಅರಣ್ಯ ರೋಧನವಾಗಿದೆ.

**ಉಪ ಸಭಾಪತಿಯವರು:-** ಇಬ್ಬರು ಸಚಿವರು ಇದ್ದಾರೆ. ಅವರು ನೋಟ್ ಮಾಡಿಕೊಳ್ಳುತ್ತಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಇಬ್ಬರು ಸಚಿವರ ಪೈಕಿ ಒಬ್ಬರು ನೋಟ್ ಮಾಡಿಕೊಳ್ಳುತ್ತಿದ್ದಾರೆ. ಮತ್ತೊಬ್ಬ ಸಚಿವರಾಗಿರುವ ಮಾನ್ಯ ನಾರಾಯಣಗೌಡರು ಗಾಢನಿದ್ರೆಯಲ್ಲಿದ್ದಾರೆ. ಸದನದಲ್ಲಿ ಸಭಾನಾಯಕರಿಲ್ಲ, ಉಪ ಮುಖ್ಯಮಂತ್ರಿಗಳಿಲ್ಲ, ಮಾನ್ಯ ಭೋಜೇಗೌಡರ ಮಾತುಗಳು ಅರಣ್ಯ ರೋಧನವಾಗಿದೆ.

**ಶ್ರೀ ಲೆಹರ್‌ಸಿಂಗ್ ಸಿರೋಯಾ:-** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದಲ್ಲಿಯೂ ಸದಸ್ಯರು ಯಾರೂ ಇಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನಾಡು ನುಡಿಯ ಬಗ್ಗೆ ಅಪಾರ ಕಾಳಜಿಯನ್ನು ವಹಿಸಿ ಕಳೆದ ಬಾರಿಯ ಆಯವ್ಯಯದಲ್ಲಿ ನಾಡಪ್ರಭು ಕೆಂಪೇಗೌಡರ 100 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರದೇಶದಲ್ಲಿ ಒಟ್ಟು 66 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗುವುದು ಎನ್ನುವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘೋಷಣೆಯನ್ನು ಮಾಡಿದ್ದರು. ಪ್ರತಿಮೆ ನಿರ್ಮಾಣಕ್ಕೆ ಜಾಗವೇ ಸಿಕ್ಕಿಲ್ಲವೆಂದು ಮೊನ್ನೆ ಯಾರೋ ಹೇಳುತ್ತಿದ್ದರು.

**ಶ್ರೀ ಗೋವಿಂದರಾಜು:–** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ವಿಮಾನ ನಿಲ್ದಾಣ ರಸ್ತೆಯಲ್ಲಿ ಇದಕ್ಕಾಗಿ ಜಾಗವನ್ನು ಗುರುತಿಸಿ, ಗುದ್ದಲಿ ಪೂಜೆಯನ್ನು ಸಹ ನೆರವೇರಿಸಲಾಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ನನಗೆ ಬಂದಿರುವ ಮಾಹಿತಿಯ ಪ್ರಕಾರ ನಾನು ಹೇಳುತ್ತಿದ್ದೇನೆ. ಆ ಕೆಲಸವಾಗಿದ್ದರೆ ಸಂತೋಷ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಅಂಜನಾದ್ರಿ ಬೆಟ್ಟದಲ್ಲಿರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಸಮಗ್ರ ಅಭಿವೃದ್ಧಿಗಾಗಿ 20 ಕೋಟಿ ರೂಪಾಯಿಗಳ ಅನುದಾನವನ್ನು 2020–21ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿತ್ತು, 'ಜೈ ಭಜರಂಗಬಲಿ' ಎಂದು ನಾವು ಸಹ ಹೇಳುತ್ತೇವೆ. ನಮ್ಮ ಮನೆ ದೇವರು 'ಶ್ರೀರಾಮ' ಅಂಜನಾದ್ರಿ ಬೆಟ್ಟದ ಅಭಿವೃದ್ಧಿ ಪ್ರವಾಸೋದ್ಯಮ ಇಲಾಖೆಯಡಿಯಲ್ಲಿ ಬರುತ್ತದೆ. ಪ್ರವಾಸೋದ್ಯಕ್ಕೆ ಮೀಸಲಾಗಿಟ್ಟ ಹಣ ಡೈವರ್ಟ್ ಆಗಿದೆ. ಆ ರೀತಿ ಆಗಬಾರದು. ಈ ಬೆಟ್ಟ ಪ್ರವಾಸಿಗರನ್ನು ಸೆಳೆದರೆ ಅದು ಒಳ್ಳೆಯ ಬೆಳವಣಿಗೆಯಾಗಲಿದೆ. ಆ ಕೆಲಸವಾಗಬೇಕು.

ಸನ್ಮಾನ್ಯ ಸಭಾಪತಿಯವರೇ, ಹಿಂದಿನ ವರ್ಷ ಆಯವ್ಯಯದಲ್ಲಿ ಅತಿಥಿಗೃಹಗಳ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ 25 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಲಾಗಿದೆ. ಇದನ್ನು ಎಲ್ಲಿ ಉಪಯೋಗಿಸಿದ್ದಾರೆಯೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಜೋಗ ಜಲಪಾತವಿದೆ. ಇದು ಏಷ್ಯಾ ಖಂಡದಲ್ಲಿಯೇ ನಂಬರ್ ಒನ್ ಜಲಪಾತವಾಗಿದೆ. ಆದರೆ, ಅಲ್ಲಿರುವ ಐ.ಬಿ. ಪರಿಸ್ಥಿತಿಯನ್ನು ನೋಡಿದರೆ, ಒಳಗೆ ಕಾಲಿಡುವುದಕ್ಕೂ ಮನಸ್ಸಾಗುವುದಿಲ್ಲ. ಜೋಗ ಜಲಪಾತವನ್ನು ನೋಡೋಣವೆಂದು ನಾವು ಹೋಗಿದ್ದಾಗ, ಅಲ್ಲಿನ ದುಸ್ಥಿತಿ ಕಂಡು ಬೇಸರವಾಯಿತು.

**ಶ್ರೀ ರುದ್ರೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಅವರು ಅಲ್ಲಿಗೆ ಭೇಟಿ ನೀಡಿಲ್ಲವೆಂದು ಕಾಣುತ್ತದೆ. ಈಗ ಬಹಳ ಚೆನ್ನಾಗಿ ಅಭಿವೃದ್ಧಿಪಡಿಸಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ನಾನು ಹೋಗಿಲ್ಲ. ಚೆನ್ನಾಗಿ ಮಾಡಿರಬಹುದು. ನನಗೆ ತಿಳಿದ ಮಟ್ಟಿಗೆ ತಾಲ್ಲೂಕು ಕೇಂದ್ರಗಳಲ್ಲಿ ಹೊನ್ನಾಳಿ, ಶಿಕಾರಿಪುರ, ಶಿವಮೊಗ್ಗ ಐ.ಬಿ.ಗಳನ್ನು ಅತ್ಯುತ್ತಮವಾಗಿ ಭವ್ಯವಾದ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದಾರೆ. ನಿರ್ವಹಣೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಲ್ಲ. ನಿರ್ವಹಣೆ ಮಾಡದಿದ್ದರೆ, ಅಂತಹ ಕಟ್ಟಡಗಳನ್ನು ಕಟ್ಟಿ ಏನು ಪ್ರಯೋಜನವಾಗುತ್ತದೆ? ಇದರ ಬಗ್ಗೆ ಸರ್ಕಾರ ಕಾಳಜಿ ವಹಿಸಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಶಿವಮೊಗ್ಗ ನಗರದ ಹೊರವಲಯದಲ್ಲಿರುವ ತ್ಯಾವರೆಕೊಪ್ಪದಲ್ಲಿ ಹುಲಿ ಸಿಂಹಧಾಮದಲ್ಲಿರುವ ಮಿನಿ ಮೃಗಾಲಯವನ್ನು ಉನ್ನತೀಕರಿಸಲು 5 ಕೋಟಿ ರೂಪಾಯಿಗಳ ಅನುದಾವನ್ನು ಒದಗಿಸಲಾಗುತ್ತದೆಂದು ಹೇಳಿದ್ದರು ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಾಜ್ಯದ ಮೊದಲ ಕಡಲಧಾಮವನ್ನು ಸ್ಥಾಪನೆ ಮಾಡಲಾಗುತ್ತದೆಂದು ಹಿಂದಿನ ಆಯವ್ಯಯದಲ್ಲಿ ಹೇಳಲಾಗಿತ್ತು. ಅದರ ರೂಪುರೇಷೆಗಳು ಇನ್ನೂ ಸಿದ್ಧವಾಗಿದೆಯೋ ಇಲ್ಲವೋ ಗೊತ್ತಿಲ್ಲ. ಕಳೆದ ಬಾರಿಯ ಆಯವ್ಯಯದಲ್ಲಿ ಘೋಷಣೆ ಮಾಡಿರುವಂತಹ ಅಂಶಗಳನ್ನು ಜಾರಿಗೊಳಿಸುವ ಬಗ್ಗೆ ಸರ್ಕಾರ ಕಾಳಜಿ ವಹಿಸಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಇಲ್ಲಿರುವವರೆಲ್ಲರೂ ರೈತಾಪಿ ಕುಟುಂಬದಿಂದ ಬಂದವರಾಗಿದ್ದೇವೆ. ಈ ಬಾರಿಯ ಆಯವ್ಯಯದಲ್ಲಿ ಕೃಷಿಗೆ ಹೆಚ್ಚು ಒತ್ತು ನೀಡಲಾಗಿದೆಯೆಂದು ಘೋಷಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು 2021ರಲ್ಲಿ ರೈತರ ಆದಾಯ ದುಪ್ಪಟ್ಟು ಆಗುತ್ತದೆಂದು ಹೇಳಿದ್ದರು. ಈಗ 2023ರಲ್ಲಿ ದುಪ್ಪಟ್ಟಾಗುತ್ತದೆಂದು ಹೇಳುತ್ತಿದ್ದಾರೆ. ಯಾವ ರೀತಿಯಲ್ಲಿ ರೈತರ ಆದಾಯ ದುಪ್ಪಟ್ಟಾಗುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಯಾವ ರೀತಿಯಲ್ಲಿ ದುಪ್ಪಟ್ಟು ಮಾಡಲಾಗುತ್ತದೆ ಎನ್ನುವ ವಿಧಾನವನ್ನು ಹೇಳಬೇಕಾಗುತ್ತದೆ. ಅದಕ್ಕೆ ಏನಾದರು ಯೋಜನೆಗಳನ್ನು ರೂಪಿಸಿಕೊಳ್ಳಲಾಗಿದೆಯೇ ಎನ್ನುವುದನ್ನು ಸಹ ತಿಳಿಸಬೇಕಾಗುತ್ತದೆ. ದುಪ್ಪಟ್ಟಾಗುತ್ತದೆಂದು ಹೇಳಿದ್ದಾರೆ ಆದರೆ, ಯಾವ ರೀತಿಯಲ್ಲಿ ದುಪ್ಪಟ್ಟಾಗುತ್ತದೆ ಎನ್ನುವುದರ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬೆಳಕು ಚೆಲ್ಲಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕೋಲಾರ ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗಳಲ್ಲಿ ಸುಮಾರು 70-80 ಬಗೆಯ ತರಕಾರಿ, ಹೂ ಮತ್ತು ಹಣ್ಣುಗಳನ್ನು ಬೆಳೆಯುತ್ತಾರೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 15-20 ಬಗೆಯ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಇದಕ್ಕಾಗಿ ಯಾವ ಕಾರ್ಯಕ್ರಮಗಳನ್ನು ಈ ಆಯವ್ಯಯದಲ್ಲಿ ರೂಪಿಸಲಾಗಿದೆ ಎನ್ನುವುದರ ಬಗ್ಗೆ ತಿಳಿಸಬೇಕಾಗಿದೆ. ಕೊಳೆತು ಹೋಗುವ ಹೂವು, ತರಕಾರಿ ಮತ್ತು ಹಣ್ಣುಗಳ ಬಗ್ಗೆ ಹೇಳಬೇಕಾದರೆ, ಕಳೆದ ವರ್ಷ ಕೋವಿಡ್-19 ಸಾಂಕ್ರಾಮಿಕ ರೋಗ ಬಂದ ಕಾರಣದಿಂದಾಗಿ ಎಂಜಿನಿಯರ್‌ಗಳು, ಮಾಸ್ಟರ್ ಡಿಗ್ರಿ ಪಡೆದಿರುವ ಯುವಕರು ವೈಜ್ಞಾನಿಕ ರೀತಿಯ ಕೃಷಿಯನ್ನು ಮಾಡಲು ಪ್ರಾರಂಭಿಸಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(490) 18.3.2021 1.30 ಪಿಕೆ:ವಿಕೆ

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):-**

ತೀರ್ಥಹಳ್ಳಿ ತಾಲ್ಲೂಕಿನಲ್ಲಿ 3 ಜನ ಯುವಕರು, ಲಕ್ಷಾಂತರ ರೂಪಾಯಿಗಳನ್ನು ಹಾಕಿ ಸಿಹಿ ಕುಂಬಳಕಾಯಿಯನ್ನು ಬೆಳೆದರು. ಕೊರೋನ ಬಂದು ಅವರಿಗೆ ಕೋಟ್ಯಂತರ ರೂಪಾಯಿ ನಷ್ಟವಾಯಿತು. ಅವರು ಬ್ಯಾಂಕ್‌ನಿಂದ 30-40 ಲಕ್ಷ ರೂಪಾಯಿಗಳ ಸಾಲ ಮಾಡಿದ್ದರು. ಅವರ ನೆರವಿಗೆ ಧಾವಿಸುವುದಕ್ಕೆ ಆಗಲೇ ಇಲ್ಲ. ಬೆಳೆದಂತಹ ಬೆಳೆ ಅಲ್ಲೇ ಕೊಳೆತು ಹೋಯಿತು. ಎಲ್ಲಾ ಹೋಟೆಲ್‌ಗಳು ಬಂದ್ ಆಗಿತ್ತು. ಹೂವು ಬೆಳೆದವರ ಕತೆ ಹೇಳಲು ಅಸಾಧ್ಯವಾಗಿದೆ. ಅವರು ನರಕಯಾತನೆ ಅನುಭವಿಸಿದರು. ಇಂತಹ ಬೇಗ ಕೊಳೆಯುವಂತಹ ಬೆಳೆಗಳನ್ನು ಹಿಡಿದಿಟ್ಟುಕೊಳ್ಳುವಂತಹ ವ್ಯವಸ್ಥೆ ಆಗಬೇಕು. ಇಂತಹ ಬೆಳೆಗಳನ್ನು ನಾವು ಕೆಲವು ಕಾಲ ಹಿಡಿದಿಟ್ಟರೆ, ನಂತರ ರೈತರು ಅದನ್ನು ಮಾರುವುದಕ್ಕೆ ದಾರಿ ಆಗುತ್ತದೆ. ಆದ್ದರಿಂದ, ಶೈತ್ಯಾಗಾರಗಳ ವ್ಯವಸ್ಥೆ ಮಾಡಲು ಗಂಭೀರ ಕ್ರಮ ಕೈಗೊಳ್ಳಬೇಕಾಗುತ್ತದೆ. ನನಗೆ ಬಂದಿರುವ ಮಾಹಿತಿ ಪ್ರಕಾರ ಇವೆಲ್ಲಾ (ಈ ಹಂತದಲ್ಲಿ ಕೆಲವು ಚಿತ್ರಗಳನ್ನು ಸದನಕ್ಕೆ ತೋರಿಸಿದರು) ಸರ್ಕಾರದ ಅಂಟಜ ಖಣಂಡಿಚಿಣ ಗಳಾಗಿವೆ. ಇದಕ್ಕೆಂದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಅದು ಇವತ್ತು ಸಂಪೂರ್ಣವಾಗಿ ಹಳ್ಳ ಹಿಡಿದಿದೆ. ಇಲ್ಲಿ ಮಾನ್ಯ ಸದಸ್ಯರಾದ ಗೋವಿಂದ ರಾಜುರವರು ಇದ್ದಾರೆ. ಇದು ನಿಮ್ಮ ಊರಿನದ್ದು ಅಲ್ಲವೇ?

**ಶ್ರೀ ಗೋವಿಂದರಾಜು:-** ಹೌದು, ಆದರೆ ಆ ಗೋಡೌನ್‌ಗಳು ಸರ್ಕಾರದ್ದಲ್ಲ. Marketing Federation ಅವರದ್ದಾಗಿದೆ. ಅದು ನಿಂತು ಹೋಗಿ ಸುಮಾರು 5 ವರ್ಷಗಳಾಗಿವೆ. ಆ ಜಾಗವನ್ನು ಎಪಿಎಂಸಿಯವರೇ ಅವರಿಗೆ ಕೊಟ್ಟಿದ್ದರು. ಈಗ ಎಪಿಎಂಸಿಯಲ್ಲೇ ತರಕಾರಿ ಇಟ್ಟುಕೊಳ್ಳುವುದಕ್ಕೆ ಜಾಗ ಇಲ್ಲ. ಆ ಜಾಗವನ್ನು ನಮಗೆ ವಾಪಸ್ಸು ಕೊಡಿ ಎಂದು ಮಂತ್ರಿಗಳ ಮುಖಾಂತರ ವಿವಿಧ ರೀತಿಯಲ್ಲಿ ಮನವಿ ಮಾಡಿದರೆ ಅವರು, Real Estate ಮಾದರಿಯಲ್ಲಿ, ಒಂದು ಎಕರೆಗೆ ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕು ಎಂದು ಕೇಳುತ್ತಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಗೋವಿಂದ ರಾಜುರವರು ಮಾತನಾಡುತ್ತಾರೆ. ಕೃಷಿ ಸಾಲದ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಸಹಕಾರಿ ಬ್ಯಾಂಕ್‌ಗಳಲ್ಲಿ 3 ಲಕ್ಷ ರೂ.ಗಳವರೆಗಿನ ಮೊತ್ತವನ್ನು ಬಡ್ಡಿ ರಹಿತವಾಗಿ ಡಿಸಿಸಿ ಮತ್ತು ಅಪೆಕ್ಸ್ ಬ್ಯಾಂಕುಗಳ ಮುಖಾಂತರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡುತ್ತಾರೆ. 10 ಲಕ್ಷದವರೆಗಿನ development loan ಅನ್ನು 3 ಪರ್ಸೆಂಟ್ ಬಡ್ಡಿ ದರದಲ್ಲಿ ಕೊಡುತ್ತಾರೆ. ಇದು ಬದಲಾವಣೆ ಆಗುವುದು ಬೇಡವೇ? ಹಾಗೆಯೇ ಇದ್ದರೆ ಕೃಷಿಕರ ಆದಾಯ ಹೇಗೆ ದುಪ್ಪಟ್ಟಾಗುತ್ತದೆ? ಶೂನ್ಯ ಪರ್ಸೆಂಟ್ ಬಡ್ಡಿ ಮೊತ್ತವನ್ನು 5 ಲಕ್ಷ ರೂಪಾಯಿಗಳಿಗೆ ಏರಿಸಬೇಡವೇ? 10 ಲಕ್ಷ ರೂ.ಗಳಿರುವುದನ್ನು 15 ಲಕ್ಷ ರೂ.ಗಳಿಗೆ ಮಾಡಬಾರದೇ? ಈ ನಾಡಿನ ಯಾವುದೇ ರೈತ ಈ ಬ್ಯಾಂಕ್‌ನ ದುಡ್ಡನ್ನು ತಿಂದು ಹಾಕುವುದಿಲ್ಲ. ಅವನಿಗೆ ಸರಿಯಾದ ಪ್ರಮಾಣದಲ್ಲಿ ನೀರು ಮತ್ತು ವಿದ್ಯುತ್ ಕೊಟ್ಟರೆ ಅವನಿಗೆ ನಿಮ್ಮ ಸಾಲದ ಅವಶ್ಯಕತೆಯೇ ಇರುವುದಿಲ್ಲ.

**ಉಪಸಭಾಪತಿಯವರು:-** ಮಾನ್ಯ ಭೋಜೇಗೌಡರೇ ತಾವು ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನಿನ್ನು ಶಿಕ್ಷಣ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಮಾತನಾಡಬೇಕಿದೆ.

**ಉಪಸಭಾಪತಿಯವರು:-** ನೀವು ಮಾತನಾಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ ಪಕ್ಷಾವಾರು ಮಾತನಾಡಲು ಸಮಯ ನಿರ್ಧಾರವಾಗಿದೆ. ಬೇರೆ ಸದಸ್ಯರ ಸಮಯವನ್ನು ನೀವೇ ತೆಗೆದುಕೊಂಡರೂ ಪರವಾಗಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಸ್ವಲ್ಪ ವೇಗವಾಗಿ ವಿಷಯಗಳನ್ನು ಹೇಳಿಬಿಡುತ್ತೇನೆ. ಶೂನ್ಯ ಬಡ್ಡಿದರದಲ್ಲಿರುವ 3 ಲಕ್ಷ ರೂ.ಗಳ ಸಾಲದ ಮೊತ್ತವನ್ನು 5 ಲಕ್ಷ ರೂ.ಗಳ ಮೊತ್ತಕ್ಕೆ ಏರಿಸಬೇಕು. 10 ಲಕ್ಷ ರೂ.ಗಳಿರುವುದನ್ನು 15 ಲಕ್ಷ ರೂ.ಗಳಿಗೆ ಏರಿಸಬೇಕು. ಗೊಬ್ಬರಕ್ಕೆ ಕೊಡುತ್ತಿರುವ ಸಬ್ಸಿಡಿ ಬಗ್ಗೆಯೂ ಮತ್ತು ಕೀಟ ನಾಶಕಗಳ ಬಗ್ಗೆ ಸ್ವಲ್ಪ ಚಿಂತನೆ ಮಾಡಬೇಕಿದೆ. ಇನ್ನೊಂದು ಮುಖ್ಯವಾದ ವಿಷಯವೆಂದರೆ, ರೈತರಿಗೆ ಗುಣಮಟ್ಟದ ವಿದ್ಯುತ್ ಒದಗಿಸಿ ಕೊಡಿ. 3-4-5 ಗಂಟೆ ಸಮಯಕ್ಕೆ ಕೊಡುತ್ತೀರೋ ಕೊಡಿ; ಆದರೆ ನಿರಂತರವಾಗಿ ಕೊಡಿ. ಮಧ್ಯದಲ್ಲಿ ಕರೆಂಟ್ ಹೋಗುತ್ತಿದ್ದರೆ ರೈತರಿಗೆ ತೊಂದರೆಯಾಗುತ್ತದೆ. ಒಂದು ಸಲ ಕೇಬಲ್ ಹಾಳಾದರೆ ಅದಕ್ಕೆ 10000 ರೂ.ಗಳು ಖರ್ಚಾಗುತ್ತವೆ. ಒಂದು ಸಲ ಮೋಟರ್ ಸುಟ್ಟು ಹೋದರೆ ಅದನ್ನು ಎತ್ತಿ ತೆಗೆದು ಮತ್ತೆ ಹಾಕಬೇಕಾದರೆ 6000 ರೂ.ಗಳು ಖರ್ಚಾಗುತ್ತವೆ. ಹೀಗಾದರೆ ರೈತ ಎಲ್ಲಿಗೆ ಹೋಗಬೇಕು?

**ಶ್ರೀ ಗೋವಿಂದರಾಜು:-** ನೀವು ತಪ್ಪು ಮಾಹಿತಿ ಕೊಡುತ್ತಿದ್ದೀರಿ. ಆ ಮೋಟರನ್ನು ಎತ್ತಿ ಇಳಿಸುವುದಕ್ಕೆಯೇ 7000 ರೂ.ಗಳನ್ನು ಕೊಡಬೇಕಾಗುತ್ತದೆ. ರಿಪೇರಿಗೆ ಕೊಡುವ ದುಡ್ಡು ಅದು ಬೇರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ:-** ನನ್ನ ಹತ್ತಿರ 22 ಬೋರ್‌ವೆಲ್‌ಗಳಿವೆ. ಅಡಿಕೆ ಬೆಳೆ ಬೆಳೆಯಲು ಇಷ್ಟು ಸಂಖ್ಯೆಯ ಕೊಳವೆ ಬಾವಿಗಳ ಅವಶ್ಯಕತೆ ಇರುತ್ತದೆ.

**ಉಪಸಭಾಪತಿಯವರು:-** ನೀವು ಮನಸ್ಸು ಮಾಡಿದರೆ ಇಡೀ ಊರಿಗೆ ನೀರು ಕೊಡಬಹುದು. ಆದರೆ ನೀವು ಕೊಡುವುದಿಲ್ಲ.

**ಡಾ:ತೇಜಸ್ವಿನಿ ಗೌಡ:-** ಇದು wholesale rate ನಲ್ಲಿ 6000 ಆಗುತ್ತದೆ, retail rate ನಲ್ಲಿ 7000 ಆಗುತ್ತದೆ.

**ಶ್ರೀ ಗೋವಿಂದ ರಾಜು:-** ಇಲ್ಲಿ wholesale-retail ಪ್ರಶ್ನೆ ಬರುವುದಿಲ್ಲ. ನಮ್ಮ ಕಡೆ ಕೊಳವೆ ಬಾವಿಯನ್ನು 1200 ಅಡಿಯ ತನಕ ಕೊರೆಸಬೇಕಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಿದೆ. ಅವರು 1200 ಅಡಿಗಳ ತನಕ ಕೊರೆಸುತ್ತಾರೆ ಆದರೆ ನಮ್ಮಲ್ಲಿ 350 ಅಡಿಗಿಂತ ಕೆಳಗೆ ಕೊರೆಸುವ ಅವಶ್ಯಕತೆ ಇರುವುದಿಲ್ಲ. ನಮ್ಮ ಕಡೆಯ ಮೋಟರ್‌ಗಳನ್ನು ಎತ್ತಬೇಕಾದರೆ 9 ಪೈಪ್ ಬರುತ್ತದೆ. ಆದರೆ ಅವರ ಕಡೆ 60-70 ಲೆಂಟ್ ಬೇಕಾಗುತ್ತದೆ. ಹಾಗಾಗಿ ಅವರಿಗೆ 7000 ರೂ.ಗಳಾಗುತ್ತವೆ.

ಮಾನ್ಯ ಸಭಾಪತಿಯವರೇ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಕುರಿತು ನಾನು ಇಲ್ಲಿ ಅನೇಕ ಸಲ ಮಾತನಾಡಿದ್ದೇನೆ. ಈ ಸಲ 900 ಕೋಟಿ ರೂ.ಗಳನ್ನು ಇಟ್ಟಿದ್ದೀರಿ. ಫಸಲ್ ಬಿಮಾ ಯೋಜನೆಯ ವಿಚಾರದ ಬಗ್ಗೆ ಹೇಳುವುದಾದರೆ ಅದು ಒಂದು ಖಾಸಗಿ ಸಂಸ್ಥೆಯದ್ದಾಗಿದೆ. It is not a Government Oriented Company. ಅದಕ್ಕೆ ನಮ್ಮ ಅಧಿಕಾರಿಗಳು ಬಹಳ ಸಪೋರ್ಟ್ ಮಾಡುತ್ತಾರೆ. ಹಾಗಾಗಿ ಫಸಲ್ ಬಿಮಾ ಯೋಜನೆ ಪ್ರಧಾನ ಮಂತ್ರಿಗಳ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ ಮತ್ತು ಬಹಳ ಉತ್ತಮವಾದ ಯೋಜನೆಯಾಗಿದೆ. ಮಳೆ ಆಧಾರಿತ ಪ್ರದೇಶಗಳಲ್ಲಿ ಛಿಚಿಟಛಿಣಟಚಿಣುಠಟಿ ಮಾಡುವುದು ಮಾರ್ಪಾಟಾಗಬೇಕೆಂದು ಹಲವಾರು ಸಲ ಹೇಳಿದ್ದೇನೆ. ಇದನ್ನು ಸರಳೀಕರಣಗೊಳಿಸಿ. ತಾಲ್ಲೂಕು ಕೇಂದ್ರಗಳಲ್ಲಿ, ಜಿಲ್ಲಾ ಕೇಂದ್ರಗಳಲ್ಲಿಯೇ ಅಧಿಕಾರಿಗಳು ಸಿಗುವ ಹಾಗೆ ಆಗಬೇಕು. ಫಸಲ್ ಬಿಮಾ ಯೋಜನೆಗೆ ನೋಡೆಲ್ ಆಫೀಸರ್ ಯಾರು ಎನ್ನುವುದು ನಮಗೆ ಇವತ್ತಿನವರೆಗೂ ಗೊತ್ತಿಲ್ಲ. ಈ ನಿಟ್ಟಿನಲ್ಲಿ ಮಾರ್ಪಾಡು ಮಾಡಿದರೆ ಒಳ್ಳೆಯದಾಗುತ್ತದೆ. ಇನ್ನು ಟ್ರ್ಯಾಕ್ಟರ್ ಸಬ್ಸಿಡಿ ಬಗ್ಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಬಯಸುತ್ತೇನೆ. ಈ ಕಮಿಟಿಯಲ್ಲಿ ಎಂಎಲ್‌ಸಿ ಗಳೂ ಕೂಡ ಸದಸ್ಯರಾಗಿದ್ದೇವೆ. ಒಂದು ಜಿಲ್ಲೆಗೆ 2 ಟ್ರ್ಯಾಕ್ಟರ್‌ಗಳನ್ನು ಕೊಡುತ್ತಾರೆ. ಈಗ ಮಿನಿ ಟ್ರ್ಯಾಕ್ಟರ್‌ಗಳೂ ಬಂದಿವೆ. ಈ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ಬಾಯಲ್ಲಿ ಹೇಳುವುದಕ್ಕೆ ಏನು ತೊಂದರೆಯಿಲ್ಲ, ನಾನೂ ಕೂಡ 50 ಕೊಡಿ, 100 ಕೊಡಿ ಎಂದು ಹೇಳಬಹುದು. ಆದರೆ ಸರ್ಕಾರದ ಹಣಕಾಸಿನ ವ್ಯವಸ್ಥೆಯನ್ನು ನೋಡಿಕೊಂಡು ಇಂಥದ್ದಕ್ಕೆ ಒತ್ತು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಮಲೆನಾಡು ಪ್ರದೇಶಗಳಲ್ಲಿ ಅಡಿಕೆ ಬೆಳೆಗಳಿಗೆ ಹಳದಿ ರೋಗ ಬಂದಿದೆ. ಇದು ಈಗ ಬಂದಿರುವಂಥದ್ದು ಅಲ್ಲ, ಹತ್ತಾರು ವರ್ಷಗಳಿಂದ ಇದೆ. ಆದರೆ, ಇದಕ್ಕೆ ಪರ್ಯಾಯ ಬೆಳೆ ಬೆಳೆಯಬೇಕು. ಹಾಗೆ ಮಾಡಲು ಆ ಬುಡವನ್ನು ಕ್ಲೀನ್ ಮಾಡಿ, ಅಡಿಕೆ ತೋಟವನ್ನು ಸರಿ ಮಾಡಿ ಮಾಡುವುದಕ್ಕೆ ಒಂದು ಎಕರೆ ಎಷ್ಟು ಖರ್ಚಾಗುತ್ತದೆ ಹೇಳಿ? ಇದಕ್ಕೆ ಪರಿಹಾರ ಕೊಡಬೇಕಾಗುತ್ತದೆ. ಇದಕ್ಕೆಂದು ಸರ್ಕಾರ ಇಟ್ಟಿರುವ 25 ಕೋಟಿ ರೂ.ಗಳು ಏನೂ ಸಾಕಾಗುವುದಿಲ್ಲ. ಇದಕ್ಕೆ 100 ಕೋಟಿ ರೂ.ಗಳನ್ನಾದರೂ ಇಡಬೇಕು.

ಮಾನ್ಯ ಸಭಾಪತಿಯವರೇ, ಕಾಫಿ ಬೆಳೆಗಾರರ ಸಮಸ್ಯೆ ತುಂಬಾ ತೀವ್ರವಾಗಿದೆ. ಸರ್ಕಾರ ಇವರ ಸಮಸ್ಯೆಗೆ ಯಾವರೀತಿ ಸ್ಪಂದಿಸುತ್ತದೆಯೋ ಗೊತ್ತಿಲ್ಲ. ಇದರ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ. ಆ ಭಾಗದಲ್ಲಿ ಸ್ವಲ್ಪ ಮೆಣಸು ಮತ್ತು ಉಪ ಬೆಳೆಗಳು ಬರುವುದರಿಂದ ಕಾಫಿ ಬೆಳೆಗಾರರು silver oak ಮರಗಳನ್ನು ಮಾರಾಟ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಇದರ ಬಗ್ಗೆ ಸ್ವಲ್ಪ ಚಿಂತನೆ ಮಾಡಬೇಕು.

ಮಾನ್ಯ ಸಭಾಪತಿಯವರೇ, ಕುರಿ, ಕೋಳಿ ಸಾಕಾಣಿಕೆ ಮತ್ತು ಹೈನುಗಾರಿಕೆ ಬಗ್ಗೆ ಹೇಳುವುದಾದರೆ, ಯಾವ ಯುವಕರು ನಗರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದರೋ ಅವರಲ್ಲಿ 80 ಪರ್ಸೆಂಟ್‌ನಷ್ಟು ಯುವಕರು ಹಳ್ಳಿಗಳಿಗೆ ಬಂದಿದ್ದಾರೆ. **(ಮುಂದು)**

491/18-03-2021/1-40/bkp-vk

**ಶ್ರೀ ಎಸ್.ಎಲ್. ಭೋಜೇಗೌಡ(ಮುಂದು)**

ಸುಮ್ಮನೆ ಇರಲಿಕ್ಕೆ ಆಗದೇ ಕೋಳಿ, ಕುರಿಯ ಬಗ್ಗೆ ಹಾಗೂ ಮೊಟ್ಟೆ ಇಡುವ ಕೋಳಿಯ ಬಗ್ಗೆ, ನಾಟಿ ಕೋಳಿಯ ಬಗ್ಗೆ ಎಲ್ಲಾ ಫಾರಂ ಮಾಡಿದರು. 100 ರಿಂದ 300 ಕೋಳಿಯವರೆಗೆ ಫಾರಂ ಮಾಡಿ ಈಗ ಅದರಲ್ಲಿ ಆದಾಯ ಕಂಡುಕೊಂಡಿದ್ದಾರೆ. ಆದಾಯ ಕಂಡುಕೊಂಡು success ಆಗಿದ್ದಾರೆ. ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಾಪಸ್ಸು ಅಲ್ಲಿಯೇ ಉಳಿದುಕೊಳ್ಳಬೇಕು. ಅವರು ಉಳಿದುಕೊಳ್ಳುವುದಕ್ಕೆ ಅವರಿಗೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಬೇಕು. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, ಕೋಳಿಗೆ ಹಾಗೂ ಕುರಿಗೆ ಇಂಜಕ್ಷನ್ ಕೊಡಿಸಬೇಕಾಗುತ್ತದೆ. ಯಾವ ದನಗಳ ಆಸ್ಪತ್ರೆಯಲ್ಲಿಯೂ ಅಂದರೆ veterinary hospitals ನಲ್ಲಿ ಒಬ್ಬರು ಡಾಕ್ಟರ್ ಇಲ್ಲ, ಯಾರೂ ನುರಿತ ಕಾಂಪೌಂಡರ್ ಸಹ ಇಲ್ಲ, ಅಲ್ಲಿರತಕ್ಕಂತಹ ಯಾರೋ ಒಬ್ಬ ಹುಡುಗ ಸ್ವಲ್ಪ ಕೆಲಸ ಕಲಿತವನು ಅವನೇ ಬರಬೇಕಾಗುತ್ತದೆ. ಎಲ್ಲಾ veterinary doctors, ಎಲ್ಲಿದ್ದಾರೆ ಚೆಕ್ ಮಾಡಿ ನೋಡಿ, ಎಲ್ಲರೂ EO ಗಳಾಗಿದ್ದಾರೆ. ಅವರುಗಳನ್ನು ಇಲಾಖೆಗೆ ಏಕೆ ವಾಪಸ್ಸು ಕರೆಸಬಾರದು? ಇರುವಂತಹ ಸಮಸ್ಯೆ ಆದರೂ ಏನು? veterinary doctor ಎಂದು ಅವರಿಗೆ ಕೆಲಸ ಕೊಟ್ಟಿರುವುದು, ಅವರಿಗೆ EO ಕೆಲಸ ಮಾಡುವುದಕ್ಕೆ ಕೊಟ್ಟಿಲ್ಲ. ಮಾನ್ಯ ಸಭಾನಾಯಕರೆ, ದಯಮಾಡಿ ಇದನ್ನು ಬಹಳ ಸೀರಿಯಸ್ ಆಗಿ ತೆಗೆದುಕೊಂಡು ಮಾಡಬೇಕಾಗುತ್ತದೆ. ಆ veterinary doctors ಗಳನ್ನೆಲ್ಲಾ ವಾಪಸ್ಸು ಕರೆಸಿ. ಹಾಗಾದರೆ ಗೋಸಂಪತ್ತು ವೃದ್ಧಿ ಮಾಡುವುದು ಹೇಗೆ? ಗೋಸಂಕುಲ ಸಮೃದ್ಧಿ ಎಂದು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಹೇಳಿದ್ದಾರೆ. ಪಶುಗಳನ್ನು ನೋಡುವುದಕ್ಕೆ ಡಾಕ್ಟರ್‌ಗಳೇ ಇಲ್ಲ, ಜನರೇ ಇಲ್ಲವೆಂದು ಮೇಲೆ ನಾವು ಗೋಸಂಕುಲ ಸಮೃದ್ಧಿಯನ್ನು ಯಾವ ರೀತಿ ಮಾಡಬೇಕೆಂದು ಹೇಳಿ ನೋಡೋಣ. ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಬಹಳ ಸೀರಿಯಸ್ ಆಗಿ ತೆಗೆದುಕೊಳ್ಳಬೇಕಾಗುತ್ತದೆ. ದಯಮಾಡಿ ಇದರ ಜೊತೆಗೆ ನನಗೆ ನೀವು ಸಮಯಾವಕಾಶ ಕೊಡುತ್ತಿಲ್ಲ. ನಾನು ಬಜೆಟ್‌ನಲ್ಲಿರುವ ಪ್ಯಾರ 64 ರಿಂದ 69ರ ವರೆಗೆ ಓದಬೇಕಾಗಿತ್ತು.

**ಉಪ ಸಭಾಪತಿಯವರು:** ಒಂದು ಗಂಟೆಯ ಸಮಯಾವಕಾಶ ಕೊಟ್ಟಿದ್ದೇನೆ. ಇನ್ನೂ ಸಮಯಾವಕಾಶ ಕೊಟ್ಟಿಲ್ಲವೆಂದರೆ ಹೇಗೆ?

**ಶ್ರೀ ಎಸ್.ಎಲ್. ಭೋಜೇಗೌಡ:** ಮಾನ್ಯ ಸಭಾಪತಿಯವರೆ, ಜಿಲ್ಲೆಗೆ ಒಂದು ಗೋಶಾಲೆ ಎಂದು ಹೇಳಿದ್ದೀರಿ. ಜಿಲ್ಲೆಗೆ ಒಂದು ಗೋಶಾಲೆ ಮಾಡಿದರೆ ಆಗುವುದಿಲ್ಲ. ನಮ್ಮ ಹಳ್ಳಿಯಲ್ಲಿ ಒಂದು ದನಕ್ಕೆ ಏನಾದರೂ ಹೆಚ್ಚುಕಡಿಮೆಯಾದರೆ ಅಥವಾ ಒಂದು ಗಂಡು ಕರು ಅಂದರೆ ಅನುಪಯುಕ್ತ ಕರುವನ್ನು ನಾನು ತಂದು ನಿಮ್ಮ ಜಿಲ್ಲೆಗೆ ಬಂದು ಬಿಡಬೇಕೆಂದರೆ ನಾನು ಅಲ್ಲಿಂದ ವ್ಯಾನ್ ಮಾಡಿಕೊಂಡು ಒಂದು ಸಾವಿರ ರೂಪಾಯಿಗಳ ಬಾಡಿಗೆ ಕೊಟ್ಟುಕೊಂಡು ತೆಗೆದುಕೊಂಡು ಬಂದು ಜಿಲ್ಲಾ ಕೇಂದ್ರಕ್ಕೆ ಅಂದರೆ ನೀವು ಎಲ್ಲಿ ಗೋಶಾಲೆ ಮಾಡಿದ್ದೀರಿ ಅಲ್ಲಿಗೆ ಬಿಡುವುದಕ್ಕೆ ನನ್ನ ಕೈಯಲ್ಲಿ ಸಾಧ್ಯವಾಗುತ್ತದೆಯೇ? ಹೋರಿ ಕರುವನ್ನು ಬಿಡುವುದಕ್ಕೆ ಸಾಧ್ಯವಾಗುತ್ತದೆಯೇ? ಅದಕ್ಕೆ ನಾನು ಒಂದು ಸಲಹೆ ಕೊಡುತ್ತೇನೆ. ಈ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರರಾಜ್ಯದ ದೇಶಿ ತಳಿಗಳಾದ ಗಿರ್, ಸಹಿವಾಲ್, ಒಂಗೋಲ್, ಥಾರ್‌ಪಾರ್ಕರ್ ಇಂತಹವುಗಳನ್ನು ತೆಗೆದುಕೊಂಡು ಬಂದು ಸಾಕಿದರೆ ಹೆಣ್ಣು ಕರು ಹಾಕಿದರೆ ಪರವಾಗಿಲ್ಲ, ಹಾಲು ಸಿಗುತ್ತದೆ, ಅವರಿಗೂ ಅಭಿವೃದ್ಧಿಯಾಗುತ್ತದೆ. ಇದರಿಂದ ಬೇಸಾಯಕ್ಕೆ ಅನುಕೂಲವಾಗುತ್ತದೆಯೇ? ವ್ಯವಸಾಯಕ್ಕೆ ಅನುಕೂಲವಾಗುತ್ತದೆಯೇ? ಹಾಗೆ ಇದ್ದರೆ . . .

**ಶ್ರೀ ಮರಿತಿಬ್ಬೇಗೌಡ:-** ಇನ್ನು ಮುಂದೆ ಕಾಯ್ದೆಯಲ್ಲಿ ಎಲ್ಲವನ್ನೂ ಹೆಣ್ಣು ಕರು ಹಾಕುವ ಹಾಗೆ ಮಾಡುತ್ತದೆ ಈ ಸರ್ಕಾರ.

**ಶ್ರೀ ಎಸ್.ಎಲ್. ಭೋಜೇಗೌಡ:** ಇಂಜಕ್ಷನ್ ಕೊಡುತ್ತಿದ್ದಾರೆಯೇ? ಆಯಿತು. ಹಾಗಾಗಿ ಮಾನ್ಯ ಸಭಾಪತಿಯವರೇ,

**ಡಾ|| ತೇಜಸ್ವಿನಿ ಗೌಡ:** ಸಾವಯವ ಕೃಷಿಗೆ ಗೊಬ್ಬರ . . . .

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:** ಈ ರೀತಿ ಅಡಚಣೆ ಮಾಡಿದರೆ ನಾನು ಏನು ಮಾಡಲಿ?

**ಡಾ|| ತೇಜಸ್ವಿನಿ ಗೌಡ:** ಗೌಡ್ರೆ, ಇದು ಅಡಚಣೆಯಲ್ಲ. ಸಾವಯವ ಕೃಷಿಗೆ ಗೊಬ್ಬರಕ್ಕಾದರೂ ಸಹಿತ ದನ-ಕರುಗಳು ಬೇಕಾ ಅಥವಾ ಬೇಡವಾ ಎಂದು ಕೇಳುತ್ತಿದ್ದೇನೆ ಅಷ್ಟೆ.

**ಶ್ರೀ ಎಸ್.ಎಲ್. ಭೋಜೇಗೌಡ:** ಹೌದು ಬೇಕು. ನಾನು ನೋಡಿ ದನ ಸಾಕುವ ವಿಚಾರ ಅಂದರೆ ಗೋಸಂಪನ್ಮೂಲವನ್ನು ವೃದ್ಧಿ ಮಾಡುವುದಕ್ಕೆ ಹೇಳುತ್ತಿದ್ದೇನೆ. ಆದರೆ, practical difficulty ಇದೆ. what is the practical difficulty? ನನಗೇ ಹೊಟ್ಟೆಗೆ ಇಲ್ಲ, ಈ ರೀತಿ ಪರಿಸ್ಥಿತಿ ಇರುವಾಗ ನಾನು 300/- ರೂ.ಗಳನ್ನು ಪ್ರತಿ ದಿನ ಖರ್ಚು ಮಾಡಿ ನಾನು ಹೇಗೆ ಕರು ಸಾಕಲಿ? ಆ ಪರಿಸ್ಥಿತಿಯಿದೆ. ಅದಕ್ಕೆ ನಾನು ಒಂದು ಸಲಹೆ ಕೊಡುತ್ತಿದ್ದೇನೆ. ಮೈಸೂರು ಮಹಾರಾಜರ ಕಾಲದಲ್ಲಿ ಅಮೃತ್‌ಮಹಲ್ ತಳಿ ತಂದರು. ಯಾವುದು ಅಮೃತ್‌ಮಹಲ್ ತಳಿ? ಅಂತಹ ಅಮೃತ್‌ಮಹಲ್ ತಳಿ ಇಡೀ ದೇಶದಲ್ಲಿ ಇಲ್ಲ, ಇಡೀ ಪ್ರಪಂಚದಲ್ಲಿಯೇ ಇಲ್ಲ. ಇವತ್ತು ಅಮೃತ್‌ಮಹಲ್ ಕಾವಲ್‌ಗೆ 2,000,00 ಎಕರೆ ಜಮೀನಿದೆ. ಆದರೆ ಇವತ್ತಿನದಿವಸ ಹೆಚ್ಚು-ಕಡಿಮೆ 50-60 ಸಾವಿರ ಎಕರೆ ಜಮೀನನ್ನು ಇವತ್ತು ಒತ್ತುವರಿ ಮಾಡಿದ್ದಾರೆ. ಇವತ್ತಿನವರೆಗೂ ಸಹಿತ ನಾವು ಅವರನ್ನು ಬಿಡಿಸುವುದಕ್ಕೆ ಆಗಿಲ್ಲ. ಆ ಜಾಗವನ್ನು ಖಾಲಿ ಮಾಡಿಸಿ ಅಲ್ಲಿ ನೀವು ಇಂತಹ ಗೋಶಾಲೆಗಳನ್ನು ಮಾಡಿ. ದನಗಳು ಮೇಯುವುದಕ್ಕೂ ಆಗುತ್ತದೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಾಗವೂ ಸಿಗುತ್ತದೆ. ಅಮೃತ್ ಮಹಲ್ ಕಾವಲ್ ಸುಮಾರು 2 ಲಕ್ಷ ಎಕರೆಯಿದೆ. ಅಮೃತ್ ಮಹಲ್ ತಳಿ ಎಂದರೆ ನಮ್ಮ ಜಮೀನು ಕಾಯುವಂತಹ ತಳಿ ಅದು. ಅಮೃತ್ ಮಹಲ್ ದನ ಬರುತ್ತಿದ್ದರೆ ಆ ಸೌಂಡ್ ಅದನ್ನೆಲ್ಲಾ ಒಂದು ಕಾಲದಲ್ಲಿ ನೋಡಿದರೆ ಈಗಲೂ ಸಹಿತ ಅದು ಇದೆ. ನಮ್ಮ ಲಿಂಗದಹಳ್ಳಿ ಹಾಗೂ ಅಜ್ಜಂಪುರದಲ್ಲಿದೆ ಮತ್ತು ಬೀರೂರಿನಲ್ಲಿದೆ. ಮೊನ್ನೆ ನಾನು ಒಂದು ಪ್ರಶ್ನೆ ಕೇಳಿದ್ದೆ, ಅದು ಬಂದಿಲ್ಲ, ಅಮೃತಮಹಲ್‌ನ ಒಂದೇ ಒಂದು ಜಾಗದಲ್ಲಿ ಸುಮಾರು 12–13 ಲಕ್ಷ ರೂಪಾಯಿಗಳಿಗೆ ಹರಾಜಿನಲ್ಲಿ ನಾನು ಗೊಬ್ಬರ ತೆಗೆದುಕೊಂಡಿದ್ದೆ. ಇಷ್ಟು ವರ್ಷಗಳ ಇತಿಹಾಸದಲ್ಲಿ ರೂ.13 ಲಕ್ಷ ಬೆಲೆಯ ಗೊಬ್ಬರವನ್ನೇ ಅವರು ಮಾರಾಟ ಮಾಡಿಲ್ಲ. ಇಷ್ಟು ವರ್ಷಗಳ ಗೊಬ್ಬರ ಏನಾಯಿತು? ಅಜ್ಜಂಪುರದಲ್ಲಿ ಏನಾಯಿತು, ಬೀರೂರಿನಲ್ಲಿ ಏನಾಯಿತು? ಇಂತಹ ಅಮೃತ್‌ಮಹಲ್ ಕಾವಲ್ ಹತ್ತಾರು ಇವೆ. ಆಗ ಅಮೃತ್‌ಮಹಲ್ ತಳಿಗಳನ್ನು ನೀವು improve ಮಾಡಿದರೆ ಒಂದು ಹೋರಿ ಕರುವಿಗೆ ಅಂದರೆ ಒಂದು ಹೋರಿ ಕರು ಹಾಕಿದರೆ ಈಗ ಒಂದು ಲಕ್ಷ ರೂಪಾಯಿಗಳು ಸಿಗುತ್ತದೆ, ಎರಡು ಲಕ್ಷ ರೂಪಾಯಿಗಳು ಸಿಗುತ್ತದೆ, 5 ಲಕ್ಷ ರೂಪಾಯಿಗಳವರೆಗೆ ವ್ಯಾಪಾರವಾಗುತ್ತದೆ. ಒಂಗೋಲ್ ಏನೋ ಹೇಳಿದ್ದೀರಲ್ಲಾ? ಈ ಹೋರಿ ಕರು ಹಾಕಿದರೆ ನಾವು ಎಲ್ಲೋ ತೆಗೆದುಕೊಂಡು ಬಿಡಬೇಕು, ಗಿರ್, ಸಹಿವಾಲ್, ಒಂಗೋಲ್, ಥಾರ್‌ಪಾರ್ಕರ್ ಏನೋ ಹೇಳಿದ್ದೀರಲ್ಲಾ? ಅವುಗಳಿಂದ ಬೇಸಾಯ ಮಾಡುವುದಕ್ಕೂ ಆಗುವುದಿಲ್ಲ, ಹೋರಿಗಳಿಂದ ಎತ್ತಿನ ಗಾಡಿ ಓಡಿಸುವುದಕ್ಕಾಗುವುದಿಲ್ಲ. ಆದರೆ, ಅಮೃತ್‌ಮಹಲ್ ತಳಿಒಂದು ಹೋರಿ ಕರು ಆದರೆ ಹುಟ್ಟಿದ ಹೋರಿ ಕರು ಎರಡು ತಿಂಗಳುಗಳು ಸಾಕಿ ಹೊರಗಡೆಗೆ ಕಳುಹಿಸುತ್ತೀರಿ ಎಂದರೆ ನಿಮಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಇವುಗಳನ್ನು ದಯಮಾಡಿ ಅಮೃತ್ ಮಹಲ್‌ಗೆ ಬಿಡಿ, ಈಗಲೂ ಸಹಿತ ಕಾಲ ಮಿಂಚಿಲ್ಲ. ಅದರ ಬಗ್ಗೆ ಮಾಡಬೇಕೆಂದು ಅತ್ಯಂತ ವಿನಂತಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):** ಮಾನ್ಯ ಸಭಾಪತಿಯವರೇ, ಗೌಡರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ, ಸರಿಯಿದೆ. ಗೋಹತ್ಯೆ ನಿಷೇಧದ ಹಿನ್ನೆಲೆಯಲ್ಲಿ ಗೋವುಗಳ ಸಂಖ್ಯೆ ಜಾಸ್ತಿಯಾಗುತ್ತದೆ. ಜಿಲ್ಲಾವಾರು ಗೋಶಾಲೆಗಳನ್ನು ಎಷ್ಟು ಪ್ರಮಾಣದಲ್ಲಿ ಮಾಡಬೇಕು, ಅದನ್ನು ತಾಲ್ಲೂಕುವಾರಿಗೆ ವಿಸ್ತರಿಸಬೇಕೇ? ಇನ್ನು 2–3 ವರ್ಷಗಳಲ್ಲಿ ಗೋವುಗಳ ಪ್ರಮಾಣ ಎಷ್ಟು ಹೆಚ್ಚಾಗಬಹುದು? ಅವುಗಳನ್ನು ಸಾಕುವುದಕ್ಕೆ ಬೇಕಾದ ಒಟ್ಟು ವಿಸ್ತೀರ್ಣವೆಷ್ಟು? ಅದು ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ತಾವು ಏನಾದರೂ ಯೋಚನೆ ಮಾಡಿದ್ದರೆ ಅದು ಹೇಳಿ. ಸರ್ಕಾರಕ್ಕೆ ಅನುಕೂಲವಾಗುತ್ತದೆ. ನಿಮ್ಮ ಮನಸ್ಸಿನಲ್ಲಿರುವುದು ಏನಾದರೂ ಇದ್ದರೆ ಹೇಳಿ. ಅದಕ್ಕೆ ಪರಿಹಾರವೇನು? ನೀವು ಹೇಳಿರುವಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಳಿಗಳನ್ನು ಸಾಕುವುದೇ ಪರಿಹಾರವೇ? ಅಥವಾ ಅದನ್ನು ಬಿಟ್ಟು ಗಂಡು ಕರುಗಳು ಇರುತ್ತವಲ್ಲಾ, ಯಾವ ರೀತಿ ಪರಿಹಾರ ಮಾಡಬೇಕು?

**ಶ್ರೀ ಎಸ್.ಎಲ್. ಭೋಜೇಗೌಡ** ಮಾನ್ಯ ಸಭಾನಾಯಕರೆ, ಒಂದು ಮಾತು ಹೇಳಿದ್ದೇನೆ. ಎರಡು ಲಕ್ಷ ಎಕರೆ ಜಮೀನು ನಮಗಿದೆ. ನಮ್ಮ ಜಮೀನು ಯಾರೋ ಮಜಾ ಮಾಡುತ್ತಿದ್ದಾರೆ. ಆ ಜಾಗದಲ್ಲಿ ಇವುಗಳನ್ನು ತೆಗೆದುಕೊಂಡು ಹೋಗಿ ಬಿಡಿ. ಅದಕ್ಕೂ ಅವಕಾಶವಿದೆಯೆಲ್ಲಾ? ಅದನ್ನು ಏಕೆ ಮಾಡಬಾರದು? ಅದನ್ನು ಮಾಡಿ  ಎಂದು ಹೇಳುತ್ತಿದ್ದೇನೆ. ದಯಮಾಡಿ ಅದನ್ನು ಮಾಡಬೇಕಾಗುತ್ತದೆ. ಹಾಗಾಗಿ, ಇನ್ನೂ ಒಂದು ಮಾತು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು 'ಅನುಗ್ರಹ ಕೊಡುಗೆ' ಕೊಟ್ಟಿದ್ದಾರೆ, ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ, ಕುರಿ ಸತ್ತರೆ ಅದಕ್ಕೆ ಪರಿಹಾರ immediate ಕೊಡುವ ಬಗ್ಗೆ ಮಾಡಿದ್ದಾರೆ. ಮೊನ್ನೆ ಕಡೂರಿನಲ್ಲಿ ಅಕಾಲಿಕ ಮಳೆಯಿಂದ 250 ಕುರಿಗಳು ಸತ್ತು ಹೋಗಿವೆ, ಅವುಗಳಿಗೆ ಒಂದು ರೂಪಾಯಿ ಪರಿಹಾರ ಸಹಿತ ಸಿಗಲಿಲ್ಲ. ಈ ಅನುಗ್ರಹ ಕೊಡುಗೆಯಲ್ಲಿ ಪರಿಹಾರ ಧನವಾಗಿ ದಯಮಾಡಿ, ಒಂದು ಕುರಿಗೆ ಕನಿಷ್ಠ 10 ಸಾವಿರ ರೂಪಾಯಿಗಳನ್ನು ಮಾಡಬೇಕು, ಬಹಳ ಕಷ್ಟವಿದೆ. ಪಾಪ ಅವರ ಜೀವನದ ಪ್ರಶ್ನೆ ಇರುತ್ತದೆ. ರೂ.10 ಸಾವಿರ ರೂಪಾಯಿಗಳನ್ನು ಒಂದು ಕುರಿಗೆ ಮಾಡಬೇಕು, ಅದು ಅಷ್ಟೊಂದು ಏನೂ ದೊಡ್ಡ ವಿಚಾರವಲ್ಲ. ಒಂದು ಕುರಿಗೆ 10 ಸಾವಿರ ರೂಪಾಯಿಗಳನ್ನು ಮಾಡಿದರೆ ಏನಾಗುತ್ತದೆ ಅಂದರೆ, ನನ್ನ ಕುರಿ ಏನಾದರೂ ಹೆಚ್ಚು-ಕಡಿಮೆಯಾಗಿ ಸತ್ತರೆ ನನಗೆ ಸರ್ಕಾರ ರಕ್ಷಣೆಗೆ ಬರುತ್ತದೆ, ನಾನು ಈ ವ್ಯವಹಾರದಲ್ಲಿ ಅಂದರೆ ಇಂತಹ ಒಂದು ಕೃಷಿ ವ್ಯವಸಾಯದಲ್ಲಿ ನನಗೆ ಮುಂದುವರೆಯುವುದಕ್ಕೆ ಧೈರ್ಯ ಬರುತ್ತದೆ, ಎಲ್ಲಾ ಯುವಕರು ಅಂದರೆ ಯಾರ್‍ಯಾರು ಕೆಲಸವನ್ನು ಬಿಟ್ಟು ಬಂದಿದ್ದಾರಲ್ಲಾ ಅವರಿಗೆಲ್ಲಾ ಧೈರ್ಯ ಬರುತ್ತದೆ, ಅವರಿಗೆ ಆತ್ಮಸ್ಥೈರ್ಯ ತುಂಬಿದ ಹಾಗೆ ಆಗುತ್ತದೆ. ಹಾಗಾಗಿ ರೂ.10 ಸಾವಿರಗಳ ಬೆಲೆ ನಿಗದಿ ಮಾಡಿಲ್ಲ. ರೂ.10 ಸಾವಿರ ರೂಪಾಯಿಗಳನ್ನು ನಿಗದಿ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ನಾನು ವಿನಂತಿ ಮಾಡುತ್ತೇನೆ. ಹಾಗಾಗಿ ಆ ಕೆಲಸವಾಗಬೇಕು. ಇನ್ನೂ ಬಹಳಷ್ಟು ಜನ ಮಾತನಾಡುವವರಿದ್ದಾರೆ. ಮಾತನಾಡುತ್ತಾರೆ.

ನಾನು ಈಗ ನಮ್ಮ ಶಿಕ್ಷಣ ಕ್ಷೇತ್ರದಿಂದ ಆಯ್ಕೆಯಾಗಿರುವಂತಹ ಸಂದರ್ಭದಲ್ಲಿ ನಾನು ನಮ್ಮ ಸಭಾ ನಾಯಕರಿಗೆ ಮೊನ್ನೆ ಕೆ.ಡಿ.ಪಿ. ಮೀಟಿಂಗ್‌ನಲ್ಲಿ ಮನವಿ ಮಾಡಿದ್ದೇನೆ. ಮಾನ್ಯ ಸಭಾನಾಯಕರೆ, ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು, ತಮ್ಮ ಮುಖಾಂತರ ನಾನು ಹೇಳುತ್ತಿದ್ದೇನೆ. ನೋಡಿ. ಏನು ಒಂದು ಕಾಲದಲ್ಲಿ ಯಾರೋ ಜಮೀನನ್ನು ಶಾಲೆಗಳಿಗೆ ಎಂದು ದಾನ ಕೊಟ್ಟಿದ್ದಾರೆ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಾಲೆಗಳಾಗಿರುವಂತಹ ಸಂದರ್ಭದಲ್ಲಿ ಈಗ ಹೈವೇ ಬಂತು. ಹೈವೇ ಬಂದು National Highway Authority of India ಯಿಂದ ಅದಕ್ಕೆ ಪರಿಹಾರಧನ ಬಂತಪ್ಪ, ಕೆಲವು ಶಾಲೆಗಳಿಗೆ ಕೋಟಿಗಟ್ಟಲೆ ಬಂದಿದೆ, ಜ್ಯೂನಿಯರ್ ಕಾಲೇಜುಗಳಿಗೂ ಪರಿಹಾರ ಬಂದಿದೆ. ಅದರಮೇಲೆ ನಿಮಗೆ ಏಕೆ ಕಣ್ಣು? ಅದ ಸರ್ಕಾರವೇ ಆಗಿದೆ. ಬೇರೆ ಏನೂ ಅಲ್ಲ. ಂಶಾಲೆಯ ಅಭಿವೃದ್ಧಿ ಮಾಡುವುದಕ್ಕೆ ಆ ಶಾಲೆಯಲ್ಲಿ ಉತ್ತಮವಾದಂತಹ ಕಟ್ಟಡಗಳನ್ನು ಕಟ್ಟುವುದಕ್ಕೆ, ಉತ್ತಮವಾದಂತಹ ವ್ಯವಸ್ಥಿತವಾದಂತಹ ಎಲ್ಲಾ ಮೂಲಭೂತಸೌಕರ್ಯಗಳನ್ನು ಕೊಡುವುದಕ್ಕೆ, basic civic amenities ಕೊಡುವುದಕ್ಕೆ ದಯಮಾಡಿ ಆ ಹಣವನ್ನು ಉಪಯೋಗ ಮಾಡಿ. ಮಾನ್ಯ ಸಭಾಪತಿಯವರೆ, ಹೈಟೆಕ್ ಸ್ಕೂಲ್‌ಗಳನ್ನು ಮಾಡಿ. ಇಲ್ಲಿ ನಮಗೆ ಶಾಸಕರಿಗೆ ಮೂರು-ಮೂರು ಶಾಲೆಗಳನ್ನು ನೀವು ದತ್ತು ತೆಗೆದುಕೊಳ್ಳಿ, ದತ್ತು ತೆಗೆದುಕೊಳ್ಳಿ ಎಂದು ನಮಗೆ ಹೇಳಿದರೆ ನಾವು ಎಲ್ಲಿಗೆ ಹೋಗೋಣ ಸ್ವಾಮಿ? ಮತ್ತೆ ವಾಪಸ್ಸು ಇಲ್ಲಿಗೇ ದುಡ್ಡು ಕೊಡ್ರಿ ಎಂದು ಬರಬೇಕಲ್ಲವೇ? ಆ ರೀತಿಯ ಮಾಡೆಲ್ ಸ್ಕೂಲ್ ಅನ್ನು, ನೀವು ಅದನ್ನು ತೆಗೆದುಕೊಂಡು ದಯಮಾಡಿ, ಸರ್ಕಾರದ ಕಾರ್ಯದರ್ಶಿಗಳು ಕೂಡಲೇ ಹಣ ನಮಗೆ ಕಳುಹಿಸಿಕೊಡಬೇಕು, . ನಮಗೆ ಚೆಕ್ ಕೊಡಬೇಕೆಂದು ಪತ್ರ ಬರೆಯುತ್ತಿದ್ದಾರೆ ದಯಮಾಡಿ ಆ ಕೆಲಸವಾಗಬಾರದು. ಆ ಶಾಲೆಯ ಅಭಿವೃದ್ಧಿ ಮಾಡಿ. ನಾನು ಏನೂ ಬೇರೆ ಹೇಳಲಿಲ್ಲ. ಆ ಶಾಲೆಯ ಅಭಿವೃದ್ಧಿ ಮಾಡಿ. ಉತ್ತಮವಾದಂತಹ ಕಟ್ಟಡಗಳನ್ನು ಕಟ್ಟಿ. ಸಭಾ ನಾಯಕರೆ, ಆ ವಿಚಾರದಲ್ಲಿ ದಯವಿಟ್ಟು ಬಹಳ ಗಂಭೀರವಾಗಿ ತೆಗೆದುಕೊಂಡು ಈ ಕೆಲಸವಾಗಬೇಕೆಂದು ಎಲ್ಲರ ಪರವಾಗಿ ನಾನು ಕೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:** ಮಾನ್ಯ ಸಭಾಪತಿಯವರೆ, ಈ ರಾಷ್ಟ್ರೀಯ ಹೆದ್ದಾರಿ ಹಾಯ್ದು ಹೋದ ಕೆಲವು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಒಂದಿಷ್ಟು ಜಾಗ ಹೋಗಿದೆ. ಅದಕ್ಕೆ ರೂ.25-30 ಲಕ್ಷಗಳ ಪರಿಹಾರ ಸಿಕ್ಕಿದೆ. ಆಯಾಯ ಶಾಲೆಯವರು ಆ ಶಾಲೆಗಳನ್ನು ಮುಂದುವರೆಸುವುದಕ್ಕೆ ನಮಗೆ ಅನುದಾನವನ್ನು ಕೊಡಬೇಕೆಂಬ ಬೇಡಿಕೆ ಇಟ್ಟಿದ್ದಾರೆ. ಅದನ್ನೇ ಭೋಜೇಗೌಡರು ಮತ್ತು ಸ್ಥಳೀಯ ಶಾಸಕರೆಲ್ಲರೂ ಹೇಳುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಕಾರ್ಯದರ್ಶಿಗಳು ಹಾಗೂ ಮಾನ್ಯ ಮಂತ್ರಿಗಳ ಜೊತೆಗೆ ಮಾತನಾಡಿ ಇದಕ್ಕೆ ಪರಿಹಾರ ಕಂಡುಹಿಡಿಯುತ್ತೇವೆ.

**ಉಪ ಸಭಾಪತಿಯವರು:** ಭೋಜೇಗೌಡರೆ ಮಾತನಾಡಿ. ಭೋಜೇಗೌಡ್ರೆ, 5 ನಿಮಿಷದೊಳಗೆ ಮುಗಿಸಿಬಿಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್. ಭೋಜೇಗೌಡ**: ಆಯಿತು ಮುಗಿಸುತ್ತೇನೆ. ನೋಡಿ, 400 ಉರ್ದು ಶಾಲೆಗಳಲ್ಲಿ ಇಂಗ್ಲೀಷ್ ಶಿಕ್ಷಣ ಎಂದು ಮಾನ್ಯ ಮುಖ್ಯಮಂತ್ರಿಗಳು ಕಳೆದ 2020ನೇ ಸಾಲಿನ ಆಯವ್ಯಯದಲ್ಲಿ ಹಾಗೂ 2021–22ನೇ ಸಾಲಿನ ಆಯವ್ಯಯದಲ್ಲಿಯೂ ಸಹ ಹೇಳಿದ್ದೀರಿ.

**(ಮುಂದು)**

**(492) 18.03.2021 01.50 ಎಸ್‌ವಿ–ಬಿಎನ್‌ಎಸ್**

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):–**

ದಯಮಾಡಿ ಅತಿ ಶೀಘ್ರವಾಗಿ ಆಂಗ್ಲ ಭಾಷೆಯನ್ನು ಕಲಿಸುವಂತಹ ಕೆಲಸ ಅಲ್ಲಿ ಆಗಬೇಕು. ಉರ್ದು ಶಾಲೆ ಸರ್ಕಾರಿ ಶಾಲೆಯಾಗಿದ್ದು, ಅಲ್ಲಿ ಮಾತೃಭಾಷೆಯನ್ನು ಕಲಿಸಬೇಕು. 400 ಉರ್ದು ಶಾಲೆಗಳಲ್ಲಿ ಆ ಕೆಲಸ ಆಗಬೇಕಾಗಿದೆ.

ನಿನ್ನೆ ಮಾನ್ಯ ಮರಿತಿಬ್ಬೇಗೌಡರು ಮಾತನಾಡುವ ಸಂದರ್ಭದಲ್ಲಿ ಟಚಿಡಿಣ ಛಿಟಚಿ ಡಿಂಂಟ ಗೆ ರೂ.50 ಕೋಟಿಗಳನ್ನು ನೀಡಲಾಗಿದೆಯೆಂದು ಹೇಳಿದರು. 430 ಸರ್ಕಾರಿ ಕಾಲೇಜು, 87 ಪಾಲಿಟೆಕ್ನಿಕ್, 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಇಲ್ಲಿ smart class room ಗಾಗಿ ರೂ.50 ಕೋಟಿ ಎಂದರೆ 'ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎನ್ನುವ ಗಾದೆ ಮಾತಿನಂತಾಗುತ್ತದೆ. ರೂ.50 ಕೋಟಿಗಳನ್ನು ಎಲ್ಲರಿಗೂ ಹಂಚುವ ಬದಲು ಕೆಲವನ್ನು ಮಾತ್ರ ಆಯ್ದುಕೊಂಡು ಮಾಡಿದರೆ ಕನಿಷ್ಠ ಪಕ್ಷ ಆ ವರ್ಷಕ್ಕೆ ಮುಗಿದು ಹೋಗುತ್ತದೆ. ಅದರ ಜೊತೆಯಲ್ಲಿ ಇದಕ್ಕಾಗಿ ಇನ್ನೂ ರೂ.250 ಕೋಟಿಗಳನ್ನು ಮೀಸಲಾಗಿಡಬೇಕೆಂದು ಕೋರುತ್ತೇನೆ.

276 ಪಬ್ಲಿಕ್ ಶಾಲೆಗಳು ಪ್ರಾರಂಭವಾಗಿ 2019–20, 2020–21, 2021–22 ಮೂರು ವರ್ಷಗಳಾಯಿತು. ಮೂರು ವರ್ಷಕ್ಕೆ 276 ಪಬ್ಲಿಕ್ ಶಾಲೆಗಳು ಅಷ್ಟೇ ಸಂಖ್ಯೆಯಲ್ಲೇ ಇರಬೇಕೆ? ಅವುಗಳಿಗೆ ಮೂಲಭೂತ ಸೌಲಭ್ಯ ಕೊಡುವುದಕ್ಕಾಗುವುದಿಲ್ಲ ಎನ್ನುವ ವಿಚಾರ ಬೇರೆಯದೇ ಇದೆ. ಅದು secondary. ಆದರೆ, soon after the Public Schools are started, what are the changes? ಅದರ ಕಡೆಗೆ ಗಮನವನ್ನು ಹರಿಸಬೇಕು. ಪಬ್ಲಿಕ್ ಶಾಲೆಗಳಿಗೆ ಅಷ್ಟೊಂದು ಡಿಮ್ಯಾಂಡ್ ಇದೆ. ನಾಲ್ಕು ಐದು ವಿಭಾಗಗಳನ್ನು ಹೆಚ್ಚಿಸಲಾಗಿದೆ. ಎಲ್ಲಾ ಮಕ್ಕಳು ಅಲ್ಲಿ ಬಂದು ಸೇರುತ್ತಿದ್ದಾರೆ. ಹಾಗಾಗಿ ಪ್ರತಿ ವರ್ಷ 50 ಪಬ್ಲಿಕ್ ಶಾಲೆಗಳನ್ನು ವಿಸ್ತರಣೆ ಮಾಡುವುದರ ಕಡೆ ಸರ್ಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಗಮನ ನೀಡಬೇಕು. ಜೊತೆಗೆ ಮೂಲಭೂತ ಸೌಕರ್ಯ ನೀಡುವ ವಿಚಾರದಲ್ಲಿ ಕನಿಷ್ಠ ರೂ.5 ಕೋಟಿಗಳನ್ನು ಒಂದು ಪಬ್ಲಿಕ್ ಶಾಲೆಗೆ ನೀಡಬೇಕು.

ಶಿಕ್ಷಣಕ್ಕೆ ಮತ್ತು ಆರೋಗ್ಯಕ್ಕೆ ಆದ್ಯತೆಯನ್ನು ನೀಡಬೇಕು. ಇತರ ಜನಪ್ರಿಯ ಯೋಜನೆಗಳನ್ನು ಒಂದೆರಡು ವರ್ಷ ಕೈ ಬಿಟ್ಟರೆ ಏನೂ ಆಗುವುದಿಲ್ಲ. ಪ್ರಾಣ ಹೋಗುವುದಿಲ್ಲ. ಹೇಗೋ ಬದುಕುತ್ತೇವೆ. ಎಲ್ಲಿಯೋ ಊಟ ಮಾಡುತ್ತೇವೆ. ಆದರೆ ಶಿಕ್ಷಣಕ್ಕೆ ಆದ್ಯತೆ ನೀಡಬೇಕೆನ್ನುವ ವಿಚಾರದಲ್ಲಿ ಕನಿಷ್ಠ ರೂ.5 ಕೋಟಿಗಳನ್ನು ಒಂದು ಪಬ್ಲಿಕ್ ಶಾಲೆಗೆ ನೀಡುವ ಕೆಲಸ ಮಾಡಬೇಕು.

ಇಂದು ಯಾವ ಸರ್ಕಾರಿ ಶಾಲೆಯಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿದೆ? ಮಕ್ಕಳು ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಪರದಾಡುತ್ತಿದ್ದಾರೆ. ಇದನ್ನು ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಬೇಕು. ಸರ್ಕಾರಿ ಶಾಲೆಗಳಲ್ಲಿ ಯಾವ ಶಾಲೆಯಲ್ಲಿಯೂ ಒಬ್ಬ ಅಟೆಂಡರ್ ಇರುವುದಿಲ್ಲ. ಕಸವನ್ನು ಶಿಕ್ಷಕರೇ ಗುಡಿಸಬೇಕು. ಮುಖ್ಯೋಪಾಧ್ಯಾಯರಾದರೂ ಕಸ ಹೊಡೆಯದಿದ್ದರೆ, ಇನ್ಸ್‌ಪೆಕ್ಟರ್ ಬಂದು ಏಕೆ ಕಸ ಗುಡಿಸಿಲ್ಲ ಎಂದು ಪ್ರಶ್ನಿಸುತ್ತಾರೆ. ಮಕ್ಕಳು ಕಸ ಗುಡಿಸಿದರೆ ಮಕ್ಕಳು ಏಕೆ ಕಸ ಗುಡಿಸಿದರೆಂದು ಕೇಳುತ್ತಾರೆ. ಅದರ ಫೋಟೊ ತೆಗೆದು ಹಾಕಿ ಶಿಕ್ಷಕರನ್ನು ಅಮಾನತು ಮಾಡುತ್ತಾರೆ. ದಯಮಾಡಿ ಸರ್ಕಾರ ಇದರ ಬಗ್ಗೆ ಗಮನ ವಹಿಸಬೇಕು.

ಕೋವಿಡ್ ಸಮಯದಲ್ಲಿ ಶಾಲೆಗಳಲ್ಲಿ ಬಿಸಿನೀರು ಲಭಿಸುವಂತೆ ಮಾಡಬೇಕು. ನಾನಂತೂ ನನಗೆ ಇತ್ತೀಚಿನ ದಿನಗಳಲ್ಲಿ ಬಂದ ಜಕಾಟಿಜ ನಲ್ಲಿ ಸುಮಾರು 60-70 ಶಾಲೆಗಳಿಗೆ ಬಿಸಿನೀರಿನ ವ್ಯವಸ್ಥೆಗಾಗಿ ಹಣವನ್ನು ನೀಡಿದ್ದೇನೆ. ಅದೇ ರೀತಿ ಎಲ್ಲಾ ಶಾಲೆಗಳಲ್ಲಿಯೂ ಬಿಸಿನೀರು ದೊರೆಯುವಂತಾಗಬೇಕೆಂದು ಹೇಳುತ್ತೇನೆ.

ಇನ್ನು ಮೊರಾರ್ಜಿ ದೇಸಾಯಿ ಶಾಲೆಯು ನಾಲ್ಕು ವಿಭಾಗಗಳಲ್ಲಿದ್ದು, ಕೇವಲ ಒಂದು ಶಾಲೆಯಲ್ಲಿ ಚಟುವಟಿಕೆಯನ್ನು ಆರಂಭಿಸಿದರೆ ಆಗುತ್ತದೆಯೇ? ದಯಮಾಡಿ ಇದರ ಬಗ್ಗೆಯೂ ಗಮನ ಹರಿಸಬೇಕು. ಮೊರಾರ್ಜಿ ದೇಸಾಯಿ ಶಾಲೆಗಳಲ್ಲಿ ಶೇ.100 ರಷ್ಟು ಫಲಿತಾಂಶ ಬರುತ್ತಿದೆ.

**ಉಪ ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ನೀವು ಮಾತನಾಡಲಿಕ್ಕೆ ಪ್ರಾರಂಭಿಸಿ 1 ಗಂಟೆ 10 ನಿಮಿಷಗಳ ಕಾಲ ಆಗಿದೆ. ದಯಮಾಡಿ ಮುಗಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಭೋಜನ ವಿರಾಮದ ನಂತರ ನನಗೆ ಮಾತನ್ನು ಮುಂದುವರೆಸಲು ಅವಕಾಶ ಕೊಡಿ.

**ಉಪ ಸಭಾಪತಿಯವರು:-** ನಾನು ಮೊದಲೇ ನಿಮ್ಮ ಪಕ್ಷದ ಮುಖ್ಯ ಸಚೇತಕರಿಗೆ ಹೇಳಿದ್ದೇನೆ. ನಿಮ್ಮ ಪಕ್ಷಕ್ಕಾಗಿ ಕೊಟ್ಟಿರುವಂತಹ ನಿರ್ಧರಿತ ಸಮಯವನ್ನು ಸಂಪೂರ್ಣವಾಗಿ ತಮಗೆ ನೀಡಿದರೂ ನಮ್ಮ ಅಭ್ಯಂತರವೇನಿಲ್ಲ. ನೋಡಿ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಅವಕಾಶವನ್ನು ಯಾವಾಗ ನೀಡುತ್ತೀರಿ?

**ಉಪ ಸಭಾಪತಿಯವರು:-** ನಿಮ್ಮ ಪಕ್ಷದ ಮುಖ್ಯ ಸಚೇತಕರು ಹೆಸರುಗಳನ್ನು ನೀಡಿದ್ದು, ಅದರನ್ವಯ ಸಮಯವನ್ನು ಕೊಡಲಾಗುತ್ತದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರಿ ಶಾಲೆಗಳಿಗೆ ಯಾವ ಮಕ್ಕಳು ಹೋಗುತ್ತಾರೆ? Creamy layer of the Society ಯಲ್ಲಿರುವವರ ಮಕ್ಕಳು ಹೋಗಿ ಖಾಸಗಿ ಶಾಲೆಗಳಿಗೆ ಸೇರುತ್ತಾರೆ. ಅಳಿದುಳಿದ ಮಕ್ಕಳನ್ನು ಕರೆತಂದು ಸರ್ಕಾರಿ ಶಾಲೆಗಳಿಗೆ ಸೇರಿಸಲಾಗುತ್ತದೆ. ಉತ್ತಮ ಶಿಕ್ಷಣ, ಉತ್ತಮ ಫಲಿತಾಂಶ ನೀಡಬೇಕೆಂದು ಹೇಳುತ್ತಾರೆ. ಇನ್ಸ್‌ಪೆಕ್ಟರ್ ಬಂದು ಪರಿಶೀಲನೆ ಮಾಡುವಾಗ ಮಕ್ಕಳಿಗೆ ಪ್ರಶ್ನೆ ಮಾಡುತ್ತಾರೆ. ಮಕ್ಕಳು ಸರಿಯಾಗಿ ಉತ್ತರಿಸಲಿಲ್ಲವೆಂದರೆ ಅದಕ್ಕೆ ಶಿಕ್ಷಕರು ಹೊಣೆಯಾಗುತ್ತಾರೆ. ಈಗಂತೂ ಮಕ್ಕಳು ಶಾಲೆಗೆ ಬಂದಿರುವುದಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅನೇಕ ಶಿಕ್ಷಕರು ಒತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಶಿಕ್ಷಕರು ಒತ್ತಡದಿಂದ ಹೊರಬಂದು free mind ನಿಂದ ಕೆಲಸ ಮಾಡಬೇಕು. ಇನ್ಸ್‌ಪೆಕ್ಷನ್‌ಗೆ ಹೋದವರು 60 ಮಕ್ಕಳು ಒಂದೇ ರೀತಿಯಲ್ಲಿರಬೇಕೆಂದು ಹೇಳುತ್ತಾರೆ. ಶಾಲೆಯಲ್ಲಿ ಶೇ.100ರಷ್ಟು ಫಲಿತಾಂಶ ಬಂದರೆ ಸಂತೋಷ ಪಡದೆ, ಏಕೆ 10 ಜನ ಮೂರನೇ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆಂದು ಕೇಳುತ್ತಾರೆ. ಶೇ.90 ಫಲಿತಾಂಶ ಬಂದಿದೆ ಉಳಿದವರು ಏಕೆ ಅನುತ್ತೀರ್ಣರಾಗಿದ್ದಾರೆಂದು ಕೇಳುತ್ತಾರೆ. ನಾನು ಒಬ್ಬ ಇನ್ಸ್‌ಪೆಕ್ಟರ್ ಅವರನ್ನು ಕೇಳಿದೆ. ಅವರ ಮನೆಯ ವಿಚಾರವನ್ನು ತಿಳಿದುಕೊಂಡೆ. ಅವರ ಮನೆಯಲ್ಲಿ ಒಬ್ಬರು ನಿರ್ವಾಹಕರು, ಇನ್ನೊಬ್ಬರು ಪ್ರಥಮ ದರ್ಜೆ ಸಹಾಯಕರು, ಇವರು *State Officer* ಆಗಿದ್ದಾರೆ. ನಿಮ್ಮಂತೆ ನಿಮ್ಮ ಸಹೋದರರನ್ನು ಏಕೆ *State Officer* ಮಾಡಲಿಲ್ಲ ಎಂದು ಅವರನ್ನು ಪ್ರಶ್ನೆ ಮಾಡಿದೆ. ಶಿಕ್ಷಕರಿಗೆ ಬಹಳ ಒತ್ತಡವಿದ್ದು, ಆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯಾಗಬಾರದು. ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತಹ ಕೆಲಸ ಸರ್ಕಾರದಿಂದ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

Fire Extinguisher clearance ಕೊಡಬೇಕೆಂದು ಸರ್ವೋಚ್ಚ ನ್ಯಾಯಾಲಯದ ಆದೇಶವಿದೆ. ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳು ಎಂದು ಆದೇಶದಲ್ಲಿ ಹಾಕಿದ್ದು, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಿಗೆ ಏಕೆ ಮೊದಲ ಆದ್ಯತೆಯನ್ನು ನೀಡಬೇಕು? ಮೊದಲು ನಮ್ಮ ಮನೆ ಸರಿಯಾಗಬೇಕು. ಸರ್ಕಾರಿ ಶಾಲೆಗಳನ್ನು ಪ್ರಥಮ ಆದ್ಯತೆಯ ಮೇಲೆ ಸರಿ ಮಾಡಬೇಕು. ಸರ್ಕಾರಿ ಶಾಲೆಗಳಲ್ಲಿ Fire Extinguisher clearance ಮಾಡುವುದಕ್ಕೆ ಸರಿಯಾದ ರೀತಿಯಲ್ಲಿ ಮೂಲಭೂತ ಸೌಕರ್ಯ ಮಾಡಬೇಕು. ನಂತರ ಇನ್ನೊಬ್ಬರಿಗೆ role model ಆಗಿ. ಒಳ್ಳೆಯವರಾಗುವುದು ನೋಡಬೇಕು. Role model ಮೊದಲು ನಾವಾಗಬೇಕು. ಆ ಶಾಲೆಗಳಿಗೆ ಕಿರುಕುಳ ಕೊಡುವುದು ನಮ್ಮ ಸರ್ಕಾರಿ ಶಾಲೆಗಳಿಗೆ ಅನ್ವಯಿಸುವುದಿಲ್ಲವೇ? ಅದಕ್ಕೆ ಮೂಲಭೂತ ಸೌಕರ್ಯ ಮಾಡುವುದರ ಬಗ್ಗೆ ಆಯವ್ಯಯದಲ್ಲಿ ಏನೂ ಹೇಳಿರುವುದಿಲ್ಲ.

ಕೋವಿಡ್ ಸಮಯದಲ್ಲಿ ಅನೇಕ ಜನರು ಮೃತಪಟ್ಟರು. ಶಿಕ್ಷಕರೂ ಸಾಕಷ್ಟು ಜನ ನಿಧನರಾಗಿದ್ದಾರೆ. ರೂ.30 ಲಕ್ಷ ನೀಡುತ್ತೇವೆಂದು ಸರ್ಕಾರ ಹೇಳಿತ್ತು. ಯಾವ ಒಬ್ಬ ಆರೋಗ್ಯ ಕಾರ್ಯಕರ್ತರಿಗೂ ಕೊಟ್ಟಿಲ್ಲ, ಪೊಲೀಸ್ ಇಲಾಖೆಯವರಿಗೂ ಕೊಟ್ಟಿಲ್ಲ, ಶಿಕ್ಷಕರಿಗೂ ಕೊಟ್ಟಿಲ್ಲ. ತಕ್ಷಣ ಗಮನ ಹರಿಸಿ, ಕೋವಿಡ್ ವಾರಿಯರ್ಸ್‌ಗೆ ಪರಿಹಾರ ನೀಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಜಿಲ್ಲಾ ಆಸ್ಪತ್ರೆಗಳಲ್ಲಿ ಕನಿಷ್ಠ 25 ಬೆಡ್‌ಗಳ ಐ.ಸಿ.ಯು. ಮಾಡುವುದಾಗಿ ಹೇಳಿದ್ದರು. ತಾಲ್ಲೂಕು ಆಸ್ಪತ್ರೆಗೆ 5 ಬೆಡ್ ಹಾಕುತ್ತೇವೆಂದು ಹೇಳಿದ್ದರು. ನಾನು ವಿಚಾರಿಸಿದ್ದೇನೆ. ಈಗಾಗಲೇ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿಯೂ 25-30 ಬೆಡ್‌ಗಳ ಐ.ಸಿ.ಯು. ಇದ್ದು, ಅದನ್ನು ಉಳಿಸಿಕೊಂಡು ಹೋಗುವಂತಹ ಕೆಲಸ ಆಗಬೇಕು. ಈ ಆಯವ್ಯಯದಲ್ಲಿ ಅದಕ್ಕೆ ಅವಕಾಶ ಬೇಡ. ಏಕೆಂದರೆ ಈಗಾಗಲೇ ಹಣ ನೀಡಲಾಗಿದೆ. ಅದನ್ನು ಇಲ್ಲಿ ತೋರಿಸಿದರೆ ಅವ್ಯವಹಾರಕ್ಕೆ ಆಸ್ಪದವಾಗುತ್ತದೆಯೆನ್ನುವ ಅನುಮಾನ ನನಗೆ ಕಾಡುತ್ತಿದೆ. ಅವಕಾಶಕ್ಕಾಗಿ ಧನ್ಯವಾದಗಳು.

**ಉಪ ಸಭಾಪತಿಯವರು:-** ಸದನವನ್ನು ಮಧ್ಯಾಹ್ನ ಮೂರು ಗಂಟೆಯವರೆಗೆ ಮುಂದೂಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(493) 18–03–2021(3–10)ಎಂವಿ–ಜಿಆರ್**

**(ಮಧ್ಯಾಹ್ನ 1 ಗಂಟೆ 59 ನಿಮಿಷಗಳಿಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 19 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಸಭಾಪೀಠವನ್ನಲಂಕರಿಸಿದರು)**

**ವಿತ್ತೀಯ ಕಾರ್ಯಕಲಾಪ**

**2021–22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್(ವಿಧಾನಸಭೆಯಿಂದ ಚುನಾಯಿತರಾದವರು):–**ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ನೀಡಿರುವುದಕ್ಕೆ ಧನ್ಯವಾದಗಳು. ತಾವು ಸದನದಲ್ಲಿ ಇರಲಿಲ್ಲ. ಕಳೆದ ಮೂರು ದಿನಗಳಿಂದ ನನ್ನ ಹೆಸರನ್ನು ಕರೆಯುತ್ತಿದ್ದಾರೆ. ಆದರೆ, ಒಂದಲ್ಲಾ ಒಂದು ಕಾರಣಕ್ಕೆ ನನ್ನ ಹೆಸರು ಮುಂದಕ್ಕೆ ಹೋಗುತಿತ್ತು.

**ಸಭಾಪತಿಯವರು:–** ಆದರೆ, ಈಗ ಯಾವ ಕಾರಣವೂ ಸಹ ಇಲ್ಲ, ತಾವು ಮಾತನಾಡಿ.

**ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್:–** ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಸದಸ್ಯರು ಹೊಸ ಸದಸ್ಯರುಗಳಿಗೆ ಒಳ್ಳೆಯ ರೀತಿಯ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಅದರ ಜೊತೆಗೆ ಪ್ರತಿಪಕ್ಷದವರು ಕೂಡ ಬಹಳ ಸಹೃದಯದಿಂದ ಹೇಳಿದರು. ನೀವು ಅವಕಾಶ ಸಿಕ್ಕಿದಾಗಲೇ ಮಾತನಾಡಬೇಕು.

**(ಮುಂದು)**

**(494) 03.20 18.03.2021 ಎಲ್‌ಎಲ್/ಜಿಆರ್**

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್(ಮುಂದು):–**

"ಆಗಲೇ ಮಾತನಾಡಿದ್ದರೆ ಹೆಚ್ಚು ಒಳ್ಳೆಯದಾಗಿತ್ತು ಎಂದು ಕಾಣುತ್ತಿತ್ತು" ಎಂದು ಅವರು ಹೇಳಿದರು. ಅವಕಾಶ ಸಿಕ್ಕಾಗಲೇ ಅದನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಅನೇಕರು ಹೇಳುತ್ತಾರೆ. ಇಲ್ಲದೇ ಹೋದರೆ ಆ ಅವಕಾಶ ಸಿಗುತ್ತದೋ ಇಲ್ಲವೋ ಎನ್ನುವ ಭಾವನೆ ಎಲ್ಲರಿಗೂ ಸಹ ಬಂದೇ ಬರುತ್ತದೆ. ನಾನು ವಿಧಾನ ಪರಿಷತ್ತಿನ ಸದಸ್ಯನಾಗಿ ಪ್ರಸ್ತುತ ನನ್ನ ಸದಸ್ಯತ್ವಕ್ಕೆ 9ನೇ ತಿಂಗಳು ನಡೆಯುತ್ತಿದೆ. ಇದರಿಂದಾಗಿ, ನನಗೆ ಒಂದು ರೀತಿಯ ಪ್ರಸವ ವೇದನೆ. ಇದರಲ್ಲಿ ನನಗೆ ನೋವು ಇದೆ, ನಲಿವು ಸಹ ಇದೆ. ಇಡೀ ಕರ್ನಾಟಕದ ಭವಿಷ್ಯವನ್ನು ನಿರ್ಧರಿಸುವಂತಹ ಜನಸಾಮಾನ್ಯರ ಆಶಯಗಳಿಗೆ ಸ್ಪಂದಿಸುವಂತಹ ಅತ್ಯಂತ ಹಿರಿಯರ ವೇದಿಕೆಯಲ್ಲಿ ಅನಿರೀಕ್ಷಿತವಾಗಿ ನಾನು ಒಬ್ಬ ಸದಸ್ಯನಾಗಿ ಮಾತನಾಡುವುದಕ್ಕೆ ಒಂದು ಭಾಗ್ಯ ಮತ್ತು ಒಂದು ಸದಾವಕಾಶ ನನಗೆ ಸಿಕ್ಕಿದೆ ಎಂದು ತಿಳಿದುಕೊಂಡು 9

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಂಗಳಿನಿಂದ ಈ ಕಾರಣಕ್ಕಾಗಿ ಸಂತೋಷ ಆಗಿದೆಯೆಂದು ಹೇಳುತ್ತೇನೆ. ಏಕೆಂದರೆ, 1900 ರಿಂದ ಎಲ್ಲಾ ಹಿರಿಯ ಸದಸ್ಯರು ಈ ಸದನವನ್ನು ನಡೆಸುವ ದೃಷ್ಟಿಯಲ್ಲಿ ತಮ್ಮ ಅನುಭವದ ಧಾರೆಯನ್ನು ಎರೆಯುತ್ತಿದ್ದಾರೆ. ಆ ಮೂಲಕ ಕರ್ನಾಟಕದ ಸೇವೆಯನ್ನು ಅಥವಾ ದೇಶದ ಸೇವೆಯನ್ನು ಮಾಡುತ್ತಿದ್ದಾರೆ ಎಂದು ಹೇಳುವ ಭಾವನೆ ನನ್ನದು. ಕಳೆದ 9 ತಿಂಗಳಿನಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಹೆಸರನ್ನು ಬಹಳ ಗೌರವಪೂರಕವಾಗಿ ಹಲವು ಬಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಲಾಗಿರುತ್ತದೆ. ಅವರನ್ನು 'ರಾಜರ್ಷಿ' ಎಂದು ಹೇಳಿ ಕರೆಯುತ್ತಿದ್ದರೆಂದು ಸಹ ಕೆಲವರು ಹೇಳಿರುತ್ತಾರೆ. ಏಕೆಂದರೆ, ಅವರು ರಾಜಕೀಯದಲ್ಲಿ ರಾಜನಾಗಿದ್ದರೂ ಸಹ ಖುಷಿಯ ರೀತಿಯಲ್ಲಿ ಇದ್ದಂತಹವರು. ತಮ್ಮ ಜೀವನ ಪೂರ್ತಿ ಆ ರೀತಿಯಲ್ಲಿ ನಡೆದುಕೊಂಡು ಇವೊತ್ತಿಗೂ ನೆನಪು ಇಡುವಂತಹ ರೀತಿಯಲ್ಲಿ ಅಥವಾ ಇವೊತ್ತಿಗೂ ಅವರನ್ನು ಸ್ಮರಣೆ ಮಾಡುವಂತಹ ರೀತಿಯಲ್ಲಿ ಸಮಾಜದ, ರಾಜ್ಯದ ಬೇರೆ ಬೇರೆ ವಿಭಾಗಗಳಲ್ಲಿ ದುಡಿದಂತಹ ಮತ್ತು ಅವರು ಸ್ಥಾಪಿಸಿದಂತಹ ಹಿರಿಯರ ಚಿಂತನಾ ವೇದಿಕೆ ಇದು. ಅವರ ಜೊತೆಗೆ, ಅವರಿಗೆ ಸಹಕಾರ ಕೊಟ್ಟಂತಹವರು ಕರ್ಮಯೋಗಿ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯನವರು. ಅವರಿಬ್ಬರು ಆ ದಿನಗಳಲ್ಲಿ ತೆಗೆದುಕೊಂಡಂತಹ ನಿರ್ಣಯಗಳಿಗೋಸ್ಕರ ನಾವು ಈ ದಿನ ಈ ಸದನದಲ್ಲಿ ಕುಳಿತು ಮಾತನಾಡುವಂತಹ ಸೌಭಾಗ್ಯವನ್ನು ಪಡೆದುಕೊಂಡಿದ್ದೇವೆ. ಬಹುಶಃ ಈ ದೇಶದಲ್ಲಿ ರಾಜ್ಯಸಭೆ ಆಗಿರುವಂತಹದ್ದು, ಕರ್ನಾಟಕದ ಈ ವಿಧಾನ ಪರಿಷತ್ತಿನ ರೀತಿಯಲ್ಲಿ ಮತ್ತು ಇದರಿಂದ ಪ್ರೇರಣೆ ಪಡೆದುಕೊಂಡು ರಾಜ್ಯಸಭೆಯನ್ನು ಮಾಡಿದರು ಎನ್ನುವ ಮಾತನ್ನು ನಾನು ಕೇಳಿದ್ದೇನೆ.

ಆದರೆ, ಎಲ್ಲಿಯೋ ಒಂದು ಕಡೆ ನೋವು ಏನು ಎಂದು ಕೇಳಿದರೆ ಎಲ್ಲಾ ಹಿರಿಯರಾದ ಮಾನ್ಯ ಎ.ಹೆಚ್. ವಿಶ್ವನಾಥ್‌ನವರ ಹಾದಿಯಾಗಿ ಮಾನ್ಯ ಎಸ್.ಆರ್. ಪಾಟೀಲ್‌ರವರು, ಮಾನ್ಯ ಮರಿತಿಬ್ಬೇಗೌಡರವರಗೂ ಬಹಳಷ್ಟು ಹಿರಿಯ ಸದಸ್ಯರು ಈ ಸದನದಲ್ಲಿದ್ದಾರೆ. ಹಾಗಾಗಿ, ನಾವೆಲ್ಲರೂ ಇದಕ್ಕಿಂತಲೂ ಇನ್ನೂ ಹೆಚ್ಚಿನ ರೀತಿಯಲ್ಲಿ ಯೋಚನೆಗಳನ್ನು ಮಾಡಿದರೆ ಅಥವಾ ನಮ್ಮೆಲ್ಲಾ ಶಕ್ತಿಗಳನ್ನು ಒಟ್ಟಿಗೆ ಸೇರಿದರೆ ಈ ಸದನ ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ಮೂಡಿ ಬರಬಹುದು ಎಂದು ಹೇಳುವ ಹೊಸ ಸದಸ್ಯನ ನೆಲೆಯಲ್ಲಿ ನನ್ನ ಭಾವನೆ ಹಾಗೂ ನನ್ನ ನೋವು. 'ಛೋಟಿ ಮೂಹ್, ಬಡೀ ಬಾತ್' ಎಂದು ಹೇಳುವ ಹಾಗೆ ನನ್ನ ಅನುಭವ 9 ತಿಂಗಳಿನದ್ದಾಗಿದೆ. ಆದರೂ ಇದನ್ನು ಸರಿ ಮಾಡುವುದಕ್ಕೆ ನಮ್ಮೆಲ್ಲರ ಒಟ್ಟು ಬೇಕೋ ಅಥವಾ ಬೇಡವೋ ಎಂದು ಹೇಳುವಂಥದ್ದನ್ನು ಕಳೆದ 9 ತಿಂಗಳಿನಲ್ಲಿ ಕಂಡಿರುತ್ತದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧಾನ ಪರಿಷತ್ತಿನ ಸಭಾಪತಿಗಳು ಮತ್ತು ವಿಧಾನ ಸಭೆಯ ಸಭಾಧ್ಯಕ್ಷರು ಇಬ್ಬರೂ ಒಟ್ಟಿಗೆ ಸೇರಿ ಜನಮಾನಸದಲ್ಲಿ ಈ ವಿಧಾನ ಪರಿಷತ್ತಿನಲ್ಲಿ ಅಥವಾ ವಿಧಾನ ಸಭೆಯಲ್ಲಿ ನಡೆಯುವ ಕಲಾಪಗಳ ಗುಣಮಟ್ಟವನ್ನು ಹೇಗೆ ಹೆಚ್ಚಿಗೆ ಮಾಡಬಹುದು ಎಂಬ ಬಗ್ಗೆ ಸಭೆ ನಡೆಸಿರುತ್ತಾರೆ. ಆ ಸಭೆಯಲ್ಲಿ ಮಾನ್ಯ ಉಪ ಸಭಾಪತಿಯವರು, ನಮ್ಮ ನಾಡಿನ ಹಿಂದಿನ ಎಲ್ಲಾ ಅನುಭವಗಳನ್ನು ಹಿರಿಯರು ಹಾಗೂ ಸಾಹಿತಿಗಳು ಬಹಳಷ್ಟು ಚರ್ಚೆ ನಡೆಸಿದರು. ಆ ಸಭೆಯಲ್ಲಿ ನಾನು ಸಹ ಭಾಗವಹಿಸಿದ್ದೆನು. ಈ ಹಿನ್ನೆಲೆಯಲ್ಲಿ ಒಂದೆರೆಡು ಮಾತುಗಳನ್ನು ಈ ಆಯವ್ಯಯದ ಬಗ್ಗೆ ಮಾತನಾಡವುದರ ಮೊದಲು ಒಂದೆರೆಡು ಸಂಗತಿಗಳನ್ನು ಹೇಳಬೇಕೆಂದು ನನ್ನ ಮನಸ್ಸು ಹೇಳುತ್ತದೆ. ಪ್ರತಿಪಕ್ಷದ ಓರ್ವ ಸದಸ್ಯರು, "ಹೊಸ ಸದಸ್ಯರು ಮಾತನಾಡುವಾಗ ಯಾವುದೇ ಹಿಂಜರಿಕೆ ಇಟ್ಟುಕೊಳ್ಳಬೇಡಿ, ನಿಮ್ಮ ಮನಸ್ಸಿನಲ್ಲಿ ಏನು ಕಾಣುತ್ತದೆ, ಯಾವ ಭಾವನೆ ವ್ಯಕ್ತವಾಗುತ್ತದೆ ಅದನ್ನು ಸಭೆಯಲ್ಲಿ ಹೇಳಿ ಯಾವುದೇ ಮುಜುಗರ ಬೇಡವೆಂದು" ಹೇಳಿದರು. ಆ ರೀತಿಯಲ್ಲಿ ನನ್ನಲ್ಲಿ ಧೈರ್ಯವನ್ನು ಸಹ ತುಂಬಿದರು. ಬಹಳ ಹಿರಿಯ ಸದಸ್ಯರಾದ ಮಾನ್ಯ ಎಸ್.ಆರ್. ಪಾಟೀಲರು ಪ್ರತಿಪಕ್ಷದ ನಾಯಕರಾಗಿ ಮಾತನಾಡುವಾಗ, ಈ ರಥದ ಎರಡು ಚಕ್ರಗಳು ನಾವು. ನಾವು ಸರ್ಕಾರದ ಒಂದು ಭಾಗ, ಹಾಗಾಗಿ, ನಾವಿಬ್ಬರೂ ಒಟ್ಟಿಗೆ ಸೇರಿ ಈ ಕರ್ನಾಟಕದ ರಥವನ್ನು, ಅಭಿವೃದ್ಧಿಯ ರಥವನ್ನು ಅಥವಾ ಜನಸಾಮಾನ್ಯರ ಬಗ್ಗೆ ಇರುವ ಚಿಂತನೆಯ ರಥವನ್ನು ಎಳೆಯಬೇಕಾದಂತಹವರು ನಾವು" ಎಂದು ಆಗಾಗ ಹೇಳುತ್ತಿರುತ್ತಾರೆ. ಬಹುಶಃ ಆಡಳಿತ ಪಕ್ಷದವರಾಗಿ ನಮಗೆ ಹೆಚ್ಚಿನ ಜವಾಬ್ದಾರಿ ಇದೆ ಎಂದು ಹೇಳುವಂಥದ್ದನ್ನು ಒಪ್ಪಿಕೊಂಡರೂ ಸಹ ಹಕ್ಕಿನ ಜೊತೆ ಎಲ್ಲಾ ಸದಸ್ಯರಿಗೂ ಕರ್ತವ್ಯವೂ ಇದೆ ಎಂದು ಹೇಳುವ ಭಾವನೆ ನನ್ನದು. ಈ ಹಿಂದಿನ ವೈಭವವನ್ನು ತರುವ ದೃಷ್ಟಿಯಲ್ಲಿ ಏಕೆಂದರೆ, ನಾವು ಮಾತನಾಡುವಾಗ, "ಈ ಹಿಂದೆ ಈ ಸದನದಲ್ಲಿ ಅಂತಹವರು ಇದ್ದರು, ಇಂತಹವರು ಇದ್ದರು" ಎಂದು ಹೇಳುತ್ತೇವೆ. ಅದೇ ರೀತಿಯಲ್ಲಿ ನಾವು ಸಹ ಈ ಸದನದಲ್ಲಿದ್ದೆವು ಎಂದು ಮುಂದಿನ ಅಥವಾ ಭವಿಷ್ಯದ ಸದಸ್ಯರಿಗೆ ಹೇಳುವಂತಹ ರೀತಿಯಲ್ಲಿ ಕೆಲಸ ಮಾಡಬೇಕು. ಏಕೆಂದರೆ, ಈ ಸದನದ ಒಳಗೆ ಆದರ್ಶ, ಮೌಲ್ಯಗಳು, ಇದೆಲ್ಲಾ ಕೇವಲ ಮಾತಿಗೋಸ್ಕರ ಇರುವಂತಹದ್ದೋ ಅಥವಾ ಎಲ್ಲಿಯೋ ಒಂದು ಕಡೆ ಪ್ರಯತ್ನ ಪೂರಕವಾಗಿ ಅದನ್ನು ತರುವಂತಹ ದೃಷ್ಟಿಯಲ್ಲಿ ಬೇರೆಯವರ ಬಗ್ಗೆ ನಾನು ಹೇಳುವುದಕ್ಕೆ ಬರುವುದಿಲ್ಲ. ಆದರೆ, ನಮ್ಮ ಬಗ್ಗೆ ನಾವು ಇದನ್ನು ತರುವುದಕ್ಕೆ ಪ್ರಯತ್ನ ಮಾಡಬಹುದು ಎಂದು ಹೇಳುವಂತಹ ದೃಷ್ಟಿಯಲ್ಲಿ ಹೇಳುತ್ತೇನೆ. ನನಗೆ ಬಹಳ ಸಂತೋಷವಾಗುವುದೇನೆಂದರೆ, ತಾವು ಪ್ರತಿಪಕ್ಷಕ್ಕೂ ಇಷ್ಟು ಸಮಯ ಎಂದು ನಿಗದಿಪಡಿಸಿದ್ದೀರಿ. ಅದರಂತೆ, ಆಯಾ ಪಕ್ಷದ ಎಷ್ಟು ಸದಸ್ಯರುಗಳು ಎಷ್ಟು ಸಮಯ ಮಾತನಾಡುತ್ತಾರೆ ಎಂದು ಹೇಳುವುದರ ಬಗ್ಗೆ ಆ ಪಕ್ಷಗಳಿಗೆ ನಿರ್ಣಯಗಳನ್ನು ತೆಗೆದುಕೊಳ್ಳುವಂತಹ ಅವಕಾಶವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲ್ಪಿಸಿಕೊಟ್ಟಿದ್ದೀರಿ. ಆದರೆ, ಹೊಸ ಸದಸ್ಯನಾಗಿ ನನ್ನ ಭಾವನೆ ಏನೆಂದರೆ, ಬಹಳಷ್ಟು ಸದಸ್ಯರು ಈ ಸದನದಲ್ಲಿದ್ದಾರೆ. ನಮ್ಮ ನಂಬಿಕೆ ಏನೆಂದರೆ, ಎಲ್ಲರಲ್ಲಿಯೂ ಅವರದ್ದೇ ಆದಂತಹ ಯೋಚನೆ, ಶಕ್ತಿ ಮತ್ತು ಅನುಭವ ಇದ್ದೇ ಇದೆ. ಅದನ್ನು ಅಭಿವ್ಯಕ್ತಪಡಿಸುವುದಕ್ಕೆ ಅವಕಾಶಗಳಿಗೋಸ್ಕರ ಕಾಯುತ್ತಿರುತ್ತಾರೆ. ಬಹುಶಃ ಹಿರಿಯ ಸದಸ್ಯರುಗಳು ನಮ್ಮ ಬೆನ್ನು ತಟ್ಟಿ ನಮಗೆ ಮಾತನಾಡುವಂತಹ ಅವಕಾಶವನ್ನು ಕಲ್ಪಿಸಿಕೊಟ್ಟಾಗ ನಮಗೆ ಧೈರ್ಯ ತುಂಬುತ್ತದೆ. ಅದರ ಜೊತೆಗೆ, ಏನಾದರೂ ಹೊಸ ವಿಚಾರಗಳು ಅಂದರೆ, ಜನರು ಬಹಳಷ್ಟು ಬಾರಿ ಸರ್ಕಾರವನ್ನು ಬದಲಾವಣೆ ಮಾಡುವುದು ಏತಕ್ಕೋಸ್ಕರ ಎಂದು ಕೇಳಿದರೆ, ಅದಕ್ಕೆ ಅವರು, "ಏನಾದರೂ ಹೊಸತನವನ್ನು ಹೊಸಬರು ಅಧಿಕಾರಕ್ಕೆ ಬಂದಾಗ ತರುತ್ತಾರೆಂಬ ನಂಬಿಕೆಯ ಆಧಾರದ ಮೇರೆಗೆ" ಎಂದು ಹೇಳುತ್ತಾರೆ. ಅದರಂತೆ ಪ್ರತಿಬಾರಿಯೂ ಯಾವುದಾದರೂ ಸರ್ಕಾರ ಅಧಿಕಾರಕ್ಕೆ ಬರುವುದು ಸಕರಾತ್ಮಕ ಕಾರಣಗಳಿಗಿಂತ ಜಾಸ್ತಿಯಾಗಿ ನಕಾರಾತ್ಮಕ ಕಾರಣಗಳಿಗಾಗಿ. ಅಂದರೆ, ಈ ಸರ್ಕಾರ ಬೇಡವೆಂದು ಇನ್ನೊಂದು ಸರ್ಕಾರವನ್ನು ಅಧಿಕಾರಕ್ಕೆ ತರುವಂಥದ್ದಾಗಿದೆ. ಆ ಕಾರಣಕ್ಕೋಸ್ಕರ ಎಷ್ಟೋ ಬಾರಿ ನಾವು ಏನನ್ನು ಯೋಚನೆ ಮಾಡಿರುತ್ತೇವೆ, ಆ ಯೋಚನೆಗೆ ಪೂರಕವಾದಂತಹ ಕೆಲಸಗಳು ಆಗುವುದಿಲ್ಲ ಎನ್ನುವಂತಹ ಮಾತನ್ನು ಹೇಳುತ್ತೇನೆ. ನಿನ್ನೆಯ ದಿವಸ ಅಪರಾಹ್ನದ ಭೋಜನಾ ವಿರಾಮದ ನಂತರ ಪ್ರಾರಂಭವಾದ ಸದನದಲ್ಲಿ ಬಜೆಟ್ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಪೂರ್ಣ ಅವಧಿಯಲ್ಲಿ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಮಾತನಾಡಿದರು. ಆದರೆ, ಅವರು ಪೂರ್ವಾಹ್ನದ ಅಧಿವೇಶನದಲ್ಲಿ ಭಾಗವಹಿಸಿದ್ದು, ಈಗ ಸದನದಲ್ಲಿ ಅನುಪಸ್ಥಿತರಾಗಿದ್ದಾರೆ. ಆ ಸಂದರ್ಭದಲ್ಲಿ ಅವರು ಮಾತನಾಡಿದ ನಂತರ ಎಲ್ಲಿಯಾದರೂ ನನಗೆ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆಯೇ ಎನ್ನುವ ಒಂದು ಸಣ್ಣ ಹೆದರಿಕೆ ನನಗೆ ಇತ್ತು. ಏಕೆಂದರೆ, ಅವರ ಮಾತಿನ ವೇಗ ಅಥವಾ ಒಂದು ರೀತಿಯಲ್ಲಿ ಉಗ್ರವಾದ ಭಾಷಣ ಅದಾಗಿತ್ತು. ಆ ಬಗ್ಗೆ ನಾನು ಕೆಲವು ಸದಸ್ಯರನ್ನು, "ಅವರಿಗೆ ನಮ್ಮ ಮೇಲೆ ಯಾಕಪ್ಪಾ ಅಷ್ಟೊಂದು ಸಿಟ್ಟು" ಎಂದು ಕೇಳಿದೆನು. ನಮ್ಮ ಸರ್ಕಾರದ ಮೇಲೆ ಅಷ್ಟೊಂದು ಸಿಟ್ಟು ಏತಕ್ಕೆ. ಕಾಂಗ್ರೆಸ್‌ನವರಿಗೆ ಸಿಟ್ಟು ಇದ್ದರೆ ಅದು ಸಹಜ. ಅದರಲ್ಲಿ ಏನು ವಿಶೇಷ ಎಂದು ನಾನು ತಿಳಿದುಕೊಳ್ಳುವುದಿಲ್ಲ. ಅದು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕಾರಣ ಅಥವಾ ಅದು ಬಂದ ರೀತಿಗೆ ಅವರಿಗೆ ಒಂದು ವಿಶೇಷವಾದ ಸಿಟ್ಟು ಇದ್ದರೆ ಅದು ತಪ್ಪಿಲ್ಲ. ಅದು ರಾಜಕೀಯದ ಒಂದು ಭಾಗವೇ. ಆದರೆ, ಇವರಿಗೆ ಏತಕ್ಕೆ ಸಿಟ್ಟು ಎಂದು ಕೇಳಿದಾಗ, ನಮ್ಮ ಹಿರಿಯ ಸದಸ್ಯರು ಈ ಬಗ್ಗೆ ಹೇಳಿದರು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮುಂದು)**

**(495) 18.03.2021 3.30 ವೈಎಲ್-ಎಂಡಿ**

**ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್(ಮುಂದು):-**

ಅವರ ಹೃದಯ ಒಳ್ಳೆಯದು. ಆದರೆ, ಅವರು ಮಾತನಾಡುವ ಶೈಲಿ ಹಾಗೆ. ಹಾಗಾಗಿ ನಿಮಗೆ ಅವಕಾಶ ಸಿಕ್ಕಿದಾಗ ಪಕ್ಕ ಮಾತನಾಡಿ ಎಂದು ಹೇಳಿದರು. ತಾವು ಸಭಾಪತಿಗಳಾಗುವುದಕ್ಕೆ ಮೊದಲು ಕಾಂಗ್ರೆಸ್ ಪಕ್ಷ ಹಾಗೂ ಮರಿತಿಬ್ಬೇಗೌಡರ ಮಧ್ಯೆ ತಾವು ಕುಳಿತುಕೊಳ್ಳುತ್ತಿದ್ದೀರಿ. ಆದರೆ, ಈಗ ಮರಿತಿಬ್ಬೇಗೌಡರು ಕಾಂಗ್ರೆಸ್ ಪಕ್ಷಕ್ಕೆ ಹತ್ತಿರವಾಗುವ ರೀತಿಯಲ್ಲಿ ಕುಳಿತಿರುವುದರಿಂದ ಕಾಂಗ್ರೆಸ್‌ನವರ ಕೋಪ ಅವರಿಗೂ ವರ್ಗಾವಣೆಯಾಗಿದೆ ಎನ್ನುವಂಥ ಭಾವನೆಯಾಗುತ್ತಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಮೊದಲು ಮರಿತಿಬ್ಬೇಗೌಡರು ಕಾಂಗ್ರೆಸ್ ಪಕ್ಷದಲ್ಲಿಯೇ ಇದ್ದವರು.

**ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್:-** ಮಾನ್ಯ ಸಭಾಪತಿಯವರೇ, ಅದು ನನಗೆ ಗೊತ್ತಿಲ್ಲ. ನಾನು ಕರಾವಳಿಯಿಂದ ಬಂದಾಗ,... ಮಾನ್ಯ ಹರಿಪ್ರಸಾದ್‌ರವರು ಕರಾವಳಿಗೆ ಸಂಬಂಧಪಟ್ಟವರು.

**ಸಭಾಪತಿಯವರು:-** ಮಾನ್ಯ ಸದಸ್ಯರೆ ಯಾರ್‍ಯಾರು ಎಲ್ಲೆಲ್ಲಿ ಇರುತ್ತಾರೆಯೋ ಅವರಿಗೆ ಎಷ್ಟೋ ಸಲ ಗೊತ್ತಿರುವುದಿಲ್ಲ.

**(ಸದನದಲ್ಲಿ ನಗು)**

**ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರು ಬೆಂಗಳೂರಿನಲ್ಲಿ ಮತ್ತು ದೆಹಲಿಯಲ್ಲಿಯೇ ಹೆಚ್ಚು ಇದ್ದ ಕಾರಣ ಯಾರ್‍ಯಾರು ಎಲ್ಲಿದ್ದರು ಎನ್ನುವಂಥ ವಿಷಯ ಅವರಿಗೆ ಹೆಚ್ಚಾಗಿ ತಿಳಿದಿರುತ್ತದೆ. ನಾನು ಕಳೆದ 40 ವರ್ಷಗಳಿಂದ ಒಂದೇ ಪಕ್ಷದಲ್ಲಿಯೇ ಅಂದಿನಿಂದ ಇಂದಿನವರೆಗೂ ಕಾರ್ಯಕರ್ತನಾಗಿ ಕೆಲಸ ಮಾಡಿರುವುದು ಗೊತ್ತಿರುವುದು ಬಿಟ್ಟರೆ, ಈ ರೀತಿಯಾಗಿ ಸಮುದ್ರದಲ್ಲಿ ಈಜುವುದು ನನಗೆ ಗೊತ್ತಿಲ್ಲ. ಇಲ್ಲಿಗೆ ಬಂದ ಮೇಲೆ ಹೊಸ-ಹೊಸ ಸಂಗತಿಗಳು ಕಾಣುತ್ತಿರುವುದು ನನ್ನ ಅನುಭವಕ್ಕೆ ಬರುತ್ತಿದೆ. ನನಗೆ ಒಂದು ಕಥೆ ನೆನಪಾಗುತ್ತಿದೆ. ನಾವು ಹಿಂದಿನ ವೈಭವದ ಬಗ್ಗೆ ಖಂಡಿತವಾಗಿ ಅಭಿಮಾನ ಪಡಬೇಕಾಗಿದೆ. ಸಾವಿರಾರು ವರ್ಷ ಸಾಂಸ್ಕೃತಿಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಂಪರೆ ಮತ್ತು ಹಿನ್ನೆಲೆ ಇರುವ ಮನುಷ್ಯ ಹೇಗೆ ಬದುಕಬೇಕೆಂದು ಹೇಳುವಂಥ ಮತ್ತು ಚಿಂತನೆಯನ್ನು ರೂಪಿಸಿದಂಥ ಈ ಭವ್ಯ ಭಾರತದ ಸಂತತಿಗಳು ನಾವು ಎನ್ನುವಂಥ ಅಭಿಮಾನ ಖಂಡಿತವಾಗಿ ನಮಗೆ ಇದ್ದೇ ಇರಬೇಕು. ಅದರ ಜೊತೆಗೆ ಬರೀ ವೈಭವದ ಬಗ್ಗೆ ಮಾತನಾಡುತ್ತಾ ಕುಳಿತರೆ, ಒಂದು ಮರ ದೊಡ್ಡದಾಗಿ ಬೆಳೆದು ತುಂಬಾ ವರ್ಷಗಳ ಬಳಿಕ ಬಂದಲಿಕೆ parasites ಉತ್ಪತ್ತಿಯಾಗುತ್ತದೆ. ಏಕೆಂದರೆ, ಜಗತ್ತಿನಲ್ಲಿ ಯಾವುದಾದರೂ ಒಂದು ಸಂಸ್ಕೃತಿ ಇವತ್ತಿಗೂ ಗೌರವ ಪೂರ್ಣವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದರೆ, ಅದು ಭಾರತದ ಸಂಸ್ಕೃತಿ ಎಂದು ಹೇಳುವಂಥ ಹಿನ್ನೆಲೆ ನಮ್ಮದಾಗಿದೆ. ಅನೇಕತೆಯಲ್ಲಿ ಏಕತೆಯನ್ನು, ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡಂತಹ, ಮೂಲ ಆಶಯವನ್ನು ವ್ಯಕ್ತಪಡಿಸುವಂತಹ ಸಂವಿಧಾನವನ್ನು ಒಪ್ಪಿಕೊಂಡು ಇವತ್ತಿಗೂ ನಾವು ನಡೆದುಕೊಂಡು ಬರುತ್ತಿದ್ದೇವೆ. ಈ ಹಿನ್ನಲೆಯಲ್ಲಿ ಬಂದಲಿಕೆ ಬರುತ್ತದೆ. ಬೇರೆ-ಬೇರೆ ರೀತಿಯಲ್ಲಿ ಗುರುತಿಸುವಂಥ ಸಂಗತಿಗಳು ಬರುತ್ತವೆ. ಆದರೆ, ಅದನ್ನು ಹಾಗೆ ಉಳಿಸಿಕೊಳ್ಳದೇ, ಅದನ್ನು ತೆಗೆಯುವಂಥ ಜವಾಬ್ದಾರಿ ಏನಿದೆ, ಬಂದಲಿಕೆಯನ್ನಷ್ಟೇ ತೆಗೆಯಬೇಕೇ ಹೊರತು ಮರವನ್ನೇ ಕಡಿಯಬಾರದು. ಮರದಲ್ಲಿ ಬಂದಂತಹ ಬೇಡದ ಸಂಗತಿಯನ್ನು ತೆಗೆಯುವಂಥ ಎಷ್ಟೋ ಸಂಗತಿಗಳಿವೆ. ಅದಕೋಸ್ಕರವೇ ಈ ದೇಶದಲ್ಲಿ ಸಾವಿರಾರು ಸಾಧುಸಂತರು ಸಮಯಕ್ಕೆ ಸರಿಯಾಗಿ ಬಂದು, ಭಗವದ್ಗೀತೆಯ ಶ್ಲೋಕವಾದ "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ..." ಎಂಬುದನ್ನು ಹೇಳುವಾಗ ಈ 'ಗ್ಲಾನಿ' ನಿವಾರಿಸುವುದಕ್ಕೆ ಪರಮಾತ್ಮನೇ ಈ ಭೂಮಿಯ ಮೇಲೆ ಅವತಾರ ಎತ್ತುತ್ತಾನೆ ಎಂಬ ನಂಬಿಕೆಯ ಮೇಲೆ ನಾವು ನಡೆದುಕೊಂಡು ಬಂದಿದ್ದೇವೆ. ಈ ಹಿನ್ನೆಲೆಯಲ್ಲಿ ಒಮ್ಮೆ ಆಲೋಚನೆ ಮಾಡಿದಾಗ ಎಲ್ಲಾ ಹಿಂದಿನ ಸಂಗತಿಯನ್ನೇ ಹೇಳುವುದೇ, ಮಾನ್ಯ ಭೋಜೇಗೌಡರು ತುಂಬಾ ಕಥೆ-ಕಾವ್ಯಗಳ ಬಗ್ಗೆ ಮಾತನಾಡುತ್ತಿದ್ದರು. ಸಮುದ್ರಮಂಥನ ಆಗುವಾಗ ಲಕ್ಷ್ಮೀ, ಕಾಮಧೇನು, ಕಲ್ಪವೃಕ್ಷ ಎಲ್ಲವೂ ಮೇಲೆ ಬಂತು ಎಂದು ಹೇಳುತ್ತಾರೆ. ವಿಷ, ಐರಾವತ ತುಂಬಾ ಸಂಗತಿಗಳು ಬಂದವು. ಅದರ ಜೊತೆಗೆ ಕೊನೆಯಲ್ಲಿ ಒಂದು ಶಂಖವು ಬಂದಿತ್ತು. ಆ ಶಂಖ ಯಾವಾಗಲೂ ನನ್ನ ಅಕ್ಕ, ನನ್ನ ಅಣ್ಣ ಎಂಬ ಅಭಿಮಾನವನ್ನಿಟ್ಟುಕೊಂಡು, ನೀನು ಯಾರು ಎಂದು ಶಂಖವನ್ನು ಕೇಳಿದರೆ ನಾನು ಈಗ ಶಂಖ. ಈ ಶಂಖವನ್ನಿಟ್ಟುಕೊಂಡು ಮನೆ-ಮನೆಗೆ ಬೇಡುವುದಕ್ಕೆ ಹೋಗುತ್ತಾರೆ ಎಂದು ಹೇಳುತ್ತದೆ. ಬಹುಶಃ ಹಿಂದಿನ ವೈಭವವನ್ನು ನೆನಪಿಸಿಕೊಳ್ಳುತ್ತಾ, ಮುಂದಿನ ಪೀಳಿಗೆ ಬಗ್ಗೆ ಯೋಚನೆ ಮಾಡುತ್ತಾ, ಈ ಸ್ಥಾನಕ್ಕೆ ನಮ್ಮದೇ ಆದಂತಹ ನ್ಯಾಯವನ್ನು ನೀಡುವ ದೃಷ್ಟಿಯಲ್ಲಿ ಇರಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವತ್ತಿಗೂ ತುಂಬಾ ಮಂದಿ ಹಿರಿಯರು ಮಾತನಾಡುವಾಗ ಸುಂದರಿಯರ, ವಿಶ್ವವಿದ್ಯಾಲಯದ, ವಿಶ್ವ ಗುರುಗಳ ಬಗ್ಗೆ ಪ್ರಸ್ತಾಪ ಮಾಡಲಾಗಿತ್ತು. ಆದರೆ, ನಾವು ಈ ಅಧಿವೇಶನದಲ್ಲಿ ಒಂದು ವರ್ಷದ ಆಯವ್ಯಯಕ್ಕೆ ಸಂಬಂಧಿಸಿದಂತೆ, ಯಾವ ಸಾಧ್ಯತೆಗಳ ಆಧಾರದ ಮೇಲೆ ಮುಂದಿನ ವರ್ಷವನ್ನು ಕೊಂಡೊಯ್ಯಬೇಕೆನ್ನುವ ದೃಷ್ಟಿಯನ್ನಿಟ್ಟು ಚರ್ಚೆ ಮಾಡಬೇಕಾಗಿದೆ. ರಾಜಕೀಯ ಜೀವನದಲ್ಲಿ ಈ ರೀತಿಯ ಚರ್ಚೆಗಳು ಆಗುವುದು ಸಹಜ. ಆದರೆ, ಯಾವ ರೀತಿಯಲ್ಲಿ ಎಷ್ಟರ ಮಟ್ಟಿಗೆ ಮಾತನಾಡಬೇಕೆಂಬುದರ ಬಗ್ಗೆ ನಿಯಂತ್ರಣ ಮಾಡದಿದ್ದರೆ, ಬಹುಶಃ ಮುಖ್ಯ ವಿಷಯಗಳನ್ನು ಬಿಟ್ಟು ಉಳಿದ ವಿಷಯಗಳ ಬಗ್ಗೆ ಹೆಚ್ಚು ಚರ್ಚೆ ಮಾಡುತ್ತೇವೆಯೋ ಎನ್ನುವಂಥ ಭಾವನೆ ನನಗೆ ವ್ಯಕ್ತವಾಗುತ್ತಿದೆ. ಹಲವಾರು ಹಿರಿಯರು ಈ ಸದನದಲ್ಲಿದ್ದು, ಅವರೆಲ್ಲರ ಅನುಭವದಂತೆ ಹೆಚ್ಚು ಅಂಕಿ-ಅಂಶಗಳ ಬಗ್ಗೆ ಬಹಳ ಆಳವಾದಂಥ ಜ್ಞಾನವನ್ನು ಹೊಂದಿರುವ ವ್ಯಕ್ತಿ ನಾನಲ್ಲ. ಆದರೆ, ನನ್ನ ಸಾಮಾನ್ಯ ಜ್ಞಾನ ಏನೆಂದು ಹೇಳುತ್ತದೆ ಎಂದರೆ, ಆ ಕಾಲದ ಪರಿಸ್ಥಿತಿಗೆ ಸರಿಯಾಗಿ, ಒಟ್ಟು ವ್ಯವಸ್ಥೆಗಳ ಆಧಾರದ ಮೇಲೆ ಮುಂದಿನ ಒಂದು ವರ್ಷ ಈ ರಾಜ್ಯವನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕು ಮತ್ತು ಯಾವುದಕ್ಕೆ ಆದ್ಯತೆ ನೀಡಬೇಕೆನ್ನುವುದರ ಹಿನ್ನಲೆಯಲ್ಲಿ ಈ ಘೋಷಣಾ ಪತ್ರವನ್ನು ಮುಖ್ಯಮಂತ್ರಿಗಳು ಮತ್ತು ಆರ್ಥಿಕ ಸಚಿವರು ತಿಳಿಸುತ್ತಾರೆ. ಇವತ್ತಿನ ಪರಿಸ್ಥಿತಿಯಲ್ಲಿ ತುಂಬಾ ಸಲ ಮಾತನಾಡುವಾಗ ಸಹಜವಾಗಿ ಬಂದಿರುವಂಥ ವಿಚಾರ ಯಾವುದೆಂದರೆ, ಅದು ಕೊರೋನಾ. ಈ ವರ್ಷ ಈ ವಿಚಾರವನ್ನು ಬಿಟ್ಟು ಮಾತನಾಡುವುದಕ್ಕೆ ಸಾಧ್ಯವೇ ಇಲ್ಲ. ಇವತ್ತಿಗೂ ಅದರಿಂದ ಸಂಪೂರ್ಣವಾಗಿ ಹೊರಗೆ ಬಂದಿದ್ದೇವೆ ಎನ್ನುವಂಥ ಸ್ಥಿತಿ ನಿರ್ಮಾಣವಾಗಲಿಲ್ಲ. ಇದು ಕೇವಲ ಕರ್ನಾಟಕ ರಾಜ್ಯದ ಸಮಸ್ಯೆ ಮಾತ್ರವಲ್ಲ. ಇಡೀ ದೇಶಕ್ಕೆ, ವಿಶ್ವಕ್ಕೆ ಇರುವಂಥ ಸಮಸ್ಯೆ. ಇಡೀ ವಿಶ್ವದ ಆರ್ಥಿಕ ವ್ಯವಸ್ಥೆಯೇ ಸ್ತಬ್ಧಗೊಂಡಿರುವಂಥ ಸಂದರ್ಭವಾಗಿದೆ. ಅದು ಯಾರ ವಿರುದ್ಧವೆಂದರೆ, ಕಾಣದ ಶತ್ರುವಿನ ವಿರುದ್ಧವಾಗಿದೆ. ಅವಶ್ಯಕವಿದ್ದರೆ ಕಾಣದ ರಾಕ್ಷಸ ಎಂದು ಸಹ ಹೇಳಬಹುದು. ಯಾವ ಕಡೆಯಿಂದ ಆ ರಾಕ್ಷಸ ನಮ್ಮ ಮೇಲೆ ದಾಳಿ ಮಾಡುತ್ತಾನೆ ಎಂಬುದು ಗೊತ್ತಾಗುವುದಿಲ್ಲ. ಅದನ್ನು ಯಾವ ರೀತಿಯಲ್ಲಿ ಎದುರಿಸಬೇಕೆನ್ನುವುದು ಗೊತ್ತಾಗುತ್ತಿಲ್ಲ. ನಾವು ಒಂದು ರೀತಿ ಕತ್ತಲೆಯಲ್ಲಿ ಎದುರಿಸುವಂಥ ಧೈರ್ಯವನ್ನು ಮಾಡಿ, ಮುಂದುವರೆದಿದ್ದೇವೆ. ಇಡೀ ವಿಶ್ವದಲ್ಲಿಯೇ ಭಾರತ ದೇಶ ಇದನ್ನು ಹೇಗೆ ಎದುರಿಸುತ್ತದೆ ಎನ್ನುವಂಥ ಆತಂಕ ಉಂಟಾಗಿತ್ತು. ಏಕೆಂದರೆ ಬೇರೆ ದೇಶಕ್ಕಿಂತ ಹೆಚ್ಚು ಅಪಾಯ ಈ ದೇಶದಲ್ಲಿ ಕಂಡರು. ಕಾರಣವೇನೆಂದು ಕೇಳಿದಾಗ, ಅತ್ಯಂತ ಮುಂದುವರೆದಂಥ ಬಲಾಢ್ಯ ರಾಷ್ಟ್ರವಾದ ಅಮೇರಿಕಾ ಕೂಡಾ ಒಂದು ರೀತಿಯಲ್ಲಿ ಎದುರಿಕೆಯಿಂದ ಕೈ ಚೆಲ್ಲಿ ಕುಳಿತಿರುವಾಗ, ಅತ್ಯಂತ density of population ಎಂದರೆ ಅದು ಭಾರತ. ಯಾರಿಗಾದರೂ ಮನಸ್ಸಿನಲ್ಲಿ ಭಾರತ ದೇಶಕ್ಕಿಂತ ಚೀನಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇಶದಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆ ಇದೆ ಎನ್ನುವ ಭಾವನೆ ಮೂಡುತ್ತಿರಬಹುದು. ಆದರೆ, ಚೀನಾ ದೇಶಕ್ಕಿಂತ ಎರಡು ಪಟ್ಟು density of population ಭಾರತ ದೇಶದಲ್ಲಿಯೇ ಇರುವುದು. ಈ ದೇಶದಲ್ಲಿ ಕೊರೋನಾ ರೋಗ ಬಂದಿದ್ದು, ವೈಜ್ಞಾನಿಕವಾಗಿ ಮುಂದುವರೆದಂಥ ರಾಷ್ಟ್ರವೇ ಕೈ ಚೆಲ್ಲಿ ಕುಳಿತಿರುವಾಗ ನಮ್ಮ ದೇಶದ ಪರಿಸ್ಥಿತಿ ಏನು! ಎನ್ನುವಂಥ ಭಯದ ವಾತಾವರಣದಲ್ಲಿದ್ದಾಗ ಅಭಿಪ್ರಾಯವನ್ನು ನೀಡುವಂಥ Experts Opinion ನ್ನು ನೀಡಿದ್ದರು. ಅದೇನೆಂದರೆ, ಅವರು ಹೇಳುವಂಥ ಅಂಕಿ-ಅಂಶಗಳನ್ನು ನೋಡುವುದಾದರೆ, ಬಹುಶಃ ಕೋಟ್ಯಾಂತರ ಜನರು ಈ ರೋಗಕ್ಕೆ ಮೃತ್ಯುವಾಗುವ ಸಾಧ್ಯತೆ ಇದೆ ಎನ್ನುವಂಥ ಭಾವನೆ ವ್ಯಕ್ತಪಡಿಸುತ್ತೇನೆ. ಆದರೆ, ಅಂತಹ ಸಂದರ್ಭದಲ್ಲಿ ಸಹ ಇಡೀ ದೇಶ ಒಂದಾಗಿತ್ತು. ನಾವು ವಿಶ್ವ ಗುರು ಎಂದು ಹೇಳುವಾಗ, ನಮ್ಮ ಕಲ್ಪನೆಯಲ್ಲಿ ಯಾವುದೇ ಒಬ್ಬ ವ್ಯಕ್ತಿ ಇರುವುದರ ಬದಲಾಗಿ ಭಾರತ ದೇಶ ಇರುತ್ತದೆ. ಭಾರತ ವಿಶ್ವಗುರುವಾಗಿ ಮಾಡಬೇಕೆನ್ನುವುದರ ನಿಟ್ಟಿನಲ್ಲಿ ನಾವು ಕೆಲಸ ಮಾಡಬೇಕು. ಭಾರತದ ಗತ ವೈಭವ ಇಡೀ ಜಗತ್ತಿಗೆ ಮಾರ್ಗದರ್ಶನ ನೀಡುವಂಥ ಮತ್ತು ಶಕ್ತಿ ಇರುವಂಥ ಭಾರತ ಮತ್ತೊಮ್ಮೆ ಅದೇ ಸ್ಥಾನಕ್ಕೆ ಹೋಗಬೇಕೆನ್ನುವ ಆಶಯದೊಂದಿಗೆ ನಾವು ಕೆಲಸ ಮಾಡುತ್ತೇವೆ. ಎಷ್ಟೋ ಸಲ ಇಂತಹ ಸಂದರ್ಭದಲ್ಲಿ ಇಡೀ ದೇಶಕ್ಕೆ ದೇಶವೇ ಒಂದಾಗಿ ವೈಜ್ಞಾನಿಕ ಸಂಶೋಧನೆಯೊಂದಿಗೆ ಮಾನಸಿಕ ಧೈರ್ಯವು ಅವಶ್ಯಕವಾಗಿರುತ್ತದೆ.

**(ಮುಂದು)**

**(496) 18.03.2021/3.40/ಎಸ್‌ಕೆ-ಎಂಡಿ**

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ಮುಂದು):-**

ಈ ದೇಶದ ಪ್ರಧಾನ ಮಂತ್ರಿಯಾದ ಶ್ರೀ ನರೇಂದ್ರ ಮೋದಿಯವರು ಒಂದು ಕರೆ ಕೊಟ್ಟಾಗ, ಇಡೀ ದೇಶದಲ್ಲಿರುವ ನಾವೆಲ್ಲರೂ ಒಂದೇ ಎಂಬ ಭಾವನೆ ಗುಡಿಸಿಲಿನ ಒಬ್ಬ ಅವಿದ್ಯಾವಂತ ಮಹಿಳೆಯಿಂದ ಪ್ರಾರಂಭಗೊಂಡು ನಮ್ಮ ರಾಜ್ಯದ ಹಿರಿಯ ರಾಜಕೀಯ ಧುರೀಣರವರೆಗೆ ಬರಲಿ ಎಂದು ಹೇಳುವಂತಹದ್ದನ್ನು ನಾನು ಫೇಸ್ ಬುಕ್‌ನಲ್ಲಿ ನೋಡಿದ್ದೇನೆ. ಅವರು ಈ ದೇಶದ ಮಾಜಿ ಪ್ರಧಾನ ಮಂತ್ರಿಗಳು. ಎಲ್ಲರೂ ಕೂಡ ಒಂದೇ ಎನ್ನುವ ಕಾರಣಕ್ಕೆ ಜಾಗಟೆ ಹೊಡೆಯಿರಿ ಎಂದು ಹೇಳಿದಾಗ, ಅವರ ಮನೆಯಲ್ಲಿ ಸಹ ಜಾಗಟೆಯನ್ನು ಹೊಡೆದರು. ದೀಪವನ್ನು ಬೆಳಗಿಸಿ ಎಂದು ಹೇಳಿದಾಗ, ದೀಪವನ್ನು ಬೆಳಗಿಸಿದರು. ಏಕೆಂದರೆ ನಾವು ನಮಗೆ ಗೊತ್ತಿಲ್ಲದಂತಹ ಒಬ್ಬ ಶತ್ರುವಿನ ವಿರುದ್ಧ ಹೋರಾಟ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದೇವೆ. ಮನಸ್ಸಿನ ಶಕ್ತಿ ಬಹಳ ಮುಖ್ಯ. ಭಾವನೆಗಳೇ ಕಲ್ಲನ್ನು ದೇವರಾಗಿಸುವಂತಹದ್ದು. ಭಾವನೆಗಳೇ ನೀರನ್ನು ತೀರ್ಥವಾಗಿಸುವಂತಹದ್ದು. ಇಡೀ ದೇಶದಲ್ಲಿ ಎಂತಹ ಅಸಾಧ್ಯವಾದ ಪರಿಸ್ಥಿತಿ ಇರಲಿ, ಆ ಪರಿಸ್ಥಿತಿಯನ್ನು ಎದುರಿಸುತ್ತೇನೆ ಎಂದು ಹೇಳುವಂತಹ ನಿಶ್ಚಯವನ್ನು ತೆಗೆದುಕೊಂಡಾಗ, ಒಂದು ಅದ್ಭುತವಾದಂತಹ ಪರಿವರ್ತನೆಯಾಯಿತು. ಆತ್ಮ ನಿರ್ಭರ ಭಾರತ ಎಂದು ಹೇಳುವುದಕ್ಕೆ, ಆ ಸಂದರ್ಭಕ್ಕಿಂತ ಒಳ್ಳೆಯ ಉದಾಹರಣೆ ಇನ್ನೊಂದು ಇರಲಿಕ್ಕಿಲ್ಲ. ನಾವು ಸಮಯವನ್ನು ಕಳೆದಂತಹ ದಿನಗಳ ನೆನಪುಗಳು ಒಮ್ಮೆಮ್ಮೆ ಮರೆತು ಹೋಗುತ್ತದೆ.

ನಾವು ಒಮ್ಮೆ ನೆನಪಿಸಿಕೊಂಡರೆ, ಕಳೆದು ಹೋದ 6-8 ತಿಂಗಳಲ್ಲಿ ಒಂದೊಂದು ಮನೆಯಿಂದ ತಾಯಂದಿರಿಂದ ಹಿಡಿದು ಚಿಕ್ಕ ಮಕ್ಕಳವರೆಗೂ ಪಟ್ಟಂತಹ ಭಯ, ವೇದನೆ, ಒಂದು ರೀತಿಯ ಏಕಾಂತದ ಭಾವನೆಗಳನ್ನು ಅನುಭವಿಸಿದರು. ನಮ್ಮಲ್ಲಿ N-95 mask ಇಲ್ಲ ಎಂದು ಹೇಳುವಂತಹ ಪರಿಸ್ಥಿತಿಯಿದ್ದಂತಹ ಸಂದರ್ಭದಲ್ಲಿ ಪ್ರತಿಯೊಂದು ಮನೆ ಮನೆಯಲ್ಲಿ mask ನ್ನು ತಯಾರಿಸಿದರು. ಅದರ ನಂತರ Ventilators and Testing Kit ಗಳು ಅಥವಾ ಬೇರೆ ಬೇರೆ ರೀತಿಯ ಸೌಕರ್ಯಗಳಿಲ್ಲ. ಪ್ರಧಾನ ಮಂತ್ರಿಗಳು ಪ್ರತಿ ಬಾರಿ ಭಾರತ ಆತ್ಮ ನಿರ್ಭರ್ ಭಾರತ ಎಂದು ಹೇಳುತ್ತಿದ್ದಾರೆ. ಬರೀ ಈ ದೇಶಕ್ಕೆ ಸೀಮಿತವಾಗಿ ಹೇಳುವಂತಹದ್ದಲ್ಲ. ನನ್ನ ಸ್ವಾವಲಂಬನೆ ಮಾತ್ರವಲ್ಲ. ನಾನು ಬದುಕುವುದು ಮಾತ್ರವಲ್ಲ. ಭಾರತ ಆತ್ಮ ನಿರ್ಭರವಾದಾಗ, ಇಡೀ ಜಗತ್ತಿಗೆ ಇದರ ಪ್ರಯೋಜನ ಸಿಗುತ್ತದೆ. ನಮ್ಮ ಶಕ್ತಿಯನ್ನು ವರ್ಧಿಸುವಂತಹದ್ದು, ನಮ್ಮ ಸ್ವಾರ್ಥಕ್ಕೋಸ್ಕರ ಮಾತ್ರವಲ್ಲ. ಇಡೀ ಜಗತ್ತಿನ ಏಳಿಗೆಯ ದೃಷ್ಟಿಯಲ್ಲಿ ನಮ್ಮದಾದಂತಹ ಕೊಡುಗೆಯನ್ನು  ಕೊಡುವ ದಿಕ್ಕಿನಲ್ಲಿ ನಮ್ಮ ಪ್ರಯತ್ನ, ಅದಕ್ಕೋಸ್ಕರ ಆತ್ಮ ನಿರ್ಭರ್ತ್ವ ಅಂತಹ ಸಂದರ್ಭಗಳಲ್ಲಿ ಎಲ್ಲಾ ರೀತಿಯ ಅಡೆತಡೆಗಳನ್ನೆಲ್ಲಾ ಮೀರಿ, Ventilators and Testing Kit ಗಳನ್ನು ಕಡಿಮೆ ದರದಲ್ಲಿ ಇಡೀ ಜಗತ್ತಿಗೆ ಕೊಡುವಂತಹ ಶಕ್ತಿಯನ್ನು ನಾವು ಪಡೆದುಕೊಂಡೆವು.

ಇದರ ಜೊತೆಗೆ ನಮ್ಮ ವಿಜ್ಞಾನಿಗಳಿಂದ ಒಂದು ಧೈರ್ಯದ ವಾತಾವರಣವಿದೆ.  ವಿಜ್ಞಾನಿಗಳು ಬಹಳ ಒಂದು record time ನಲ್ಲಿ ಒಂದು ಅದ್ಭುತವಾದ vaccine ನ್ನು ತಯಾರು ಮಾಡಿದರು. ಇಡೀ ದೇಶದಲ್ಲಿರುವ  ಕೋಟ್ಯಂತರ ಜನರಿಗೆ ವ್ಯಾಕ್ಸಿನ್ ಕೊಡುವುದರ ಜೊತೆಗೆ ಜಗತ್ತಿನಲ್ಲಿರುವ ಸುಮಾರು 175 ದೇಶಗಳಿಗೆ ಅದನ್ನು ರಫ್ತು ಮಾಡಲಾಯಿತು. ಇಡೀ ಜಗತ್ತಿಗೆ ಈ ಭಯದಿಂದ ಅಥವಾ ಕೊರೊನಾ ಎಂಬ ರಾಕ್ಷಸನಿಂದ ಮುಕ್ತಿ ಪಡೆಯುವಂತಹ ದಿಕ್ಕಿನಲ್ಲಿ ನಮ್ಮದಾದಂತಹ ಒಂದು ಕೊಡುಗೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದರ ಸಾಧನೆಯನ್ನು ನಾವು ಭಾರತದ ಸಾಧನೆ ಎಂದು ಹೇಳುವಂತಹ ದೃಷ್ಟಿಯಲ್ಲಿ, ಯಾವುದೋ ಒಬ್ಬ ವ್ಯಕ್ತಿಗೆ ಅಲ್ಲ. ಭಾರತದ ಸಾಧನೆ ಇದೆ ಎಂದು ಹೇಳುವಂತಹ ಅಭಿಮಾನದ ಜೊತೆಗೆ ನಾವು ಇದನ್ನು ಸ್ವೀಕರಿಸಬೇಕಾದಂತಹ ಅಗತ್ಯದ ಒಂದು ವಾತಾವರಣದಲ್ಲಿ ನಾವಿದ್ದೇವೆ. ಇಲ್ಲಿ ಇಷ್ಟೆಲ್ಲಾ ಪ್ರಸ್ತಾವಗಳು ಚರ್ಚೆಯ ಆಧಾರದ ಮೇಲೆ ನಾನು ಮಾತನಾಡುತ್ತಿದ್ದೇನೆ. ಇಲ್ಲಿ ಎಷ್ಟೋ ಬಾರಿ ಚರ್ಚೆಯಾಯಿತು. ದೇಶದ ಚಟುವಟಿಕೆಯಲ್ಲಿ, ದೇಶದ ಈ ಕರೆಗೆ ಕರ್ನಾಟಕವೂ ಕೂಡ ಹಿಂದೆ ಬೀಳಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ವೈಪರೀತ್ಯ ಪರಿಸ್ಥಿತಿಯ ಸಂದರ್ಭದಲ್ಲಿ; ಬಹುಶಃ ಸಾಮಾನ್ಯವಾಗಿ ತುಂಬಾ ಅನುಭವದವರನ್ನು ಪ್ರಕೃತಿಯೇ ಆ ಸ್ಥಾನದಲ್ಲಿ ತಂದು ಕೂರಿಸುತ್ತದೆ. ಅವರು ಕುಳಿತಂಥ ಸಂದರ್ಭದಲ್ಲಿ ನೆರೆ ಬಂತು ಅಥವಾ ಬೇರೆ ಬೇರೆ ರೀತಿಯ ಪ್ರಕೃತಿ ವಿಕೋಪಗಳು ಬಂತು. ಅದೂ ಸಾಕಾಗಲಿಲ್ಲ ಎನ್ನುವಂತೆ ಕೋವಿಡ್ ಬಂತು. ಅಂತಹ ಸಂದರ್ಭದಲ್ಲಿ ಸಾರ್ವಜನಿಕರು ಧೈರ್ಯಗೆಡದೇ ಇರುವಂತೆ ಆಹಾರದ ಪೊಟ್ಟಣಗಳು ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿ ಮತಗಟ್ಟೆಯ ಆಧಾರದ ಮೇಲೆ ನೀಡಲಾಯಿತು. ಈ ಸಂದರ್ಭದಲ್ಲಿ ಯಾವುದೋ ಒಂದು ಪಕ್ಷವಲ್ಲ, ಇಡೀ ಸಮಾಜ ಒಂದಾಗುತ್ತದೆ. ಮಹಾಭಾರತದಲ್ಲಿ ಒಂದು ಮಾತು ಇದೆ. 'ಯಾವುದಾದರೂ ವಿಪರೀತ ಪರಿಸ್ಥಿತಿ ಬಂದಾಗ, ನಾವು 105 ಜನ ಅಂದರೆ 100 ಜನ ಕೌರವರು, 5 ಜನ ಪಾಂಡವರು ನಾವು ಎಷ್ಟೇ ಹೋರಾಟಗಳನ್ನು ಮಾಡುತ್ತಿದ್ದರೂ ಕೂಡ ನಮ್ಮೊಳಗೆ ಎಷ್ಟೇ ಮತ ಭೇದಗಳಿದ್ದರೂ ಕೂಡ ಯಾವುದಾದರೂ ದೇಶ ಮತ್ತು ರಾಜ್ಯದ ಪರಿಸ್ಥಿತಿಯ ಬಗ್ಗೆ ಬಂದಾಗ, ಇದೆಲ್ಲದರ ಮೇಲೆ ನಿಂತು ನಾವು 105 ಜನರು ಒಂದಾಗಿ, ಇದರ ವಿರುದ್ಧ ಹೋರಾಟ ಮಾಡುತ್ತೇವೆ ಎಂದು ಹೇಳುವಂತಹ ಮಾನಸಿಕತೆ ಏನಿದೆ, ಅದು ಒಂದು ದೇಶವನ್ನು ಮುಂದೆ ಕೊಂಡುಹೋಗುತ್ತದೆ' ಎಂದು ಹೇಳುವಂತಹ ಭಾವನೆಯನ್ನು ವ್ಯಕ್ತಪಡಿಸುತ್ತೇನೆ.

ಲಕ್ಷಾಂತರ ಆಹಾರದ ಕಿಟ್‌ಗಳು ಅಥವಾ ಅದು ಸಮಾಜದ ನಿತ್ಯ ದುಡಿಯುವಂತಹ ಬೇರೆ ಬೇರೆ ವರ್ಗದ ಜನರಿಗೆ ನೇರವಾಗಿ ಅವರ ಬ್ಯಾಂಕ್ ಅಕೌಂಟ್‌ಗೆ ಹೋಗುವಂತಹ ರೀತಿಯಲ್ಲಿ ವ್ಯವಸ್ಥೆಗಳು, ಇದೆಲ್ಲವನ್ನು ಗಮನಿಸುವಾಗ, ಈ ದೇಶದ ಭವಿಷ್ಯದ ಬಗ್ಗೆ ಎಷ್ಟೋ ಬಾರಿ ಕೆಲವೊಮ್ಮೆ ಕೆಲವರು ನಿರಾಶವಾದಿಗಳಾಗಿ ಮಾತನಾಡುವುದನ್ನು ನಾವು ಕೇಳುತ್ತೇವೆ. ಇವತ್ತಿನ ದಿವಸ ರಾಜಕೀಯದ ವ್ಯವಸ್ಥೆಯಲ್ಲಿ ಜಾತಿ, ಹಣ ಅಥವಾ ಬೇರೆ ಬೇರೆ ಸಂಗತಿಗಳೇ ಬಹಳ ಮುಖ್ಯವಾಗಿದೆ ಎಂದು ಹೇಳುವಂತಹ ಭಾವನೆಗಳ ಮಧ್ಯೆವೂ ಕೂಡ ನಮ್ಮ ಊರಿನ ಕಿತ್ತಳೆ ಹಣ್ಣನ್ನು ಮಾರುವಂತಹ ಹಾಜಪ್ಪ ತನ್ನ ಜೀವಮಾನ ಪೂರ್ತಿ ತನಗೆ ಕಲಿಯುವುದಕ್ಕಾಗಲಿಲ್ಲ ಎನ್ನುವ ಕಾರಣಕ್ಕೋಸ್ಕರ, ಅವನ ಊರಿನಲ್ಲಿ ತಾನು ಮಾರಾಟ ಮಾಡಿದ ಕಿತ್ತಳೆ ಹಣ್ಣಿನಿಂದ ಬಂದಂತಹ ಹಣದಲ್ಲಿ ಒಂದು ಶಾಲೆಯನ್ನು ಕಟ್ಟುತ್ತಾನೆಂದು ಹೇಳುವುದಾದರೆ, ಒಳ್ಳೆಯ ಕೆಲಸ ಮಾಡುವಾಗ ಸಮಾಜವೂ ಅದೇ ರೀತಿಯಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಪಂದಿಸುತ್ತದೆ. ಆದರೆ ಯಾವುದೇ ಪ್ರಭಾವವಿಲ್ಲದೇ, ಅಂತಹ ವ್ಯಕ್ತಿಯನ್ನು ಹುಡುಕಿಕೊಂಡು ಪದ್ಮಶ್ರೀ ಪ್ರಶಸ್ತಿ ಬರುತ್ತದೆ, ಸಾಲು ಮರದ ತಿಮ್ಮಕ್ಕನಿಗೆ ಪದ್ಮಶ್ರಿ ಪ್ರಶಸ್ತಿ ಬರುತ್ತದೆ ಎಂದು ಹೇಳುವುದಾದರೆ, ಎಲ್ಲೋ ಒಂದು ಕಡೆ ನಾವು ಸಕಾರಾತ್ಮಕವಾದ ಭಾವನೆಯನ್ನು ಇಟ್ಟುಕೊಂಡಾಗ, ಒಳ್ಳೆಯ ದಿಕ್ಕಿನಲ್ಲಿ ಹೋಗುವಂತಹ ಶಕ್ತಿ ನಮಗೆ ಬಂದೇ ಬರುತ್ತದೆ ಎಂದು ಹೇಳಬಯಸುತ್ತೇನೆ.

ಆಯವ್ಯಯದ ಬಗ್ಗೆ ಮಾತನಾಡುವುದರ ಜೊತೆ ಜೊತೆಗೆ ಭಾರತೀಯ ಜನತಾ ಪಕ್ಷದ ಒಬ್ಬ ಕಾರ್ಯಕರ್ತನಾಗಿ ನನ್ನಂತೆಯೇ ಕೆಲಸ ಮಾಡಿದಂತಹ, ಇವತ್ತು ಜಾತಿ ಹಣ ಮುಖ್ಯವೆಂದು ಸಮಾಜ ಹೇಳುವುದಾದರೆ, ಕಳೆದ 30–35 ವರ್ಷಗಳಿಂದ ಕೆಲಸ ಮಾಡಿರುವಂತಹ ಶ್ರೀ ಶಾಂತರಾಮ್ ಬುಡ್ನ ಸಿದ್ದಿ ಅಂತಹವರು. ಡಾ॥ ತಳವಾರ್ ಸಾಬಣ್ಣನವರಂತಹವರು. ಅವರು ನಿರೀಕ್ಷೆಯೇ ಮಾಡಿರಲಿಲ್ಲ. ಅಂತಹವರು ಇವತ್ತು ಈ ವಿಧಾನ ಪರಿಷತ್ತಿನಲ್ಲಿ ಬಂದು ಕುಳಿತು ಮಾತನಾಡುವಂತಹ ಒಂದು ವ್ಯವಸ್ಥೆ ಇವತ್ತಿಗೂ ಆದರ್ಶ ಮತ್ತು  ಮೌಲ್ಯಗಳ ಆಧಾರದ ಮೇಲೆ ನಿರಂತರವಾಗಿ ಕೆಲಸ ಮಾಡುತ್ತಾ ಹೋದರೆ, ಒಂದಲ್ಲ ಒಂದು ದಿನ ಅವಕಾಶ ಸಿಕ್ಕಿಯೇ ಸಿಗುತ್ತದೆ ಎಂದು ಹೇಳುವಂತಹ ಸಂದೇಶ ಕೊಡುವಂತಹ ವ್ಯವಸ್ಥೆ ಈ ಪ್ರಜಾಪ್ರಭುತ್ವದ ಒಳಗಿದೆ. ಪ್ರಜಾಪ್ರಭುತ್ವ ಎಂದು ಹೇಳುವಾಗ, ಮತ್ತೆ ಪುನಃ ಇದನ್ನು ನಾವು ಹೇಳುತ್ತೇವೆ. ಯಾರಿಗೂ ಯಾವುದೇ ಸ್ಥಾನಕ್ಕೆ  ಬರುವುದಕ್ಕೆ ಸಾಧ್ಯ ಎಂದು ಹೇಳುವಂತಹ ಅವಕಾಶ ಕಲ್ಪಿಸುವ ಸಮಾಜದ ಎಲ್ಲಾ ವರ್ಗದ ಜನರಿಗೂ ಸಾಮಾಜಿಕ ನ್ಯಾಯವನ್ನು ಕೊಡಬಲ್ಲಂತಹ ನಮ್ಮದಾಗಿಸಿಕೊಂಡಂತಹ ಸಂವಿಧಾನದ ವ್ಯವಸ್ಥೆ. ಈ ವ್ಯವಸ್ಥೆಯ ದಿಕ್ಕು ಸದಾ ಭಾರತದ ಅದ್ಭುತವಾದ ಶಕ್ತಿಯಾಗಿ,  ಎಂತಹ ಪ್ರತಿರೋಧಗಳಿದ್ದರೂ ಈ ಆದರ್ಶವನ್ನು ಮತ್ತೆ ಪುನಃ ಜೀವಂತವಾಗಿರಿಸುವಂತಹ ಶಕ್ತಿ ಅದಕ್ಕಿದೆ. ಅದಕ್ಕೋಸ್ಕರ ನಾನು ಹೇಳಿದ್ದೇನೆ. ಸಾಧು ಸಂತರು, ಆದಿ ಶಂಕರಾಚಾರ್ಯರು, ನಾರಾಯಣ ಗುರುಗಳು, ಬಸವಣ್ಣನಂತಹವರು, ಸಾವಿರಾರು ವ್ಯಕ್ತಿಗಳನ್ನು ನಾವು ಈ ದೇಶದಲ್ಲಿ ನೋಡಬಹುದು. ಯಾವತ್ತಾದರೂ ಅಂತಹ ಅಸಹಾಯಕತೆ ಬಂದಾಗ, ಅದನ್ನು ಸರಿ ಮಾಡಬಲ್ಲಂತಹ ವ್ಯಕ್ತಿಗಳು ಇಲ್ಲಿ ಎದ್ದು ನಿಲ್ಲುತ್ತಾರೆ. ಇವತ್ತು ನಾವು ಸರ್ಕಾರ ನಡೆಸುವ ಅಧಿಕಾರಕ್ಕೆ ಬಂದಿದ್ದೇವೆಂದು ಹೇಳುವುದಾದರೆ, ನಾನು ಕಾಂಗ್ರೆಸ್‌ಗಾಗಲೀ ಅಥವಾ ಬೇರೆಯವರಿಗೆ ಹೇಳುವುದಿಲ್ಲ. **(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(497)18.03.2021, 3.50, ಟಿಸಿಹೆಚ್-ಎಕೆ**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ಮುಂದು):-**

ನಮ್ಮ ಪ್ರಯತ್ನದ ಫಲದ ಮೇಲೆ ನಾವು ಅಧಿಕಾರಕ್ಕೆ ಬಂದಿದ್ದೇವೆ. ನಮ್ಮ ಜನರ ಮಧ್ಯೆ ಮಾಡಿದಂಥ ಹೋರಾಟದ ಮೇಲೆ ಬಂದಿದ್ದೇವೆ. ನಮ್ಮ ಸಿದ್ಧಾಂತಗಳನ್ನು ಒಪ್ಪಿಕೊಂಡು, ಅದನ್ನು ಜಾರಿಗೆ ತರುತ್ತೇವೆ ಎಂಬ ವಿಶ್ವಾಸವನ್ನು ಜನರಲ್ಲಿ ಮೂಡಿಸಿ ಅಧಿಕಾರಕ್ಕೆ ಬಂದಿದ್ದೇವೆ. ಇವತ್ತಿನ ದಿವಸ ನಮ್ಮ ಸರ್ಕಾರ ಕೇಂದ್ರದಲ್ಲಿ ಇರಬಹದು, ರಾಜ್ಯದಲ್ಲಿ ಇರಬಹುದು; ಆಡಳಿತ ನಡೆಸುತ್ತಿದೆಯೆಂದರೆ ಜನರ ಆಶೀರ್ವಾದವನ್ನು ಪಡೆದು ಈ ಸರ್ಕಾರ ಅಧಿಕಾರಕ್ಕೆ ಬಂದಿದೆ. ನನಗೆ ನೆನಪಿರುವ ಹಾಗೆ ಬಹುಶಃ ಹಿರಿಯ ಸದಸ್ಯರು ನನ್ನದು ತಪ್ಪಿದ್ದರೆ ತಿದ್ದಬಹುದು. 1984ನೇ ಇಸವಿಯಲ್ಲಿ ಈ ದೇಶದಲ್ಲಿ ಲೋಕಸಭೆ ಚುನಾವಣೆ ಬಂದಾಗ, ಕೇವಲ ಎರಡೇ ಬಿ.ಜೆ.ಪಿ ಸದಸ್ಯರಿದ್ದರು. ಈ ಎರಡು ಸದಸ್ಯರಿದ್ದಂಥ ಭಾರತೀಯ ಜನತಾ ಪಾರ್ಟಿ 2019ನೇ ಇಸವಿಗೆ ಬಂದಾಗ, ಎರಡು ಸದಸ್ಯರಿಂದ 301 ಸದಸ್ಯರನ್ನು ಲೋಕಸಭೆಯಲ್ಲಿ ಕಾಣುತ್ತಿದ್ದೇವೆಂದರೆ, ಅದು ಜನ ನೀಡಿದ ಆಶೀರ್ವಾದದ ಜೊತೆಗೆ ನಾವು ಪಟ್ಟಂತಹ ಪರಿಶ್ರಮ. 414 ಸದಸ್ಯರಿಂದ 54 ಸದಸ್ಯರಿಗೆ ಏಕೆ ಇಳಿಯಿತು ಎಂಬುದು ಹೇಳುವಂಥದ್ದನ್ನು ಆಯಾ ಪಕ್ಷದವರು ಆತ್ಮಾವಲೋಕನ ಮಾಡಿಕೊಳ್ಳಲಿ. ಆದರೆ, ನಾವು ಅಧಿಕಾರಕ್ಕೆ ಬಂದಿದ್ದೇವೆಂದರೆ, ಅದರ ಹಿಂದೆ ಲಕ್ಷಾಂತರ ಜನ ಕಾರ್ಯಕರ್ತರ ಶ್ರಮ ಇದ್ದು, ನಾವು ನಂಬಿಕೊಂಡಂತಹ ಸಿದ್ಧಾಂತದ ಜೊತೆಗೆ ನಾವು ಹೋದಂತಹ ನಮ್ಮ ಪ್ರಯತ್ನವಿದೆ. ಇದರ ಜೊತೆಗೆ ನಮ್ಮ ಕಲ್ಪನೆಗಳು, ನಮ್ಮ ಕಾರ್ಯಕ್ರಮಗಳು, ನಮ್ಮ ಹೋರಾಟಗಳನ್ನು ನೋಡಿ ಜನ ಮೆಚ್ಚಿ; ನಮ್ಮನ್ನು ಆಶೀರ್ವಾದ ಮಾಡಿ ನಮಗೂ ಒಂದು ಅವಕಾಶವನ್ನು ಕೊಟ್ಟಿರುವುದರಿಂದ, ನಾವು ಹಕ್ಕಿನಲ್ಲಿ ಬಂದು ಈ ಸರ್ಕಾರವನ್ನು ನಡೆಸುತ್ತಿದ್ದೇವೆ. ಒಂದು ವೇಳೆ ನಿಮಗೆ ನಮ್ಮ ಮೇಲೆ ಸಿಟ್ಟಿದ್ದರೆ, ಆ ಸಿಟ್ಟನ್ನು ಖಂಡಿತವಾಗಿಯು ನಮ್ಮ ಮೇಲೆ ತೋರಿಸಿಕೊಳ್ಳುವುದಕ್ಕಿಂತ ನೀವು ನಿಮ್ಮ ಆತ್ಮ ಚಿಂಥನೆಯನ್ನು ಮಾಡಿಕೊಳ್ಳುವುದು ನಿಮಗೆ ಬಿಟ್ಟಿದ್ದು. ನಾವೇನು ಅದನ್ನು ಹೇಳುವಂಥವರಲ್ಲ. ಆದರೆ, ಎಲ್ಲೋ ಒಂದು ಕಡೆ ಪ್ರಜಾಪ್ರಭುತ್ವದ ಆಶಯದಿಂದ ಇವತ್ತು ನಾವು ಈ ಸ್ಥಾನಕ್ಕೆ ಬಂದಿದ್ದೇವೆ. ಇವತ್ತು, ನಾವು ಸನ್ಮಾನ್ಯ ಪ್ರಧಾನಮಂತ್ರಿಗಳನ್ನು ನೋಡುವುದಾದರೆ. . . ನಮಗೆ ಏನಾದರೂ ನಿಮ್ಮ ಮುಂದಿನ ನಾಯಕ ಯಾರೆಂದು ಹೇಳಿದರೆ, ನಾವು ಯಾವುದೋ ಒಂದು ಕುಟುಂಬವನ್ನು ನೋಡುವುದಿಲ್ಲ. ಬದಲಿಗೆ ನಾವು ಜನರ ಮಧ್ಯೆ ಇದ್ದು ಕೆಲಸ ಮಾಡಿ ತನ್ನ ಕೆಲಸದ ಆಧಾರದ ಮೇಲೆ ಸಂಘಟನೆ ನಿಶ್ಚಯ ಮಾಡಿ, ಇವರು ನಮ್ಮ ನೇತಾರರು ಎಂದು ಹೇಳುವಂಥದ್ದು. ಏಕೆಂದರೆ ಅದು ಪ್ರಜಾಪ್ರಭುತ್ವದ ಆಶಯ. ಪ್ರತಿಯೊಬ್ಬರು ತನ್ನ ಸ್ವಂತ ಬಲದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಧಾರದ ಮೇಲೆ ಕೆಲಸ ಮಾಡುತ್ತಾ ಹೋದಂತೆ, ಮೇಲಕ್ಕೆ ಬರುತ್ತಾನೆಂದು ಹೇಳಬಹುದು. ಈ ಕಾರಣಕ್ಕೆ ಇಲ್ಲಿ ಕೆಲವು ಮಾನ್ಯ ಸದಸ್ಯರು ಹಲವಾರು ಬಾರಿ ಇಲ್ಲಿ ಚರ್ಚೆ ಮಾಡುವಾಗ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹೆಸರನ್ನು ಹೇಳದೇ, ಬೇರೆ ಬೇರೆ ರೀತಿಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅವರ ಅಭಿಪ್ರಾಯವನ್ನು ಇಟ್ಟುಕೊಳ್ಳುವುದಕ್ಕೆ ಅವರು ಸ್ವತಂತ್ರರು. ಆದರೆ, ನನ್ನಂಥಹ ಕಾರ್ಯಕರ್ತರು ರಾಷ್ಟ್ರೀಯ ಸ್ವಯಂ ಸೇವಕ ಸಂಘವೆಂದು ಹೇಳಿದರೆ, ಈ ದೇಶದ ಭಾರತ ರತ್ನ ಪ್ರಶಸ್ತಿ ಪಡೆದಿರುವಂಥ ಮಾಜಿ ಪ್ರಧಾನಮಂತ್ರಿಗಳಾದ ದಿವಂಗತ ವಾಜಪೇಯಿರವರಿಂದ ಪ್ರಾರಂಭಗೊಂಡು, ಪಂಚಾಯಿತಿಯ ಕೊನೆಯವರೆಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ಪ್ರೇರಿತರಾಗಿರುವ ಅದೊಂದು ಸಾಮಾಜಿಕ ಸೇವಾ ಸಂಘಟನೆ. 1952ನೇ ಇಸವಿಯಲ್ಲಿ ಅದರ ನಂತರ, ಒಂದೆರಡು ಯುದ್ಧಗಳು ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಆದಾಗ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕರು ಕೆಲಸ ಮಾಡಿದಂಥ ಹಿನ್ನೆಲೆಯಲ್ಲಿ; ಗಣ ರಾಜ್ಯೋತ್ಸವದ ಪೆರೇಡ್‌ನಲ್ಲಿ ಅವರಿಗೆ ಭಾಗವಹಿಸುವಂಥ ಅವಕಾಶವನ್ನು ಆಗಿನ ಪ್ರಧಾನ ಮಂತ್ರಿಗಳಾಗಿದ್ದ ಸನ್ಮಾನ್ಯ ಜವಾಹರ್‌ಲಾಲ್ ನೆಹರುರವರು ನೀಡಿದ್ದರು. ಅಲ್ಲಿಂದ ಮಾನ್ಯ ಪ್ರಣಬ್ ಮುಖರ್ಜಿಯವರು ಹಾಗೂ ಮಹಾತ್ಮ ಗಾಂಧೀಜಿಯವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಚಟುವಟಿಕೆಯಲ್ಲಿ ಇದ್ದರು. ಆ ಕಾರಣಕ್ಕೋಸ್ಕರವೇ ಹಲವಾರು ಬಾರಿ ಇದರ ಬಗ್ಗೆ ಚರ್ಚೆಯಾಗುತ್ತದೆ. ಆದರೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜವಾಬ್ದಾರಿಯಲ್ಲಿದ್ದವರು ಯಾರೂ ಕೂಡ ರಾಜಕೀಯದಲ್ಲಿ ಇರುವುದಿಲ್ಲ. ಬದಲಿಗೆ ವ್ಯಕ್ತಿ ನಿರ್ಮಾಣದ ಕೆಲಸವನ್ನು ಮಾಡುತ್ತಿದ್ದಾರೆ. ಈ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಾಖೆಗೆ ಹೋದಂಥವರು ತುಂಬಾ ಮಂದಿ ಬರೀ ಒಂದೇ ಪಕ್ಷದವರಲ್ಲ. ಬೇರೆ ಬೇರೆ ಪಕ್ಷದಲ್ಲಿಯೂ ಕೂಡ ಇದ್ದಾರೆ. ಬೇರೆ ಬೇರೆಯವರಿಗೆ ಬೇರೆ ಸಂಘಟನೆ ಮತ್ತು ಪ್ರೇರಣೆಯನ್ನು ಕೊಟ್ಟಿರಬಹುದು. ಆದರೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮೇಲೆ ನಮಗೆ ಅಭಿಮಾನ ಇದೆ. ಈ ರೀತಿಯ ಒಂದು ಪ್ರೇರಣೆಯನ್ನು ಸಮಾಜಕ್ಕೋಸ್ಕರ, ಈ ಸಮಾಜದ ಕಟ್ಟಕಡೆಯ ವ್ಯಕ್ತಿಗೋಸ್ಕರ ಮತ್ತು ದೇಶಕ್ಕೋಸ್ಕರ ಕೆಲಸ ಮಾಡಬೇಕು ಎಂದು ಶಿಕ್ಷಣವನ್ನು ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ನಾವು ಕೆಲಸ ಮಾಡುತ್ತೇವೆಂದು ಹೇಳಬಹುದು.

ಇನ್ನು ಬಜೆಟ್‌ನ ಬಗ್ಗೆ ಹೇಳುವುದಾದರೆ, ಬಹುಶಃ ಇವತ್ತಿನ ಪರಿಸ್ಥಿತಿಯಲ್ಲಿ ಈ ರೀತಿಯ ಒಂದು ಆರ್ಥಿಕ ಸ್ಥಬ್ಧತೆ ಇಡೀ ವಿಶ್ವ ಕಂಡಂತಹ ಸಂದರ್ಭದಲ್ಲಿ ಮತ್ತು ಬಳುವಳಿಯಾಗಿ ನಾವು ಪಡೆದುಕೊಂಡಂತಹ ವ್ಯವಸ್ಥೆಯ ಆಧಾರದ ಮೇಲೆ ಹೇಳುವುದಾದರೆ, 2012ನೇ ಇಸವಿಯವರೆಗೆ ಅಂದರೆ ಹಿಂದಿನ ಮೈತ್ರಿ ಸರ್ಕಾರಕ್ಕಿಂತಲೂ ಮೊದಲು ಕರ್ನಾಟಕ ರಾಜ್ಯ ಸ್ಥಾಪನೆಯಾಗಿ ಸುಮಾರು 62 ವರ್ಷಗಳ ನಂತರ ಸಾಲದ ಮೊತ್ತವನ್ನು ಮಾನ್ಯ ಮಾಜಿ ಮುಖ್ಯಮಂತ್ರಿಗಳು, ಹಾಗೂ ಈಗಿನ ಪ್ರತಿಪಕ್ಷದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನಾಯಕರಾಗಿರುವಂಥ ಸನ್ಮಾನ್ಯ ಸಿದ್ದರಾಮಯ್ಯನವರ ಸರ್ಕಾರದ ಮೊದಲ ನಾಲ್ಕು ವರ್ಷದ ಅವಧಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಸಾಲ 2 ಲಕ್ಷ ಕೋಟಿ ರೂಪಾಯಿಗಳು ದಾಟಿತ್ತು.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠಾಸೀನರಾದರು)**

ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು 2019-20ನೇ ಸಾಲಿನಲ್ಲಿ ಬಜೆಟ್ ಮಂಡನೆ ಮಾಡಿದ ಸಮಯದಲ್ಲಿ ಕರ್ನಾಟಕದ ಸಾಲದ ಒತ್ತುವಳಿ 3,27,209 ಕೋಟಿ ರೂಪಾಯಿಗಳು ಇತ್ತು. ಅಂದರೆ, ಒಂದು ಲಕ್ಷ ಕೋಟಿಯ ಸಾಲ ಪ್ರಮಾಣ ದಾಟಲು 62 ವರ್ಷಗಳ ಧೀರ್ಘ ಕಾಲ ತೆಗೆದುಕೊಂಡಂಥ ಕರ್ನಾಟಕ ರಾಜ್ಯದ ಆರ್ಥಿಕತೆ ಸನ್ಮಾನ್ಯ ಸಿದ್ದರಾಮಯ್ಯನವರು ಮತ್ತು ಮೈತ್ರಿ ಸರ್ಕಾರದ ಕೇವಲ 7 ಬಜೆಟ್ ಮಂಡನೆಯಲ್ಲಿ 3 ಲಕ್ಷ ಕೋಟಿ ರೂಪಾಯಿಗಳನ್ನು ದಾಟಿದೆ. ಇಂತಹ ಒಂದು ಬಳುವಳಿಯನ್ನು ಪಡೆದುಕೊಂಡು ಈ ಸರ್ಕಾರ ಕೆಲಸ ಮಾಡುತ್ತಿದೆ. ಅದರ ಜೊತೆಗೆ ಈಗ ಆರ್ಥಿಕ ಸ್ಥಬ್ಧತೆಯಾಗಿದೆ. ನಾನು ಬರೀ ಕಾರಣಕೊಡುವುದಕ್ಕೋಸ್ಕರ ಹೇಳುತ್ತಿಲ್ಲ. ಬಹುಶಃ ಬಹಳ ವೇಗದಲ್ಲಿ ಮುಂದೆ ಹೋಗುತ್ತಿದ್ದಂಥ ಇಡೀ ದೇಶದ ಆರ್ಥಿಕ ಸ್ಥಿತಿ ಈ ಕಾರಣಕ್ಕೆ ಒಂದು ರೀತಿಯಲ್ಲಿ ಸ್ತಬ್ಧ ವಾತಾವರಣನ್ನು ತೆಗೆದುಕೊಂಡಿದ್ದೇವೆ. ಬಹುಶಃ ನಾವು ಮತ್ತೆ ವಿಶೇಷವಾದಂಥ ಪ್ರಯತ್ನದಿಂದ ಮೇಲೇಳಬೇಕಾದ ಅಗತ್ಯತೆ ಇದೆ. ಅಂಥದ್ದರ ಮಧ್ಯೆಯೂ ಕೂಡ ನಮ್ಮ ಸರ್ಕಾರ ಯಾವುದೇ ತೆರಿಗೆಯನ್ನು ಹೆಚ್ಚಿಸಿಲ್ಲ. ಸಮಾಜದ ತುಂಬಾ ಜನ ಗಣ್ಯರು, ನಾನು ಪತ್ರಿಕಾ ಪ್ರತಿಕ್ರಿಯೆಯಲ್ಲಿ ನಾನು ಓಡಾಡುವಂಥ ಜನರ ಮದ್ಯೆ ಇದ್ದಾಗ, ನನಗೆ ಸಿಕ್ಕಿದಂಥ ಮಾಹಿತಿಯ ಆಧಾರದಲ್ಲಿ ಬಹುಶಃ ಇಂತಹ ಪರಿಸ್ಥಿತಿಯಲ್ಲಿ ಇದಕ್ಕಿಂತ ಒಳ್ಳೆಯ ಸಮತೋಲನದ ಸಮಾಜದ ಎಲ್ಲಾ ವರ್ಗದ ಜನರನ್ನು, ಎಲ್ಲಾ ಖಾತೆಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬಹುಶಃ ಇದಕ್ಕಿಂತ ಉತ್ತಮವಾದಂಥ ಬಜೆಟ್‌ನ್ನು ಮಂಡಿಸುವುದಕ್ಕೆ ಸಾಧ್ಯವೇ ಇಲ್ಲ ಎಂಬ ಅಭಿಪ್ರಾಯವನ್ನು ಆರ್ಥಿಕ ತಜ್ಞರು ಹೇಳಿದ್ದಾರೆ. ಆದ್ಯತೆಗಳ ಆಧಾರದ ಮೇಲೆ ನಮ್ಮಲ್ಲಿ ವೈಚಾರಿಕವಾದ ಅಥವಾ ಅಭಿಪ್ರಾಯಗಳಲ್ಲಿ ಬೇಧಭಾವಗಳಿರಬಹುದು. ಬಹುಶಃ ಈ ಸಮತೋಲನ ಬಜೆಟ್‌ನ್ನು ಮಂಡನೆ ಮಾಡಿದಂಥ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೃದಯಪೂರ್ವಕವಾಗಿ ಈ ವೇದಿಕೆಯಿಂದ ಅಭಿನಂದಿಸುತ್ತಿದ್ದೇನೆ. ಮಾನ್ಯ ಸದಸ್ಯರು ಚರ್ಚೆ ಮಾಡುವಾಗ ಎಷ್ಟೋ ಬಾರಿ "ಡಬಲ್ ಇಂಜಿನ್ ಸರ್ಕಾರ" ಎಂದು ಹೇಳಿದರು. ಬಹುಶಃ ನಾವು ಒಂದು ಸೂಕ್ಷವನ್ನು ಗಮನಿಸಿದಾಗ, ಮಾನ್ಯ ಮನಮೋಹನ್ ಸಿಂಗ್‌ರವರ ಸರ್ಕಾರ ಹೋಗುವಾಗ, ಮಾನ್ಯ ನರೇಂದ್ರ ಮೋದಿಯವರ ಸರ್ಕಾರ ಬಂದಂಥ ಮೊದಲ ಅವಧಿಯನ್ನು ನೋಡಬಹುದು. ಒಂದು ವೇಳೆ ನಾವು ಬೇಕಾದರೆ, ನೆಗೆಟಿವ್ ಎಂದು ಹೇಳುವಂಥ ಕಾರಣಕ್ಕೋಸ್ಕರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನ ಸನ್ಮಾನ್ಯ ನರೇಂದ್ರ ಮೋದಿಯವರಿಗೆ ಅವಕಾಶ ಕೊಟ್ಟರು. ಕಾಂಗ್ರೆಸ್ ಸರ್ಕಾರದ ನಡವಳಿಕೆಯಿಂದಾಗಿ ಜನ ಬದಲಾವಣೆಯನ್ನು ಬಯಸಿದರು ಎಂದು ಹೇಳಬಹುದು.

**(ಮುಂದು)**

**(498)18.3.2021/4.00/ಎಂ.ಎಂ–ಎ.ಕೆ** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ (ಮುಂದು):–**

ಆದರೆ 2014ರ ನಂತರ ಆದಂತಹ ಚುನಾವಣೆಯಲ್ಲಿ, 2019ರಲ್ಲಿ ಆದಂತಹ ಚುನಾವಣೆಯ ಸಂದರ್ಭದಲ್ಲಿ ಬಿ.ಜೆ.ಪಿ.ಗೆ 301 ಸ್ಥಾನವನ್ನು ಕೊಟ್ಟಿದೆ. ಅಂದರೆ ಕಳೆದ ಬಾರಿಗಿಂತ ಹೆಚ್ಚಿನ ಸ್ಥಾನವನ್ನು ಕೊಟ್ಟಿದೆ. ಈ ದೇಶದ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಇರುವಂತಹ ಜನಗಳ ಮನೆ ಮನೆಗೆ ಆಡಳಿತಾತ್ಮಕವಾಗಿ ಬದಲಾವಣೆ ತಂದಂತಹ ಯೋಜನೆಗಳು ಪ್ರತಿ ಮನೆ ಮನೆಗೂ ತಲುಪಿದಂತಹ ಸಂಗತಿಯ ಪರಿಣಾಮದಿಂದ ಮತ್ತೊಮ್ಮೆ ಮಾನ್ಯ ನರೇಂದ್ರ ಮೋದಿಯವರಿಗೆ; ಸ್ವತಂತ್ರ ಭಾರತದ ಇತಿಹಾಸದಲ್ಲಿ ಕಾಂಗ್ರೇಸೇತರ ಸರ್ಕಾರ ಸತತವಾಗಿ ಎರಡು ಬಾರಿ ಬಂದಿದ್ದರೆ ಅದು ಮಾನ್ಯ ನರೇಂದ್ರ ಮೋದಿಯವರ ಸರ್ಕಾರವಾಗಿದೆ. ಕೆಲವರು ಕರ್ನಾಟಕದಲ್ಲಿ ಬಿ.ಜೆ.ಪಿ., ಕೇಂದ್ರದಲ್ಲಿ ಬಿ.ಜೆ.ಪಿ., ಸರ್ಕಾರ ಇದ್ದಾಗ ಸ್ವರ್ಗವನ್ನೇ ತರುತ್ತೇವೆ ಎಂದು ತುಂಬಾ ಬಾರಿ ಹೇಳುತ್ತಾರೆ. ಇವತ್ತಿನ ಪರಿಸ್ಥಿತಿಯಲ್ಲಿ ಅದನ್ನು ಅರ್ಥ ಮಾಡಿಕೊಂಡರೂ ಕೂಡ ಅದರ ಜೊತೆಗೆ ಕೆಲಸದ ವೇಗ ಹೆಚ್ಚಿದೆ ಎಂದು ಹೇಳಬಹುದು. ನಾನು ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಿಂದ ಬರುತ್ತೇನೆ. ಮಾಜಿ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಸರ್ಕಾರವಿದ್ದ ಸಂದರ್ಭದಲ್ಲಿ 'ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ'ಯಲ್ಲಿ, ಬೆಳ್ತಂಗಡಿ ವಿಧಾನಸಭಾ ಕ್ಷೇತ್ರವು 80 ಗ್ರಾಮಗಳನ್ನು ಒಳಗೊಂಡು ಪಶ್ಚಿಮಘಟ್ಟದ ಬುಡದಲ್ಲಿಯೇ ಇದ್ದು, ಅಲ್ಲಿನ ಜನ ರಸ್ತೆಗಳ ಬಗ್ಗೆ ಬಹಳ ನಿರೀಕ್ಷೆಯಲ್ಲಿದ್ದರು. ಆದರೆ ನಮ್ಮ ಅನುಭವದಂತೆ ಹಿಂದೆ ರಸ್ತೆಗಳ ಕೆಲಸ ಹೇಗೆ ಆಗುತ್ತಿತ್ತು ಎಂದರೆ ಈ ವರ್ಷ ದೊಡ್ಡ boulders ಬಂದರೆ ಅದರ ಮುಂದಿನ ವರ್ಷ ಸಣ್ಣದು ಬರುತ್ತಿತ್ತು. ಅಂದರೆ ಒಂದು ರಸ್ತೆ ಆಗಬೇಕಾದರೆ 3–4 ವರ್ಷ ಕಾಯಬೇಕಾಗಿತ್ತು. 3–4ನೇ ವರ್ಷಕ್ಕೆ ಬರುವಾಗ ಮೊದಲು ಹಾಕಿದ boulders ಇರುತ್ತಿರಲಿಲ್ಲ. ಆದರೆ ಶ್ರೀ ವಾಜಪೇಯಿಯವರು ಪ್ರಧಾನಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ 'ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ' ಮೂಲಕ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯ ದೃಷ್ಟಿಯಲ್ಲಿ ನಗರಗಳೊಂದಿಗೆ, ರಾಜ್ಯದೊಂದಿಗೆ, ದೇಶದೊಂದಿಗೆ ಜೋಡಿಸುವಂತಹ ದೃಷ್ಟಿಯಲ್ಲಿ ರೈತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಥವಾ ಎಲ್ಲಾ ಸಮಾಜದ ವ್ಯಕ್ತಿಗಳಿಗೆ ಅವರ ಕನಸಿನ ಮಾರ್ಗಗಳನ್ನು ಕೊಟ್ಟಿರುವುದಾಗಿದೆ. ಆದರೆ ಮಧ್ಯದಲ್ಲಿ ಮತ್ತೆ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಬಂದಾಗ;

**ಉಪಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಮಾನ್ಯ ಸದಸ್ಯರು ಮಾತನಾಡುವುದನ್ನು ಸ್ವಲ್ಪ ಕೇಳಿ.

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್:-** 'ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ' ಅಲ್ಲಿಗೆ ಬರಲೇ ಇಲ್ಲ. ಮತ್ತೆ ಈ ರಸ್ತೆಗಳು ಪ್ರಾರಂಭವಾಗಬೇಕಾದರೆ ಬಹುಶಃ ಕರ್ನಾಟಕದಲ್ಲಿ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರ ನೇತೃತ್ವದ ಬಿ.ಜೆ.ಪಿ ಸರ್ಕಾರ ಬಂದ ಮೇಲೆ ಆಗಿದೆ. ಕಳೆದ ವರ್ಷ 60 ಕೋಟಿ ರೂಪಾಯಿಗಳ ಆರು ಮಾರ್ಗಗಳು ನಮ್ಮ ಬೆಳ್ತಂಗಡಿ ವಿಧಾನಸಭಾ ಕ್ಷೇತ್ರಕ್ಕೆ 'ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ'ಯಲ್ಲಿ ಬಂದಿದೆ. ಈ ವೇಗ ಏನಾದರೂ ಸಿಕ್ಕಿದ್ದರೆ; ಬಹುಶಃ ತುಂಬಾ ಯೋಜನೆಗಳಿವೆ. ಆ ಪ್ರತಿಯೊಂದು ಯೋಜನೆಗಳನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. 'ಆಧಾರ್', 'ಜನ ಧನ್' ಮತ್ತು 'ಮೊಬೈಲ್' ಈ ಮೂರರ ಹೊಂದಾಣಿಕೆಯ ಕಾರಣಕ್ಕೆ; ಇಲ್ಲಿ ಕೆಲವರು ಮಾತನಾಡಿದರು. ಕೇಂದ್ರದಿಂದ ರೂ. 6000/-, ರಾಜ್ಯದಿಂದ ರೂ. 4,000/- ಮತ್ತು ರೂ. 10,000/- ಕೊಟ್ಟರೆ ರೈತನಿಗೆ ಏನು ಲಾಭವಾಗುತ್ತದೆ ಎಂದು ಕೇಳಿದರು. ಯಾರೋ ಒಬ್ಬರು ಹೇಳುವಾಗಲಂತೂ ಅದು ಒಳ್ಳೆಯ ಸಂಗತಿಗಳಿಗೆ ಉಪಯೋಗವಾಗದೇ ಬೇಡದ ಸಂಗತಿಗಳಿಗೆ ಉಪಯೋಗವಾಗುತ್ತದೆ. ಅದರಿಂದ ಏನು ಪ್ರಯೋಜನ ಎಂದು ಕೇಳಿದರು. ಬಹುಶಃ ಇಡೀ ದೇಶದಲ್ಲಿ 10 ಕೋಟಿಗಿಂತಲೂ ಹೆಚ್ಚಿನ ಸಣ್ಣ ರೈತರಿದ್ದಾರೆ. ರೈತರು ತನ್ನ ಗದ್ದೆಯನ್ನು ಬಿತ್ತುವ ಸಂದರ್ಭದಲ್ಲಿ ಅಥವಾ ಅದಕ್ಕೋಸ್ಕರ ಗೊಬ್ಬರ ತರುವಂತಹ ಸಂದರ್ಭದಲ್ಲಿ ಕೈ ಸಾಲವನ್ನು ತೆಗೆದುಕೊಂಡು, ಬ್ಯಾಂಕಿನ ಮುಖವನ್ನೇ ಕಾಣದಂತಹ ಎಷ್ಟೋ ರೈತರುಗಳನ್ನು 'ಜನ ಧನ' ಯೋಜನೆಯ ಮೂಲಕ ಅದು ಮಹಿಳೆಯರಿರಬಹುದು, ರೈತರಿರಬಹುದು, ಕಾರ್ಮಿಕರಿರಬಹುದು ಅಂತಹವರನ್ನು inclusive economic development ದೃಷ್ಟಿಯಲ್ಲಿ ಸುಮಾರು 40 ಕೋಟಿ ಜನರನ್ನು ಸೇರಿಸುವಂತಹದ್ದಕ್ಕೆ ಶ್ರೀ ನರೇಂದ್ರ ಮೋದಿಯವರ ಸರ್ಕಾರ ಬಂದ ಮೇಲೆ ಸಾಧ್ಯವಾಯಿತು. ಆ ಕಾರಣಕ್ಕೋಸ್ಕರವೇ;

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಪ್ರತಾಪ್ ಸಿಂಹ ನಾಯಕರೇ, ನನಗೆ ಒಂದು ಸೆಕೆಂಡ್ ಅವಕಾಶ ಕೊಡಿ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್:–** ಮಾನ್ಯ ಮರಿತಿಬ್ಬೇಗೌಡರೇ, ಆಗುವುದಿಲ್ಲ. ತಪ್ಪು ತಿಳಿದುಕೊಳ್ಳಬೇಡಿ. ನಾನು ಕೂಡ out of mind ಆಗುವ ಸಾಧ್ಯತೆ ಇದೆ. ಮಾನ್ಯ ಸದಸ್ಯರಾದ ಯು.ಬಿ. ವೆಂಕಟೇಶ್‌ರವರ ಹಾಗೆ ನನಗೆ; ನನ್ನದು maiden speech; ಮೊದಲ ಭಾಷಣ.

**ಉಪಸಭಾಪತಿಯವರು:–** ತಾವು ಮುಂದುವರೆಸಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಪ್ರತಾಪ್ ಸಿಂಹ ನಾಯಕರೇ, ನೀವು ಮಾತನಾಡಿ ಯಾರೂ ಎಟಣಜಡಿಜಿಜಡಿಜ ಆಗುವುದಿಲ್ಲ.

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್:–** ನಾನು ಹಿರಿಯ ಸದಸ್ಯರ ಭಾವನೆಗಳನ್ನು ಅಗೌರವಿಸಿದ್ದೇನೆಂದು ತಿಳಿದುಕೊಳ್ಳಬೇಡಿ. ನಾನು 'ಜನ ಧನ್' ಯೋಜನೆಯ ಬಗ್ಗೆ ಹೇಳುತ್ತಿದ್ದೆ. ರೂ. 10,000/– ಕೊಟ್ಟಾಗ ಬಹುಶಃ ಆ ಸಂದರ್ಭದಲ್ಲಿ ಅವನಿಗೆ ಅದು ಬಹಳ ದೊಡ್ಡ ಶಕ್ತಿಯನ್ನು ಕೊಟ್ಟಿದೆ. ಕೇಂದ್ರದ ರೂ. 6,000/– ಗಳ ಜೊತೆಗೆ ಕರ್ನಾಟಕದ್ದು ರೂ. 4,000/– ಗಳು. ಸಾಲ ಮನ್ನಾ ಅದೂ ಒಂದು ಭಾಗವೇ. ಆದರೆ ಸಾಲ ಮನ್ನಾದಂತಹ ಕಾರ್ಯಕ್ರಮಗಳಿಗಿಂತ ಇಂತಹ ಕಾರ್ಯಕ್ರಮಗಳ ಮೂಲಕ ಅವರಲ್ಲಿ ವಿಶ್ವಾಸವನ್ನು ತುಂಬಿಸಿ ಅವನಿಗೆ ಒಂದು ಶಕ್ತಿಯನ್ನು ತುಂಬಿಸಿ ಬೇರೆಯವರ ಕೈ ಕೆಳಗೆ ಬಿತ್ತನೆ ಬೀಜ ಮತ್ತು ಗೊಬ್ಬರಗಳಿಗೋಸ್ಕರ ಹೋಗದೇ ಸ್ವಾಭಿಮಾನದ ವಿಶ್ವಾಸವನ್ನು ತುಂಬಿಸುವಂತಹ ಕೆಲಸ ಖಂಡಿತವಾಗಿ ಈ ಕಾರ್ಯಕ್ರಮದಿಂದ ಆಗಿಯೇ ಆಗಿದೆ. ಆ ಕಾರಣಕ್ಕೋಸ್ಕರವೇ ಜನರು ಮತ್ತೆ ಮತ್ತೆ ಬಿ.ಜೆ.ಪಿ.,ಯ ಕಡೆಗೆ ನೋಡುತ್ತಿದ್ದಾರೆ ಎನ್ನುವ ಭಾವನೆ ನನ್ನದು.

ದಿನಕ್ಕೆ 10 ಕಿ.ಮೀ ಆಗುತ್ತಿದ್ದಂತಹ ರಸ್ತೆಗಳ ನಿರ್ಮಾಣವು ಇವತ್ತು 33 ಕಿ.ಮೀ ಆಗುತ್ತಿದೆ. ಕೇಂದ್ರದ defence exports 800 ಕೋಟಿ ರೂಪಾಯಿಗಳಿದ್ದಂತಹದ್ದು ಇವತ್ತು ಮಾನ್ಯ ನರೇಂದ್ರ ಮೋದಿಯವರ ಸರ್ಕಾರ ಬಂದ ಮೇಲೆ 11,000 ಕೋಟಿ ರೂಪಾಯಿಗಳಿಗೆ ತಲುಪಿದೆ. ಈ ದೇಶದ ಪ್ರಧಾನ ಶೌಚಾಲಯ, ಸ್ವಚ್ಛ ಭಾರತ ಈ ದೃಷ್ಟಿಯಲ್ಲಿ ಯೋಚನೆ ಮಾಡಿದಾಗ ದೇಶದ ಎಲ್ಲಾ ಭಾಗದ ಜನರು ಇದಕ್ಕೆ ಸ್ಪಂದಿಸಿದಂತಹ ರೀತಿ ಕಾಂಗ್ರೆಸ್‌ನ ಸರ್ಕಾರ ಇರುವಾಗ ಶೇ.40 ರಷ್ಟು ಇದ್ದದ್ದು ಇವತ್ತು ಶೇ. 90ರಷ್ಟು ಜನಗಳಿಗೆ ತಲುಪಿದೆ.

**ಶ್ರೀ ಎಸ್. ರವಿ:–** ಮಾನ್ಯ ಪ್ರತಾಪ್ ಸಿಂಹ ನಾಯಕರೇ, ಒಂದು ನಿಮಿಷ . . .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:–** ಮಾನ್ಯ ರವಿಯವರೇ, ಅವರು ಯೀಲ್ಡ್ ಆದರೆ ಮಾತನಾಡಿ ಇಲ್ಲದಿದ್ದರೆ ಬೇಡ. ಅವರು ಔಜಡಿಟ್ಘುಂಟಿ ಕೊಟ್ಟರೆ ಮಾತನಾಡಿ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಪ್ರತಾಪ್ ಸಿಂಹ ನಾಯಕರೇ, ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ. ಆದರೆ ರಾಜ್ಯ ಬಜೆಟ್ ಬಗ್ಗೆ ಮಾತನಾಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಪ್ರತಾಪ್ ಸಿಂಹ ನಾಯಕರೇ, ನಿಮ್ಮದು ಇದು maiden speech. ನಾವ್ಯಾರೂ interfere ಆಗುವುದಿಲ್ಲ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಪ್ರತಾಪ್ ಸಿಂಹ ನಾಯಕರೇ, ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ. ಆದರೆ ರಾಜ್ಯ ಬಜೆಟ್ ಬಗ್ಗೆ ಮಾತನಾಡಿ. ನಾವು ಕೇಂದ್ರದ ಬಗ್ಗೆ ಚರ್ಚೆ ಮಾಡುವಾಗ ಕೇಂದ್ರದ ಬಗ್ಗೆ ಮಾತನಾಡಿ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, . . .

**ಉಪಸಭಾಪತಿಯವರು:–** ಮಾನ್ಯ ವೆಂಕಟೇಶ್‌ರವರೇ, ಅವರು ಮಾತನಾಡಲಿ ಬಿಡಿ. ಮಾನ್ಯ ರವಿಯವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ರಾಜ್ಯದ ಬಗ್ಗೆ ಮಾತನಾಡಿದರೆ ಹೇಳಬಹುದು.

**ಉಪಸಭಾಪತಿಯವರು:–** ಮಾನ್ಯ ವೆಂಕಟೇಶ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಪ್ರತಾಪ್ ಸಿಂಹ ನಾಯಕರು ಸದನದಲ್ಲಿ ಮೊದಲನೇ ಬಾರಿ ಮಾತನಾಡುತ್ತಿದ್ದಾರೆ. ದಯವಿಟ್ಟು ಅವರಿಗೆ ಡಿಸ್ಟರ್ಬ್ ಮಾಡಬೇಡಿ.

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್:–** ಮಾನ್ಯ ಸಭಾಪತಿಯವರೇ, ಕೇಂದ್ರದ ಯೋಜನೆಗಳು ನಮ್ಮ ಕರ್ನಾಟಕಕ್ಕೆ ಬಂದಿದೆ. ಅದರ ಜೊತೆ ಜೊತೆಗೆ ರಾಜ್ಯದ್ದನ್ನೂ ಸೇರಿಸಿದಾಗ ಅಭಿವೃದ್ಧಿಯ ದೃಷ್ಟಿಯಲ್ಲಿ ಖಂಡಿತವಾಗಿ ಬೆಳವಣಿಗೆಯಾಗಿದೆ ಎಂಬ ದೃಷ್ಟಿಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. 08 ಕೋಟಿ ಉಚಿತ ಗ್ಯಾಸ್ ಸಂಪರ್ಕಗಳು, ಐದು ಲಕ್ಷ ಉಚಿತ ವೈದ್ಯಕೀಯ ಚಿಕಿತ್ಸೆಯ coverage ಈ ಎಲ್ಲಾ ದೃಷ್ಟಿಯಲ್ಲಿ ಅದರ ಜೊತೆಗೆ ಕರ್ನಾಟಕದ ಬಜೆಟ್‌ನ ಹಿನ್ನೆಲೆಯಲ್ಲಿ ನಾನು ಎರಡು ವಿಷಯಗಳ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತ್ರ ಪ್ರಸ್ತಾಪಿಸುತ್ತೇನೆ. ಏಕೆಂದರೆ, ಅವು ನನಗೆ ಹತ್ತಿರವಾದಂತಹ ಸಂಗತಿಗಳು. ಈ ದೃಷ್ಟಿಯಲ್ಲಿ ರಾಜ್ಯ ಸರ್ಕಾರಕ್ಕೆ ನಾನು ಅಭಿನಂದಿಸುತ್ತೇನೆ. ಉಳಿದಂತೆ ನನ್ನ ಜೊತೆಗಾರರು ಖಂಡಿತವಾಗಿ ಇದರ ಬಗ್ಗೆ ಮಾತನಾಡುತ್ತಾರೆ ಎಂದು ತಿಳಿದುಕೊಳ್ಳುತ್ತೇನೆ. ಇಲ್ಲಿ 'ಗೋ ಹತ್ಯೆ ನಿಷೇಧ'ದ ಬಗ್ಗೆ ಪ್ರಸ್ತಾಪವಾಗಿದೆ. ಗೋ ಹತ್ಯೆ ನಿಷೇಧದ ಬಗ್ಗೆ ಏನು ವ್ಯವಸ್ಥೆಗಳನ್ನು ಮಾಡುತ್ತೀರಿ? ಬಜೆಟ್‌ನಲ್ಲಿ ಖಂಡಿತವಾಗಿ ಜಿಲ್ಲಾ ಮಟ್ಟದಲ್ಲಿ ಗೋ ಶಾಲೆಗಳನ್ನು ನಿರ್ಮಿಸುತ್ತೇವೆ ಎಂದು ಹೇಳಿದ್ದಾರೆ. ಬಜೆಟ್ ನಮಗೆ ಆ ಆಶ್ವಾಸನೆಯನ್ನು ಕೊಟ್ಟಿದೆ. ನಾನು ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತೇನೆ. ಎಲ್ಲವನ್ನೂ ಆರ್ಥಿಕ ಲಾಭ ನಷ್ಟದ ದೃಷ್ಟಿಯಲ್ಲಿ ನೋಡದೇ, ನಾನು ಪುನಃ ಹೇಳುವುದಕ್ಕೆ ಇಚ್ಛೆ ಪಡುತ್ತೇನೆಂದರೆ, ಗೋ ಹತ್ಯೆ ನಿಷೇಧಿಸುವಂತಹದ್ದು ಒಂದು ಸಂವೇದನೆ.

**(ಮುಂದು)**

**(499) 18-03-2021/ 04-10/ ಕೆಹೆಚ್-ಆರ್‌ಎನ್**

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ಮುಂದು):-**

ಆ ಸಂವೇದನೆಯನ್ನು ನಮ್ಮೊಳಗೆ ಉಳಿಸಿಕೊಳ್ಳಬೇಕಾದಂತಹ ಅಗತ್ಯ ಇದೆ. ಬದುಕಿನುದ್ದಕ್ಕೂ ತಾಯಿಯ ಹಾಲಿನ ಜೊತೆಗೆ ಹಸುವಿನ ಹಾಲನ್ನು ಸೇವಿಸಿ ಬದುಕಿದಂತಹವರು ನಾವು. ನಮಗೆ ಪ್ರಯೋಜನ ಇಲ್ಲ ಎಂದು ನಾವು ನೇರವಾಗಿ ಹೇಳಬಹುದು. ಗೋ ಶಾಲೆಗಳ ಬದಲಿಗೆ ವೃದ್ಧಾಶ್ರಮಗಳನ್ನು ಹೆಚ್ಚಿಸಿ ಎಂದು ಮಾನ್ಯ ಸದಸ್ಯರು ಹೇಳಿದರು. ಬಹುಶಃ ಅದಕ್ಕೂ-ಇದಕ್ಕೂ ಒಂದು ಸಣ್ಣ ಸಂಬಂಧ ಇದೆ. ಯಾವಾಗ ಈ ಸಂವೇದನೆಯನ್ನು ಉಳಿಸಿಕೊಳ್ಳುತ್ತೇವೆ, ಯಾರು ನಮ್ಮನ್ನು ನಮ್ಮ ಬದುಕಿಗೆ ಹಾಲನ್ನು ನೀಡಿ, ಶಕ್ತಿಯನ್ನು ನೀಡಿ, ಜೀವನದುದ್ದಕ್ಕೂ ನಮ್ಮ ಖುಷಿಗೆ ಬೇರೆ ಬೇರೆ ರೀತಿಯಲ್ಲಿ ನಮಗೆ ಪ್ರಯೋಜನ ಕೊಟ್ಟಂತಹ ಆ ಗೋ ಸಂಪತ್ತಿಗೆ ಕೃತಜ್ಞರಾಗಿರುವಂತಹ ಸಂವೇದನೆಯನ್ನು ಉಳಿಸಿಕೊಳ್ಳುತ್ತೇವೆಯೋ, ಆಗ ವೃದ್ಧಾಶ್ರಮಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಈ ನಂಬಿಕೆ ಖಂಡಿತವಾಗಿಯೂ ಇದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ದೃಷ್ಟಿಯಲ್ಲಿ ಮತ್ತು ಸುತ್ತಮುತ್ತಲಿನ ಆ ಭಾಗದ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಶಿವಮೊಗ್ಗ, ಕೊಡಗು ಜಿಲ್ಲೆಯ ಅಡಿಕೆ ಬೆಳೆಗಾರರನ್ನು ತೀವ್ರವಾಗಿ ಬಾಧಿಸುತ್ತಿದ್ದಂತಹ ಹಳದಿ ಎಲೆಯ ರೋಗದ ಕುರಿತು ಸಂಶೋಧನೆ ತೀವ್ರಗೊಳಿಸಲು ಹಾಗೂ ಪರ್ಯಾಯ ಬೆಳೆಯನ್ನು ಬೆಳೆಯುವುದಕ್ಕೆ ಪ್ರೋತ್ಸಾಹಿಸಲು 25 ಕೋಟಿ ರೂಪಾಯಿಗಳಲ್ಲಿ ಕಾರ್ಯಕ್ರಮವನ್ನು ಈ ಬಜೆಟ್‌ನಲ್ಲಿ ರೂಪಿಸಿರುವುದಕ್ಕೆ ನಾನು ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತೇನೆ. ಇದರ ಜೊತೆಗೆ Plastic and Petrochemical ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಮಂಗಳೂರಿನ ಗಂಜಿ ಮಠದಲ್ಲಿ 100 ಎಕರೆ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೂಮಿಯಲ್ಲಿ 66 ಕೋಟಿ ರೂಪಾಯಿಗಳ ಯೋಜನಾ ವೆಚ್ಚದಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ Plastic Park ಅನ್ನು ಅಭಿವೃದ್ಧಿಪಡಿಸುವುದರ ಬಗ್ಗೆ ಈ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ.

ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಮುಗಿಸುವುದರ ಮೊದಲು ಇದೇ ವಿಧಾನ ಸೌಧದಲ್ಲಿ ನಡೆದ ಬೃಹತ್ ಸಮಾರಂಭದಲ್ಲಿ 2020 ರ ಹೊತ್ತಿಗೆ ಈ ದೇಶ ಯಾವ ದಿಕ್ಕಿನಲ್ಲಿ ಹೋಗಬೇಕೆಂದು ಬಹಳ ವರ್ಷಗಳ ಹಿಂದೆ ಆಗಿನ ರಾಷ್ಟ್ರಪತಿಗಳಾದ ಡಾ॥ ಅಬ್ದುಲ್ ಕಲಾಂ ರವರು ನಮ್ಮ ದೇಶಕ್ಕೆ ಮತ್ತು ನಮ್ಮ ರಾಜ್ಯಕ್ಕೆ ಒಂದು ಕನಸನ್ನು ಕೊಟ್ಟರು. ಈ ಕನಸು ಎಷ್ಟೋ ಬಾರಿ ನಮಗೆ ಸ್ಫೂರ್ತಿ ಎಂದು ತಿಳಿದುಕೊಳ್ಳುತ್ತೇನೆ. ಕನಸುಗಳನ್ನು ಕಾಣಬೇಕು. ನಾವು ಎಂತಹ ಕನಸುಗಳನ್ನು ಕಾಣಬೇಕೆಂದರೆ, ನಾವು ನಿದ್ದೆ ಮಾಡಲು ಬಿಡದಂತಹ ಕನಸುಗಳನ್ನು ಕಾಣಬೇಕು. ಈ ದೇಶವನ್ನು, ಈ ರಾಜ್ಯವನ್ನು ಒಳ್ಳೆಯ ದಿಕ್ಕಿನಲ್ಲಿ ಕೊಂಡೊಯ್ಯಬೇಕಾದಂತಹ ಕನಸುಗಳನ್ನು ಕಾಣಬೇಕು. ಈ ಒಂದು ವರ್ಷದ ಆಯವ್ಯಯದಲ್ಲಿ ಖಂಡಿತವಾಗಿಯೂ ಬೇರೆಲ್ಲಾ ಅಡೆತಡೆಗಳ ಮಧ್ಯೆಯೂ ಕೂಡ ಅಭಿವೃದ್ಧಿಯ ದಿಕ್ಕಿನಲ್ಲಿ ಕೊಂಡೊಯ್ಯಬಹುದಾದಂತಹ ಶಕ್ತಿ ಇದೆ. ಅದು ಈ ರಾಜ್ಯಕ್ಕೆ ಮತ್ತು ಜನಸಾಮಾನ್ಯರಿಗೆ ಪೂರಕವಾದಂತಹ ಒಂದು ಬಜೆಟ್ ಅನ್ನು ಮಂಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತಾ, ನನಗೆ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಆರ್.ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮುಂಗಡ ಪತ್ರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ತಮಗೆ ವಂದಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಈ ಸಂದರ್ಭದಲ್ಲಿ ಸದನದಲ್ಲಿ ಇದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಸಹ ನಮ್ಮ ಜಿಲ್ಲೆಯವರೇ ಆಗಿದ್ದಾರೆ. ನಮ್ಮ ಜಿಲ್ಲೆಯನ್ನು ಬೆಳವಣಿಗೆ ಮಾಡಿ ಒಂದು ಮಾದರಿ ಜಿಲ್ಲೆ ಮಾಡಬೇಕೆಂದು ಬಹಳ ಆಸೆಯನ್ನು ಇಟ್ಟುಕೊಂಡಿದ್ದರು. ಮುಂಗಡ ಪತ್ರವನ್ನು ಮಂಡಿಸಬೇಕಾದರೆ ಹಲವಾರು ವಿಷಯಗಳನ್ನು ಹೇಳಿದ್ದಾರೆ. ಈ ಮುಂಗಡ ಪತ್ರದ ಬಗ್ಗೆ ಮಾತನಾಡಬೇಕಾದರೆ, ನೆನ್ನೆಯ ದಿವಸ ಮಾನ್ಯ ಮರಿತಿಬ್ಬೇಗೌಡರವರು ಈ ಕೋವಿಡ್ ಬಂದಂತಹ ಸಂದರ್ಭದಲ್ಲಿ ಏನೇನು ಈ ಸರ್ಕಾರ ಕ್ರಮ ಕೈಗೊಂಡಿತ್ತು; ಸರ್ಕಾರಕ್ಕೆ ಹರಿದು ಬಂದ ಧನಸಹಾಯ ಎಷ್ಟು; ಯಾವ ರೀತಿ ಈ ಕೋವಿಡ್‌ಗೆ ಖರ್ಚನ್ನು ಮಾಡಿ, ಇದನ್ನು ತಡೆಯುವುದಕ್ಕೆ ಏನೇನು ಮಾಡಿದ್ದಾರೆ ಎನ್ನುವ ಬಗ್ಗೆ ಮುಂಗಡ ಪತ್ರದಲ್ಲಿ ಸ್ವಲ್ಪ ವಿಚಾರಗಳನ್ನು ಮಾತ್ರ ಹೇಳಿದ್ದಾರೆ. ಅದರ ಬಗ್ಗೆ ವಿವರವಾದಂತಹ ಲೆಕ್ಕಗಳನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂದು ಹೇಳಿದರು. ಅದರ ಜೊತೆಗೆ ಇವತ್ತು ಮಾನ್ಯ ಎಸ್.ಎಲ್.ಭೋಜೇಗೌಡರವರು

ಮಾತನಾಡುತ್ತಾ ಈ ವರ್ಷದ ಮುಂಗಡ ಪತ್ರದ ಬಗ್ಗೆ ಮಾತನಾಡುವುದಕ್ಕಿಂತ ಮೊದಲು, ಹಿಂದಿನ ವರ್ಷದ ಮುಂಗಡ ಪತ್ರದಲ್ಲಿ ಏನಿತ್ತು, ಏನಾಗಿದೆ ಎಂಬುದರ ಬಗ್ಗೆ ಚೆನ್ನಾಗಿ ವಿಶ್ಲೇಷಣೆಯನ್ನು ಮಾಡಿದರು. ಇವತ್ತು ಸುಮಾರು 2,42,000 ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ಇದನ್ನು ಮಂಡನೆ ಮಾಡಬೇಕಾದರೆ, ಈಗಾಗಲೇ ಮಾನ್ಯ ಕೆ.ಪ್ರತಾಪ್ ಸಿಂಹ ನಾಯಕ್‌ರವರು ಮಾತನಾಡುತ್ತಾ, ಈ ಹಿಂದೆ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಸಮ್ಮಿಶ್ರ ಸರ್ಕಾರ ಬಂದಾಗ 3 ಲಕ್ಷ ಕೋಟಿ ರೂಪಾಯಿಗಳ ಸಾಲ ಆಗಿತ್ತು ಎಂದು ಹೇಳಿದರು. ಈಗಿರುವಂತಹ ಸರ್ಕಾರ ಕಳೆದ ವರ್ಷ 4 ಲಕ್ಷ ಕೋಟಿ ರೂಪಾಯಿಗಳ ಸಾಲವನ್ನು ಮಾಡಿದೆ. ಮೊನ್ನೆಯ ದಿವಸ ಪತ್ರಿಕೆಯಲ್ಲಿ ಈ ಸಾಲದ ಬಗ್ಗೆ ಮತ್ತು committed expenditure ಬಗ್ಗೆ ಒಂದು ಆರ್ಟಿಕಲ್ ಅನ್ನು ಬರೆದಿದ್ದಾರೆ. ಅದರ ಪ್ರಕಾರ ಮುಂದಿನ ಎರಡು ವರ್ಷಗಳಲ್ಲಿ ಈ ಸಾಲದ ಮೊತ್ತ 6 ಲಕ್ಷ ಕೋಟಿ ರೂಪಾಯಿಗಳಿಗೆ ದಾಟುತ್ತದೆ ಎಂದು ಹೇಳಿದ್ದಾರೆ. ಹಿಂದೆ ಇದ್ದಂತಹ ಮಾನ್ಯ ಸಿದ್ಧರಾಮಯ್ಯನವರ ಸರ್ಕಾರದಲ್ಲಿ committed expenditure ಶೇಕಡಾ 78 ರಷ್ಟಕ್ಕೆ ನಿಂತಿತ್ತು. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಸರ್ಕಾರದಲ್ಲಿ ಅದು ಶೇಕಡಾ 82 ರಷ್ಟಕ್ಕೆ ನಿಂತಿದ್ದರೆ, ಈ ವರ್ಷದ ಬಜೆಟ್‌ನಲ್ಲಿ ಅದು ಶೇಕಡಾ 102 ರಷ್ಟಕ್ಕೆ ಬಂದು ನಿಂತಿದೆ. ಇನ್ನು ಬೇರೆ ಅಭಿವೃದ್ಧಿಯನ್ನು ಮಾಡಬೇಕೆಂದರೆ, ಸಾಲ ತೆಗೆದುಕೊಂಡು ಬಂದು ಮಾಡಬೇಕಾಗಿದೆ. Committed expenditure ಕಡಿಮೆ ಮಾಡುವುದಕ್ಕೆ ಸರ್ಕಾರದವರು ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದು ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಕೇಂದ್ರದಲ್ಲಿ ಇದೇ ಸರ್ಕಾರ ಇದ್ದು, ಇಲ್ಲಿಯೂ ಕೂಡ ಬಿ.ಜೆ.ಪಿ. ಸರ್ಕಾರ ಇದ್ದರೆ, ಹೆಚ್ಚಿನ ಅನುದಾನ ತೆಗೆದುಕೊಳ್ಳಬಹುದು; ಅಭಿವೃದ್ಧಿ ಮಾಡಬಹುದು ಎನ್ನುವ ಒಂದು ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡಿದ್ದರು. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದ ಕೆಲವೇ ದಿನಗಳಲ್ಲಿ ನಮ್ಮ ರಾಜ್ಯ ಯಾವತ್ತೂ ಕಂಡರಿಯದ ಪ್ರವಾಹ ಪರಿಸ್ಥಿತಿಯನ್ನು ನೋಡಿತು. ಆ ಸಂದರ್ಭದಲ್ಲಿ ಇನ್ನು ಕ್ಯಾಬಿನೇಟ್ ರಚನೆಯಾಗಿರಲಿಲ್ಲ. ಒಬ್ಬರೇ ಇಡೀ ಪ್ರವಾಹ ಪರಿಸ್ಥಿತಿಯಲ್ಲಿ ಓಡಾಡಿ, ಅಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು. ಜನರಿಗೆ ಏನು ಪರಿಹಾರ ಕೊಡಬೇಕು. ಅದರ ಬಗ್ಗೆ ಬಹಳಷ್ಟು ಕೆಲಸವನ್ನು ಮಾಡಿದರು. ಆ ಸಂದರ್ಭದಲ್ಲಿ ಸರ್ಕಾರ ಒಂದು ಅಂದಾಜನ್ನು ಮಾಡಿತ್ತು. ಜನ-ಜಾನುವಾರುಗಳು ಮತ್ತು ಸರ್ಕಾರದ ಆಸ್ತಿ, ಖಾಸಗಿ ಆಸ್ತಿ ಎಲ್ಲವೂ ಸೇರಿ ಸುಮಾರು 40 ಸಾವಿರ ಕೋಟಿ ರೂಪಾಯಿಗಳವರೆಗೂ ನಷ್ಟವಾಗಿದೆ. ಈ ಸಂದರ್ಭದಲ್ಲಿ ಕೇಂದ್ರದಿಂದ ಬಹಳಷ್ಟು ಅನುದಾನ ಕೊಡಬಹುದು, ಮಾನ್ಯ ಪ್ರಧಾನ ಮಂತ್ರಿಯವರಾದ ನರೇಂದ್ರ ಮೋದಿಯವರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮ್ಮನ್ನು ಕೈಹಿಡಿಯುತ್ತಾರೆ ಎಂದು ನಮ್ಮ ಕರ್ನಾಟಕದ ಜನ ನಿರೀಕ್ಷೆ ಮಾಡಿದ್ದರು. ಆದರೆ, ಆ ಸಂದರ್ಭದಲ್ಲಿ ನಮ್ಮ ನಿರೀಕ್ಷೆ ಸುಳ್ಳಾಯಿತು. ಕೇಂದ್ರ ಸರ್ಕಾರದವರು ತಕ್ಕ ರೀತಿಯಲ್ಲಿ ಅನುದಾನ ಕೊಟ್ಟಿದ್ದಾರೆ. ಆದರೆ, ಸರಿಯಾದ ರೀತಿಯಲ್ಲಿ ಅನುದಾನ ಕೊಡಲಿಲ್ಲ. ಆದಾದ ಮೇಲೆ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹೋರಾಟದ ಮೂಲಕ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ ಮತ್ತು ಯಾವುದೇ ಸಂದರ್ಭದಲ್ಲೂ ಕೆಚ್ಚೆದೆಯಿಂದ ಕೆಲಸ ಮಾಡಿದ್ದಾರೆ. ತುಮಕೂರು ಜಿಲ್ಲೆಯ ಬಹಿರಂಗ ಸಭೆಯಲ್ಲಿ ಪ್ರಧಾನ ಮಂತ್ರಿಯವರಿಗೆ ನಮ್ಮ ರಾಜ್ಯದ ಪರಿಸ್ಥಿತಿ ಹೀಗಿದೆ, ತಾವು ಇದಕ್ಕೆ ಸಹಾಯ ಮಾಡಬೇಕೆಂದು ಧೈರ್ಯದಿಂದ ಕೇಳಿರುವಂತಹ ಇವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವರು ಅನುದಾನವನ್ನು ಕೇಳಿದ್ದಂತಹ ಸಂದರ್ಭದಲ್ಲಿ ನಮಗೆ ಬಹಳ ಕಷ್ಟ ಇದೆ ತಾವು ಪರಿಹಾರವನ್ನು ಕೊಡಬೇಕಾಗುತ್ತದೆ ಎಂದು ಹೇಳಿದರು.

**(ಮುಂದು)**

**(500) 18/03/2021/ಎಸ್‌ಪಿಆರ್/ಆರ್‌ಎನ್/4:20**

**ಶ್ರೀ ಆರ್.ಪ್ರಸನ್ನ ಕುಮಾರ್(ಮುಂದು):-**

ಇಡೀ ದೇಶದ ರೈತರು ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ, ಈ ಹಿಂದೆ ಡಾ॥ ಮನಮೋಹನ್ ಸಿಂಗ್‌ರವರು ದೇಶದ ಪ್ರಧಾನಮಂತ್ರಿಗಳಾಗಿದ್ದಾಗ 72 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಮನ್ನಾ ಮಾಡುವ ದೊಡ್ಡ ಕೆಲಸವನ್ನು ಮಾಡಿದರು. ಇದಾದ ನಂತರ ಶ್ರೀ ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ರಾಜ್ಯದಲ್ಲಿ ಭೀಕರ ಬರಗಾಲದ ಪರಿಸ್ಥಿತಿಯುಂಟಾದಾಗ, ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಯುಂಟಾಯಿತು. ಆಗ ಶ್ರೀ ಸಿದ್ದರಾಮಯ್ಯನವರು ಪ್ರಧಾನಮಂತ್ರಿಗಳ ಬಳಿ ಸರ್ವಪಕ್ಷದ ನಿಯೋಗವನ್ನು ತೆಗೆದುಕೊಂಡು ಹೋಗಿ, ನಮ್ಮ ರಾಜ್ಯದ ರೈತರಿಗೆ ಸಹಾಯ ಮಾಡಬೇಕೆಂದು ಕೇಳಿದರು. ಆದರೆ ಇದರಿಂದಾಗಿ ಅವತ್ತಿನ ದಿವಸ ನಮಗೆ ಯಾವುದೇ ರೀತಿಯ ಫಲ ದೊರೆಯಲಿಲ್ಲ. ಅಂದಿನ ದಿನಗಳಲ್ಲಿ ನಮ್ಮ ರೈತರು ಆತ್ಮಹತ್ಯೆಯನ್ನು ಮಾಡಿಕೊಂಡರು. ಆ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಮೃತ ರೈತನ ಕುಟುಂಬಕ್ಕೆ ನೀಡುತ್ತಿದ್ದ ಎರಡು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಐದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಯಿತು. ಆ ಸಂದರ್ಭದಲ್ಲಿ ನಮ್ಮ ಪಕ್ಷದ ನಾಯಕರಾದ ಶ್ರೀ ರಾಹುಲ್ ಗಾಂಧಿಯವರು ಬಂದಿದ್ದರು. ಇದರಿಂದ ರೈತರಿಗೆ ಅನುಕೂಲವಾಯಿತು. ಮೃತ ರೈತನಿಗೆ ಮಕ್ಕಳಿದ್ದರೆ, ಅವರ ವಿದ್ಯಾಭ್ಯಾಸಕ್ಕೂ ಸಹ ಸಹಾಯ ಮಾಡುವಂತಹ ಕೆಲಸಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದರು. ಮೃತ ರೈತನ ಕುಟುಂಬದ ನಿರ್ವಹಣೆಗಾಗಿ ಪ್ರತಿ ತಿಂಗಳು ಹಣವನ್ನು ನೀಡುವ ಕೆಲಸವನ್ನೂ ಸಹ ಅವರು ಮಾಡಿದರು. ಇಂತಹ ಸಾಕಷ್ಟು ಕೆಲಸಗಳು ಆ ಸಂದರ್ಭದಲ್ಲಾದವು.

ರಾಜ್ಯದ ಮುಖ್ಯಮಂತ್ರಿಗಳು ಬಹಳಷ್ಟು ಕೆಲಸಗಳನ್ನು ಮಾಡುವ ಅಂದಾಜು ಇತ್ತು. ಹೀಗಾಗಿ ಕಳೆದ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಿದರು. ಆದರೆ, ಕೋವಿಡ್ ಮಹಾಮಾರಿ ಬಂದ ಮೇಲೆ ನಮ್ಮೆಲ್ಲಾ ಆರ್ಥಿಕ ಪರಿಸ್ಥಿತಿಗಳು ಬಿಗಡಾಯಿಸಿದವು. ಕೋವಿಡ್ ಮಹಾಮಾರಿಯು ಇಡೀ ಪ್ರಪಂಚಕ್ಕೆ ಆವರಿಸಿತು. ಇದರಿಂದಾಗಿ ಪ್ರಪಂಚದ ಹಾಗೂ ದೇಶದ ಆರ್ಥಿಕ ಪರಿಸ್ಥಿತಿಗಳು ಬಿಗಡಾಯಿಸಿದವು. ಪರಿಸ್ಥಿತಿ ಸ್ವಲ್ಪ ಸುಧಾರಿಸಿದ ನಂತರ ಪ್ರಸಕ್ತ ಸಾಲಿನ ಆಯವ್ಯಯವನ್ನು ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ಕಳೆದ ವರ್ಷ ಸಾಲ ಮಾಡಬೇಕಾದ ಪರಿಸ್ಥಿತಿ ಉಂಟಾಯಿತು. ಹೀಗಾಗಿ ಸರ್ಕಾರವು ಅನಿವಾರ್ಯವಾಗಿ ಸಾಲವನ್ನು ಮಾಡಿತ್ತು ಎಂದು ನಾನು ಈಗಾಗಲೇ ಹೇಳಿದ್ದೇನೆ. ಆದರೆ ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಜಿ.ಎಸ್.ಟಿ. ಪಾಲನ್ನು ಕೇಂದ್ರ ಸರ್ಕಾರವು ಸರಿಯಾದ ಪ್ರಮಾಣದಲ್ಲಿ ನಮ್ಮ ರಾಜ್ಯಕ್ಕೆ ನೀಡಲಿಲ್ಲ. ಇದಕ್ಕೆ ಪರ್ಯಾಯವಾಗಿ ಸಾಲವನ್ನು ಪಡೆದುಕೊಳ್ಳಿ ಎಂದು ಹೇಳಿತು. ಇದರಿಂದಾಗಿ ನಾವು ಸಾಲ ತೆಗೆದುಕೊಳ್ಳಲು ಕೇಂದ್ರ ಸರ್ಕಾರವು ಪ್ರೇರಣೆಯನ್ನು ನೀಡಿದಂತಾಯಿತು. ಆದರೆ ಇವತ್ತಿನ ದಿವಸ ನಮ್ಮ ಪಾಲಿನ ಜಿ.ಎಸ್.ಟಿ. ಮೊತ್ತವು ನಮಗೆ ಬಂದಿದ್ದರೆ, ಸಾಲದ ಮೊತ್ತ ಕಡಿಮೆಯಾಗುತ್ತಿತ್ತೋ ಏನೋ ಎಂದು ನನಗನ್ನಿಸುತ್ತದೆ.

ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಮುಖ್ಯಮಂತ್ರಿಗಳು ಬೇರೆ ಬೇರೆ ನಿಗಮಗಳಿಗೆ 500 ಕೋಟಿ ರೂಪಾಯಿಗಳ ಅನುದಾನ ನೀಡಿದ್ದಾರೆ. ಸರ್ಕಾರಿ ದಾಖಲೆಯಂತೆ ಹಿಂದುಳಿದ ವರ್ಗಗಳ ಜನರು ಶೇಕಡಾವಾರು 53 ರಷ್ಟಿದ್ದಾರೆ. ಇದಲ್ಲದೇ ಪರಿಶಿಷ್ಟ ಜಾತಿಯ ಜನರು ಶೇಕಡಾ 17 ರಷ್ಟಿದ್ದಾರೆ ಮತ್ತು ಶೇಕಡಾ 7 ರಷ್ಟು ಪರಿಶಿಷ್ಟ ಪಂಗಡದ ಜನರಿದ್ದಾರೆ. ಆದರೆ ಮುಖ್ಯಮಂತ್ರಿಗಳು ವಿವಿಧ ನಿಗಮಗಳೆಲ್ಲವನ್ನೂ ಸೇರಿಸಿ ಕೇವಲ 500 ಕೋಟಿ ರೂಪಾಯಿಗಳನ್ನು ಮಾತ್ರವೇ ಮೀಸಲಿಟ್ಟಿರುವುದು ನಮ್ಮನ್ನು ಯಾಕೋ ಕಡೆಗಣಿಸಲಾಗಿದೆಯೆಂದು ಅನಿಸುತ್ತಿದೆ. ಒಂದು ಕಡೆ ಕೋವಿಡ್ ಪರಿಸ್ಥಿತಿಯು ನಮ್ಮನ್ನು ಕಳೆದ ವರ್ಷ ಸತಾಯಿಸಿತು; ಮತ್ತೊಂದೆಡೆ, ಈ ಬಾರಿ ಮುಖ್ಯಮಂತ್ರಿಗಳು ನಮ್ಮನ್ನು ಯಾಕೋ ಕಡೆಗಾಣಿಸಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ನಮ್ಮ ಜನಾಂಗದ ಶೇಕಡಾವಾರು ಜನಸಂಖ್ಯೆಯ ಆಧಾರದ ಮೇಲೆ ನಮ್ಮ ಅಭಿವೃದ್ಧಿಗೂ ಸಹ ಹಣವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನೀಡಿ ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ 25 ಹಾಸಿಗೆಯ ಐ.ಸಿ.ಯು.ಗಳನ್ನು ಮಾಡಬೇಕೆಂದು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಈಗಾಗಲೇ ಘೋಷಿಸಲಾಗಿದೆ. ಇಂತಹ ವ್ಯವಸ್ಥೆಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರವು ಈಗಾಗಲೇ ಮಾಡಿದೆ. ಬೆಂಗಳೂರು ನಗರದಲ್ಲಿ 10 ಸಾವಿರ ಹಾಸಿಗೆಯುಳ್ಳ ದೊಡ್ಡ ಆಸ್ಪತ್ರೆಯನ್ನು ಮುಖ್ಯಮಂತ್ರಿಗಳು ಕೋವಿಡ್ ಸಂದರ್ಭದಲ್ಲಿ ಮಾಡಿದರು. ಆ ಸಂದರ್ಭದಲ್ಲಿ ಅದಕ್ಕೆ ಅವಶ್ಯಕವಾದ ಹಾಸಿಗೆಗಳನ್ನು ಯಾರೋ ಬಾಡಿಗೆಯ ರೂಪದಲ್ಲಿ ತೆಗೆದುಕೊಂಡು ಬಂದಾಗ; ಅವುಗಳನ್ನು ಬಾಡಿಗೆಗೆ ತರುವುದು ಬೇಡ; ಖರೀದಿಸಿ ಎಂಬ ದಿಟ್ಟತನವನ್ನು ಮುಖ್ಯಮಂತ್ರಿಗಳು ಅಂದಿನ ದಿನ ತೋರಿಸಿ, ಅವುಗಳನ್ನು ಖರೀದಿಸಿದರು. ಈ ರೀತಿಯಾಗಿ ಅವತ್ತಿನ ದಿವಸ ಜನರಿಗೆ ಅವಶ್ಯಕವಾದ ವ್ಯವಸ್ಥೆಗಳನ್ನು ಮಾಡಿದರು. ಆದರೆ ಇವತ್ತಿನ ದಿವಸ ಆ ಹಾಸಿಗೆಗಳು ಎಲ್ಲಿ ಹೋದವು ಎನ್ನುವುದು ಮುಖ್ಯಮಂತ್ರಿಗಳ ಗಮನಕ್ಕೆ ಬರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆ ಹಾಸಿಗೆಗಳನ್ನು ಇನ್ನೂ ಉಪಯೋಗಿಸಿಕೊಳ್ಳುವ ಕೆಲಸಗಳಾಗಬೇಕು. 'ಹೋದ್ಯಾ ಪಿಶಾಚಿ ಎಂದರೆ, ಬಂದೇ ಗವಾಕ್ಷಿಯಲಿ' ಎಂಬ ನಾಣ್ಣುಡಿಯಂತೆ ಇವತ್ತಿನ ದಿವಸ ಕೋವಿಡ್ ಕಾಯಿಲೆಯು ಪುನಃ ವ್ಯಾಪಕವಾಗಿ ಹರಡುತ್ತಿದೆ. ಈ ಬಾರಿ ಚೈನಾ ದೇಶದ ಮೂಲವಲ್ಲ; ದಕ್ಷಿಣ ಆಫ್ರಿಕಾ ದೇಶದ ಕೋವಿಡ್ ಕಾಯಿಲೆಯು ವ್ಯಾಪಿಸುತ್ತಿದೆ. ಸರ್ಕಾರವು ಈ ಬಾರಿಯೂ ಸಹ ಕಾಯಿಲೆಗೆ ಸಂಬಂಧಿತ ಪೂರ್ವಸಿದ್ಧತೆಗಳನ್ನು ಮಾಡುತ್ತಿದೆ. ಇದರ ಜೊತೆಗೆ ಕೋವಿಡ್ ವ್ಯಾಕ್ಸಿನ್‌ಗಳನ್ನೂ ಸಹ ಜನರಿಗೆ ಕೊಡಿಸುವ ಕೆಲಸಗಳನ್ನು ಸರ್ಕಾರವು ಇವತ್ತಿನ ದಿವಸ ದೊಡ್ಡ ಮಟ್ಟದಲ್ಲಿ ಮಾಡುತ್ತಿದೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಬೇರೆ ಬೇರೆ ಜನಾಂಗಕ್ಕೆ ಮೀಸಲಿಟ್ಟ ಅನುದಾನದ ಪ್ರಮಾಣದಲ್ಲಿಯೇ ನಮಗೂ ಸಹ ಹೆಚ್ಚಿನ ಪ್ರಮಾಣದಲ್ಲಿ ಹಣ ನೀಡಬೇಕೆನ್ನುವುದು ನಮ್ಮ ಆಶಯವಾಗಿದೆ.

ಶಿವಮೊಗ್ಗ ಜಿಲ್ಲೆಯನ್ನು ಮಾದರಿ ಜಿಲ್ಲೆಯನ್ನಾಗಿ ಮಾಡಬೇಕೆಂದು ಮುಖ್ಯಮಂತ್ರಿಗಳು ಯೋಜನೆಗಳನ್ನು ರೂಪಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಮುಖ್ಯಮಂತ್ರಿಗಳಿಗೆ ಯಾವುದೇ ನಿರ್ದಿಷ್ಟ ಕೆಲಸಗಳನ್ನು ಮಾಡಿ ಎಂದು ಯಾರೂ ಸಹ ಹೇಳಿಲ್ಲ. ಅವರೇ ತಮ್ಮ ಯೋಚನೆಯಲ್ಲಿಯೇ ಇವತ್ತಿನ ದಿವಸ ಶಿವಮೊಗ್ಗ ಜಿಲ್ಲೆಯನ್ನು ಅಭಿವೃದ್ಧಿಪಡಿಸಿದ್ದಾರೆ. ಇದರಲ್ಲಿ ಎರಡು ಮಾತಿಲ್ಲ. ಇದರ ಜೊತೆಗೆ ಕ್ಯಾನ್ಸರ್ ಘಟಕವನ್ನು ಮೆಗ್ಗಾನ್ ಆಸ್ಪತ್ರೆಗೆ ನೀಡಲಾಗಿದೆ. ಇದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಶಿವಮೊಗ್ಗ ಜಿಲ್ಲೆಗೆ ಆಯುರ್ವೇದಿಕ ವಿಶ್ವವಿದ್ಯಾಲಯವನ್ನೂ ಸಹ ಮಂಜೂರು ಮಾಡಲಾಗಿದೆ. ಇದೂ ಸಹ ಅಭಿನಂದನಾರ್ಹವಾಗಿದೆ. ಪ್ರಸ್ತುತ ಶಿವಮೊಗ್ಗ ನಗರದಲ್ಲಿ ಎರಡು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವೈದ್ಯಕೀಯ ಮತ್ತು ಮೂರು ಇಂಜನಿಯರಿಂಗ್ ಕಾಲೇಜುಗಳಿವೆ. ಬೆಂಗಳೂರನ್ನು ಹೊರಡಿಪಡಿಸಿ, ಶಿವಮೊಗ್ಗ ಜಿಲ್ಲೆಯಲ್ಲಿಯೇ ಹೆಚ್ಚು ಕಾರ್ಪೋರೇಟ್ ಮಾದರಿಯ ಆಸ್ಪತ್ರೆಗಳಿವೆ. ಇಂತಹ ವ್ಯವಸ್ಥೆಗಳು ಇವತ್ತಿನ ದಿವಸ ಶಿವಮೊಗ್ಗ ಜಿಲ್ಲೆಯಲ್ಲಿ ಮಾಡಲಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿನ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಶಿವಮೊಗ್ಗ ಜಿಲ್ಲೆಗೆ Police Commissionerate ನ ಅವಶ್ಯಕತೆ ಇತ್ತು. ಇದನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಮಂಜೂರು ಮಾಡುತ್ತಾರೆಂದು ನಾವು ಆಶಿಸಿದ್ದೆವು. ಆದರೆ, ಇದು ಯಾಕೋ ಆಗಲಿಲ್ಲ. ಇಂದಿನವರೆಗೂ ಶಿವಮೊಗ್ಗ ಜನರು ಇಂತಹದ್ದು ಬೇಕು ಎಂದು ಮುಖ್ಯಮಂತ್ರಿಗಳನ್ನು ಕೇಳಿಲ್ಲ. ಅವರೇ ಆ ಎಲ್ಲಾ ಕೆಲಸಗಳನ್ನು ಮಾಡಿದ್ದಾರೆ. ಇದರಲ್ಲಿ ಯಾವುದೇ ಅನುಮಾನವಿಲ್ಲ. ಹೀಗಾಗಿ ಈ ಜಿಲ್ಲೆಗೆ Police Commissionerate ಅನ್ನು ಮಂಜೂರು ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನವೇ ಮುಖ್ಯಮಂತ್ರಿಗಳು ಪ್ರಸಕ್ತ ಸಾಲಿನ ಆಯವ್ಯಯವನ್ನು ಮಂಡಿಸಿ, ಮಹಿಳೆಯರಿಗಾಗಿಯೇ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಮಹಿಳಾ ಕಾಲೇಜಿದೆ. ಅದನ್ನು ಶಿವಮೊಗ್ಗ ನಗರದ ಬಿ.ಹೆಚ್. ರಸ್ತೆಯಲ್ಲಿರುವ Main Middle School Building ನಲ್ಲಿ ನಡೆಸಲಾಗುತ್ತಿದೆ. ಅದು ಕೇವಲ ಒಂದೆರೆಡು ಕೊಠಡಿಗಳಲ್ಲಿ ಯಾವುದೇ ವ್ಯವಸ್ಥೆಗಳಿಲ್ಲದೇ ನಡೆಯುತ್ತಿದೆ. ಅಲ್ಲಿ ಶೌಚಾಲಯದಂತಹ ಮೂಲ ವ್ಯವಸ್ಥೆಗಳಿಲ್ಲ. ಇದಕ್ಕಾಗಿ ಪ್ರತ್ಯೇಕ ಕಟ್ಟಡವನ್ನು ನಿರ್ಮಿಸಲು ಸರ್ಕಾರವು ಅನುದಾನವನ್ನು ನೀಡಬೇಕು. ದಯಮಾಡಿ ಮುಖ್ಯಮಂತ್ರಿಗಳು ಇದಕ್ಕೆ ಹಣವನ್ನು ನೀಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿ ವಿಮಾನ ನಿಲ್ದಾಣಕ್ಕೆ ಅವಶ್ಯಕವಾದ ಅನುದಾನವನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ. ಅಲ್ಲಿ ದೊಡ್ಡ ದೊಡ್ಡ ವಿಮಾನಗಳು ಬರಲು ಅನುಕೂಲವಾಗಲು ಅನುದಾನವನ್ನು ನೀಡಿದ್ದಾರೆ. ಅಲ್ಲಿನ ಹೈಟೆನ್ಷನ್ ಲೈನ್‌ನ್ನು ತೆರವುಗೊಳಿಸಲು ಮೊದಲು ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ಆಗ ಮಾತ್ರವೇ ವಿಮಾನ ನಿಲ್ದಾಣಕ್ಕೆ ಸರಿಯಾದ ವ್ಯವಸ್ಥೆಗಳಾಗುತ್ತವೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಜಿಲ್ಲೆಯ ನೀರಾವರಿಯಾಗಿ ಇಷ್ಟು ದಿನ ಯಾವುದೇ ಯೋಜನೆಗಳನ್ನು ಮಾಡಿರಲಿಲ್ಲ. ಏಕೆಂದರೆ ಅದು ಮಲೆನಾಡು ಪ್ರದೇಶವಾಗಿರುವುದರಿಂದ ಅಲ್ಲಿ ಬೇಕಾದಷ್ಟು ಮಳೆ ಬರುತ್ತಿತ್ತು. ಆದರೆ ಈಗ ನಾವು ನೀರನ್ನು ಆಶ್ರಯಿಸಬೇಕಾಗಿದೆ. ಬಂದ ನೀರನ್ನು ಹಿಡಿದಿಟ್ಟುಕೊಂಡು ಬಳಸಿಕೊಳ್ಳಬೇಕಾದ ಪರಿಸ್ಥಿತಿಯುಂಟಾಗಿದೆ. ಮುಖ್ಯಮಂತ್ರಿಗಳು ಈ ದಿಸೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಈ ಯೋಜನೆಗಳಿಂದಾಗಿ ಇನ್ನಷ್ಟು ಒಳ್ಳೆಯ ರೀತಿಯಲ್ಲಿ ನೀರನ್ನು ಬಳಸುವ ಕೆಲಸಗಳು ಸರ್ಕಾರದಿಂದಾಗಬೇಕೆಂದು ನಾನು ಹೇಳುತ್ತೇನೆ.

ಇವತ್ತಿನ ದಿವಸ ರಾಜ್ಯದ ಎಲ್ಲಾ ವರ್ಗಗಳ ಅಭಿವೃದ್ಧಿಯನ್ನು ಮಾಡಬೇಕೆಂದು ಹೇಳಲಾಗುತ್ತಿದೆ. ಆದರೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಯಾವುದೇ ಹೊಸ ಕಾರ್ಯಕ್ರಮಗಳನ್ನು ಹಿಂದುಳಿದ ವರ್ಗದವರಿಗೆ ನೀಡಿಲ್ಲ. ಹೀಗಾಗಿ ಹಿಂದುಳಿದ ವರ್ಗದವರಿಗೆ ಹೊಸ ಕಾರ್ಯಕ್ರಮಗಳನ್ನು ಕೊಡಬೇಕೆಂದು ನಾನು ಹೇಳುತ್ತೇನೆ. ನಮ್ಮ ಜನಾಂಗದ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಕೆಲಸಗಳನ್ನು ಮಾಡಬೇಕು. ಹಿಂದಿನ ಸರ್ಕಾರವು ಮಾಡಿಸಿದ್ದ ಜನಗಣತಿಯ ವರದಿಯು ಬಹಿರಂಗಗೊಂಡಿದ್ದರೆ, ಅದರ ಆಧಾರದ ಮೇಲೆ ಸರ್ಕಾರವು ಆಯವ್ಯಯವನ್ನು ಹಂಚಿಕೆ ಮಾಡಬಹುದಾಗಿತ್ತು ಎಂದು ನನಗೆ ಈ ಸಂದರ್ಭದಲ್ಲಿ ಅನ್ನಿಸುತ್ತಿದೆ. ಮುಖ್ಯಮಂತ್ರಿಗಳು ಇನ್ನೂ ಒಳ್ಳೆಯ ರೀತಿಯಲ್ಲಿ ಹಣಕಾಸಿನ ವ್ಯವಸ್ಥೆಗಳನ್ನು ಮಾಡಬೇಕು. ಈಗಾಗಲೇ ಮಾಡಿರುವ ಕೆಲಸಗಳ ಬಗ್ಗೆ ನಾನು ಪ್ರಸ್ತಾಪಿಸಿದ್ದೇನೆ. ಇನ್ನು ಮುಂದೆಯೂ ಮಾಡಬೇಕಾದ ಕೆಲಸಗಳನ್ನು ನಾನು ಪ್ರಸ್ತಾಪ ಮಾಡುತ್ತೇನೆ.

ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸಾವಯವ ಕೃಷಿಗೆ 500 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಇದೇ ರೀತಿಯಾಗಿ ಕಳೆದ ಬಾರಿಯೂ ಸಹ ನೀಡಲಾಗಿತ್ತು. ಆದರೆ ಈ ಹಣವು ಯಾರಿಗೆ ಯಾವ ರೀತಿಯಾಗಿ ದೊರೆಯುತ್ತದೆ ಎನ್ನುವುದು ತಿಳಿದಿಲ್ಲ. ಎಲ್ಲಿಯೋ ಯಾರೋ ಪಟ್ಟಭದ್ರ ಹಿತಾಸಕ್ತಿಯ ರೈತರಿಗೆ ಮಾತ್ರವೇ ಈ ಹಣ ದೊರೆಯುತ್ತದೆಯೇ ಅಥವಾ ಸಾವಯವ ಕೃಷಿ ಮಾಡುವ ಎಲ್ಲಾ ರೈತರಿಗೆ ದೊರೆಯುತ್ತದೆಯೇ ಎನ್ನುವುದು ನನಗೆ ಗೊತ್ತಾಗಿಲ್ಲ. ಸಾವಯವ ಕೃಷಿಗೆ ಮಂಜೂರು ಮಾಡಿರುವ ಹಣವು ಸರಿಯಾದ ರೀತಿಯಲ್ಲಿ ಅದರಲ್ಲೂ ಸಣ್ಣ ರೈತರಿಗೆ ಸಿಗುವಂತಾಗಬೇಕು ನಾನು ಒತ್ತಾಯಿಸುತ್ತೇನೆ. ಪ್ರಸಕ್ತ ಸಾಲಿನ ಆಯವ್ಯಯವನ್ನು ಮಂಡಿಸಿದ ಸಂದರ್ಭದಲ್ಲಿ ಹಿಂದೆ ಹೇಳಿದ ವಿಚಾರಗಳೆಲ್ಲವನ್ನೂ ಪುನಃ ಜ್ಞಾಪಿಸಬೇಕೆಂದು ನನಗೆ ಅನ್ನಿಸುತ್ತಿದೆ. ಆದ್ದರಿಂದ ಈ ಹಿಂದಿನ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸಿದ ಯೋಜನೆಗಳನ್ನು ಪ್ರಸಕ್ತ ಸಾಲಿನಲ್ಲಿಯೂ ಸಹ ಮುಂದುವರೆಸಬೇಕೆಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಆಯವ್ಯಯದ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**(ಮುಂದು)**

**(501)18-03-2021(04-30)ಬಿಎಸ್‌ಡಿ-ವಿಕೆ(ಎಂಡಿ)**

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೆ budget ಬಗ್ಗೆ ಚೊಚ್ಚಲವಾಗಿ ಮಾತನಾಡಲು ಸಿಕ್ಕ ಅವಕಾಶವಾಗಿದ್ದು, ನಾನೂ ಸಹ ಶ್ರೀ ಪ್ರತಾಪಸಿಂಹ ನಾಯಕ್‌ರವರ ಜೊತೆ ಶಾಸಕನಾಗಿ ಆಯ್ಕೆಯಾಗಿರುವವನಾಗಿದ್ದೇನೆ. ಅವರು ದೊಡ್ಡ ಸಮುದ್ರದಿಂದ ಉದ್ಭವವಾದ ಶಾಸಕರಾಗಿದ್ದರೆ, ನಾನೊಂದು ಸಣ್ಣ ಕ್ಷೇತ್ರದಿಂದ ಆಯ್ಕೆಯಾದ ಶಾಸಕನಾಗಿದ್ದೇನೆ. ನಾನು budget ಬಗ್ಗೆ ಮಾತನಾಡಲು 15 ದಿವಸಗಳಿಂದಲೂ ಸಾಕಷ್ಟು ಪುಸ್ತಕಗಳನ್ನು ಓದಿ, ಮಾಹಿತಿಗಳನ್ನು ಕಲೆ ಹಾಕಿ ಮಾತನಾಡುತ್ತಿದ್ದೇನೆ. ಮೂಲಭೂತವಾಗಿ ನನ್ನ ಜಿಲ್ಲೆಗೆ ಏನೇನು ಆಗಬೇಕೆಂಬ ಮಾಹಿತಿಗಳನ್ನು ಕಲೆ ಹಾಕಿ, ಬಹಳ ಶ್ರದ್ಧೆಯಿಂದ ಪಾಲ್ಗೊಳ್ಳುತ್ತಿದ್ದೇನೆ. ನನ್ನ ಸ್ನೇಹಿತರ ಜೊತೆ ಮೊದಲಿಂದಲೂ ಬಾಂಧವ್ಯ ಇದ್ದು, ಅವರು ಮಾತನಾಡಲು start ಮಾಡಿದಾಗ ಅವರುಗಳ ಮಾತಿಗೆ ಮನಸೋತಿದ್ದೇನೆ. ಮಂಗಳೂರಿನವರು ಕನ್ನಡದಲ್ಲಿ ಮಾತನಾಡಲು ಬಹಳ ಹೆಸರುವಾಸಿಯಾಗಿದ್ದು, ಅವರುಗಳ ಮಾತಿಗೆ ಬಹಳ ಮನಸೋತಿದ್ದೇನೆ. ಅವರು ನಂತರದಲ್ಲಿ ಅವರ ಪಕ್ಷದ ಬಗ್ಗೆ ಮತ್ತು ಅವರು ರಚಿಸಿರುವ ಸಂಘ ಸಂಸ್ಥೆಗಳ ಬಗ್ಗೆ ಮಾತನಾಡಿದರು. ಕೇವಲ budget ಮೇಲೆ ಎಲ್ಲರೂ ಮಾತನಾಡುತ್ತಾರೆ ಎಂದು ನಾನೂ ಭಾವಿಸಿದ್ದೆನು. ಆದರೆ ಈ ಸದನದಲ್ಲಿ ಅದನ್ನೂ ಮಾತನಾಡಲು ಅವಕಾಶ ಇದೆ ಎಂದು ಸಹ ನನಗೆ ಗೊತ್ತಿಲ್ಲ. ಮಾನ್ಯ ಪ್ರತಾಪಸಿಂಹ ರವರು ಅವರ ಪಕ್ಷದ ಬಗ್ಗೆ ಮತ್ತು ಮೂಲ ಸಿದ್ದಾಂತದ ಬಗ್ಗೆ ಮತ್ತು ನಾಯಕರುಗಳ ಬಗ್ಗೆ ಮಾತನಾಡಿದ್ದು, ಅದು ಅವರ ದೊಡ್ಡತನವನ್ನು ತೋರಿಸುತ್ತದೆ. ಆ ವಿಚಾರದಲ್ಲಿ ನನ್ನ ಭಿನ್ನಮತ ಇಲ್ಲ. ಏಕೆಂದರೆ ಮೂಲಭೂತವಾಗಿ ಕರ್ನಾಟಕದಲ್ಲಿ 1983ರಲ್ಲಿ ಬಿಜೆಪಿಯ 18 ಸದಸ್ಯರ ಸಹಕಾರದಿಂದ ಜನತಾದಳ ಸರ್ಕಾರ ಸ್ಥಾಪನೆಯಾಗಿದ್ದು ನೆನಪಿದೆ. ಆಗ ನಾನು 22 ವರ್ಷಗಳ ಹುಡುಗನಾಗಿದ್ದು ಇದನ್ನೆಲ್ಲಾ ಮರೆತಿಲ್ಲ. ಆ ದಿನ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಏನು ಸಹಕಾರ ಕೊಟ್ಟರು, ಅದರಂತೆ ಸರ್ಕಾರ ಕೆಲಸ ಮಾಡಿದೆ ಎಂಬ ಒಳ್ಳೆಯ ವಿಚಾರವು ನನ್ನ ಮನಸ್ಸಿನಲ್ಲಿದೆ. ತದನಂತರ 1985ರಲ್ಲಿ ಪೂರ್ಣ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಮಾಣದ ಜನತಾದಳ ಸರ್ಕಾರ ಬರಲು ಅವರ ಸಹಕಾರ ಕೂಡ ಇತ್ತು ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಇನ್ನು ನನ್ನ ಜಿಲ್ಲೆಗೆ ಮತ್ತು ನನ್ನ ತಾಲ್ಲೂಕಿಗೆ ಏನು ಆಗಬೇಕಾಗಿತ್ತು ಮತ್ತು ಏನು ಆಗಿಲ್ಲ ಎಂಬ ಬಗ್ಗೆ ಮಾತನಾಡಬಯಸುತ್ತೇನೆ. ಮಾನ್ಯ ಸುರೇಶ್‌ಕುಮಾರ್ ರವರು ಸದನಕ್ಕೆ ಬಂದಿರುವುದು ನನಗೆ ಬಹಳ ಸಂತೋಷವಾಗುತ್ತಿದೆ. ಅವರು ಪ್ರಪ್ರಥಮವಾಗಿ ಶಾಸಕರಾಗಿದ್ದಾಗಿಂದಲೂ ನಾನು ಅವರ ಅಭಿಮಾನಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೂ.2.43 ಲಕ್ಷ ಕೋಟಿಗಳ budget ಅನ್ನು ಮಂಡಿಸಿದ್ದು, ಇದರಲ್ಲಿ ಬದ್ಧ ವೆಚ್ಚಕ್ಕೆ 1.62,359 ಕೋಟಿ ರೂಪಾಯಿಗಳು ಹೋಗುತ್ತಿದೆ. ಉಳಿದ ಅಭಿವೃದ್ಧಿಗೆ ರೂ.81,375 ಕೋಟಿ ಉಳಿಯುತ್ತದೆ. ಇದರಲ್ಲಿ ರೂ.71,332 ಕೋಟಿ ಸಾಲದ ಹಣ ಇದೆ. ಉಳಿದಿರುವ ಆದಾಯ ಎಷ್ಟು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಬದ್ಧ ವೆಚ್ಚದಲ್ಲಿ ರೂ.32,080 ಕೋಟಿ ಸಾರಿಗೆ ಸಂಬಳಕ್ಕೆ ಹೋಗುತ್ತದೆ. ಸಂಬಳ ಎನ್ನುವ ವಿಚಾರದಲ್ಲಿ ಈಗಿನ ಕಾಲಘಟ್ಟದಲ್ಲಿ ಶೇ. 40 ರಿಂದ 50 ರಷ್ಟು ಸರ್ಕಾರಿ ಹುದ್ದೆಗಳು ಖಾಲಿ ಇವೆ. ಎಲ್ಲರೂ ಎಲ್ಲಾ ಇಲಾಖೆಗಳ ಬಗ್ಗೆ ಮಾತನಾಡುವಾಗ ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತಾರೆ ಎಂದು ಕೇಳಿದರು. ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿದಾಗ ಸಂಬಳ-ಸಾರಿಗೆ ವೆಚ್ಚ ಎಷ್ಟು ಹೆಚ್ಚಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕು. ಅದಕ್ಕಾಗಿ ಯಾವರೀತಿ ಆದಾಯವನ್ನು ಕ್ರೋಢೀಕರಣ ಮಾಡಬೇಕೆಂದು ಸರ್ಕಾರ ವಿಚಾರ ಮಾಡಬೇಕಾಗಿದೆ. ಈಗಿನ ಸಾಲಕ್ಕೆ ರೂ.22,619 ಕೋಟಿಗಳು ಬಡ್ಡಿಗೆ ಹೋಗುತ್ತಿದೆ. ಇವತ್ತು ಬಡ್ಡಿ ಕಟ್ಟಲು ಸಾಲ ಮಾಡುವ ಸ್ಥಿತಿ ನಮ್ಮ ರಾಜ್ಯದಲ್ಲಿ ಇದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇದಲ್ಲದೇ ಸಹಾಯಧನಕ್ಕೆ ರೂ.25,133 ಕೋಟಿ ಕೊಡಬೇಕಾಗಿದ್ದು, ಸ್ಥಳೀಯ ಸಂಸ್ಥೆಗಳಿಗೆ ರೂ.25,878 ಕೋಟಿ ಕೊಡಬೇಕಾಗಿದೆ. ಸ್ಥಳೀಯ ಸಂಸ್ಥೆಗಳು ಅಂದರೆ ನಗರಸಭೆಗಳು, ಪುರಸಭೆಗಳು ಅಲ್ಲದೇ ಪಂಚಾಯಿತಿಗಳು ಸೇರುತ್ತವೆಯೇ ಎಂಬ ಮಾಹಿತಿ ನನಗೆ ಇಲ್ಲ. ಅದನ್ನು ಮುಂದಿನ ದಿನಗಳಲ್ಲಿ ವಿಚಾರ ಮಾಡುತ್ತೇನೆ. ಪಂಚಾಯತ್ ರಾಜ್‌ಗೆ ರೂ.20,875 ಕೋಟಿಗಳನ್ನು ಮೀಸಲಾಗಿಟ್ಟಿದ್ದಾರೆ. ನಾನು ಕೋಲಾರ ಜಿಲ್ಲೆಗೆ ಸಂಬಂಧಪಟ್ಟಂತೆ ಯಾವ ಸಮಸ್ಯೆಗಳಿವೆ, ಮೂಲಭೂತವಾಗಿ ಅಲ್ಲಿನ ಜನರು ಏನನ್ನು ನಂಬಿ ಜೀವನ ಮಾಡುತ್ತಿದ್ದಾರೆ, ಅದಕ್ಕೆ ಏನು ಆಗಬೇಕು, ಏನು ಆಗಬೇಕಾಗಿತ್ತು, ಏನು ಆಗಿಲ್ಲ ಎಂಬ ವಿಚಾರಗಳಿಗೆ ಹೋದಾಗ ಮೊದಲಿಗೆ ಆಹಾರ ಮತ್ತು ನಾಗರಿಕ ಸರಬರಾಜು ವಿಚಾರ ಬಂತು. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಉಮೇಶ್ ಕತ್ತಿಯವರು Motor Bike, TV, Refrigerator ಇದ್ದವರಿಗೆ BPL Card ಕೊಡುವುದಿಲ್ಲ ಎಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಿರುವ ವಿಚಾರವನ್ನು ಪತ್ರಿಕೆಗಳಲ್ಲಿ ನೋಡಿದೆ. ಇದರ ಬಗ್ಗೆ ನಾನಾ ರೀತಿಯ ಪ್ರತಿಭಟನೆಗಳು ನಡೆದವು. ಅವರು ಹೇಳಿದ್ದನ್ನು ತಪ್ಪು ಎಂದು ಹೇಳುವುದಿಲ್ಲ, ಅವರು ಹೇಳಿದ್ದು correct ಆಗಿ ಇದೆ. ಅದು ಸರಿಯಿದೆ ಎಂದು ನಾನು ಭಾವಿಸುತ್ತೇನೆ. ಆದರೆ BPL Card ಎನ್ನುವ ಅಂದರೆ Below Poverty Line ಎನ್ನುವವರಿಗೆ Motor Bike, TV, Refrigerator, Car ಇದ್ದವರಿಗೆ ಸರ್ಕಾರದ ಸೌಲಭ್ಯಗಳನ್ನು ಕೊಡಬೇಕೆ ಎಂದು ವಿಚಾರ ಮಾಡುತ್ತೇವೆ. ನಾನೊಬ್ಬ ಪಕ್ಷದ ಶಾಸಕನಾಗಿ ವಿಚಾರ ಮಾಡುತ್ತಿಲ್ಲ, ಸಾರ್ವಜನಿಕ ಪ್ರಜ್ಞೆ ಇರುವವನಾಗಿ Below Poverty Line ಅಂದರೆ ದಟ್ಟದರಿದ್ರರಿಗೆ ಅಂದರೆ ಅವರಿಗೆ ಏನೂ ಗತಿ ಇರುವುದಿಲ್ಲ,, ಅಂತಹವರಿಗೆ ಕೊಡಲು BPL ಅನ್ನು ಮಾಡಿದರು. ಇವತ್ತಿನ ದಿವಸ ಎಲ್ಲೋ ಒಂದು ನ್ಯಾಯಬೆಲೆ ಅಂಗಡಿ ಮುಂದೆ ಎಂತಹ ಜನರು ಸವಲತ್ತುಗಳನ್ನು ಪಡೆಯುತ್ತಿದ್ದಾರೆ ಎಂಬುದನ್ನು ನೋಡಿದಾಗ ನನಗೆ ನಾನೆ ನಾಚಿಕೆ ಪಟ್ಟ ಘಟನೆ ಆಗಿದೆ. ಅದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಿಲ್ಲ. ಅದಕ್ಕೆ ಇರುವ ಷರತ್ತಿನಂತೆ ಮಾಡಲಿ.

ಇನ್ನು ವಸತಿ ಯೋಜನೆಗೆ ರೂ.2,090 ಕೋಟಿಗಳನ್ನು ಕೊಟ್ಟಿದ್ದು, ಮಾನ್ಯ ವಸತಿ ಸಚಿವರು ಸದನದಲ್ಲಿ ಇಲ್ಲ. ಕೋಲಾರ ನಗರಕ್ಕೆ ಇಲ್ಲಿಯವರೆಗೂ ಯಾವುದೇ ವಸತಿ ಯೋಜನೆಯನ್ನು ಯಾವುದೇ ಸರ್ಕಾರ ಕೊಟ್ಟಿಲ್ಲ. ಹಿಂದಿನ ಕಾಂಗ್ರೆಸ್, ಜನತಾದಳ ಅಥವಾ ಸಮ್ಮಿಶ್ರ ಸರ್ಕಾರ ಇರಬಹುದು, ಯಾವುದೇ ಸರ್ಕಾರಗಳು ಕಾರ್ಯಕ್ರಮ ಕೊಟ್ಟಿಲ್ಲ. ಮೊನ್ನೆ ಈ ವಿಚಾರವನ್ನು ಮಾನ್ಯ ವಸತಿ ಸಚಿವರ ಬಳಿ ಪ್ರಸ್ತಾಪಿಸಿದ್ದೇನೆ. ಕೋಲಾರ ನಗರದಲ್ಲಿ ಬಹಳ ಹಿಂದುಳಿದ ಜನರಿದ್ದು, ರೇಷ್ಮೆ ನೇಯುವವರು ಇರಬಹುದು, ಬೀಡಿ ಕಟ್ಟಿ ಸುತ್ತುವವರು ಇರಬಹುದು, ಇವತ್ತೂ ಅವರಿಗೆ ವಸತಿ ಯೋಜನೆ ಆಗಿಲ್ಲ. ಮುಂದಿನ ದಿನಗಳಲ್ಲಿ ಕೋಲಾರಕ್ಕೆ ವಿಶೇಷ ಯೋಜನೆ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿ ಪತ್ರವನ್ನು ಕೊಟ್ಟಿದ್ದೇನೆ, ಅದನ್ನು ಮುಂದಿನ ಕ್ರಮ ತೆಗೆದುಕೊಳ್ಳುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ.

**(ಮುಂದು)**

**(502)/18.03.2021/4.40/ಹೆಚ್‌ವಿಃವಿಕೆ(ಎಂಡಿ)**

**ಶ್ರೀ ಗೋವಿಂದರಾಜು(ಮುಂದು):–**

ಸನ್ಮಾನ್ಯ ಸಭಾಪತಿಯವರೇ, ಈ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆಸ್ಪತ್ರೆ, ವೈದ್ಯಕೀಯ ಆರೈಕೆ ಮತ್ತಿತರ ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಉದ್ಯಮಿಗಳಿಗೆ ಮಹಿಳಾ ಅಭಿವೃದ್ಧಿ ನಿಗಮ/ಕರ್ನಾಟಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಎರಡು ಕೋಟಿ ರೂಪಾಯಿಗಳವರೆಗೆ ಶೇಕಡಾ 4ರ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸುವ ಬಗ್ಗೆ ಘೋಷಣೆ ಮಾಡಿದ್ದಾರೆ. ನಿನ್ನೆ ಆಯವ್ಯಯದ ಮೇಲೆ ಮಾತನಾಡುತ್ತಿದ್ದ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಸಹ ಈ ಕಾರ್ಯಕ್ರಮವನ್ನು ಸ್ವಾಗತಿಸಿದ್ದಾರೆ. ಕೆ.ಎಸ್.ಎಫ್.ಸಿ. ವತಿಯಿಂದ ಉದ್ಯಮವನ್ನು ಪ್ರಾರಂಭ ಮಾಡುವಂತಹ ಮಹಿಳೆಯರಿಗೆ ಶೇಕಡಾ 4ರ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳನ್ನು ನೀಡುವ ಯೋಜನೆ ಈಗಾಗಲೇ ಜಾರಿಯಲ್ಲಿದೆ. ಇದನ್ನು ಹೊರತುಪಡಿಸಿ ಈ ಸಾಲಿನ ಆಯವ್ಯಯದಲ್ಲಿ ಮಹಿಳಾ ಉದ್ಯಮಿಗಳಿಗೆ ಮಹಿಳಾ ಅಭಿವೃದ್ಧಿ ನಿಗಮ/ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಎರಡು ಕೋಟಿ ರೂಪಾಯಿಗಳವರೆಗೆ ಶೇಕಡಾ 4ರ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸುವ ಬಗ್ಗೆ ಘೋಷಣೆ ಮಾಡಿದ್ದಾರೆ, ಇದು ಸ್ವಾಗತಾರ್ಹವಾಗಿದೆ. ಇದರ ಜೊತೆಗೆ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಲ್ಲಿ ಸ್ತ್ರೀಶಕ್ತಿ ಗುಂಪುಗಳಿಗೆ ಶೂನ್ಯ ಬಡ್ಡಿ ದರದಲ್ಲಿ 2 ಲಕ್ಷ ರೂಪಾಯಿಗಳವರೆಗೆ ಸಾಲಸೌಲಭ್ಯವನ್ನು ನೀಡುವಂತಹ ಯೋಜನೆ ಈಗಾಗಲೇ ಜಾರಿಯಲ್ಲಿದೆ. ಈ ಸಹಾಯಧನವನ್ನು ಸರ್ಕಾರವೇ ತುಂಬಿಕೊಡುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ರಾಜ್ಯದ ಮೂಲೆಮೂಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಅಂಗನವಾಡಿ ಕಾರ್ಯಕರ್ತರು ಬೆಂಗಳೂರಿಗೆ ಬಂದು ಪ್ರತಿಭಟನೆ ನಡೆಸಿ ತಮ್ಮ ಹಕ್ಕಿಗಾಗಿ ಹೋರಾಟ ನಡೆಸಿದಂತಹ ಸಂದರ್ಭದಲ್ಲಿ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಏನೇನು ಭರವಸೆಗಳನ್ನು ನೀಡಿದ್ದರು, ಅದು ಈ ಆಯವ್ಯದಲ್ಲಿ ಈಡೇರಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಕೋವಿಡ್–19 ನಂತಹ ಸಾಂಕ್ರಾಮಿಕ ರೋಗದ ಭೀತಿ ಇದ್ದಾಗಲೂ ಸಹ ಅಂಗನವಾಡಿ ಕಾರ್ಯಕರ್ತರು ಮತ್ತು ಆಶಾ ಕಾರ್ಯಕರ್ತೆಯರು ಬಹಳ ಕಷ್ಟಪಟ್ಟು ಒಳ್ಳೆಯ ಕೆಲಸ ಮಾಡಿದ್ದಾರೆ. ಅವರಿಗೆ ಸಹಾಯಧನದ ರೂಪದಲ್ಲಿ 3–4 ಸಾವಿರ ರೂಪಾಯಿಗಳನ್ನು ಕೊಡಲಾಗುತ್ತಿದೆ. ಅದನ್ನು ಹೆಚ್ಚು ಮಾಡುವ ಬಗ್ಗೆ ಆಯವ್ಯಯದಲ್ಲಿ ಉಲ್ಲೇಖವೇ ಇಲ್ಲ. ಮುಂದಿನ ದಿನಗಳಲ್ಲಿ ಈ ಅಂಶದ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ ಸಭೆಗೆ ನಾನೂ ಒಬ್ಬ ಸದಸ್ಯನಾಗಿದ್ದೇನೆ. ಆ ಸಮಿತಿಯಲ್ಲಿ ‘ಶೇಕಡಾ 75ಕ್ಕಿಂತ ಹೆಚ್ಚಿನ ಪ್ರಮಾಣದ ವಿಕಲಚೇತನರೇನಿದ್ದಾರೆ, ಅವರಿಗೆ 1400 ರೂಪಾಯಿಗಳ ಸಹಾಯಧನವನ್ನು ನೀಡಲಾಗುತ್ತಿದೆ ಮತ್ತು ಸ್ಕೂಟರ್ ಅನ್ನು ಸಹ ನೀಡಲಾಗುತ್ತಿದೆ. ಸರ್ಕಾರ ನೀಡುತ್ತಿರುವ 1400 ರೂಪಾಯಿಗಳ ಸಹಾಯಧನವನ್ನು ತೆಗೆದುಕೊಂಡು ಅವರು ಸ್ಕೂಟರ್‌ಗೆ ಹೇಗೆ ಪೆಟ್ರೋಲ್ ಹಾಕುತ್ತಾರೆ? ಜೀವನವನ್ನು ಹೇಗೆ ನಿರ್ವಹಿಸುತ್ತಾರೆ? ಈ ಅಂಶವನ್ನು ಗಮನಿಸಿ ಸರ್ಕಾರ ಅವರಿಗೆ ನೀಡುತ್ತಿರುವ ಸಹಾಯಧನವನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಚ್ಚು ಮಾಡಬೇಕು' ಎಂದು ಕೇಳಿದ್ದೆ, ಆಗ ಇಲಾಖೆಯವರು 'ಮುಂದಿನ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಅವರಿಗೆ ನೀಡಲಾಗುತ್ತಿರುವ ಮಾಸಾಶನವನ್ನು ಹೆಚ್ಚು ಮಾಡುತ್ತೇವೆ' ಎನ್ನುವ ಆಶ್ವಾಸನೆಯನ್ನು ನೀಡಿದ್ದರು. ಆದರೆ, ಆಯವ್ಯಯದಲ್ಲಿ ಆ ಬಗ್ಗೆ ಪ್ರಸ್ತಾಪವೇ ಮಾಡಿಲ್ಲ. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಬುದ್ಧಿಮಾಂದ್ಯ ಮಕ್ಕಳಿಗೆ ನೀಡಲಾಗುತ್ತಿರುವ ಮಾಸಾಶನವನ್ನು 1400 ರೂಪಾಯಿಗಳಿಂದ 2000 ರೂಪಾಯಿಗಳಿಗೆ ಹೆಚ್ಚು ಮಾಡಿದ್ದಾರೆ. ಇದು ಸ್ವಾಗತಾರ್ಹವಾಗಿದೆ. ಇದೇ ರೀತಿಯಲ್ಲಿ ವಿಕಲಚೇತನರಿಗೆ ನೀಡುತ್ತಿರುವ ಮಾಸಾಶನವನ್ನು ಸಹ ಹೆಚ್ಚು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು ಮೂಲಭೂತವಾಗಿ ಶೇಕಡಾ 80ರಷ್ಟು ಕೃಷಿಯನ್ನೇ ಅವಲಂಬಿಸಿವೆ. ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗೆ ಸಂಬಂಧಪಟ್ಟಂತೆ ಈ ಆಯವ್ಯಯದಲ್ಲಿ ಒಂದೇ ವಿಷಯದಡಿಯಲ್ಲಿ ಅನುದಾನವನ್ನು ಒದಗಿಸಲಾಗಿದೆ. ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಈಗ ಸಧ್ಯಕ್ಕೆ ಕೃಷಿ ಬೆಳೆಯಾಗಿ ರಾಗಿ ಬೆಳೆಯನ್ನು ಮಾತ್ರ ಬೆಳೆಯಲಾಗುತ್ತಿದೆ. ಈ ಮೂರು ಜಿಲ್ಲೆಗಳಿಗೆ ಮತ್ತು ಮೂರು ಇಲಾಖೆಗಳನ್ನು ಸೇರಿಸಿ ಒಂದೇ ಅನುದಾನವನ್ನು ಸಮಾನಾಂತರವಾಗಿ ಹಂಚಿಕೆ ಮಾಡಲಾಗಿದೆ. ಇದು ತಪ್ಪು. ಆದರೆ, ಆಯಾಯ ಜಿಲ್ಲೆಯಲ್ಲಿ ಪ್ರಮುಖವಾಗಿ ಯಾವ ಬೆಳೆಗಳನ್ನು ಬೆಳೆಯಲಾಗುತ್ತದೆ ಎನ್ನುವುದನ್ನು ನೋಡಿಕೊಂಡು, ಬೆಳೆ ಆಧಾರದ ಮೇಲೆ ಅನುದಾನವನ್ನು ಹಂಚಿಕೆ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಕೋಲಾರ ಅಥವಾ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ 154 ಜನ ಕೃಷಿ ಅಧಿಕಾರಿಗಳಿದ್ದಾರೆ. ಈ ಜಿಲ್ಲೆಯಲ್ಲಿ ರಾಗಿ ಬೆಳೆಯನ್ನು ಮಾತ್ರ ಬೆಳೆಯಲಾಗುತ್ತಿದೆ. ಎಂ.ಎಸ್ಸಿ(ಎ.ಜಿ), ಪಿ.ಹೆಚ್.ಡಿ. ಮಾಡಿರುವ ಅಧಿಕಾರಿಗಳೇ ಹೆಚ್ಚಿಗೆ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ವೈಜ್ಞಾನಿಕವಾಗಿ ಇವರ ಬುದ್ಧಿವಂತಿಕೆಯ ಅಥವಾ ಜ್ಞಾನದ ಉಪಯೋಗವಾಗುತ್ತಿಲ್ಲ. ರೈತರಿಗೆ ವೈಜ್ಞಾನಿಕವಾಗಿ ಉಪಯೋಗವಾಗುವಂತಹ ಕೆಲಸವನ್ನು ಈ ಅಧಿಕಾರಿಗಳು ಮಾಡಬೇಕು. ಸರ್ಕಾರ ಅದಕ್ಕೆ ಹೆಚ್ಚು ಒತ್ತು ಕೊಡಬೇಕು. ರೈತರು ವೈಜ್ಞಾನಿಕವಾಗಿ ಅಂತರರಾಷ್ಟ್ರೀಯ ಬೆಳೆಗಳನ್ನು ಬೆಳೆಯುವುದಕ್ಕೆ ಪ್ರೋತ್ಸಾಹವನ್ನು ನೀಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಉತ್ತಮ ಗುಣಮಟ್ಟದ ಬೀಜಗಳನ್ನು ಪೂರೈಕೆ ಮಾಡುವುದು ಬಹಳ ಮುಖ್ಯವಾಗಿದೆ. ರಾಜ್ಯದಲ್ಲಿ 'ಕರ್ನಾಟಕ ಬೀಜ ನಿಗಮ' ಎಂದು ಇದೆ. ಈ ನಿಗಮಕ್ಕೆ ನಮ್ಮ ಕೃಷಿ ಸಚಿವರು ಅಧ್ಯಕ್ಷರಾಗಿದ್ದಾರೆ. ಸರ್ಕಾರ ಉತ್ತಮ ಗುಣಮಟ್ಟದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೀಜಗಳನ್ನು ಸರಬರಾಜು ಮಾಡದೇ ಇರುವ ಹಿನ್ನೆಲೆಯಲ್ಲಿ ರೈತರು ನಷ್ಟವನ್ನು ಅನುಭವಿಸಿರುವಂತಹ ಸನ್ನಿವೇಶಗಳನ್ನು ನಾವು ನೋಡಿದ್ದೇವೆ. ಆದ್ದರಿಂದ ಉತ್ತಮ ಗುಣಮಟ್ಟದ ಬೀಜಗಳನ್ನು ಸರಬರಾಜು ಮಾಡುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳಿಂದ ಹೆಚ್ಚಿನ ಸಬ್ಸಿಡಿ ದರದಲ್ಲಿ ಯಂತ್ರೋಪಕರಣಗಳನ್ನು ರೈತರಿಗೆ ನೀಡಲಾಗುತ್ತಿದೆ. ಇವರು ನೀಡುವಂತಹ ಯಂತ್ರೋಪಕರಣಗಳಿಗೂ ಕೋಲಾರ ಜಿಲ್ಲೆಯಲ್ಲಿ ಬೆಳೆಯುವಂತಹ ಬೆಳೆಗೂ ಯಾವುದೇ ಸಂಬಂಧವಿಲ್ಲ. ಸಬ್ಸಿಡಿ ಹಣಕ್ಕೋಸ್ಕರವಾಗಿ ಆ ಯಂತ್ರೋಪಕರಣಗಳನ್ನು ತಂದು ರೈತರಿಗೆ ಕೊಡುವಂತಹ ಕೆಲಸವಾಗುತ್ತಿದೆ. ಮೊನ್ನೆ ಕೃಷಿ ಸಚಿವರು ನಮ್ಮ ಜಿಲ್ಲೆಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಯಂತ್ರೋಪಕರಣಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಆ ಸಂದರ್ಭದಲ್ಲಿ ನಾನು ಸಹ ಅವರೊಂದಿಗಿದ್ದೆ. ನಾನು ಗಮನಿಸಿದಂತೆ ಅಲ್ಲಿ ರಾಗಿಯನ್ನು 'ಒಕ್ಕುವಿಕೆ' ಮಾಡುವ ಯಂತ್ರೋಪಕರಣಗಳನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರದರ್ಶಿಸಲಾಗಿತ್ತು. ನಮ್ಮ ಕೋಲಾರ ಜಿಲ್ಲೆಯಲ್ಲಿ ಮಳೆ ಆಶ್ರಿತವಾಗಿ ರಾಗಿ ಬೆಳೆಯನ್ನು ಬೆಳೆಯಲಾಗುತ್ತದೆ. ಒಂದು ವರ್ಷದಲ್ಲಿ ಒಂದು ಅಥವಾ ಎರಡು ಎಕರೆ ಪ್ರದೇಶದಲ್ಲಿ ರಾಗಿಯನ್ನು ಬೆಳೆಯುತ್ತಾರೆ. ಇಷ್ಟು ಕಡಿಮೆ ಪ್ರಮಾಣದಲ್ಲಿ ರಾಗಿ ಬೆಳೆಯುವವರು ಆ ಯಂತ್ರವನ್ನು ತೆಗೆದುಕೊಂಡು ಹೋಗಿ ಏನು ಮಾಡುತ್ತಾರೆ? ಇಡೀ ಊರಿಗೆ ಒಂದು ಯಂತ್ರವಿದ್ದರೆ ಸಾಕಾಗುತ್ತದೆ. ಇಂತಹವುಗಳಿಗೆ ಸಬ್ಸಿಡಿಯನ್ನು ನೀಡುವ ಮೂಲಕ ಸರ್ಕಾರದ ಹಣವನ್ನು ವ್ಯರ್ಥ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇದಕ್ಕೆ ಅವಕಾಶ ನೀಡಬಾರದೆನ್ನುವುದು ನನ್ನ ಸಲಹೆಯಾಗಿದೆ. ಯಾವ ಜಿಲ್ಲೆಯಲ್ಲಿ ಯಾವ ಬೆಳೆಯನ್ನು ಬೆಳೆಯುತ್ತಾರೆ, ಅದಕ್ಕೆ ಯಾವ ಯಂತ್ರೋಪಕರಣಗಳ ಅವಶ್ಯಕತೆ ಇದೆ, ಅಂತಹ ಯಂತ್ರೋಪಕರಣಗಳನ್ನು ಮಾತ್ರ ನೀಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಇಷ್ಟು ದಿನಗಳ ಕಾಲ 25 ಹೆಚ್.ಪಿ. ಸಾಮರ್ಥ್ಯದ ಟ್ರಾಕ್ಟರ್‌ಗಳಿಗೆ ಮಾತ್ರ ಸಬ್ಸಿಡಿಯನ್ನು ನೀಡಲಾಗುತ್ತಿತ್ತು. 25 ಹೆಚ್.ಪಿ. ಸಾಮರ್ಥ್ಯದ ಟ್ರಾಕ್ಟರ್ ಯಾವುದಕ್ಕೂ ಉಪಯೋಗವಿಲ್ಲ. ಉಳುಮೆ ಮಾಡುವುದಕ್ಕೂ ಅದನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ 45 ಹೆಚ್.ಪಿ. ಸಾಮರ್ಥ್ಯದ ಟ್ರಾಕ್ಟರ್‌ಗಳನ್ನು ನೀಡುವುದಕ್ಕೆ ಸಬ್ಸಿಡಿಯನ್ನು ನೀಡಬೇಕೆಂದು ನಾವುಗಳು ಮಾನ್ಯ ಸಚಿವರಲ್ಲಿ ಮನವಿ ಮಾಡಿದ್ದೆವು. 45 ಹೆಚ್.ಪಿ. ಸಾಮರ್ಥ್ಯದ ಟ್ರಾಕ್ಟರ್‌ಗಳಿಗೂ ಸಬ್ಸಿಡಿ ನೀಡುವುದಾಗಿ ಈ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದ್ದಾರೆ. ಇದೊಂದು ಒಳ್ಳೆಯ ನಿರ್ಧಾರವಾಗಿದೆ. ಒಂದು ತಾಲ್ಲೂಕಿನಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಎರಡು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟ್ರಾಕ್ಟರ್‌ಗಳನ್ನು ಮಾತ್ರ ನೀಡಲಾಗುತ್ತಿದೆ. ಈಗ ಅವುಗಳ ಸಂಖ್ಯೆಯನ್ನು 50ಕ್ಕೆ ಹೆಚ್ಚು ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಏಕೆಂದರೆ, ಸುಮಾರು 250–300 ಅರ್ಜಿಗಳು ಅಧಿಕಾರಿಗಳ ಬಳಿ ಪೆಂಡಿಂಗ್‌ನಲ್ಲಿವೆ. ಆದ್ದರಿಂದ ಇವುಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ಸಾಲಿನ ಆಯವ್ಯಯದಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ರೈತರ ಮಕ್ಕಳಿಗೆ ನೀಡುತ್ತಿರುವ ಮೀಸಲಾತಿಯನ್ನು ಶೇಕಡಾ 40 ರಿಂದ 50ಕ್ಕೆ ಹೆಚ್ಚಿಸಲಾಗಿದೆ. ಇದು ನಿಜಕ್ಕೂ ಸ್ವಾಗತಾರ್ಹ ವಿಚಾರವಾಗಿದೆ. ಇದಕ್ಕಾಗಿ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

**(ಮುಂದು)**

**(503) 18.3.2021 4.50 ಪಿಕೆ:ಬಿಎನ್‌ಎಸ್**

**ಶ್ರೀ ಗೋವಿಂದ ರಾಜು(ಮುಂದು):–**

ರೈತರ ಮಕ್ಕಳಿಗೆ ಕೃಷಿ ಬಗ್ಗೆ ಓದುವುದಕ್ಕೆ ಆಸಕ್ತಿ ಇರುತ್ತದೆ. ಅವರಿಗೆ ಶೇಕಡ 40 ರಿಂದ 50ಕ್ಕೆ ಹೆಚ್ಚು ಮಾಡಿರುವುದು ಒಳ್ಳೆಯ ಕ್ರಮವಾಗಿದೆ. ಇದಕ್ಕೋಸ್ಕರ ನಾನು ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇರೀತಿ ಪಶು ವೈದ್ಯಕೀಯ ಮತ್ತು ತೋಟಗಾರಿಕೆ ಕಾಲೇಜುಗಳು ನಮ್ಮ ಕೋಲಾರಕ್ಕೆ ಬಹಳ ಮುಖ್ಯವಾದುದು. ಏಕೆಂದರೆ, ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಕೆ ಇರುವ ಕಡೆ ಪಶು ವೈದ್ಯರ ಕೊರತೆ ಎದ್ದು ಕಾಣುತ್ತಿದೆ. ಹೆಚ್ಚು ಹೆಚ್ಚು ಪಶು ವೈದ್ಯರನ್ನು ನೇಮಿಸಬೇಕು. ಗ್ರಾಮೀಣ ಮಟ್ಟದಲ್ಲಿ ಪಶು ವೈದ್ಯರು ಮತ್ತು ತೋಟಗಾರಿಕೆಗೆ ಸಂಬಂಧಪಟ್ಟಂತೆ ವಿದ್ಯಾಭ್ಯಾಸ ಮಾಡಿರುವವರು ನಮ್ಮ ಕಡೆ ಬಂದಾಗ ಹೆಚ್ಚಿನ ಉಪಯೋಗವಾಗುತ್ತದೆ. ಶೇಕಡ 50 ರಷ್ಟು ಮೀಸಲಾತಿಯನ್ನು ಈ ಎರಡು ಇಲಾಖೆಗಳೂ ಕೂಡ ಕೊಡಬೇಕು ಎನ್ನುವುದು ನಮ್ಮ ಒತ್ತಾಯವಾಗಿದೆ. ಭಾರತ ಸರ್ಕಾರ ರೈತರಿಗೆ 6000 ರೂ.ಗಳನ್ನು ಎರಡೆರಡು ಸಾವಿರ ರೂಪಾಯಿಗಳಂತೆ ಬಿಡಿ ಬಿಡಿಯಾಗಿ ಕೊಡುತ್ತಿದೆ. ಮಾನ್ಯ ಪ್ರತಾಪ್‌ಸಿಂಹ ನಾಯಕ್‌ರವರು ಹೇಳಿದ ಹಾಗೆ, ಬಿತ್ತನೆ ಮಾಡುವ ಸಮಯದಲ್ಲಿ ಗೊಬ್ಬರ ತೆಗೆದುಕೊಳ್ಳುವುದಕ್ಕೋ, ಕೂಲಿ ಕೊಡುವುದಕ್ಕೋ ಅಥವಾ ಟ್ರ್ಯಾಕ್ಟರ್ ಬಾಡಿಗೆ ಕೊಡುವುದಕ್ಕೆ ಹಣ ಆಗುತ್ತದೆ ಎಂದು ಹೇಳಿದರು. ಆದರೆ, 2000 ರೂ.ಗಳಿಂದ ಯಾವ ಗೊಬ್ಬರವನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಯಾವ ಬೀಜವನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಯಾವುದೇ ಕೆಲಸ ಮಾಡುವುದಕ್ಕಾಗುವುದಿಲ್ಲ. ಕನಿಷ್ಠ ರೈತರು ಬೆಳೆ ಬೆಳೆಯುವಂತಹ ಆಯಾ ಸೀಸನ್‌ನಲ್ಲಿ ಆ ಹಣವನ್ನು ಒಟ್ಟಾಗಿ ಕೊಟ್ಟರೆ ಅವರಿಗೆ ಉಪಯೋಗವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೋಲಾರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಯಲ್ಲಿ 71 ವಿವಿಧ ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ಈ ಬೆಳೆಗೆ ಮಹತ್ವ ಕಡಿಮೆ ಇದೆ. ಅಲ್ಲಿ ಕೆಲಸ ಮಾಡುವುದಕ್ಕೆ 226 ಹುದ್ದೆಗಳನ್ನೇನು ಮಂಜೂರು ಮಾಡಿದ್ದೀರೋ ಅದರಲ್ಲಿ ಕೇವಲ 95 ಜನ ಮಾತ್ರ ಕೆಲಸ ಮಾಡುತ್ತಿದ್ದಾರೆ. ತೋಟಗಾರಿಕಾ ಅಧಿಕಾರಿಗಳ ಸಂಖ್ಯೆ ಬಹಳ ಕಡಿಮೆ ಇದೆ. ರೈತರ ಬೆಳೆಗಳಿಗೆ ಒಂದು ರೋಗ ಬಂದರೆ, ಆ ರೈತರು ಆ ಬೆಳೆಯ ಒಂದು ಎಲೆಯನ್ನು ಜೇಬಿನಲ್ಲಿ ಇಟ್ಟುಕೊಂಡು ಹೋಗಿ ಔಷಧಿ ಅಂಗಡಿಗೆ ಕೊಡುತ್ತಾರೆ. ಆ ಅಂಗಡಿಯವನು ಏನು ಕೊಡುತ್ತಾನೋ ಅದೇ ಔಷಧಿ ಆಗುತ್ತದೆ. ಮಾನ್ಯ ಸಭಾಪತಿಯವರೇ, ನಮ್ಮದು ಮುಂದುವರೆದು ರಾಷ್ಟ್ರವಾಗಿದ್ದರೂ ಸಹ, ಆ ರೈತನಿಗೆ, ಈ ಕಾಯಿಲೆ ಯಾವ ಮೂಲದಿಂದ ಬಂತು, ಇದಕ್ಕೆ ಯಾವ ಔಷಧಿಯನ್ನು ಕೊಟ್ಟರೆ ಬೆಳೆ ಚೆನ್ನಾಗಿ ಆಗುತ್ತದೆ ಎಂಬ ಬಗ್ಗೆ ಗೊತ್ತಿಲ್ಲ. ಮತ್ತೆ ಅವರಿಗೆ ತೋಟಗಾರಿಕಾ ಅಧಿಕಾರಿಗಳ ಸಂಪರ್ಕ ಇರುವುದಿಲ್ಲ. ತೋಟಗಾರಿಕಾ ಅಧಿಕಾರಿಗಳು ರೈತರ ಸಂಪರ್ಕಕ್ಕೆ ಬರಬೇಕು. ಈ ಇಲಾಖೆ ವೈಜ್ಞಾನಿಕವಾಗಿ ಚಿಂತನೆ ಮಾಡುವಂತಹ ಇಲಾಖೆ ಆಗಬೇಕು ಎನ್ನುವುದು ನನ್ನ ಆಸೆಯಾಗಿದೆ. ಮಾನ್ಯ ಸಭಾಪತಿಯವರೇ, ಚಿಕ್ಕಬಳ್ಳಾಪುರ ಜಿಲ್ಲೆಯ ಮರಳುಕುಂಟೆ ಎನ್ನುವ ಊರಿನಲ್ಲಿ ಯಾವುದೇ ವಿಜ್ಞಾನಿಗಳಿಗೆ ಕಡಿಮೆ ಇಲ್ಲ ಎನ್ನುವಂತಹ ಒಬ್ಬ ಪ್ರಗತಿಪರ ರೈತ 30 ಎಕರೆ ಪ್ರದೇಶದಲ್ಲಿ ಡ್ರ್ಯಾಗನ್ ಫ್ರೂಟನ್ನು ಬೆಳೆದಿದ್ದರು. ಆದರೆ ಆ ಬೆಳೆಗೆ ಹೂಜಿ ನೊಣ ರೋಗ ಬಂತು. ಅಮೆರಿಕನ್ ರಿಂಗ್ ವರ್ಮ್ ಎಂಬ ಈ ಕಾಯಿಲೆ ಸೌತ್ ಅಮೇರಿಕಾದಿಂದ ಬಂತು ಎಂದು ಹೇಳಿದರು. ಆ 30 ಎಕರೆಯಲ್ಲಿ ಬೆಳೆದ ಡ್ರ್ಯಾಗನ್ ಫ್ರೂಟ್‌ಗೆ ಹೂಜಿ ನೊಣ ಹೊಡೆದಿದ್ದರಿಂದ ಸುಮಾರು 20 ಟನ್ ಹಣ್ಣನ್ನು ಗುಂಡಿಗೆ ಹಾಕಿದರು. ನನಗೆ ಅದನ್ನು ನೋಡಿ ಬಹಳ ಬೇಜಾರಾಯಿತು. ಈ ಕಾಯಿಲೆಗೆ ಇನ್ನೂ ಟ್ರೀಟ್‌ಮೆಂಟ್ ಬಂದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠಾಸೀನರಾದರು)**

**ಸಭಾಪತಿಯವರು:–** 5 ಗಂಟೆಗೆ ಭಾಷಣವನ್ನು ಮುಗಿಸಬೇಕು.

**ಶ್ರೀ ಗೋವಿಂದ ರಾಜು:–** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಒಂದೊಂದು ಗಂಟೆಗಳ ಕಾಲ ಮಾತನಾಡುವುದಕ್ಕೆ ಸಮಯ ಕೊಟ್ಟಿದ್ದೀರಿ. ನಾನು ಬಹಳ ಮುಖ್ಯವಾದಂತಹ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** 5 ಗಂಟೆಯ ನಂತರ ಬೇರೆ ಕಲಾಪಗಳನ್ನು ತೆಗೆದುಕೊಳ್ಳಬೇಕಿದೆ. ಅಜೆಂಡಾದಲ್ಲಿರುವ ಕಲಾಪಗಳನ್ನು ಮುಗಿಸಬೇಕೋ ಅಥವಾ ನೀವು ಹೇಳಿದ ಹಾಗೆ ಸದನವನ್ನು ನಡೆಸಬೇಕೋ?

**ಶ್ರೀ ಗೋವಿಂದ ರಾಜು:–** ಮಾನ್ಯ ಸಭಾಪತಿಯವರೇ, ಕೋಲಾರದಲ್ಲಿ ಟೊಮಾಟೋ ಹಣ್ಣಿಗೂ ಹೂಜಿ ನೊಣ ಬಾದಿಸಿರುವುದರಿಂದ ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ತೋಟಗಾರಿಕಾ ಮಂತ್ರಿಗಳು ಬೆಳಿಗ್ಗೆಯಿಂದ ಸದನದಲ್ಲಿದ್ದರು, ಈಗಿಲ್ಲ. ಈ ಹೂಜಿ ನೊಣದ ಬಾದೆಯನ್ನು ತಪ್ಪಿಸುವುದಕ್ಕೆ ಸರ್ಕಾರದ ಮಟ್ಟದಲ್ಲಿ ಏನಾದರೂ ಕಾರ್ಯಕ್ರಮವನ್ನು ರೂಪಿಸಬೇಕು, ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಯವರೇ, ಕೋಲಾರದಲ್ಲಿ ವಿಶೇಷವಾಗಿ ಮಾವಿನ ಬೆಳೆಯನ್ನು ಬೆಳೆಯಲಾಗುತ್ತದೆ. ಇದಕ್ಕೂ ಸಹ ಹೂಜಿ ನೊಣದ ಬಾದೆ ಬಹಳ ಕಾಡುತ್ತಿದೆ. ಮೊನ್ನೆ ಅಕಾಲಿಕ ಮಳೆ ಬಂದಿದ್ದರಿಂದ ಅರ್ಧಕರ್ಧ ಮಾವಿನ ಮರದ ಹೂವು ಮತ್ತು ಸಣ್ಣ ಕಾಯಿಗಳು ಉದುರಿ ಹೋಯಿತು. ಈ ನಿಟ್ಟಿನಲ್ಲಿ ರೈತರ ಸಹಾಯಕ್ಕೆ ಸರ್ಕಾರ ಬರಬೇಕು.

ಮಾನ್ಯ ಸಭಾಪತಿಯವರೇ, ನಾನು ಕೋಳಿ ಸಾಕಾಣಿಕೆ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ಕೋಲಾರ ಜಿಲ್ಲೆಯನ್ನು ನಮ್ಮ ದೇಶದ ಕೋಳಿ ಸಾಕಾಣಿಕೆಯ ಮೇಜರ್ ಹಬ್ ಎಂದು ಹೇಳಬಹುದು. ರೈತರು ಇದನ್ನು ಒಂದು ಉಪಕಸುಬನ್ನಾಗಿ ಮಾಡಿಕೊಂಡು ಸಾವಿರಾರು ಜನ ಜೀವನ ಮಾಡುತ್ತಿದ್ದಾರೆ. ಇದಕ್ಕೆ ನಮ್ಮ ಸರ್ಕಾರದಿಂದ ಯಾವುದೇ ರೀತಿಯ ಸಹಕಾರ ಕೊಡುತ್ತಿಲ್ಲ. ನೆರೆಯ ತೆಲ್ಲಂಗಾಣ ಮತ್ತು ಆಂಧ್ರ ಪ್ರದೇಶದ ಸರ್ಕಾರಗಳು ಕೋಳಿ ಸಾಕಾಣಿಕೆದಾರರಿಗೆ ವಿಶೇಷ ಸಹಾಯವನ್ನು ಕೊಡುತ್ತಿವೆ. ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ ಬಹಳಷ್ಟು ಮಾತನಾಡಬೇಕೆಂದು ವಿಷಯಗಳನ್ನು ಸಂಗ್ರಹ ಮಾಡಿದ್ದೆ. ಮಾನ್ಯ ಕಂದಾಯ ಮಂತ್ರಿಗಳು ಈಗ ಸದನಕ್ಕೆ ಆಗಮಿಸಿದ್ದಾರೆ. ಕೋಳಿ ಶೆಡ್ ಕಟ್ಟುವುದಕ್ಕೆ ಭೂಪರಿವರ್ತನೆ ಆಗಬೇಕೆಂದು ಕೆಲವು ಜಿಲ್ಲೆಗಳಲ್ಲಿ ಒತ್ತಾಯ ಮಾಡುತ್ತಿದ್ದಾರೆ. ಕೋಳಿ ಸಾಕಾಣಿಕೆ ಕೃಷಿಗೆ ಸಂಬಂಧಪಟ್ಟ ವಿಚಾರವಾಗಿದೆ. 10–12 ಎಕರೆಯಲ್ಲಿ ಕೋಳಿ ಫಾರಂ ಮಾಡಬೇಕಾಗುತ್ತದೆ. ಆದರೆ ಇದಕ್ಕೆ ಕೆಲವೊಂದು ಜಿಲ್ಲೆಗಳಲ್ಲಿ ಅಧಿಕಾರಿಗಳು ಭೂಪರಿವರ್ತನೆ ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ. ತಾವು ಈ ನಿಟ್ಟಿನಲ್ಲಿ ಒಂದು ಸೂಚನೆಯನ್ನು ಕೊಡಬೇಕು. ಈ ಜಾಗವನ್ನು ಪರಿವರ್ತನೆ ಮಾಡಿ ರಿಯಲ್ ಎಸ್ಟೇಟ್ ಮಾಡುವುದಕ್ಕೆ ಹೋಗುತ್ತಿಲ್ಲ. ಕೋಳಿ ಮನೆಗಳನ್ನು ಕಟ್ಟುವುದಕ್ಕೆ ಭೂಪರಿವರ್ತನೆ ಮಾಡುವುದಕ್ಕೆ insist ಮಾಡಬಾರದು. ಪಂಚಾಯಿತಿ ಮಟ್ಟದಲ್ಲಿ ಜನರಲ್ ಲೈಸೆನ್ಸ್ ಎಂದು ಕೋಳಿ ಮನೆ ಕಟ್ಟುವುದಕ್ಕೆ ಅವಕಾಶ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಕೊಡುತ್ತಿದ್ದರೋ ಈಗಲೂ ಹಾಗೆ ಮಾಡಲು ಅವಕಾಶ ಕೊಡುವ ನಿಟ್ಟಿನಲ್ಲಿ ನಿರ್ದೇಶನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕರ್ನಾಟಕದಲ್ಲಿ 60 ಸಾವಿರ ಜನ ಕೋಳಿ ಸಾಕಾಣಿಕೆಯನ್ನು ಮಾಡುತ್ತಿದ್ದಾರೆ. 1 ಲಕ್ಷ 26 ಸಾವಿರ ಕೋಟಿ ರೂಪಾಯಿಗಳು ಈ ಕೋಳಿ ಸಾಕಾಣಿಕೆಯಿಂದ ಭಾರತ ಸರ್ಕಾರದ ಜಿ.ಡಿ.ಪಿ.ಗೆ ಜಿಜಜ ಆಗುತ್ತಿದೆ. ನಮ್ಮ ಕರ್ನಾಟಕ ಒಂದರಲ್ಲೇ ವಾರ್ಷಿಕವಾಗಿ ಕೋಳಿ ಉತ್ಪಾದನೆಯಿಂದ 26 ಸಾವಿರ ಕೋಟಿ ರೂಪಾಯಿಗಳು ಬರುತ್ತಿದೆ. ಮೆಕ್ಕೆ ಜೋಳವನ್ನೇನು ಹೆಚ್ಚಿನ ರೀತಿಯಲ್ಲಿ ಕರ್ನಾಟಕದಲ್ಲಿ ಬೆಳೆಯುತ್ತಾರೋ ಅದು ಕೋಳಿ ಸಾಕಾಣಿಕೆಯಲ್ಲಿ ಉಪಯೋಗ ಮಾಡದೇ ಇದ್ದರೆ ಮೆಕ್ಕೆ ಜೋಳ ಉಪಯೋಗಕ್ಕೆ ಬರುತ್ತಲೇ ಇರಲಿಲ್ಲ. ಹಾಗಾಗಿ ಕೋಳಿ ಸಾಕಾಣಿಕೆಗಾರರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಬೇಕು. ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹಾರ ಮಾಡಬೇಕು. ಸರ್ಕಾರಿ ನೌಕರಿಯನ್ನು ಪಡೆಯಲು ಜನ ಎಷ್ಟು ಕಷ್ಟಪಡುತ್ತಾರೆ ಎನ್ನುವುದು ನಮಗೆ ಗೊತ್ತಿದೆ. ಬಿ.ಇ. ಮಾಡಿಕೊಂಡಿರುವವರು ಖಾಸಗಿ ಕಂಪನಿಗಳಲ್ಲಿ 10000 ರೂ.ಗಳ ಸಂಬಳಕ್ಕೆ ಕೆಲಸ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಮಾನ್ಯ ಸಭಾಪತಿಯವರೇ, ಪಶು ವೈದ್ಯಕೀಯ ಕಾಲೇಜುಗಳಲ್ಲಿ ಪಶು ವೈದ್ಯಕೀಯಕ್ಕೆ ಸಂಬಂಧಪಟ್ಟಂತೆ ಮಾತ್ರ ಡಿಗ್ರಿ ಕೋರ್ಸ್‌ನ್ನು ಅಳವಡಿಸಿಕೊಳ್ಳಲಾಗಿದೆ. ಅದರ ಜೊತೆ ಕೋಳಿ ಸಾಕಾಣಿಕೆ ಬಗ್ಗೆ ಒಂದು ಡಿಗ್ರಿ ಕೋರ್ಸ್‌ನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಮುಂದಿನ ದಿವಸಗಳಲ್ಲಿ ಏನು ಕೋಳಿ ಸಾಕಾಣಿಕೆಗೆ ಉಜ್ವಲ ಭವಿಷ್ಯ ಇದೆಯೋ ಅದರಿಂದ ಎಲ್ಲರಿಗೂ ಕೆಲಸ ಸಿಗುತ್ತದೆ. ಪಶು ವೈದ್ಯಕೀಯ ಕಾಲೇಜುಗಳಲ್ಲಿ ಕೋಳಿ ಸಾಕಾಣಿಕೆ ಬಗ್ಗೆಯೇ ಒಂದು ಕೋರ್ಸ್‌ಗೆ ಚಾಲನೆ ಕೊಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ರೇಷ್ಮೆಗೆ ಸಂಬಂಧಪಟ್ಟಂತೆ ನಮ್ಮ ಮುಖ್ಯಮಂತ್ರಿಗಳು ಓಕಳಿಪುರದಲ್ಲಿ 150 ಕೋಟಿ ವೆಚ್ಚದಲ್ಲಿ ಒಂದು ಕಟ್ಟಡವನ್ನು ಕಟ್ಟುತ್ತೇವೆ ಎಂದು ಹೇಳಿದ್ದಾರೆ. ಅನಾದಿ ಕಾಲದಿಂದಲೂ, ಕೋಲಾರ ಜಿಲ್ಲೆಗೆ ಪ್ರವೇಶ ಮಾಡಬೇಕಾದರೆ ಅಲ್ಲಿ 'Kolar is famous for silk, milk and gold too.' ಎಂದು ಬರೆದಿದ್ದ ಒಂದು ಬೋರ್ಡ್ ಇತ್ತು. ಈಗ ಗೋಲ್ಡ್ ಹೊರಟು ಹೋಯಿತು. ರೇಷ್ಮೆಯನ್ನು ಈಗ ಚೈನಾ ದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ರೇಷ್ಮೆ ಬೆಳೆಯುವ ರೈತರು ನಶಿಸಿ ಹೋಗುತ್ತಿದ್ದಾರೆ. ರೇಷ್ಮೆಯ ಆಮದನ್ನು ನಿಲ್ಲಿಸಬೇಕು. ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಯಲ್ಲಿರುವ ರೇಷ್ಮೆ ಬೆಳೆಗಾರರ ನೆರವಿಗೆ ಸರ್ಕಾರ ಬರಬೇಕು ಎಂದು ಒತ್ತಾಯ ಮಾಡುತ್ತೇನೆ. ಮಾನ್ಯ ಸಭಾಪತಿಯವರೇ, ನಾನು ಮಾತನಾಡುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಷಯ ಇನ್ನಷ್ಟು ಇತ್ತು. ಇಲ್ಲಿಯ ತನಕ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ರಾಷ್ಟ್ರೀಯ ಸಾಹಿತ್ಯ ಅಕಾಡಮಿ ಪ್ರತಿವರ್ಷ ಎಲ್ಲಾ ಭಾಷೆಗಳ ಕೃತಿಗಳಿಗೆ ಅವಾರ್ಡ್ ಕೊಡುತ್ತಾರೆ. 2020ರಲ್ಲಿ ರಾಷ್ಟ್ರೀಯ ಸಾಹಿತ್ಯ ಅಕಾಡಮಿಯು ಕನ್ನಡ ಭಾಷೆಗೆ ಸಂಬಂಧಪಟ್ಟಂತೆ "ಶ್ರೀ ಬಾಹುಬಲಿ ಅಹಿಂಸಾ ದಿಗ್ವಿಜಯಂ" ಎನ್ನುವ ಕೃತಿಯನ್ನು ರಚಿಸಿದ ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಹಾಗೂ ಕೇಂದ್ರದ ಮಾಜಿ ಸಚಿವರಾದ ಸನ್ಮಾನ್ಯ ಡಾ: ವೀರಪ್ಪ ಮೊಯಿಲಿಯವರಿಗೆ ನ್ಯಾಷನಲ್ ಅವಾರ್ಡ್ ಬಂದಿದೆ. ನಮ್ಮ ಸದನದ ಮೂಲಕ ಅವರಿಗೆ ಒಂದು ಪ್ರಶಂಸಾ ಪತ್ರವನ್ನು ಕಳುಹಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಆಗಬಹುದು. ಇದಕ್ಕೆ ಸದನದ ಎಲ್ಲರ ಒಪ್ಪಿಗೆ ಇದೆ ಎಂದು ಭಾವಿಸುತ್ತೇನೆ. ಸದರಿ ವಿಷಯವನ್ನು ಮಾನ್ಯ ವೀರಪ್ಪ ಮೊಯಿಲಿಯವರಿಗೆ ಕಳುಹಿಸಿ ಕೊಡುವ ಕೆಲಸವನ್ನು ಮಾಡುತ್ತೇವೆ. **(ಮುಂದು)**

**(504)18-03-2021/5-00/bkp-bns** (ಸಭಾಪತಿಯವರ ಉಪಸ್ಥಿತಿ)

**6. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಚರ್ಚೆ**

**ವಿಷಯ:-** ನಾಗಮಂಗಲ ತಾಲ್ಲೂಕಿನ ವಿವಿಧ ಹೋಬಳಿಗಳಲ್ಲಿ ಕಾಲುವೆ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡಿರುವ ರೈತರಿಗೆ ಭೂ ಪರಿಹಾರ ನೀಡದೆ ಇರುವ ಕುರಿತು.

- - -

**ಶ್ರೀ ಎಸ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯವಾದ ನಾಗಮಂಗಲ ತಾಲ್ಲೂಕಿನ ವಿವಿಧ ಹೋಬಳಿಗಳಲ್ಲಿ ಕಾಲುವೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡು ರೈತರಿಗೆ ಭೂ ಪರಿಹಾರ ನೀಡದಿರುವ ಬಗ್ಗೆ ಇದೆ. ಮಾನ್ಯ ಸಭಾಪತಿಯವರೆ, ಇದು ಬಹಳ ದುರ್ದೈವ ಮತ್ತು ಬಹಳ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:** ಮಾನ್ಯ ಅಪ್ಪಾಜಿ ಗೌಡರೆ, ಇಲ್ಲಿರುವುದನ್ನೆಲ್ಲಾ repeat ಮಾಡುವುದಕ್ಕೆ ಹೋಗಬೇಡಿ. ವಿಷಯ ನೇರವಾಗಿ ತೆಗೆದುಕೊಂಡು ಬಿಡಿ. ವಿಷಯ ಇರುತ್ತದೆ ಅದು ಗೊತ್ತು. Start ಮಾಡಿ.

ಶ್ರೀ **ಎನ್. ಅಪ್ಪಾಜಿಗೌಡ:** ಬಹಳ ನೋವಿನ ಸಂಗತಿ ಇದು. ಸುಮಾರು 15–20 ವರ್ಷಗಳ ಹಿಂದೆ ರೈತರ ಜಮೀನನ್ನು ಸ್ವಾಧೀನಪಡಿಸಿಕೊಳ್ಳದೇ ಕಾಲುವೆ ಮಾಡಿದ್ದಾರೆ. ಆ ರೈತರಿಗೆ ಇಲ್ಲಿಯವರೆಗೂ ಕೂಡ ಯಾವುದೇ ಪರಿಹಾರ ಸಿಕ್ಕಿಲ್ಲ. ಇಷ್ಟೊಂದು ಕಠೋರವಾಗಿ ಅಂದರೆ ಯಾವುದೇ ಸರ್ಕಾರವಿರಲಿ, ರೈತರಿಗೆ Notice ಅನ್ನೂ ಕೊಡದೇ, ಅವರಿಗೆ ಪರಿಹಾರವನ್ನೂ ಕೊಡದೇ ಅವರ ಜಮೀನಿನಲ್ಲಿ ಕಾಲುವೆ ತೋಡಿ ಉಪಯೋಗ ಮಾಡಿಕೊಂಡು ಅವರು ಏನಾದರೂ ಕೇಳುವುದಕ್ಕೆ ಹೋದರೆ ಅಲ್ಲಿರುವ ಇಂಜಿನಿಯರ್ ಅಥವಾ ಬೇರೆ ನೀರಾವರಿ ಇಲಾಖೆಯ ಅಧಿಕಾರಿಗಳು ಪೊಲೀಸ್ complaint ಕೊಟ್ಟಿರುವಂತಹ ನಿದರ್ಶನಗಳು ನಮ್ಮ ಬೆಳ್ಳೂರು ಠಾಣೆಯಲ್ಲಿದೆ. ಇಂತಹ ಪರಿಸ್ಥಿತಿಯಲ್ಲಿ ಇದು ಯಾವುದನ್ನೂ ಕೂಡ ಲೆಕ್ಕಿಸದೆ 20 ವರ್ಷಗಳು ಆಯಿತು. ಇದಕ್ಕೆ ಕಾನೂನಿನಲ್ಲಿ ಏನಿದೆ? 2003–04ನೇ ಸಾಲಿನಲ್ಲಿ ಇದು ಕಾಲುವೆ ಆಗಿರುವುದು, 2019ನೇ ಸಾಲಿನಲ್ಲಿ ಮಂಡ್ಯದ ಆಗಿನ ಜಿಲ್ಲಾಧಿಕಾರಿಗಳು ರೈತರಿಗೆ ಒಂದು ಗುಂಟೆಗೆ ರೂ.33 ಸಾವಿರಗಳ ರೇಟ್‌ಅನ್ನು ನಿಗದಿ ಮಾಡಿದ್ದಾರೆ. ಇವತ್ತಿನ ಹೊಸ ಕಾನೂನು ಏನಿದೆ, Sub Registrar guidance value ಇದೆ, ಕೇಂದ್ರ ಸರ್ಕಾರ 2014ನೇ ಸಾಲಿನಲ್ಲಿ ಆ ಜಮೀನಿಗೆ ನಾಲ್ಕು ಪಟ್ಟು ಏನು ಅವರ ಜಮೀನಿಗೆ ಭೂಪರಿಹಾರ ಕೊಡಬೇಕೆಂಬ ಕಾಯ್ದೆಯಾಗಿದೆ, ಆ ಕಾಯ್ದೆಯ ಪ್ರಕಾರ ಈ ಎಲ್ಲಾ ಗ್ರಾಮಗಳಿಗೆ ಸುಮಾರು ಬೆಳ್ಳೂರು ಹೋಬಳಿ, ಕಸಬಾ ಹೋಬಳಿ, ದೇವಲಾಪುರ ಹೋಬಳಿ, ಇಲ್ಲಿ ಎಲ್ಲಾ ಕೂಡ ಆ ರೈತರಿಗೆ ಭೂ ಪರಿಹಾರ ಕೊಡಬೇಕೆನ್ನುವುದು ನನ್ನ ಮುಖ್ಯ ಪ್ರಶ್ನೆ. ಹಾಗಾಗಿ ಒಂದು ಇನ್ನು ಮುಂದಾದರೂ ಕೂಡ ರೈತರ ಗಮನಕ್ಕೆ ತರದೇ ಅಥವಾ ನೋಟಿಫಿಕೇಷನ್ ಆಗದೇ ಏನು ಒಂದು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಾರಲ್ಲಾ ಅದು ನಿಲ್ಲಬೇಕು. ನಾವು ಎಲ್ಲಿ ಇದ್ದೇವೆ? ಪ್ರಜಾಪ್ರಭುತ್ವದಲ್ಲಿದ್ದೇವೋ ಅಥವಾ ಎಲ್ಲಾದರೂ ನಾವು ನಿರಂಕುಶ ತತ್ವದಲ್ಲಿದ್ದೇವೋ ಅರ್ಥವಾಗುತ್ತಿಲ್ಲ. ಇನ್ನು ಮುಂದೆ ಆದರೂ ಕೂಡ ಯಾವುದೇ ರೈತರಿಂದಾಗಲಿ ಅವರಿಂದ ಕಾನೂನಿನ ಪ್ರಕಾರ ಸಾರ್ವಜನಿಕ ಉದ್ದೇಶಕ್ಕೋಸ್ಕರ ಸ್ವಾಧೀನಪಡಿಸಿಕೊಂಡ ಜಮೀನಿಗೆಮಾರುಕಟ್ಟೆ ಬೆಲೆಯಲ್ಲಿ ಅವರಿಗೆ ಹಣ ಬಿಡುಗಡೆಯಾಗಬೇಕೆಂದು ತಮ್ಮ ಮುಖಾಂತರ ಮಾನ್ಯ ಕಂದಾಯ ಸಚಿವರು ಮತ್ತು ನೀರಾವರಿ ಇಲಾಖಾ ಅಧಿಕಾರಿಗಳನ್ನು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮನಿರ್ದೇಶಿತರು):** ಮಾನ್ಯ ಸಭಾಪತಿಯವರೆ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸದಸ್ಯರಾದಂತಹ ಮಾನ್ಯ ಅಪ್ಪಾಜಿ ಗೌಡರು ಹೇಳಿರುವಂತಹ ಪ್ರಶ್ನೆಗಳಿಗೆ ಪೂರಕವಾಗಿ ಈ ರೀತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಲ್ಲಿ ರಾಜ್ಯದಲ್ಲಿ ಹಲವಾರು ಜಿಲ್ಲೆಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವ ಸಲುವಾಗಿ ಗ್ರಾಮೀಣಾಭಿವೃದ್ಧಿ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ಜಲಸಂಪನ್ಮೂಲ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ ಮುಂತಾದವುಗಳು, ರಸ್ತೆ ನಿರ್ಮಾಣ, ಕಟ್ಟಡ ನಿರ್ಮಾಣ, ನೀರಾವರಿ ಅಣೆಕಟ್ಟು ಮತ್ತು ಕಾಲುವೆಗಳನ್ನು ನಿರ್ಮಾಣ ಮಾಡುವುದಕ್ಕೋಸ್ಕರವಾಗಿ ಕಳೆದ 40–50 ವರ್ಷಗಳಿಂದಲೂ ಕೂಡ ರೈತರ ಮತ್ತು ಸಾರ್ವಜನಿಕರ ಭೂಮಿಯನ್ನು ಮತ್ತು ಜಮೀನನ್ನು ವಶಪಡಿಸಿಕೊಂಡಿದ್ದೇವೆ. ಮಾನ್ಯ ಸಭಾಪತಿಯವರೆ, ಇದಕ್ಕೆ ಸಂಬಂಧಪಟ್ಟಂತೆ ಹಳೆಯ ಭೂಸ್ವಾಧೀನ ಕಾಯ್ದೆ 1894ರಡಿ, ಸೆಕ್ಷನ್ 4(1)ರಡಿಯಲ್ಲಿ ಮತ್ತು ಸೆಕ್ಷನ್ 6(1)ರಡಿಯಲ್ಲಿ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆ ಹೊರಡಿಸಿ ತೀರ್ಪನ್ನು ಕೂಡ ಕೊಟ್ಟಿರುತ್ತಾರೆ. ಎಷ್ಟೋ ಪ್ರಕರಣಗಳಲ್ಲಿ ಅವಾರ್ಡ್ ಪಾಸ್ ಆಗಿದ್ದರೆ payment ಆಗಿರುವುದಿಲ್ಲ ಅಥವಾ ಅವಾರ್ಡ್ ಕೂಡ ಪಾಸ್ ಆಗಿಲ್ಲ. ಇನ್ನೂ ಕೆಲವು ಪ್ರಕರಣಗಳಲ್ಲಿ ಊರಿನ ಅಭಿವೃದ್ಧಿ ಸಲುವಾಗಿ ಗ್ರಾಮಸ್ಥರ ಒತ್ತಾಯದ ಮೇರೆಗೆ ಆವತ್ತಿನ ಪರಿಸ್ಥಿತಿಗೆ ಅನುಗುಣವಾಗಿ ಆಸ್ಪತ್ರೆ ಕಟ್ಟುವ ಸಲುವಾಗಿ, ಶಾಲೆ ಕಟ್ಟಡ ಕಟ್ಟುವ ಸಲುವಾಗಿ ಎಷ್ಟೋ ಜನರು ಈ ಭೂಸ್ವಾಧೀನ ಪ್ರಕ್ರಿಯೆ ಮುಂದಿನ ದಿನಗಳಲ್ಲಿ ಆಗುತ್ತದೆ, ಪರಿಹಾರ ದೊರೆಯುತ್ತದೆ ಎನ್ನುವ ಸಲುವಾಗಿ ಜಮೀನನ್ನು ಬಿಟ್ಟುಕೊಟ್ಟಿದ್ದಾರೆ. ಇದುವರೆಗೂ ಸಹ ಅಂತಹ ಪ್ರಕರಣಗಳಲ್ಲಿ ಯಾವುದೇ ರೀತಿಯಾದಂತಹ ಭೂಸ್ವಾಧೀನ ಪ್ರಕರಣವಾಗಲಿ ಅಥವಾ ಭೂಸ್ವಾಧೀನ ಪ್ರಕರಣ ಮಾಡಿದ್ದರೂ ಕೂಡ ಪರಿಹಾರ ಕೊಟ್ಟಿಲ್ಲ. ಈಗ ಭೂಸ್ವಾಧೀನ ಕಾಯ್ದೆ 1894 ನಿಷ್ಕ್ರಿಯವಾಗಿದೆ, ಅಂದರೆ lapse ಆಗಿದೆ. ಹೊಸದಾಗಿ ಭೂಸ್ವಾಧೀನ ಪ್ರಕ್ರಿಯೆ ಬಂದಿದೆ. ಈ ಭೂಸ್ವಾಧೀನ ಪ್ರಕ್ರಿಯೆ ಬಂದಮೇಲೆ ಹಳೆಯ ಭೂಸ್ವಾಧೀನ ಪ್ರಕ್ರಿಯೆ ಪ್ರಕಾರವಾಗಿ ಏನೆಲ್ಲಾ ಭೂಸ್ವಾಧೀನ ಪ್ರಕರಣಗಳನ್ನು ಮಾಡಿದ್ದರೂ ಅವೆಲ್ಲಾ ಕೂಡ ಕಾಯ್ದೆ ನಿಷ್ಕ್ರಿಯವಾಗಿರುವುದರಿಂದ lapse ಆಗಿದೆ. ಹಾಗಾದರೆ ಇದಕ್ಕೆ ಪರಿಹಾರವೇನು? ಇತ್ತೀಚೆಗೆ ಕಳೆದ ವರ್ಷ 5 ನ್ಯಾಯಮೂರ್ತಿಗಳನ್ನೊಳಗೊಂಡಂತಹ ಪೀಠವೊಂದು ಮಹತ್ವದ ತೀರ್ಪು ಕೊಟ್ಟಿದೆ. ಹೊಸ ಭೂಸ್ವಾಧೀನ ಕಾಯ್ದೆಯಡಿ ಸೆಕ್ಷನ್ 24(2)ರಡಿಯಲ್ಲಿ ಇದು ಯಾರಿಗೆ ಅನ್ವಯವಾಗುತ್ತದೆ ಎಂದರೆ ಹಳೆಯ ಕಾಯ್ದೆಯಡಿಯಲ್ಲಿ ಎಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿ ಅವಾರ್ಡ್ ಪಾಸ್ ಆಗಿದೆ ಮತ್ತು ಇಂತಹ ಪ್ರಕ್ರಿಯೆ ಈ ಹೊಸ ಕಾಯ್ದೆ ಬರುವುದಕ್ಕಿಂತ 5 ವರ್ಷಗಳಿಗಿಂತ ಮುಂಚೆ ಇಂತಹ ಪ್ರಕ್ರಿಯೆ ಆಗಿದ್ದರೆ ಮಾತ್ರ ಅನ್ವಯವಾಗುತ್ತದೆ. ಬಾಕಿಯದ್ದಕ್ಕೆ ಅನ್ವಯವಾಗುವುದಿಲ್ಲವೆಂದು ಬಂದಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹಾಗಾದರೆ ಇಂತಹ ಪ್ರಕರಣಗಳಲ್ಲಿ ಯಾವ ರೀತಿಯಾಗಿ ಈ ನಾಗಮಂಗಲ ತಾಲ್ಲೂಕಿನಲ್ಲಿ ರೈತರಿಗೆ ಪರಿಹಾರ ಕೊಡುತ್ತಾರೆ, ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಸಾಕಷ್ಟು ಪೇಪರ್‌ಗಳಲ್ಲಿ ಬಂದಿದೆ. ಸಾಕಷ್ಟು ಕಡೆಗಳಲ್ಲಿ ಇದೆಲ್ಲವೂ ಕೂಡ ಗಲಾಟೆಯಾಗಿದೆ, ಜಮೀನನ್ನು ಕಳೆದುಕೊಂಡಂತಹ ರೈತರು ಹೋಗಿ ಗಲಾಟೆ ಮಾಡಿದ್ದಾರೆ, ತಾಲ್ಲೂಕು ಆಫೀಸ್ ಮುಂದೆ ಗಲಾಟೆ ಮಾಡಿದ್ದಾರೆ, ಡಿ.ಸಿ.ಆಫೀಸ್ ಮುಂದೆ ಗಲಾಟೆ ಮಾಡಿದ್ದಾರೆ, ಇದಕ್ಕೆ ಯಾವುದೇ ರೀತಿಯಾದಂತಹ ಪರಿಹಾರ ಸಿಕ್ಕಿಲ್ಲ. ಆದ್ದರಿಂದ, ನಮ್ಮ ಕೋರಿಕೆಯಿಷ್ಟೆ, ದಯಮಾಡಿ ಹೊಸ ಕಾಯ್ದೆ ಪ್ರಕಾರವಾಗಿ ಹೊಸದಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿ ಹೊಸ ಕಾಯ್ದೆಯಲ್ಲಿ ಪರಿಹಾರ ಕೊಡಿಸುವಂತಹ ಕ್ರಮವನ್ನು ಸರ್ಕಾರ ವಹಿಸಬೇಕೆಂದು ಹೇಳಿ ತಮ್ಮ ಮೂಲಕ ಕೋರುತ್ತೇನೆ.

**ಸಭಾಪತಿಯವರು:** ಸರ್ಕಾರ ಮೊದಲು ಉತ್ತರ ಕೊಡಲಿ. ಮಂತ್ರಿಗಳು ಉತ್ತರ ಕೊಡಲಿ. ಮಂತ್ರಿಗಳನ್ನು ಕರೆಸಿ. ಅಲ್ಲಿಯವರೆಗೆ ನೀವು ಮಾತನಾಡಿ. ಅವರು ಬರುವವರೆಗೆ ನಿಮಗೆ ಕೊಟ್ಟಿದ್ದೇನೆ ಅಷ್ಟೆ.

**ಶ್ರೀ ಎಂ.ಎ. ಗೋಪಾಲಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ನೀವು ನಮ್ಮ ಪರವಾಗಿ ಇರಬೇಕು. ಈಗಾಗಲೇ ಮಾನ್ಯ ಅಪ್ಪಾಜಿ ಗೌಡರು ಹಾಗೂ ಮಾನ್ಯ ತಿಪ್ಪೇಸ್ವಾಮಿಯವರು ಮಾತನಾಡಿದ ಹಾಗೆ ನಮ್ಮ ಹಾಸನ ಜಿಲ್ಲೆಯಲ್ಲಿ ಕೂಡ ಈಗ 6–8 ವರ್ಷಗಳ ಕಾಲ ಏತನೀರಾವರಿಯ ಕೆಲಸ ನಡೆಯುತ್ತಿದೆ. ಪ್ರತಿಯೊಂದು ಕೂಡ ರೂ.8–12 ಕೋಟಿಗಳವರೆಗೆ ಏತನೀರಾವರಿಯಲ್ಲಿ ರೈತರಿಗೆ ಹಣ ಬಿಡುಗಡೆ ಮಾಡಬೇಕಾಗಿದ್ದೆ, ಆದರೆ, ಗುತ್ತಿಗೆದಾರರು ರೂ.40–50 ಕೋಟಿಗಳಿರಲಿ, ಗುತ್ತಿಗೆದಾರರಿಗೆ 80%, 90% ಹಣ ಬಿಡುಗಡೆಯಾಗುತ್ತದೆ. ಆದರೆ, ರೈತರು ಯಾರೂ ಕೂಡ ಗುತ್ತಿಗೆದಾರರಾಗುವುದಿಲ್ಲ. ನಾನೇ ಕೂಡ ನನ್ನ ಜಮೀನಿನಲ್ಲಿ 30 ಗುಂಟೆ ಜಮೀನಿನಲ್ಲಿ ಅವಕಾಶ ಮಾಡಿಕೊಟ್ಟಿದ್ದೇನೆ, ನಾಲ್ಕು ವರ್ಷಗಳಾಗಿದೆ, ಅದನ್ನು ಸ್ಕೆಚ್ ಮಾಡಿದ್ದರೂ ಕೂಡ ಡಿ.ಸಿ. ಆಫೀಸ್‌ನಲ್ಲಿ, SLAO ಕೂಡ ಕೆಲಸ ಮಾಡುವುದಿಲ್ಲ. ದಯವಿಟ್ಟು ಇದರಿಂದ ರೈತರಿಗೆ ಘೋರ ಅನ್ಯಾಯವಾಗುತ್ತಿದೆ. ಏನು ಗುತ್ತಿಗೆದಾರರು ಏತನೀರಾವರಿ ಯೋಜನೆಯಲ್ಲಿ ಕಾಲುವೆಗಳನ್ನು ಮಾಡುತ್ತಾರೆ, ಅದಕ್ಕೆ ಸಮನಾಗಿ ರೈತರಿಗೆ ಹಣ ಬಿಡುಗಡೆ ಮಾಡುವ ಬಗ್ಗೆ ಕೇಳಬೇಕಾದರೆ ಮಾನ್ಯ ಕಂದಾಯ ಸಚಿವರು ಕೂಡ ಇಲ್ಲಿಯೇ ಇದ್ದಾರೆ. ಸರ್ಕಾರದಲ್ಲಿ ಕೂಡ ಕೆಲಸವಾಗುವಂತಹದ್ದು ಆಗಬೇಕು ಮತ್ತು ಜಲಸಂಪನ್ಮೂಲ ಸಚಿವರ ಪರವಾಗಿ ಕೇಳುವುದಾದರೆ ಈಗ ಮಾನ್ಯ ಮುಖ್ಯಮಂತ್ರಿಗಳೇ ಆಗಿರುವುದರಿಂದ ಒಳ್ಳೆಯ ಉತ್ತರ ಕೊಟ್ಟು ಖಂಡಿತ ಈ ರೈತರಿಗೆ ಹಣ ಬಿಡುಗಡೆ ಮಾಡುವುದಕ್ಕೆ ದಯವಿಟ್ಟು ಸುಮಾರು 10 ವರ್ಷಗಳಿಂದ ಬಾಕಿಯಿದೆ,

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಸನದಲ್ಲಿ ಹೆಚ್ಚು-ಕಡಿಮೆ ಸುಮಾರು ರೂ.30-35 ಕೋಟಿಗಳು ಬರುತ್ತದೆ. 8-10 ಏತನೀರಾವರಿ ಯೋಜನೆಗಳಿವೆ. ಅದರ ಜೊತೆಗೆ ನಮ್ಮ ಅಪ್ಪಾಜಿ ಗೌಡರು ಹೇಳಿದ ಹಾಗೆ ಅಲ್ಲಿಯೂ ಕೂಡ ಇದೆ. ಇದಕ್ಕೆ ಮಾನ್ಯ ಕಂದಾಯ ಸಚಿವರು ಹಾಗೂ ಜಲಸಂಪನ್ಮೂಲ ಸಚಿವರು ಮುಖ್ಯಮಂತ್ರಿಗಳೇ ಆಗಿದ್ದಾರೆ. ರೈತರಿಗೆ ಹಣ ಬಿಡುಗಡೆಗೊಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):** ಮಾನ್ಯ ಸಭಾಪತಿಗಳೆ, ನಮ್ಮ ಅಪ್ಪಾಜಿಗೌಡರು ಮತ್ತು ತಿಪ್ಪೇಸ್ವಾಮಿಯವರು ಅತ್ಯಂತ ಮಹತ್ವದ ವಿಚಾರವನ್ನು ನಿಯಮ-68ರಡಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನೂ ಕೂಡ ಅದೇ ಭಾಗದವನಾಗಿದ್ದೇನೆ. ನನಗೆ ಈ ರೀತಿಯ ರೈತರ ಬಗೆಗಿನ ಅನ್ಯಾಯವನ್ನು ನಾನು ನೋಡಿಲ್ಲ. ಕಾರಣ, ಇವರು 2004ನೇ ಸಾಲಿನಲ್ಲಿ ಪ್ರಕ್ರಿಯೆ ಪ್ರಾರಂಭ ಮಾಡುತ್ತಾರೆ. 2006ನೇ ಸಾಲಿನಲ್ಲಿ ಸುಮಾರು 13 ಎಕರೆ 17 ಗುಂಟೆ ಜಮೀನನ್ನು ರೈತರಿಂದ ಭೂಸ್ವಾಧೀನ ಪ್ರಕ್ರಿಯೆಯಿಲ್ಲದೇ ನಾಲಾ ಕಾಮಗಾರಿಗಳನ್ನು ಮಾಡಿಬಿಡುತ್ತಾರೆ. ಟೆಂಡರ್ ಕರೆಯುತ್ತಾರೆ, ಕಾಮಗಾರಿ ಮುಗಿಸುತ್ತಾರೆ. ಯಾರು ಗುತ್ತಿಗೆದಾರರು ಬರುತ್ತಾರೆ ಅವರ ಬಿಲ್ ಪೇಮೆಂಟ್ ಸಹ ಮಾಡುತ್ತಾರೆ. ಆದರೆ, ರೈತರಿಗೆ ಮಾತ್ರ acquisition process ಮಾಡುವುದಿಲ್ಲ.

**(ಮಂದು)**

**(505) 18.03.2021 05.10 ಎಸ್‌ವಿ-ಜಿಆರ್**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ಇದು 2006ರಲ್ಲಿ ನಾಲೆಯಾಗುತ್ತದೆ. ಟೆಂಡರ್ ಪ್ರಕ್ರಿಯೆಯಾಗುತ್ತದೆ, ಕಾಮಗಾರಿಯೂ ಆಗುತ್ತದೆ. 2011ರಲ್ಲಿ ಜಿಲ್ಲಾಧಿಕಾರಿಯವರು ಗೆಜೆಟ್ ಅಧಿಸೂಚನೆಯನ್ನು ಹೊರಡಿಸುತ್ತಾರೆ. 2019ರಲ್ಲಿ ಅಂತಿಮ ಗೆಜೆಟ್ ಅಧಿಸೂಚನೆ ಮಾಡಲಾಗುತ್ತದೆ. ಇದೇನು ಅನ್ಯಾಯ ಎಂದು ನನಗೆ ಅರ್ಥವಾಗುತ್ತಿಲ್ಲ. ನಾಲೆಗೆ ನೀರು ಹೋಗುತ್ತಿದೆ. ನಾಲೆಯ ಕೆಳಭಾಗದವರು ಆನಂದವಾಗಿ ಕೆರೆ ತುಂಬಿಸಿಕೊಂಡು ಜಮೀನಿನಲ್ಲಿ ಭತ್ತ ಬೆಳೆಯುತ್ತಿದ್ದಾರೆ. ಈ ಹತ್ತಾರು ಊರುಗಳ ರೈತರು ಏನಾಗಬೇಕು? ನಾವು ಹೋದಾಗಲೆಲ್ಲಾ ಅದನ್ನೇ ಕೇಳುತ್ತಾರೆ. ನಮ್ಮ ಭೂಮಿಯನ್ನು ನಾಲೆ ಮಾಡಿಕೊಂಡು ನಮಗೆ ಪರಿಹಾರವನ್ನು ನೀಡಿರುವುದಿಲ್ಲ ಎಂದು ಹೇಳುತ್ತಾರೆ. ಹೊಸ ಭೂಸ್ವಾಧೀನ ಕಾಯ್ದೆಯ ಪ್ರಕಾರ ಹೊಸ ದರವನ್ನು ರೈತರಿಗೆ ಕೊಡಬೇಕು. ಆಗುವುದಿಲ್ಲ ಎಂದರೆ 2004, 2006ರಿಂದ ಬಡ್ಡಿ ಸಮೇತ ನೀಡಬೇಕು ಎಂಬುದು ನಮ್ಮ ಮನವಿ. ರೈತರ ಜಮೀನನ್ನು ಹೇಳದೆ ಕೇಳದೆ ಸ್ವಾಧೀನಕ್ಕೆ ತೆಗೆದುಕೊಂಡು ಏನು ಕಾಮಗಾರಿಯನ್ನು ಮಾಡಿದರೋ, ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಿನಾಂಕದಿಂದ ಬಡ್ಡಿಯೊಂದಿಗೆ ಅಂದಿನ ದರ ನೀಡಬೇಕು. ಆಗಲಿಲ್ಲ ಎಂದರೆ ಹೊಸ ಭೂಸ್ವಾಧೀನ ದರವನ್ನು ನೀಡಬೇಕು. ರೈತರಿಗೆ ನ್ಯಾಯ ದೊರೆಯಬೇಕು. ಮಾನ್ಯ ಕಂದಾಯ ಸಚಿವರು ನೀರಾವರಿ ಇಲಾಖೆಯವರೊಂದಿಗೆ ಮಾತನಾಡಿ ಈ ರೈತರಿಗೆ ನ್ಯಾಯವನ್ನು ಕೊಡಿಸಬೇಕೆಂದು ನಾನು ಆಗ್ರಹಿಸುತ್ತೇನೆ.

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಅಪ್ಪಾಜಿಗೌಡರು ನಿಯಮ 68ರ ಅಡಿಯಲ್ಲಿ ಚರ್ಚೆ ಮಾಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ಹೇಮಾವತಿ ಜಲಾಶಯ ಯೋಜನೆಗಾಗಿ ಸ್ವಾಧೀನವಾಗಿರುವ ಜಮೀನಿನ ಬಗ್ಗೆ ನಾಗಮಂಗಲ ಶಾಖಾ ನಾಲೆಯಲ್ಲಿ ಒಟ್ಟು 23 ಹಳ್ಳಿಗಳು ಒಳಪಟ್ಟಿರುತ್ತವೆ. ಅದಕ್ಕೆ ರೂ.8,65,53,885/– ಹಣ ಅವಶ್ಯಕತೆ ಇದ್ದು, ಅದರಲ್ಲಿ ರೂ. 1 ಕೋಟಿಯನ್ನು ಬಿಡುಗಡೆ ಮಾಡಲಾಗಿದೆ. ಕಳೆದ ಬಾರಿಯ ಆಯವ್ಯಯದಲ್ಲಿ ಅದಕ್ಕೆ ಹಣವನ್ನು ಕೊಟ್ಟಿರಲಿಲ್ಲ. ಈ ಬಾರಿಯ ಆಯವ್ಯಯದಲ್ಲಿ ಇದಕ್ಕಾಗಿ ಹಣ ಕೊಡಲಾಗಿದೆ. ತಕ್ಷಣ ಜಿಲ್ಲಾಧಿಕಾರಿಗಳು ನೇರ ಖರೀದಿ ಮುಖಾಂತರ ನಿಗದಿ ಮಾಡಿರುವ ಬೆಲೆಯನ್ನು ಬಿಡುಗಡೆ ಮಾಡುವುದಕ್ಕೆ ನೀರಾವರಿ ಇಲಾಖೆಯವರು ಒಪ್ಪಿದ್ದಾರೆ. ಹಣವನ್ನು ಬಿಡುಗಡೆ ಮಾಡಲಾಗುವುದು.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಚಿವರೇ, ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಹಳ್ಳಿಗಳೂ ಸೇರುತ್ತವೆ.

**ಶ್ರೀ ಆರ್.ಅಶೋಕ್:–** ಮಾನ್ಯ ಗೋಪಾಲಸ್ವಾಮಿಯವರೇ, ಅದು ಸಹ ನೇರ ಖರೀದಿಯಾಗಿದ್ದು, ಹಣ ಬಿಡುಗಡೆ ಮಾಡುವುದಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ನೀಡುತ್ತೇನೆ.

**ಶ್ರೀ ಎಸ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಹಾಗೆಯೇ ಜಿಲ್ಲಾಧಿಕಾರಿಗಳು ಒಂದು ಗುಂಟೆಗೆ ರೂ.30,000/–ಗಳನ್ನು ನಿಗದಿ ಪಡಿಸಿದ್ದಾರೆ. ಇದು ಬಹಳ ಕಡಿಮೆ ದರವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಬೆಳ್ಳೂರಿನ ರಾಷ್ಟ್ರೀಯ ಹೆದ್ದಾರಿ ಹಾದು ಹೋಗಿರುವ ಜಾಗದಲ್ಲಿ ಒಂದು ಎಕರೆಗೆ ಸುಮಾರು ಒಂದರಿಂದ ಎರಡು ಕೋಟಿ ರೂಪಾಯಿ ಬೆಲೆಯಿದೆ. ಆಗಿನ ಜಿಲ್ಲಾಧಿಕಾರಿಗಳು ಬಹಳ ಕಡಿಮೆ ದರವನ್ನು ನಿಗದಿ ಪಡಿಸಿದ್ದಾರೆ. ಮಾನ್ಯ ಶ್ರೀಕಂಠೇಗೌಡರು ಹೇಳಿದಂತೆ ಭೂಸ್ವಾಧೀನವಾದಾಗಿನಿಂದ ಬಡ್ಡಿ ಸಹಿತ ದರ ಅಥವಾ ಇಂದಿನ ಮಾರುಕಟ್ಟೆ ದರವನ್ನಾದರೂ ಕೊಡಿಸಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ಮನವಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಇದನ್ನು ರೈತರಿಂದ ನೇರವಾಗಿ ಖರೀದಿ ಮಾಡಿರುವುದರಿಂದ, ಜಿಲ್ಲಾಧಿಕಾರಿಗಳು ರೈತರ ಜೊತೆ ಮಾತನಾಡಿ ಮಾಡಿರುತ್ತಾರೆ. ಮತ್ತೊಮ್ಮೆ ನಾನು ರೈತರೊಂದಿಗೆ ಮಾತನಾಡಿ ಕ್ರಮ ಕೈಗೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಹೇಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಚಿವರೇ, ಇದು 2004 ರಲ್ಲಿಯೇ ಮಾಡಲಾಗಿದ್ದು, 2006ರಲ್ಲಿ ಕೈಗೆ ತೆಗೆದುಕೊಳ್ಳಲಾಗಿದೆ. ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಿರುವುದಿಲ್ಲ. 2011ರಲ್ಲಿ ಗೆಜೆಟ್ ಅಧಿಸೂಚನೆಯನ್ನು ಹೊರಡಿಸಲಾಗುತ್ತದೆ. 2019ಕ್ಕೆ ಅಂತಿಮ ಗೆಜೆಟ್ ಅಧಿಸೂಚನೆಯನ್ನು ಹೊರಡಿಸಲಾಯಿತು.

**ಶ್ರೀ ಆರ್.ಅಶೋಕ್:–** ಮಾನ್ಯ ಶ್ರೀಕಂಠೇಗೌಡರೇ, ನೀವು ಈಗ ನಮಗೆ ಹೇಳಿದ್ದೀರಿ. ನಾನು ನೀರಾವರಿ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಉಳಿದ ಹಣ ಕೊಡುವುದಕ್ಕೆ ಏನೂ ಸಮಸ್ಯೆಯಿಲ್ಲ. ಸುಮಾರು ರೂ.200 ಕೋಟಿಗೂ ಹೆಚ್ಚು ಹಣ ಈ ಬಾರಿಯ ಆಯವ್ಯಯದಲ್ಲಿ ಬಂದಿದೆ ಎಂದು ಹೇಳಿದ್ದಾರೆ. ಹಣವನ್ನು ಕೊಡುತ್ತೇವೆ. ಎಲ್ಲಾ ಜಿಲ್ಲೆಗಳಿಗೂ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿಯೇ ದರವನ್ನು ನಿಗದಿ ಪಡಿಸಲಾಗುತ್ತದೆ. ಅದಕ್ಕಾಗಿ ನಾನು ಜಿಲ್ಲಾಧಿಕಾರಿಗಳೊಂದಿಗೂ ಮಾತನಾಡುತ್ತೇನೆ. ರೈತರಿಗೆ ಹೆಚ್ಚಿನ ಪರಿಹಾರವನ್ನು ನೀಡಲು ಎಷ್ಟು ಸಾಧ್ಯವೋ ಅದನ್ನು ಕೊಡಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಬಹಳ ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಅವರಲ್ಲಿ ನನ್ನ ಒಂದು ವಿನಂತಿಯೇನೆಂದರೆ ಈ ರೈತರಿಗೆ ಸುಮಾರು 2012ರಿಂದ ಎಂಟು ವರ್ಷಗಳ ಕಾಲ ಭೂಸ್ವಾಧೀನ ಪ್ರಕ್ರಿಯೆ ನಡೆದು ಬಹಳ ಅನ್ಯಾಯವಾಗಿದೆ. ಜಿಲ್ಲಾಧಿಕಾರಿಗಳು ಯಾವ ಸಂದರ್ಭದಲ್ಲಿ ಇದನ್ನು ನೇರ ಖರೀದಿ ಮಾಡಿದರು ಎನ್ನುವ ಬಗ್ಗೆ ಮಾನ್ಯ ಸಚಿವರ ಉತ್ತರದಲ್ಲಿ ಸ್ಪಷ್ಟ ಮಾಹಿತಿಯಿಲ್ಲ. ದಯಮಾಡಿ ಜಿಲ್ಲಾಧಿಕಾರಿಗಳ ಜೊತೆಯಲ್ಲಿ, ಸಂಬಂಧಪಟ್ಟ ರೈತರ ಜೊತೆಯಲ್ಲಿ ಹಾಗೂ ಸ್ಥಳೀಯ ಶಾಸಕರಾದ ಮಾನ್ಯ ಅಪ್ಪಾಜಿಗೌಡರೊಂದಿಗೆ ಶೀಘ್ರವಾಗಿ ಸಮಾಲೋಚನೆ ನಡೆಸಿ ಇಷ್ಟು ವಿಳಂಬವಾಗಿ ಪರಿಹಾರವನ್ನು ನೀಡುತ್ತಿರುವುದರಿಂದ ಬಡ್ಡಿ ಸೇರಿಸಿ ನೀಡಲು ಜಿಲ್ಲಾಧಿಕಾರಿಗಳು ಕಾನೂನಿನಡಿಯಲ್ಲಿ ಅವಕಾಶ ಮಾಡುವಂತೆ ತಾವು ಮಾಡಬೇಕು. ಈ ಪ್ರಕರಣವನ್ನು ಮತ್ತೊಂದಿಷ್ಟು ದಿನ ಮುಂದೆ ಹಾಕುವುದು ಬೇಡ. ಜಿಲ್ಲಾಧಿಕಾರಿಗಳ ಜೊತೆಯಲ್ಲಿ ರೈತರು ಹಾಗೂ ಸ್ಥಳೀಯ ಶಾಸಕರ ಸಭೆ ಮಾಡಿ ಕೂಡಲೇ negotiate ಮಾಡಬೇಕು. ರೈತರ ಅನಿಸಿಕೆ, ಬೇಡಿಕೆ ಏನೆಂದರೆ ಸರ್ಕಾರದಿಂದ ನಮಗೆ ಇನ್ನೂ ಹೆಚ್ಚಿನ ಪರಿಹಾರ ಬರಬೇಕು. ಭೂಮಿಯನ್ನು ಕಳೆದುಕೊಂಡು ನಮ್ಮ ಜೀವನ ಕಷ್ಟವಾಗಿದೆಯೆಂದು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಿದ್ದಾರೆ. ಮಾನ್ಯ ಸಚಿವರು ಸಹಾನುಭೂತಿಯಿಂದ ಹೇಳಿದ್ದಾರೆ. ಜಿಲ್ಲಾಧಿಕಾರಿಗಳಿಗೆ ಸರ್ಕಾರ ಕೂಡ ಶಿಫಾರಸ್ಸು ಮಾಡಿ ಯಾವುದಾದರೂ ನಿಯಮಾವಳಿಯ ಅಡಿಯಲ್ಲಿ ಅವರಿಗೆ ಹೆಚ್ಚಿನ ಬಡ್ಡಿ ಅಥವಾ ದರವನ್ನು enhance ಮಾಡಿ ಪರಿಹಾರವನ್ನು ಕೊಡುವಲ್ಲಿ negotiate ಮಾಡಬೇಕು. ಅದನ್ನು ಎಷ್ಟು ಸಮಯದೊಳಗಾಗಿ ಮಾಡಲಾಗುತ್ತದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ವಿಳಂಬವಾಗುವುದು ಬೇಡ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ವಿಳಂಬವಾಗುವ ಪ್ರಶ್ನೆಯಿಲ್ಲ. ಅದಕ್ಕೆ ಹಣವನ್ನು ಕೊಡುವುದಕ್ಕೆ ಆರ್ಥಿಕ ಇಲಾಖೆಯವರು ಒಪ್ಪಿ ಆಯವ್ಯಯದಲ್ಲಿ ಹಣವನ್ನು ಒದಗಿಸಲಾಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಜಿಲ್ಲೆಯ ಸಂಬಂಧಪಟ್ಟವರನ್ನು ಸಭೆ ಕರೆಯಿರಿ.

**ಶ್ರೀ ಆರ್.ಅಶೋಕ್:-** ಭೂಸ್ವಾಧೀನ ಪಡಿಸಿಕೊಳ್ಳುವಷ್ಟರಲ್ಲಿ ಕೊಟ್ಟಿಲ್ಲ ಎನ್ನುವುದಾದರೆ ಅದಕ್ಕೆ ಬಡ್ಡಿ ನೀಡಬಹುದೇ ಎನ್ನುವ ಬಗ್ಗೆ ಯಾವುದಾದರೂ ಕಾನೂನುಗಳನ್ನು ನೋಡಿ ಕ್ರಮಗಳನ್ನು ಕೈಗೊಳ್ಳಲಾಗುವುದು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, from the date of dispossession under the Land Acquisition Act, interest is liable to be paid.

**ಶ್ರೀ ಆರ್.ಅಶೋಕ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ವಕೀಲರು. ತಾವು ಹೇಳಿದ್ದನ್ನು ನಾವು ಕೇಳಬೇಕು. 15 ದಿನಗಳಲ್ಲಿ ಸಭೆಯನ್ನು ಕರೆಯಲು ಸೂಚನೆಯನ್ನು ನೀಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**7.ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು**

**ಅ)ವಿಷಯ:– 2020–21ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ 62 ನರ್ಸಿಂಗ್ ಮತ್ತು 40 ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಪ್ರಾರಂಭಿಸಲು ಅವಶ್ಯವಿರುವ ಮೂಲಭೂತ ಸೌಕರ್ಯ ಹಾಗೂ ಬೋಧಕ ಸಿಬ್ಬಂದಿಗಳ ಕೊರತೆ ಇದ್ದರೂ ಕೂಡ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿರುವ ಬಗ್ಗೆ**

* * *

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 2020–21ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ 62 ನರ್ಸಿಂಗ್ ಮತ್ತು 4 ಅಲ್ಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಪ್ರಾರಂಭಿಸಲು ಅವಶ್ಯವಿರುವ ಮೂಲಭೂತ ಸೌಕರ್ಯ ಹಾಗೂ ಬೋಧಕ ಸಿಬ್ಬಂದಿಗಳ ಕೊರತೆ ಇದ್ದರೂ ಕೂಡ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿರುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

**ಡಾ:ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಲಾಗಿದೆ)**

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## (506) 18.03.2021, 5.20 KG.GR

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಆದರೆ, ಕಾಲೇಜುಗಳಲ್ಲಿ actual ಪರಿಸ್ಥಿತಿ ಇಲ್ಲ. ಏಕೆಂದರೆ, ನಾನು ಅದೇ field ನಿಂದ ಬಂದಿದ್ದೇನೆ. ಈಗ ಉದಾಹರಣೆಗೆ, ನರ್ಸಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಅನುಮತಿ ಸಿಕ್ಕಿದೆ, ಮೂವರು ಸಿಂಡಿಕೇಟ್ ಸದಸ್ಯರು ಖುದ್ದಾಗಿ ಸಂಸ್ಥೆಗಳಿಗೆ ಭೇಟಿಕೊಟ್ಟು ನೋಡಿಕೊಂಡು ಬಂದಿದ್ದಾರೆಂದು ಮಾನ್ಯ ಸಚಿವರು ಹೇಳಿದ್ದಾರೆ. ಪ್ರತಿಕೆಗಳಲ್ಲಿ ಅನೇಕ ಅಂಶಗಳ ಪ್ರಕಾರ, ಮೂಲ ಭೂತವಾದ infrastructure ಇದೆ. ಆದರೆ, actual ಆಗಿ ಇಲ್ಲ. ಉದಾಹರಣೆಗೆ, ಕುಂದಾಪುರದ ಬಗ್ಗೆ ಹೇಳುತ್ತೇನೆ. ಅಲ್ಲಿ ಒಂದೇ ಕಟ್ಟಡದಲ್ಲಿ ಎರಡು ಕಾಲೇಜುಗಳಿವೆ. ಇಂತಹ ಪರಿಸ್ಥಿತಿಯಲ್ಲಿ ಯಾವ ರೀತಿ ಅನುಮತಿ ಕೊಡುವುದು? ಉದಾಹರಣೆಗೆ, ಒಂದು ಮೆಡಿಕಲ್ ಕಾಲೇಜಿಗೆ ಅವಕಾಶ ಕೊಡಬೇಕೆಂದರೆ, 300 ಹಾಸಿಗೆಗಳ ಆಸ್ಪತ್ರೆ ಇರಬೇಕು. ಅದು Ayurvedic College. ಎಂ.ಬಿ.ಬಿ.ಎಸ್., ಕಾಲೇಜಿಗೆ ಯಾವ ರೀತಿ ಅನುಮತಿ ಕೊಡುವುದು? ಈ ತರಹದ್ದು ಅನೇಕ ವಿಷಯಗಳು ಇವೆ. ಮಾನ್ಯ ಸಚಿವರು ಸಮರ್ಥರಿದ್ದಾರೆ ಮತ್ತು ಅವರು ಅದೇ field ನಿಂದ ಬಂದಂತಹವರಿದ್ದಾರೆ. ಡಾ|| ವಿ.ಎಸ್.ಆಚಾರ್ಯರವರು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದರು. ಅವರ ನಂತರ ಶ್ರೀ ಶರಣಪ್ರಕಾಶ್ ಪಾಟೀಲ್‌ರವರು ಇದ್ದರು. ಹಾಗಾಗಿ, ಇದೇ field ನಿಂದ ಬಂದವರು ಸಚಿವರಾಗಿರುವುದರಿಂದ, ಈ ಸಮಸ್ಯೆ ಬಹಳ ಚೆನ್ನಾಗಿ ಅರ್ಥವಾಗುತ್ತದೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಮಾನ್ಯ ಸಚಿವರು ಉತ್ತರ ಕೊಡುವುದರಲ್ಲಿ success ಆಗಿದ್ದಾರೆ. ಆದರೆ, ಮಾನ್ಯ ಸಚಿವರು ಸಮಸ್ಯೆ ಬಗೆಹರಿಸುವುದರಲ್ಲಿ ಹೆಚ್ಚು ಕಾಳಜಿಯನ್ನು ವಹಿಸಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ. Actual ಪರಿಸ್ಥಿತಿ ಬೇರೆ ಇದೆ. ಅದಕ್ಕೆ ಮಾನ್ಯ ಸಚಿವರು ಇದರ ಮೇಲೆ ಬೆಳಕು ಚೆಲ್ಲಬೇಕೆಂದು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ..

**(ಗೊಂದಲ)**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ. ದಯವಿಟ್ಟು ತಾವು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಹೇಳುವವರೆಗೂ ತಡೆದುಕೊಳ್ಳುವುದಕ್ಕೆ ಆಗುವುದಿಲ್ಲವೇ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಹೇಳುವುದಕ್ಕೂ ಮೊದಲೇ ಚರ್ಚೆ ಮಾಡುವುದು ಬೇಡವೇ? ನಾನು ಈ ವಿಷಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೇಳುತ್ತಿದ್ದೇನೆ. ಅವಕಾಶ ಇದೆಯೋ ಅಥವಾ ಇಲ್ಲವೋ ಹೇಳಿ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀ ರವಿಕುಮಾರ್‌ರವರು ಪ್ರಶ್ನೆಯನ್ನು ಕೇಳಿದ್ದಾರೆ. ಹಾಗಾಗಿ, ಸಚಿವರು ಉತ್ತರ ಕೊಡಲಿ. ತಾವು ದಯವಿಟ್ಟು ಕುಳಿತುಕೊಳ್ಳಿ ಮೊದಲು ಉತ್ತರ ಕೇಳಿ. ಏಕೆ ವಾದ ಮಾಡುತ್ತೀರಿ? ಆಮೇಲೆ ಹೇಳುತ್ತೇನೆ. ನೋಡೋಣ..

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಆ ವಿಷಯದ ಮೇಲೆ ಚರ್ಚೆ ಮಾಡುವುದು ಬೇಡವೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಆ ರೀತಿ ಕೇಳಿದರೆ ಹೇಗೆ? ತಾವು ತಿಳಿದುಕೊಳ್ಳಬೇಕು. ಇನ್ನೂ ಸಾಕಷ್ಟು ವಿಷಯಗಳು ಇವೆ..

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಈ ವಿಷಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೇಳುತ್ತಿದ್ದೇನೆ. ಅವಕಾಶ ಇದೆಯೋ ಅಥವಾ ಇಲ್ಲವೋ ಹೇಳಿ. ತಾವು ಇಲ್ಲವೆಂದರೆ, ನಾನು ಕುಳಿತುಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಉತ್ತರ ಕೊಡಲಿ. ಆಮೇಲೆ ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅಲ್ಲಿ Senate Member ಆಗಿದ್ದಾರೆ. ಅಲ್ಲಿನ ಸಿಸ್ಟಮ್, ಅಲ್ಲಿನ ವ್ಯವಸ್ಥೆ ಮತ್ತು ಯಾವ ರೀತಿ ಹೊಸ ಕಾಲೇಜಿಗೆ ಪರವಾನಿಗೆ ಕೊಡಬೇಕು ಎನ್ನುವಂತಹ ಸಂಪೂರ್ಣ ವಿವರ ಮಾನ್ಯ ಸದಸ್ಯರಿಗೆ ಗೊತ್ತಿದೆ. ಹಾಗಾಗಿ, ಅಂತಿಮವಾಗಿ ಸರ್ಕಾರಕ್ಕೆ ಬರುವಂಥದ್ದು, ಅದಕ್ಕೂ ಮುಂಚೆ 4 ಹಂತಗಳಲ್ಲಿ ವಿಶ್ವವಿದ್ಯಾನಿಲಯದ ಹಂತದಲ್ಲಿಯೇ ಸುಮಾರು ಮೂರು ಕಮಿಟಿಗಳನ್ನು ಮಾಡಿ ಮೂರು ಹಂತಗಳಲ್ಲಿಯೂ ಸಹ ಅವರು ಅಲ್ಲಿಯೇ ಸ್ಥಳ ವೀಕ್ಷಣೆಯನ್ನು ಮಾಡಿಕೊಂಡು ಎಲ್ಲಾ ವಿವರಗಳನ್ನು ನೋಡಿ ಅವರು ಪರವಾನಿಗೆಯನ್ನು ಕೊಡಬಹುದೆಂದು ಹೇಳಿ ಸರ್ಕಾರಕ್ಕೆ ಸಲ್ಲಿಸುತ್ತಾರೆ. ಯಾವುದಾದರು ನಿಖರವಾಗಿ ಒಂದೇ ಕಟ್ಟಡದಲ್ಲಿ ಎರಡು ಕಾಲೇಜುಗಳನ್ನು ನಡೆಸುತ್ತಿದ್ದಾರೆಂದು ದೂರು ಕೊಟ್ಟರೆ, ಖಂಡಿತವಾಗಿ ಅದರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದರೆ, ನಮಗೆ 101 ನರ್ಸಿಂಗ್ ಕಾಲೇಜು ಸ್ಥಾಪನೆಗೆ ಅರ್ಜಿಗಳು ಬಂದಿದ್ದರೂ ಸಹ, ಅದರಲ್ಲಿ ಸರ್ಕಾರಕ್ಕೆ ಪರವಾನಿಗೆ ಕೊಡಿ ಎಂದು ಬಂದಿರುವಂತಹ ಪ್ರಸ್ತಾವನೆ ಕೇವಲ 47. ಬಾಕಿ 54 ಅರ್ಜಿಗಳನ್ನು ಅವರ ಹಂತದಲ್ಲಿಯೇ ತಿರಸ್ಕರಿಸಿದ್ದಾರೆ. ಏಕೆಂದರೆ, ಯಾವುದೋ ಒಂದು ಲೋಪ ಇರುವುದರಿಂದ ಖಂಡಿತವಾಗಿ ಅವು ತಿರಸ್ಕಾರವಾಗಿವೆ. ಅದೇರೀತಿ Allied Science ಕಾಲೇಜು ಸ್ಥಾಪನೆಗೆ 70 ಅರ್ಜಿಗಳನ್ನು ಹಾಕಿದ್ದಾರೆ. ಆದರೆ, ಪರವಾನಿಗೆಗೆ ಪ್ರಸ್ತಾವನೆಯನ್ನು ಕೇವಲ 45 ಕ್ಕೆ  ಕಳುಹಿಸಿದ್ದೇವೆ. ಹಾಗಾಗಿ, ಯಾವುದು ಸರಿಯಿಲ್ಲವೋ ಅದನ್ನು ಅವರ ಹಂತದಲ್ಲಿಯೇ ತಿರಸ್ಕಾರ ಮಾಡಿದ್ದಾರೆ. ಆದರೂ ಸಹ, ಸರ್ಕಾರಕ್ಕೆ ಬಂದಿರುವಂತಹ ಅರ್ಜಿಗಳಲ್ಲಿ ಯಾವುದಾದರೂ ಸರಿಯಿಲ್ಲವೆಂದು ಮಾನ್ಯ ಸದಸ್ಯರ ಗಮನಕ್ಕೆ ಇದ್ದರೆ, ಆ ಬಗ್ಗೆ ಮಾಹಿತಿಯನ್ನು ಖಂಡಿತವಾಗಿಯೂ ಕೊಡಲಿ. ಸರ್ಕಾರ  ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಸಾಕಷ್ಟು ಒಳ್ಳೆಯ ಕಾಲೇಜುಗಳಿಗೆ ಕೊಟ್ಟಿದ್ದಾರೆ. ಆದರೆ, ಅನೇಕ ಕಾಲೇಜುಗಳಿಗೆ ಕೊಡುವಂತಹ ಅವಶ್ಯಕತೆ ಇರಲಿಲ್ಲ. ಆದರೂ ಸಹ, ಕೊಟ್ಟಿದ್ದಾರೆ. ಬಹುಶಃ ವರದಿ ಕೊಟ್ಟಿರುವುದರೊಳಗೆ ಸದಸ್ಯರು ಯಾವ ರೀತಿ ಮಾರಿಹೋಗಿಬಿಟ್ಟು ಅನುಮತಿ ಕೊಡಬೇಕೆಂದು ಸರ್ಕಾರಕ್ಕೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಹೇಳಿದ್ದಾರೆಂದು ನನಗೆ ಗೊತ್ತಿಲ್ಲ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(507) 18–03–2021(5–30)ಎಂವಿ–ವಿಕೆ**

**ಶ್ರೀ ಎಸ್.ರವಿಕುಮಾರ್ (ಮುಂದು):–**

ಉದಾಹರಣೆಗೆ; ನರ್ಸಿಂಗ್ ಕಾಲೇಜುಗಳಲ್ಲಿ ಪರೀಕ್ಷೆಯನ್ನು ಮನೆಯಲ್ಲಿ ಕುಳಿತುಕೊಂಡು ಬರೆಯುವಂತಹ ಪರಿಸ್ಥಿತಿ ಇದೆ. ವಿದ್ಯಾರ್ಥಿಗಳು ಕಾಲೇಜುಗಳಿಗೆ ಬರುವುದೇ ಇಲ್ಲ. ಅವರು ಪರೀಕ್ಷೆಗೆ ಮಾತ್ರ ಬರುತ್ತಾರೆ. ಆ ರೀತಿಯ ಪರಿಸ್ಥಿತಿ ಇದೆ. ಹಾಗಾಗಿ ಕೇರಳ ರಾಜ್ಯ ಮತ್ತು ಬೇರೆ ಬೇರೆ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ನರ್ಸಿಂಗ್ ಕಾಲೇಜುಗಳಿಗೆ ಬರುತ್ತಾರೆ. ವಿಶೇಷವಾಗಿ ಮೆಡಿಕಲ್ ಕಾಲೇಜು ಮತ್ತು ನರ್ಸಿಂಗ್ ಕಾಲೇಜುಗಳ ಪರಿಸ್ಥಿತಿ ಈ ರೀತಿಯಾದರೆ, ರೋಗಿಗಳಿಗೆ ಭಾರಿ ತೊಂದರೆಯಾಗುವಂತಿದೆ. ಖಂಡಿತವಾಗಿ ಈ ವಿಷಯವನ್ನು ಮಾನ್ಯ ಆರೋಗ್ಯ ಸಚಿವರು ಅರ್ಥ ಮಾಡಿಕೊಳ್ಳುತ್ತಾರೆ. ಆ ನಿಟ್ಟಿನಲ್ಲಿ ಮಾನ್ಯ ಆರೋಗ್ಯ ಸಚಿವರು ಈ ಕಾಲೇಜುಗಳಿಗೆ ಕೊಟ್ಟಿರುವಂತಹ ಅನುಮತಿಯನ್ನು ಮತ್ತೊಂದು ಬಾರಿ ಪರಿಶೀಲಿಸುವುದಕ್ಕೆ ಏನಾದರೂ ಸಮಿತಿಯನ್ನು ಮಾಡುತ್ತಾರೆಯೆ ಎಂದು ಮಾನ್ಯ ಆರೋಗ್ಯ ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ದಯಮಾಡಿ ಗಮನ ಸೆಳೆಯುವ ಸೂಚನೆಯನ್ನು ನೋಡಿಕೊಳ್ಳಬೇಕು. "ಹೇಳಿಕೆಯನ್ನು ನೀಡಲಾದ ಕಾಲದಲ್ಲಿ ಅಂತಹ ಹೇಳಿಕೆಯ ಮೇಲೆ ಯಾವ ಚರ್ಚೆಯನ್ನು ಮಾಡತಕ್ಕದ್ದಲ್ಲ. ಆದರೆ, ಈ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಷಯವು ಯಾರ ಹೆಸರಿನಲ್ಲಿ ಇದೆಯೋ ಅಂತಹ ಪ್ರತಿಯೊಬ್ಬ ಸದಸ್ಯರು ಸ್ಪಷ್ಟವಾಗಿ ಸಭಾಪತಿಯವರ ಅನುಮತಿಯನ್ನು ಕೇಳಬೇಕು ಎಂದು ಇದೆ." ಇದನ್ನು ನೆನಪಿಟ್ಟುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ತಾವು ಇಷ್ಟೊಂದು ಬೇಸರ ಪಟ್ಟಿಕೊಂಡರೆ ನಾನು ಮಾತನಾಡುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ಬೇಸರವಲ್ಲ. ತಾವು ಎಲ್ಲದಕ್ಕೂ ವಾದ ಮಾಡಬೇಡಿ. ಈಗ ಪ್ರಶ್ನೆಯನ್ನು ಕೇಳಿ ಎಂದು ಹೇಳಿದ್ದೇನೆ. ತಾವು ಪ್ರಶ್ನೆಯನ್ನು ಕೇಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇಂತಹ ಮಹತ್ವವಾದಂತಹ ವಿಚಾರದಲ್ಲಿ ಮಾತನಾಡಬಾರದು ಎಂದರೆ, ತಾವು ಈ ಶಾಸನ ಸಭೆಗೆ ಸುಮಾರು ಏಳು ಬಾರಿ ಆರಿಸಿ ಬಂದಿದ್ದೀರಿ. ಸುಮಾರು 40 ವರ್ಷಗಳ ಕಾಲ ಎಷ್ಟು ಮಂದಿ ಸಭಾಪತಿಗಳು ಯಾವ ರೀತಿ ಸದನ ನಡೆಸಿದ್ದಾರೆಂದು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂಬುದನ್ನು ತಾವು ನೋಡಿದ್ದೀರಿ. ತಾವು ಇಂತಹ ವಿಚಾರದಲ್ಲಿ ನೀನು ಮಾತನಾಡುವುದು ಬೇಡ. ಯಾರ ಹೆಸರಿನಲ್ಲಿ ನೋಟಿಸ್ ಇದೆ ಅವರೇ ಮಾತನಾಡಬೇಕು ಎನ್ನುವುದಾದರೆ ನಾನು ಮಾತನಾಡುವುದಿಲ್ಲ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ಈಗ ತಮ್ಮ ಹೆಸರನ್ನು ಕರೆದಿದ್ದೇನೆ ಅಲ್ಲವೇ? ಈಗ ತಾವು ಮಾತನಾಡಿ. ನೋಡಿ ಮಾತನಾಡುವುದಕ್ಕೆ ಇನ್ನು ಐದು ವಿಷಯಗಳಿವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಸದನದ ಸದಸ್ಯ ಇದು ನನ್ನ ಹಕ್ಕು, ಗೊತ್ತಾಯಿತು ಅಲ್ಲವೇ? ಎಲ್ಲಾ ವಿಚಾರದ ಮೇಲೆ ಮಾತನಾಡುವುದಕ್ಕೆ ಹಕ್ಕಿದೆ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ತಾವು ಎಲ್ಲದಕ್ಕೂ ವಾದ ಮಾಡಬೇಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡುವುದಕ್ಕೆ ಕೊಡುವುದಿಲ್ಲವೆಂದರೆ ನಾನು ಮಾತನಾಡುವುದಿಲ್ಲ. ನೀವು ನನಗೆ ಕಾನೂನು ಹೇಳುತ್ತೀರಿ. ತಾವು ಏನು ಸಂದೇಶ...

**ಸಭಾಪತಿಯವರು:–** ಈಗ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಅಲ್ಲವೇ? ನಾನು ನಿಯಮಗಳ ಬಗ್ಗೆ ಹೇಳಬೇಕಾಗುತ್ತದೆ. ಹಾಗೆ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ತಾವು ಇಲ್ಲಿ ಜೋರು ಮಾಡಬೇಡಿ. ಈಗ ಮಾತನಾಡಿ ಎಂದು ಹೇಳಿದ್ದೇನೆ, ತಾವು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಿಯಮ 72ರ ಅಡಿಯಲ್ಲಿ ಮಾನ್ಯ ಎನ್.ರವಿಕುಮರ್‌ರವರು ಪ್ರಸ್ತಾಪ ಮಾಡಿರುವಂತಹ ವಿಚಾರದಲ್ಲಿ, ನಮ್ಮ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಬಹಳಷ್ಟು ತಪ್ಪುಗಳನ್ನು ಮಾಡಿದೆ. ಅದು ಉತ್ತರದಿಂದಲೇ ನಮಗೆ ಅರ್ಥವಾಗುತ್ತದೆ. ಮೊದಲನೆಯದಾಗಿ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ MCI (Medical Council of India) ನಿಯಮಗಳ ಅಡಿಯಲ್ಲಿ ಅದು ಕೆಲಸ ಮಾಡಬೇಕು. ಯಾವುದೇ ಮೆಡಿಕಲ್ ಕೋರ್ಸ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಹೊಸ ಪ್ರಸ್ತಾವನೆಗಳು ಬಂದಾಗ ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ Affiliation Committee ಇರುತ್ತದೆ. ಆ ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್‌ನಲ್ಲಿ ಚರ್ಚೆ ಮಾಡಿ, ಅದನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಕ್ಕೆ ಅವಕಾಶವಿದೆ. ಸರ್ಕಾರದ ಉತ್ತರದಲ್ಲಿ ಏನಿದೆ ಎಂದರೆ, ಸೆನೆಟ್ ಅಕಾಡೆಮಿಕ್ ಕೌನ್ಸಿಲ್ ಹಾಗೂ ವಿಷಯ ತಜ್ಞರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳಗೊಂಡಂತಹ ತಪಾಸಣಾ ತಂಡವು 60 ನರ್ಸಿಂಗ್ ಕಾಲೇಜುಗಳ ಹಾಗೂ 52 ಅಲೈಡ್ ಹೆಲ್ತ್ ಸೈನ್ಸ್ ಸಂಸ್ಥೆಗಳ ಅರ್ಜಿಯನ್ನು ಶಿಫಾರಸ್ಸು ಮಾಡಿದೆ. ಇದಾದ ಮೇಲೆ ಮತ್ತೆ ಇದನ್ನು ಒಪ್ಪಿಕೊಳ್ಳದೆ, ಸಿಂಡಿಕೇಟ್ ಸದಸ್ಯರ ಮೂರು ಮೂರು ತಂಡಗಳನ್ನು ರಚನೆ ಮಾಡುತ್ತಾರೆ. ಇದು ಯಾವುದೇ ವಿಶ್ವವಿದ್ಯಾಲಯದ ಕಾಯ್ದೆಯಲ್ಲಿ ಈ ರೀತಿಯಾಗಿ ಸಿಂಡಿಕೇಟ್ ಸದಸ್ಯರನ್ನು ಪ್ರತ್ಯೇಕವಾಗಿ ಈ ಹೊಸ ಕಾಲೇಜುಗಳಿಗೆ ಅನುಮತಿಯನ್ನು ಕೊಡುವುದಕ್ಕೆ ಅವರಿಂದ ಮತ್ತೆ ವರದಿ, ಈಗ ಒಂದು Affiliation Committee ಎಂದು ಹೇಳಿದರೆ, ಅದು Experts Committee. ಆ Experts Committee opinion ಬಗ್ಗೆ ಸಿಂಡಿಕೇಟ್‌ನಲ್ಲಿ ಏನು ಬೇಕಾದರೂ ನಿರ್ಣಯ ತೆಗೆದುಕೊಳ್ಳಬಹುದು ಮತ್ತು ಇದು ಸರಿಯಿಲ್ಲವೆಂದರೆ ತಿರಸ್ಕಾರ ಮಾಡಬಹುದು ಅಥವಾ ಮತ್ತೊಂದು ಸಮಿತಿ ಕಳುಹಿಸಿ ಅದರ ವರದಿ ತರಿಸಿಕೊಳ್ಳಬಹುದು. ಆದರೆ, ಇಲ್ಲಿ ಏನು ಮಾಡಿದ್ದಾರೆಂದರೆ, ಸಮಿತಿ ವರದಿಯನ್ನು ಸಿಂಡಿಕೇಟ್‌ನವರು ಒಪ್ಪಿಕೊಂಡ ಮೇಲೆ, ಸಿಂಡಿಕೇಟ್‌ನಲ್ಲೇ ಮೂರು ಮೂರು ಜನ ಸದಸ್ಯರನ್ನು ಪ್ರತ್ಯೇಕ ತಂಡ ಮಾಡಿ, ಸಿಂಡಿಕೇಟ್ ಆ ಮೂರು ವರದಿ ಏನು ಶಿಫಾರಸ್ಸು ಮಾಡುತ್ತಾರೆ, ಅವುಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಇದು ವಿಶ್ವವಿದ್ಯಾಲಯ ಮತ್ತು MCI ನಿಯಮಗಳಿಗೆ ವಿರುದ್ಧವಾಗಿದೆ. ಮೊದಲು ತಜ್ಞರ ತಂಡ ಏನು ಮಾಡಿದರು ಎಂದರೆ, 60 ನರ್ಸಿಂಗ್ ಕಾಲೇಜು ಮತ್ತು 52 ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳು. ಇದೆಲ್ಲವನ್ನು ಪರಿಶೀಲನೆ ಮಾಡಿ ಸರ್ಕಾರಕ್ಕೆ ಕಳುಹಿಸಿದಾಗ, ಸರ್ಕಾರ ಮತ್ತೆ ಮಾಹಿತಿ ತರಿಸಿದ್ದೇವೆಂದು ಉತ್ತರದಲ್ಲಿ ಹೇಳಿದೆ. ಈ ಎಲ್ಲಾ ಸ್ವೀಕೃತವಾದಂತಹ ಪ್ರಸ್ತಾವನೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಉನ್ನತಾಧಿಕಾರಿಗಳ ಸಮಿತಿ ಪರಿಶೀಲನೆಗಾಗಿ ಮಂಡಿಸಲಾಯಿತು. ಉನ್ನತಾಧಿಕಾರಿಗಳ ಸಮಿತಿಯು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿತು. ಈಗ ಒಂದು ಮೆಡಿಕಲ್ ಕಾಲೇಜು ಪ್ರಾರಂಭ ಮಾಡಬೇಕು ಮತ್ತು ಹೊಸ ಕೋರ್ಸ್ ಅನ್ನು ಪ್ರಾರಂಭ ಮಾಡಬೇಕು ಎಂದರೆ, ಎಲ್ಲಾ ಸಮಗ್ರ ಮಾಹಿತಿಯನ್ನು ಸಂಪೂರ್ಣವಾಗಿ ಸ್ಥಳೀಯ ತನಿಖಾ ಸಮಿತಿಗೆ ಒಪ್ಪಿಸಬೇಕು. ಆ ಸ್ಥಳೀಯ ತನಿಖಾ ಸಮಿತಿಯವರು ಪ್ರತಿಯೊಂದನ್ನು ವರದಿ ಮಾಡುತ್ತಾರೆ. ಅಂದರೆ, infrastructure ಇದೆ, faculty ಇದ್ದಾರೆ, ಅದು ಇಲ್ಲ, ಇದು ಇದೆ ಎಂದು. ತಜ್ಞರ ಸಮಿತಿ ಕೆಲವು ಷರತ್ತುಗಳನ್ನು ಹಾಕಿರುತ್ತದೆ. ಅದಾದ ಮೇಲೆ ಸರ್ಕಾರದ ಮಟ್ಟದಲ್ಲಿ ಉನ್ನತ ಸಮಿತಿ ಏನು ಮಾಡುತ್ತದೆಂದರೆ, ಮತ್ತೆ ನೇರವಾಗಿ ನೀವು ಇಂತಹವುಗಳನ್ನು ಕೊಡಬೇಕೆಂದು ಅವರನ್ನು ಕೇಳುತ್ತಾರೆ. ಅವರು ಈ ರೀತಿ ಮತ್ತೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತರಿಸಿಕೊಳ್ಳುವುದಕ್ಕೆ ಯಾವ ಕಾನೂನಿನಲ್ಲಿ ಅವಕಾಶವಿದೆ. ಆಯಿತು ಅದನ್ನು ತರಿಸಿಕೊಳ್ಳಲಿ. ನಾನು ಅದನ್ನು ಒಪ್ಪುತ್ತೇನೆ.

**ಡಾ||ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸದಸ್ಯರು ತಪ್ಪು ಮಾಹಿತಿ ಹೇಳುವುದಕ್ಕೆ ಹೋಗುತ್ತಿದ್ದಾರೆ. ಉತ್ತರಕ್ಕೂ ಮಾನ್ಯ ಸದಸ್ಯರು ಹೇಳುತ್ತಿರುವುದಕ್ಕೂ ಸಂಬಂಧವಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರನ್ನು ಸ್ವಲ್ಪ ಸುಮ್ಮನಿರುವುದಕ್ಕೆ ಹೇಳಿ. ಮೊದಲು ನನ್ನ ಮಾತು ಮುಗಿಯಲಿ. ಆಮೇಲೆ ಅವರು ಉತ್ತರ ನೀಡಲಿ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ತಾವು ಪ್ರಶ್ನೆಯನ್ನು ಕೇಳಿ.

**(ಗೊಂದಲ)**

**ಡಾ||ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸರಿಯಾಗಿ ಅರ್ಥ ಮಾಡಿಕೊಳ್ಳಲಿ. ಇಲ್ಲಿ ಮೆಡಿಕಲ್ ಕಾಲೇಜಿನ ಗೈಡ್‌ಲೈನ್ಸ್ ಬಗ್ಗೆ ಕೇಳುತ್ತಿಲ್ಲ. ನರ್ಸಿಂಗ್ ಸ್ಕೂಲ್‌ಗಳಿಗೆ INC (Indian Nursing Council) guidelines ಬೇರೆ ಇದೆ. ಅದರಲ್ಲಿ ಏನಾದರೂ ಇದ್ದರೆ ಕೇಳಬೇಕು. ಅದನ್ನು ಬಿಟ್ಟು ತಪ್ಪು ದಾರಿಗೆ ಎಳೆದುಕೊಂಡು ಹೋಗುವುದು ಬೇಡ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಂತ್ರಿಗಳ ಬಳಿಯಲ್ಲಿ ಉತ್ತರವನ್ನು ಕೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಬೇಗ ಪ್ರಶ್ನೆ ಕೇಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಇದನ್ನು ಬಿಟ್ಟು ಬೇರೆ ವಿಷಯವನ್ನು ಮಾತನಾಡುತ್ತಿದ್ದೇನೆಯೇ?

**ಸಭಾಪತಿಯವರು:–** ತಾವು ಏನು ಈ ರೀತಿ ವಾದ ಮಾಡುತ್ತೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರದ ಹಂತದಲ್ಲಿ ಎಲ್ಲವನ್ನು ಪರಿಶೀಲನೆ ಮಾಡಿದ ಮೇಲೆ, 47 ನರ್ಸಿಂಗ್ ಕಾಲೇಜು ಮತ್ತು 45 ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಿಗೆ ಅನುಮತಿ ಕೊಡಬಹುದು ಎಂದು ಶಿಫಾರಸ್ಸು ಮಾಡುತ್ತಾರೆ. ಆದರೆ, ಸಿಂಡಿಕೇಟ್ ಮತ್ತು ತಜ್ಞರ ಸಮಿತಿಯಲ್ಲಿ ಕಳುಹಿಸಿದಂತಹವುಗಳಲ್ಲಿ ಕೆಲವೊಂದನ್ನು ತೆಗೆಯುತ್ತಾರೆ. ಆದರೆ, ಈ 47 ನರ್ಸಿಂಗ್ ಕಾಲೇಜು ಮತ್ತು 45 ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳ ವಿವರಗಳ ಪಟ್ಟಿಯನ್ನು ಉತ್ತರದಲ್ಲಿ ಕೊಡಬೇಕಾಗಿತ್ತು. ಆದರೆ, ನಮಗೆ ಅದರ ವಿವರಗಳನ್ನು ಕೊಟ್ಟಿಲ್ಲ. ಕೇವಲ ಸಂಖ್ಯೆಗಳನ್ನು ಮಾತ್ರ ನೀಡಿದ್ದಾರೆ. ಮಾನ್ಯ ಎನ್.ರವಿಕುಮಾರ್‌ರವರು ಹೇಳಿದ ಹಾಗೆ, ಇಲ್ಲಿ ಏನಾಗಿದೆ ಎಂದರೆ, ಕುಂದಾಪುರದಲ್ಲಿ ನರ್ಸಿಂಗ್ ಕಾಲೇಜು ಸ್ಥಾಪನೆಗೆ ಅನುಮತಿ. ಆದರೆ, ಅವರು ನರ್ಸಿಂಗ್ ಕಾಲೇಜ್ ಅನ್ನು ಬೆಳ್ತಂಗಡಿಯಲ್ಲಿ ನಡೆಸುತ್ತಾರೆ. ಇಲ್ಲಿ ತೆರಿಗೆಯನ್ನು ಕಟ್ಟುವುದು, ಒಂದು ಮೆಡಿಕಲ್ ಕಾಲೇಜ್‌ಗೆ, ಎರಡು ನರ್ಸಿಂಗ್ ಕಾಲೇಜುಗಳ ಮಂಜೂರಾತಿಗೆ ಅನುಮತಿ ನೀಡಿರುವುದು. MCI ಯಿಂದ ಒಂದು ಮೆಡಿಕಲ್ ಕಾಲೇಜ್‌ನಲ್ಲಿ ಒಂದು ನರ್ಸಿಂಗ್ ಕಾಲೇಜ್ ಸ್ಥಾಪನೆಗೆ ಅನುಮತಿ ಎಂದು ಇದೆ. ಆದರೆ, ಇಲ್ಲಿ ಒಂದು ಮೆಡಿಕಲ್ ಕಾಲೇಜ್‌ನಲ್ಲಿ ಎರಡು ನರ್ಸಿಂಗ್ ಕಾಲೇಜುಗಳಿಗೆ ಅನುಮತಿ ನೀಡಿದ್ದಾರೆ. ಮೂರು ವರ್ಷದ ಹಿಂದೆ ಒಂದು ಕಾಲೇಜ್‌ಗೆ ಅನುಮತಿ ಕೊಡುತ್ತಾರೆ, ಮೂರು ವರ್ಷದ ನಂತರ ಮತ್ತೊಂದು ಕಾಲೇಜ್‌ಗೆ ಅನುಮತಿ ಕೊಡುತ್ತಾರೆ. ಒಂದೇ ಕಡೆಗೆ ಎರಡೆರಡು ಕಾಲೇಜುಗಳಿಗೆ ಅನುಮತಿ ಕೊಡುತ್ತಾರೆ. ಈ 47 ಮತ್ತು 45 ಕಾಲೇಜುಗಳಲ್ಲಿ infrastructure ಮತ್ತು faculties ಇಲ್ಲ. ಅವರು ಸರ್ಕಾರದ ಉನ್ನತ ಸಮಿತಿಗೆ ಬೋಗಸ್ ದಾಖಲೆಗಳನ್ನು ಒಪ್ಪಿಸಿದ್ದಾರೆ. ಇದರಲ್ಲಿ ಒಂದು ದೊಡ್ಡ ಅವ್ಯವಹಾರವಿದೆ. ರಾಜ್ಯದ ಜನತೆಯ ಆರೋಗ್ಯವನ್ನು ಕಾಪಾಡುವುದಕ್ಕೆ, ಇವತ್ತು ಈ ನರ್ಸಿಂಗ್ ಕಾಲೇಜು ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಮಾಡುತ್ತಿರುವುದು. ಏಕ ಕಾಲದಲ್ಲಿ ಖಾಸಗಿಯವರಿಗೆ ಇಷ್ಟೊಂದು ಮಂಜೂರಾತಿ ಕೊಡುತ್ತಾರೆಂದರೆ, ಇದಕ್ಕೆ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಶಿಫಾರಸ್ಸು ಮಾಡುತ್ತದೆ. ಇದನ್ನು ಸರ್ಕಾರದ ಹಂತದಲ್ಲಿ ಪರಿಶೀಲನೆ ಮಾಡುವಾಗ, ಯಾವ್ಯಾವ ಸಂಸ್ಥೆಗಳಿಗೆ ಅನುಮತಿ ಕೊಡುತ್ತೇವೆಂದು ಅದರ ಪಟ್ಟಿ ಕೊಟ್ಟಿಲ್ಲ. ಇದು ಒಂದು ದೊಡ್ಡ ಅವ್ಯವಹಾರ. ಇದು ಭಾರಿ ದೊಡ್ಡ ಹಗರಣ. ಇದಕ್ಕೆ ಸಂಬಂಧಪಟ್ಟಂತೆ 'ಸದನ ಸಮಿತಿ' ಮಾಡಲಿ. ಇದು ಸರಿಯಾಗಿದ್ದರೆ ಎಲ್ಲವನ್ನು ಪರಿಶೀಲನೆ ಮಾಡಿ, ಅವುಗಳಿಗೆ ಮಂಜೂರಾತಿ ಕೊಡೋಣ. ಖಾಸಗಿ ಆಸ್ಪತ್ರೆಯವರು ಕೋವಿಡ್-19 ಹಿನ್ನೆಲೆಯಲ್ಲಿ ಬಹಳ ದೊಡ್ಡ ದಂಧೆ ಮಾಡಿದ್ದಾರೆ. ಅವರಿಗೆ ಮತ್ತೆ ಶಿಫಾರಸ್ಸು ಮಾಡಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ತಾವು ಕುಳಿತುಕೊಳ್ಳಿ. ಈಗ ಮಾನ್ಯ ತೇಜಸ್ವಿನಿ ಗೌಡರು ಮಾತನಾಡುವುದು.

**(ಮುಂದು)**

## (508) 05.40 18.03.2021 ಎಲ್‌ಎಲ್/ಎಂಡಿ(ವಿಕೆ)

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಾನು ಸ್ವತಃ Radiologist and X-Ray technician course ಮಾಡಿದಂತಹವಳು. ಶ್ರೀ ಎನ್. ರವಿಕುಮಾರ್‌ರವರು ರೂಲಿಂಗ್ ಪಾರ್ಟಿಯಲ್ಲಿದ್ದರು ಸಹ...

**ಸಭಾಪತಿಯವರು:–** ಮಾನ್ಯ ತೇಜಸ್ವಿನಿ ಗೌಡರವರೇ ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಡಾ: ತೇಜಸ್ವಿನಿ ಗೌಡ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಏಕೆಂದರೆ, ಅನಾರೋಗ್ಯದ ವಿರುದ್ಧ ಚಿಕಿತ್ಸೆಯನ್ನು ಕೊಡತಕ್ಕಂತಹ ಸಿಬ್ಬಂದಿಗೆ ಉತ್ತಮ ತರಬೇತಿಯನ್ನು ಕೊಡುವುದಕ್ಕೆ ಮೂಲಭೂತ ಸೌಕರ್ಯ ಬೇಕೇ ಬೇಕು. ಅದರಲ್ಲಿ ಯಾವುದೇ ರಾಜಕೀಯ ಮಾಡುವ ವಿಚಾರ ಇರುವುದಿಲ್ಲ. ಇಲ್ಲದೆ ಹೋದರೆ, ಅದು ಜೀವದ ಜೊತೆ ಆಟ ಆಡಿದಂತಾಗುತ್ತದೆ. ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳಲ್ಲಿ ಮತ್ತು ನರ್ಸಿಂಗ್ ಕೋರ್ಸ್‌ಗಳಲ್ಲಿ ಹೆಣ್ಣುಮಕ್ಕಳ ಕೊಡುಗೆ ಜಾಸ್ತಿ ಇರುವುದರಿಂದ, ಉತ್ತಮ ಗುಣಮಟ್ಟದ ತರಬೇತಿ ಕೊಡಬೇಕು ಎನ್ನುವ ಕಾಳಜಿಯಿಂದ ಅಲ್ಲಿ ಅನುಕೂಲಗಳು ಸಹ ಇರಬೇಕೆನ್ನುವಂತಹ ಬಗ್ಗೆ ಅವರು ಪ್ರಶ್ನೆ ಕೇಳಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುವುದೇನೆಂದರೆ, ಇದರಲ್ಲಿ ಯಾವುದೇ ರಾಜಕೀಯಕ್ಕೂ ಅವಕಾಶ ಇರುವುದಿಲ್ಲ ಹಾಗೂ ಟೀಕೆ–ಟಿಪ್ಪಣಿಗಳು ಸಹ ಬೇಕಾಗಿರುವುದಿಲ್ಲ. ಹಾಗಾಗಿ, ಅನುಕೂಲ ಇದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಉತ್ತರ ಹೇಳಿ. ಒಂದು ವೇಳೆ ಅನುಕೂಲ ಇದ್ದರೆ ಅದಕ್ಕೆ ಅನುಮತಿ ಕೊಡಿ. ಇಲ್ಲದೇ ಇದ್ದರೆ ಇಲ್ಲ ಎನ್ನುವುದರ ಬಗ್ಗೆ ಬೆಳಕು ಚೆಲ್ಲಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ನಿಯಮ 72ರಡಿಯಲ್ಲಿ ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ಈ ಬಗ್ಗೆ ಸದನದಲ್ಲಿ ಮಾನ್ಯ ಮರಿತಿಬ್ಬೇಗೌಡರವರು ಮಾತನಾಡಬೇಕಾದರೆ ಮೆಡಿಕಲ್ ಬಗ್ಗೆ ಹೇಳಿದ್ದಾರೆ. ಆದರೆ, ನರ್ಸಿಂಗ್ ಕೌನ್ಸಿಲ್ ಆಫ್ ಇಂಡಿಯಾಗೆ ನಮ್ಮ ರಾಜ್ಯದಿಂದ ಯಾವ್ಯಾವ ಕಾಲೇಜುಗಳಿಗೆ ಶಿಫಾರಸ್ಸು ಆಗುತ್ತದೆ, ಅದಾದ ನಂತರ ನರ್ಸಿಂಗ್ ಕೌನ್ಸಿಲ್ ಆಫ್ ಇಂಡಿಯಾಗೆ ಅಪ್ರೂವಲ್‌ಗೆ ಹೋಗುತ್ತದೆ. ಬದಲಾಗಿ, ಅದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭದಲ್ಲಿ ಹೋಗುವುದಿಲ್ಲ. ಇದರಲ್ಲಿ ನನ್ನ ಮೂಲಭೂತ ಪ್ರಶ್ನೆ ಏನೆಂದರೆ, ಇಷ್ಟೊಂದು ಕಾಲೇಜುಗಳಿಗೆ faculty ಎಲ್ಲಿ ತರುತ್ತಾರೆ? ಅವರನ್ನು ಇದ್ದಕ್ಕಿದ್ದ ಹಾಗೆ ಹೇಗೆ ಸೃಷ್ಟಿ ಮಾಡುವುದಕ್ಕಾಗುತ್ತದೆ? ಅಂದರೆ, 42 ಕಾಲೇಜುಗಳಿಗೆ ಎಷ್ಟು ಜನ faculty ಗಳು ಬೇಕು? ಇದು ಬಹಳ ಕಷ್ಟದ ಕೆಲಸವಾಗಿದೆ. ಇದು ಯಾವುದು ಕೂಡ ಉದ್ಭವವಾಗುವ ಕೆಲಸ ಅಲ್ಲ. ಬದಲಾದ ಸನ್ನಿವೇಶದಲ್ಲಿ ಮೆಡಿಕಲ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕೋರ್ಸ್‌ಗಳಿಗೆ ಬಹಳ ಬೇಡಿಕೆ ಇದೆ. ಆ ಬೇಡಿಕೆಗೋಸ್ಕರ ಕೆಲವು ಕಾಲೇಜುಗಳು ಒಂದು ರೀತಿಯ ಪ್ಯಾಕೇಜ್ ರೂಪದಲ್ಲಿ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ. ಇದರಲ್ಲಿ ಹಣ ಮಾಡುವ ಉದ್ದೇಶವನ್ನು ಹೊರತುಪಡಿಸಿದರೆ, ಬೇರೆ ಯಾವುದೇ ಉದ್ದೇಶವೂ ಇರುವುದಿಲ್ಲ.

ಇದರ ಜೊತೆಗೆ, ಸುಮಾರು 62 ನರ್ಸಿಂಗ್ ಮತ್ತು 40 ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಿಗೆ ಜಿಚಿಛಿಣಟಣಥಿ ಒದಗಿಸುವುದು ಅಷ್ಟು ಸುಲಭದ ಕೆಲಸವಲ್ಲ. ಇದರಲ್ಲಿ ಬಹಳ ಕಷ್ಟ ಇದೆ. ಆ ರೀತಿಯ ಕಾಲೇಜುಗಳು ನಮ್ಮಲ್ಲಿ ಪ್ರಾರಂಭವಾದ ನಂತರ ನರ್ಸಿಂಗ್ ಕೌನ್ಸಿಲ್ ಆಫ್ ಇಂಡಿಯಾಗೆ ಹೋಗುತ್ತದೆ. ಇದರಲ್ಲಿ ಮಾನ್ಯ ರವಿಕುಮಾರ್‌ರವರ ಪ್ರಶ್ನೆ ಏನೆಂದರೆ, ಯಾರ್‍ಯಾರು ಲೋಕಲ್ ಇನ್ಸ್‌ಪೆಕ್ಷನ್ ಕಮಿಟಿಗೆ ಹೋಗುತ್ತಾರೆ, ಅಲ್ಲಿ ಎಲ್ಲರೂ ಸಹ ಕಣ್ಣಿಗೆ ಕಾಣುವ ರೀತಿ ಮತ್ತು ಎಲ್ಲರನ್ನೂ ದಿಕ್ಕು ತಪ್ಪಿಸುವ ರೀತಿ ಆ ಕಾಲೇಜುಗಳಿಗೆ faculty ಗಳನ್ನು ಕೊಡುತ್ತಾರೆ. ಈಗ ಏನಾಗಿದೆಯೆಂದರೆ, ಅಲ್ಲಿ ಯಾರ್‍ಯಾರು faculty ಇದ್ದಾರೆ ಅವರ biodata ಅನ್ನು scan ಮಾಡಬೇಕು. ಇಲ್ಲದೇ ಹೋದರೆ, ಅವರು ಒಂದು ಕಾಲೇಜಿಗೆ ಒಬ್ಬ ವ್ಯಕ್ತಿಯ biodata ಮತ್ತು ಇನ್ನೊಂದು ಕಾಲೇಜಿಗೂ ಸಹ ಅದೇ ವ್ಯಕ್ತಿಯ biodata ಕೊಡುತ್ತಾರೆ. ಇಲ್ಲಿ ಹೆಸರಿಗೆ ಮಾತ್ರ biodata ಗಳು, faculty ಗಳು ಇರುತ್ತದೆ. ಆದರೆ, ಎಲ್ಲಾ ಕಾಲೇಜುಗಳಿಗೂ ಸಹ ಇದೇ ವ್ಯಕ್ತಿ faculty ಆಗಿರುತ್ತಾರೆ. ಅಲ್ಲಿ ಬೇರೆ ವ್ಯಕ್ತಿಗಳು ಇರುವುದಿಲ್ಲ.

ಹಾಗಾಗಿ, ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಇದರಲ್ಲಿ ಭ್ರಷ್ಟಾಚಾರ ಆಗಿರುವುದರಲ್ಲಿ ಎರಡನೇ ಮಾತಿಲ್ಲ. ಮಾನ್ಯ ರವಿಕುಮಾರ್‌ರವರು ಬಹಳ ಮಹತ್ವವಾದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ದೊಡ್ಡ ತನಿಖೆ ಮಾಡುವುದಕ್ಕಾಗಿ ಸರ್ಕಾರದ ಮಟ್ಟದಲ್ಲಿ ಒಂದು ಸಮಿತಿ ರಚನೆ ಮಾಡಬೇಕು. ಅದರಂತೆ, ಸರ್ಕಾರದ ಮಟ್ಟದಲ್ಲಿ ತನಿಖೆಯಾಗಿ, ಸ್ಥಳ ಪರಿಶೀಲನೆ ಮಾಡಿ ಆ ಕಾಲೇಜುಗಳಲ್ಲಿರುವ faculty ಗಳನ್ನು ಯಾರು ಒಂದು ಕಾಲೇಜಿನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

biodata ಕೊಟ್ಟಿರುತ್ತಾರೆ, ಅದು scan ಆಗಬೇಕು. ಅದರಂತೆ, ಆ ವ್ಯಕ್ತಿ ಬೇರೆ ಯಾವುದೇ ಕಾಲೇಜಿಗೆ biodata ಕೊಟ್ಟಿದ್ದರೆ ಅದು reject ಆಗಬೇಕು. ಆ ರೀತಿ ಆದಾಗ ಮಾತ್ರ ಅದು ಒಳ್ಳೆಯದಾಗುತ್ತದೆ ಎಂದು ಹೇಳಬಯಸುತ್ತೇನೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ,..

**ಸಭಾಪತಿಯವರು:-** ತಾವು ಏತಕ್ಕೆ ಮಾತನಾಡುತ್ತಿದ್ದೀರಿ? ಈ ವಿಷಯಕ್ಕೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಉತ್ತರ ನೀಡಬೇಕು.

**ಶ್ರೀ ಆರ್. ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಇದು ಗಮನ ಸೆಳೆಯುವ ಸೂಚನೆ ವಿಷಯವಾಗಿದೆ.

**ಸಭಾಪತಿಯವರು:-** ಹೌದು. ಅದಕ್ಕೆ ಏನು ಮಾಡಬೇಕು?

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ದಯಮಾಡಿ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಬದಲಾಗಿ, ನಾನು ತಮಗೆ ರೋಪು ಹಾಕುವುದಕ್ಕೆ ಅಥವಾ ಬೇರೆ ಏನು ಮಾಡುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:-** ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ರೋಪು ಹಾಕಿದವರಿಗೆ ಏನು ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಆ ಸ್ಥಾನಕ್ಕೆ ನಾವು ಗೌರವ ಕೊಡುತ್ತೇವೆ. ಅದಕ್ಕೋಸ್ಕರ ಈ ವಿಷಯಕ್ಕೆ ಇತಿ-ಮಿತಿಗಳು ಏನಿದೆ, ಅದು ಸ್ವಲ್ಪ ಹಿಂದೆ-ಮುಂದೆ ಹೋದರೂ ಪರವಾಗಿಲ್ಲ. ಇಂತಹ ವಿಷಯಗಳ ಮೇಲೆ ಬಜೆಟ್ ಮೇಲೆ ಭಾಷಣ ಮಾಡುವ ರೀತಿ ಮಾತನಾಡಿದರೆ ಕಷ್ಟವಾಗುತ್ತದೆ.

**ಸಭಾಪತಿಯವರು:-** ಹೌದು, ತಾವು ಹೇಳುವುದು ಸರಿ ಇದೆ. ಆದರೆ, ಏನು ಮಾಡುವುದಕ್ಕಾಗುವುದಿಲ್ಲ. ಒಬ್ಬೊಬ್ಬರು ಆ ರೀತಿ ಇರುತ್ತಾರೆ. ಹಾಗಾಗಿ, ಮಾನ್ಯ ಸಚಿವರೇ, ತಾವು ಈ ಬಗ್ಗೆ ಉತ್ತರ ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಕೆ. ಸುಧಾಕರ್(ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯಕ್ಕೆ ಒಂದು ಇತಿಹಾಸ ಇದೆ. ವಿಶೇಷವಾಗಿ ಆರೋಗ್ಯ ಕ್ಷೇತ್ರದಲ್ಲಿರಬಹುದು ಅಥವಾ ಶಿಕ್ಷಣ ಕ್ಷೇತ್ರದಲ್ಲಿರಬಹುದು ಖಾಸಗಿ ಭಾಗವಹಿಸುವಿಕೆ ಎನ್ನುವುದು ಬಹಳ ಹಿಂದಿನಿಂದಲೂ ಬಂದಿರುವ ವ್ಯವಸ್ಥೆಯಾಗಿದೆ. ಅದಕ್ಕೆ ಎಲ್ಲಾ ಸರ್ಕಾರಗಳು ಕೂಡ ಪುಷ್ಠಿ ಕೊಟ್ಟಿರುತ್ತವೆ. ಇಲ್ಲಿಯವರೆಗೂ ಕೂಡ ನರ್ಸಿಂಗ್ ಕಾಲೇಜುಗಳು ನಮ್ಮ ರಾಜ್ಯದಲ್ಲಿರುವುದು ದಾಖಲೆ ಎಂದು ಹೇಳಬಹುದು. ಅದರಂತೆ, ನಮ್ಮಲ್ಲಿ 600 ಕ್ಕೂ ಹೆಚ್ಚು ನರ್ಸಿಂಗ್ ಕಾಲೇಜುಗಳಿವೆ. ಅವುಗಳನ್ನು ಯಾರ್ಯಾರ ಕಾಲದಲ್ಲಿ ಎಷ್ಟೆಷ್ಟು ಕೊಟ್ಟಿದ್ದಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವೇಳೆ ಆ ಮಾಹಿತಿ ಹೇಳಬೇಕಾದರೆ ನಾನು ಹೇಳುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ಹೇಳುತ್ತಾರೆ. ಉತ್ತರ ಹೇಳುವ ಮಧ್ಯದಲ್ಲಿ ಏತಕ್ಕೆ ಮಾತನಾಡುತ್ತೀರಿ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ನಾವು ಒಂದು ಟಾಸ್ಕ್‌ಫೋರ್ಸ್ ಸಮಿತಿಯನ್ನು ಈಗಾಗಲೇ ರಚನೆ ಮಾಡಿದ್ದೇವೆ. 4 ಟಾಸ್ಕ್‌ಫೋರ್ಸ್ ಕಮಿಟಿಯನ್ನು ರಚನೆ ಮಾಡಿ, ಇಲ್ಲಿಯವರೆಗೂ 600 ನರ್ಸಿಂಗ್ ಕಾಲೇಜುಗಳನ್ನು ಏನು ಸ್ಥಾಪನೆ ಮಾಡಿದ್ದಾರೆ, ಆ ಕಾಲೇಜುಗಳಿಗೆ ಸರಿಯಾದ ಕಟ್ಟಡಗಳು ಇದೆಯೋ; ಸಿಬ್ಬಂದಿಗಳು ಇದ್ದಾರೆಯೋ ಅಥವಾ ಇಲ್ಲವೋ; ಪೀಠೋಪಕರಣಗಳು ಇದೆಯೋ ಅಥವಾ ಇಲ್ಲವೋ ಇದೆಲ್ಲದರ ಬಗ್ಗೆ ಪರಿಶೀಲಿಸಿ ವಿವರವಾದ ವರದಿಯನ್ನು ಕೊಡಬೇಕೆಂದು 3 ತಿಂಗಳ ಗಡುವನ್ನು ನಿಗದಿ ಮಾಡಿದ್ದೇವೆ. ಈಗ ಹೊಸ ಕಾಲೇಜುಗಳಿಗೂ ಕೂಡ ಕೋವಿಡ್-19 ರೋಗ ಬಂದಂತಹ ಸಂದರ್ಭದಲ್ಲಿ... ಸುಮಾರು 65 ವೈದ್ಯಕೀಯ ಕಾಲೇಜುಗಳು ನಮ್ಮ ರಾಜ್ಯದಲ್ಲಿವೆ. ಇವೊತ್ತಿನ ದಿವಸ ನರ್ಸಿಂಗ್ ಸ್ಟಾಫ್ ಮತ್ತು ಪ್ಯಾರಾ ಮೆಡಿಕಲ್ ಸ್ಟಾಫ್ ಬಹಳ paramount importance ಇದೆ. ನಾವು ಕೋವಿಡ್-19 ಬಂದಂತಹ ಸಂದರ್ಭದಲ್ಲಿ ಈ ಕಾಲೇಜುಗಳನ್ನು ನಾವು ಸಹ ನೋಡಿದ್ದೇವೆ. ಆ ಸಂದರ್ಭದಲ್ಲಿ ಐ.ಸಿ.ಯು.ಗಳಲ್ಲಿ ಎಷ್ಟು ಜನ ಸಿಬ್ಬಂದಿಗಳು ಇರಬೇಕಾಗಿತ್ತೋ ಅವರು ಇರಲಿಲ್ಲ. ಹಾಗಾಗಿ, ಈ ಬಾರಿ ನೂರಕ್ಕೂ ಹೆಚ್ಚು ಜನರು ನರ್ಸಿಂಗ್ ಕಾಲೇಜುಗಳನ್ನು ತೆರೆಯಲು ಅನುಮತಿ ನೀಡಬೇಕು, ನಮ್ಮಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳು ಲಭ್ಯವಿದೆ ಎಂದು ಅರ್ಜಿ ಕೊಟ್ಟಿದ್ದರೂ ಸಹ 3

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಂತಗಳಲ್ಲಿ,.. ಇವು ನಾವು ಮನಸೋ ಇಚ್ಛೆ ಮಾಡಿದಂತಹ ಸಮಿತಿಗಳಲ್ಲ. ಇವುಗಳು NMC (National Medical Council) ಪಾಲಿಸಿ ಇದೆ, ಆ ಪಾಲಿಸಿ ಅಡಿಯಲ್ಲಿ, ಗೈಡ್‌ಲೈನ್ಸ್ ಅಡಿಯಲ್ಲಿ Senate Members, Academic Council Members and Syndicate Members of the University. University itself is an autonomous body. ಇವರಲ್ಲರನ್ನೂ ಸೇರಿಸಿ 3 ಹಂತಗಳಲ್ಲಿ ಸಭೆ ಮಾಡುತ್ತಾರೆ ಮತ್ತು ಸ್ಥಳ ವೀಕ್ಷಣೆ ಮಾಡುತ್ತಾರೆ. ಅದರ ಜೊತೆಗೆ, ಸರ್ಕಾರದಿಂದ ಒಬ್ಬ ಅಧಿಕಾರಿ ಸಹ ಸ್ಥಳ ವೀಕ್ಷಣೆಗೆ ಹೋಗಿರುತ್ತಾರೆ. ಇವರೆಲ್ಲರೂ ಸಹ accountable ಇದ್ದಾರೆ. ಇದರಲ್ಲಿ ಯಾರು ಸಹ ಸುಮ್ಮನೆ ವರದಿಯನ್ನು ಕೊಟ್ಟು ಸರ್ಕಾರಕ್ಕೆ ತಪ್ಪು ಮಾಹಿತಿ ಕೊಟ್ಟರೆ ಅವರಿಗೆ ನಾಳೆ ಶಿಕ್ಷೆ ಆಗುತ್ತದೆ.

ಹಾಗಾಗಿ, ಈ ಬಗ್ಗೆ 3 ಹಂತಗಳಲ್ಲಿ ಸ್ಥಳ ವೀಕ್ಷಣೆ ಮಾಡಿದ ನಂತರ ಅದು ಹೈ ಪವರ್ ಕಮಿಟಿಗೆ ಬರುತ್ತದೆ. ಆ ಕಮಿಟಿ ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ನೇತೃತ್ವದಲ್ಲಿ ನಡೆಯುವ ಕಮಿಟಿಯಾಗಿರುತ್ತದೆ. ಇದು ಈ ವರ್ಷದಿಂದ ನಡೆಯುವಂತಹದ್ದಲ್ಲ, ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಂತಹ ವ್ಯವಸ್ಥೆಯಾಗಿದೆ. ಆದರೂ ಸಹ ನಾವು ನಮ್ಮ ಇಲಾಖೆಯಲ್ಲಿ ಇದಕ್ಕೆ ವಿಶೇಷವಾಗಿ ಯಾವ ರೀತಿ ಇದನ್ನು ಇನ್ನೂ ಗಟ್ಟಿ ಮಾಡಬೇಕೆಂದು ಚಿಂತನೆ ಮಾಡುತ್ತಿದ್ದೇವೆ. ಇದರಲ್ಲಿ ಕೆಲವು ಲೋಪದೋಷಗಳಿವೆ. ಇಲ್ಲವೆಂದು ನಾನು ಹೇಳುವುದಿಲ್ಲ. ಈಗ ನಡೆಸುತ್ತಿರುವಂತಹ ಅನೇಕ ನರ್ಸಿಂಗ್ ಕಾಲೇಜುಗಳಿಗೆ ಸರಿಯಾದಂತಹ ಕಟ್ಟಡಗಳಿಲ್ಲ; ಮೂಲಭೂತ ವ್ಯವಸ್ಥೆ ಇರುವುದಿಲ್ಲ; ಸಲಕರಣೆಗಳು ಇರುವುದಿಲ್ಲ. ಹಾಗಾಗಿ, ಆ ರೀತಿಯ ತಪ್ಪುಗಳು ಆಗಬಾರದೆಂದು, ಲೋಪದೋಷಗಳು ಆಗಬಾರದೆಂದು ಇರುವಂತಹ ಕೆಲವು ನಿಯಮಗಳನ್ನು ಗಟ್ಟಿ ಮಾಡಿದ್ದೇವೆ. ಇವೆಲ್ಲವನ್ನೂ ಪರಿಶೀಲಿಸುವುದಕ್ಕಾಗಿ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದ್ದು, ಆ ಸಮಿತಿ ಇದನ್ನು ಪರಿಶೀಲನೆ ಮಾಡಿ, ಅಂತಿಮವಾಗಿ 62 ನರ್ಸಿಂಗ್ ಮತ್ತು 40 ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಿಗೆ ಪರವಾನಿಗೆಯನ್ನು ಕೊಟ್ಟಿದ್ದಾರೆ. ಇದರಲ್ಲಿ ವಿಶೇಷವಾಗಿ ಯಾವುದಾದರೂ ಇಂತಹ ಸಂಸ್ಥೆಯಲ್ಲಿ ಸರಿಯಿಲ್ಲವೆಂದು ಯಾರಾದರೂ ಗೌರವಾನ್ವಿತ ಸದಸ್ಯರು ನನಗೆ ಮಾಹಿತಿ ನೀಡಿದರೆ ಖಂಡಿತವಾಗಿಯೂ ಅವರ ವಿರುದ್ಧ ನಾವು ತನಿಖೆಯನ್ನು ಮಾಡಿಸುತ್ತೇವೆ. ಒಂದು ವೇಳೆ ತಪ್ಪು ವರದಿ ಕೊಟ್ಟಿದ್ದಾರೆಂದರೆ ವರದಿ ನೀಡಿದವರ ವಿರುದ್ಧ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಎಂ. ನಾರಾಯಣಸ್ವಾಮಿಯವರದ್ದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು burning issue ಆಗಿರುತ್ತದೆ.

**(ಗೊಂದಲ)**

**ಸಭಾಪತಿಯವರು:-** ಇಲ್ಲ ತಮಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಎಂ. ನಾರಾಯಣಸ್ವಾಮಿಯವರೇ ತಮ್ಮ ವಿಷಯವನ್ನು ಪ್ರಸ್ತಾಪ ಮಾಡಿ.

**(ಗೊಂದಲ)**

**(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಮತ್ತು ಶ್ರೀ ಎನ್. ಅಪ್ಪಾಜಿಗೌಡರವರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು ನಾಡಿನ ಜನರ ಆರೋಗ್ಯದ ಜೊತೆಗಿನ ಚೆಲ್ಲಾಟದ ವಿಷಯವಾಗಿದೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ತಾವು ತಮ್ಮ ವಿಷಯ ಪ್ರಸ್ತಾಪ ಮಾಡಿ.

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲ ಸರ್ ಇದು ಆಗಲ್ಲ. It is a big burning issue. ಇದು ಈ ರಾಜ್ಯದಲ್ಲಿ ಬಹಳ ದೊಡ್ಡ ದಂಧೆಯಾಗಿದೆ. ಆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಇರುವುದಿಲ್ಲ, ಶಿಕ್ಷಕರೂ ಸಹ ಇರುವುದಿಲ್ಲ. ಅವರಿಗೆ ವೇತನ ಮಾತ್ರ ಸಿಗುತ್ತಿರುತ್ತದೆ. ಇದು ಎಲ್ಲಿಯಾದರೂ ಉಂಟೇ?

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ (ಸದನದ ಬಾವಿಯಿಂದ):** ಮಾನ್ಯ ಸಭಾಪತಿಯವರೆ, . . . .

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರವರೇ, ಒಂದು ನಿಮಿಷ ಕೇಳಿ. (**ಗೊಂದಲ**) ಸದನದ ಬಾವಿಯಲ್ಲಿ ನಿಂತು ಮಾತನಾಡಿದ್ದು ಯಾವುದೂ ರೆಕಾರ್ಡ್‌ಗೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಸದನದ ಬಾವಿಯಲ್ಲಿ ನಿಂತು ಮಾತನಾಡಿರುವುದನ್ನು ನಡೆವಳಿಯಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ದಯಮಾಡಿ ಈ ಬಗ್ಗೆ ಸದನ ಸಮಿತಿ ರಚನೆ ಆಗಲೇಬೇಕು.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳುತ್ತಿರಾ?

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಆಯಿತು ಹೇಳಿ.

**ಸಭಾಪತಿಯವರು:–** ಇದರಲ್ಲಿ ತನಿಖೆ ಮಾಡುತ್ತೇವೆಂದು ಹಾಗೂ ಇದರಲ್ಲಿ ಏನಾದರೂ ತಪ್ಪುಗಳಿದ್ದರೆ ಸರಿಪಡಿಸುತ್ತೇವೆಂದು ಹೇಳಿದ್ದಾರೆ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಆ ತನಿಖೆಯಲ್ಲಿ ನಮಗೆ ನ್ಯಾಯ ಸಿಗುವುದಿಲ್ಲ. ಹಾಗಾಗಿ, ಈ ವಿಷಯದಲ್ಲಿ ಸದನ ಸಮಿತಿಯೇ ಆಗಬೇಕು.

**(ಗೊಂದಲ)**

**ಸಭಾಪತಿಯವರು:–** ಸದನ ಸಮಿತಿ ಬಗ್ಗೆ ಸರ್ಕಾರ ಹೇಳಬೇಕು. ನಾನು ಹೇಳುವುದಕ್ಕಾಗುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಜನರ ಪ್ರಾಣ ಉಳಿಸಬೇಕಲ್ಲವೇ? ಃ.ಖಿಛಿ. ನರ್ಸಿಂಗ್ ಪ್ಯಾರಾ ಮೆಡಿಕಲ್ ಕೋರ್ಸ್‌ನ ಒಬ್ಬ ವ್ಯಕ್ತಿ ಕಾಲೇಜಿಗೆ ಬರುವುದಿಲ್ಲ. ಆತ ಕೇರಳ ರಾಜ್ಯದಲ್ಲಿಯೂ ಪಾಠ ಮಾಡುತ್ತಾನೆ, ಅದೇ ಸಮಯದಲ್ಲಿ ಕರ್ನಾಟಕದಲ್ಲಿಯೂ ಪಾಠ ಮಾಡುತ್ತಾನೆ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಅತ್ಯಂತ ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ. ಒಂದು ವೇಳೆ ಇದರಲ್ಲಿ ತಪ್ಪಾಗಿದ್ದರೆ ತನಿಖೆ ಮಾಡುತ್ತೇವೆಂದು ಹೇಳಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರವರೇ, ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇದು ಇಡೀ ರಾಜ್ಯದಲ್ಲಿಯೇ ಅತ್ಯಂತ...

**(ಗೊಂದಲ)**

**ಸಭಾಪತಿಯವರು:–** ನಾನು ಹೇಳುವುದನ್ನು ಕೇಳದೇ ಇದ್ದರೆ, ನಾನು ಸದನ ಹೇಗೆ ನಡೆಸಬೇಕು?

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಆಯಿತು ಹೇಳಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಥವಾದ ಉತ್ತರ ನೀಡಿದ್ದಾರೆ ಮತ್ತು ಎಲ್ಲಾ ವಿವರಗಳನ್ನು ಸಹ ನೀಡಿದ್ದಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಮರ್ಪಕವಾದ ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ನಮ್ಮ ತಕರಾರು ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ತಾವು ಲೀಡರ್ ಆಗಿ ಈ ರೀತಿ ಮಾಡಿದರೆ ಹೇಗೆ? ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆಯಿತು ಹೇಳಿ.

**ಸಭಾಪತಿಯವರು:-** ಈ ವಿಷಯದ ಬಗ್ಗೆ ಮಾತನಾಡಲು ಅನೇಕ ಸದಸ್ಯರು ಅವಕಾಶ ಕೇಳಿದ್ದಾರೆ. ಅದರಂತೆ, ನಾನು ಇಷ್ಟು ಮಂದಿಗೆ ಮಾತನಾಡಲು ಅವಕಾಶ ನೀಡಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಸಹ ಉತ್ತರ ನೀಡಿದ್ದಾರೆ. ಇದಕ್ಕಿಂತಲೂ ಹೆಚ್ಚಿನದಾಗಿ ಏನು ಮಾಡಬೇಕೆಂದು ಸಭಾಪತಿಯಾಗಿ ನಾನು ಹೇಳುವುದಕ್ಕಾಗುತ್ತದೆಯೇ? ಈ ಬಗ್ಗೆ ತಾವೇ ವಿಚಾರ ಮಾಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ತಳಮಟ್ಟದ ಸಮಸ್ಯೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. There are no physical classes in those colleges.

**ಸಭಾಪತಿಯವರು:-** ಈಗ ನಾನು ಏನು ಮಾಡಬೇಕು? ಇದರಲ್ಲಿ ಸರ್ಕಾರದಿಂದ ತನಿಖೆ ಮಾಡುತ್ತೇವೆಂದು ಈಗಾಗಲೇ ಮಾನ್ಯ ಸಚಿವರು ಹೇಳಿದ್ದಾರೆ.

**(ಮುಂದು)**

**(509) 18.03.2021 5.50 ವೈಎಲ್-ಎಕೆ**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಪ್ಪು ಮಾಡಿದವರೇ ವಿಚಾರಣೆ ಮಾಡುವುದರಿಂದ ಎಲ್ಲಿ ನ್ಯಾಯ ಸಿಗುತ್ತದೆ? ನಾವು ಈ ವಿಚಾರದಲ್ಲಿ ರಾಜಕಾರಣ ಮಾಡುತ್ತಿಲ್ಲ ಹಾಗೂ ಮಾನ್ಯ ಸಚಿವರ ಮೇಲೆಯೂ ಆರೋಪ ಮಾಡುತ್ತಿಲ್ಲ. Physically there are no colleges.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ (ಸದನದ ಬಾವಿಯಿಂದ):-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿರುವುದು ಯಾವುದೂ ಕಡತಕ್ಕೆ ಹೋಗಬಾರದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಸದನದ ಬಾವಿಯಲ್ಲಿ ನಿಂತು ಮಾತನಾಡಿರುವುದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಜನರ ಪ್ರಾಣದ ಜೊತೆ ನಾವು ಆಟ ಆಡುವುದು ಬೇಡ. ದಯವಿಟ್ಟು ನಾನು ತಮ್ಮಲ್ಲಿ ನಮಸ್ಕಾರ ಮಾಡಿಕೇಳಿಕೊಳ್ಳುತ್ತೇನೆ. ಇದಕ್ಕೆ ಸದನ ಸಮಿತಿ ರಚನೆ ಮಾಡಲಿ. ಮಾನ್ಯ ರವಿಕುಮಾರ್‌ರವರು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದು, ನಾವು ಅದಕ್ಕೆ ನ್ಯಾಯ ಒದಗಿಸುವ ಕೆಲಸವನ್ನು ಮಾಡೋಣ. There is no faculty.

**(ಗೊಂದಲ)**

**(ಈ ಹಂತದಲ್ಲಿ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ತನಿಖೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಹಾಗಾಗಿ ಬಾವಿಗೆ ಹೋಗುವ ಅವಶ್ಯಕತೆ ಇಲ್ಲ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷ ಕೂಡ ಸದನ ಸಮಿತಿ ರಚನೆ ಮಾಡುವುದಕ್ಕೆ ಬೆಂಬಲ ನೀಡುತ್ತದೆ. **(ಗೊಂದಲ)** ಈ ಸರ್ಕಾರಕ್ಕೆ ನಾಚಿಕೆಯಾಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಕೇಳಿದಂಥ ಪ್ರಶ್ನೆಗೆ ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ. ಅಷ್ಟು ಹೇಳಿದರೂ ಸಹ ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ಶ್ರೀಕಂಠೇಗೌಡರು ಈ ಸಮಸ್ಯೆ ಬಹಳ ಆಳವಾಗಿದ್ದು, ಬೇರೆ ಬೇರೆ ಮೂಲಗಳಿಂದ ಭ್ರಷ್ಟಚಾರವಾಗುತ್ತಿದೆ, ಕಾನೂನು ಮೀರಿ ವ್ಯವಸ್ಥೆ ಕಲ್ಪಿಸಲಾಗಿದೆ, ನಿಯಮಬಾಹಿರವಾಗಿ ಮಾಡಿದ್ದಾರೆ ಎಂದು ಏನು ಹೇಳಿದ್ದಾರೆ ಅದೆಲ್ಲದರ ಬಗ್ಗೆ ಸಮಗ್ರವಾದ ತನಿಖೆಯನ್ನು ಸರ್ಕಾರದ ವತಿಯಿಂದ ನಡೆಸಲಾಗುವುದು. ದಯವಿಟ್ಟು ಸದನ ಸಮಿತಿ ರಚನೆ ಮಾಡಿ ಎಂದು ಕೇಳುವುದು ಸರಿಯಿಲ್ಲ. ದಯವಿಟ್ಟು ಅವರೆಲ್ಲರೂ ಸಹ ಅವರವರ ಸ್ಥಾನಕ್ಕೆ ತೆರಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಹೆಚ್.ಎಂ.ರಮೇಶ ಗೌಡ ಹಾಗೂ ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಗಮನ ಸೆಳೆಯುವ ಸೂಚನೆಯಲ್ಲಿ ಮಾನ್ಯ ರವಿಕುಮಾರ್‌ರವರು ಪ್ರಶ್ನೆಯನ್ನು ಕೇಳಿದ್ದು, ಮಾನ್ಯ ಸಚಿವರು ಸಹ ಈಗಾಗಲೇ ಉತ್ತರ ನೀಡಿದ್ದಾರೆ. ಅದಕ್ಕೆ ಮಾನ್ಯ ರವಿಕುಮಾರ್‌ರವರು ತೃಪ್ತರಾಗಿದ್ದಾರೆ. ಹಾಗ್ಗಾಗಿ ತಮ್ಮ ಮೂಲಕ ವಿನಂತಿಸುವುದೇನೆಂದರೆ, ಬೇರೆ ಸದಸ್ಯರುಗಳು ಅವಶ್ಯಕವಿದ್ದರೆ ಬೇರೆ ರೂಪದಲ್ಲಿ ಈ ವಿಚಾರವನ್ನು ತಂದು, ನಂತರ ಬೇಕಾದರೆ ಏನು action ಅವಶ್ಯಕತೆ ಇದೆ ಅದನ್ನು ಕೇಳಲಿ. ಆದರೆ, ಮಾನ್ಯ ರವಿಕುಮಾರ್‌ರವರು ಈ ವಿಚಾರವನ್ನು ತಂದಿದ್ದು, ಅವರುಗಳು ಧರಣಿ ಮಾಡುವುದು ಒಳ್ಳೆಯದಲ್ಲ. ದಯವಿಟ್ಟು ಬೇರೆ ರೂಪದಲ್ಲಿ ಅಂದರೆ, ನಿಲುವಳಿ ಸೂಚನೆ, ಗಮನ ಸೆಳೆಯುವ ಸೂಚನೆ ಮೂಲಕ ಈ ವಿಚಾರವನ್ನು ತರಲಿ.

**(ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)**

ಮಾನ್ಯ ರವಿಕುಮಾರ್‌ರವರು ಮಾನ್ಯ ಸಚಿವರ ಉತ್ತರಕ್ಕೆ ತೃಪ್ತಿಯಾಗಿದ್ದು, ಅದಕ್ಕೆ ಅವರ ತಕರಾರು ಏನಿಲ್ಲ ಎಂದು ಹೇಳಿದ್ದಾರೆ.

**ಸಭಾಪತಿಯವರು:-** ಈಗಾಗಲೇ ನಾನು ಹೇಳಿದರೂ ಅವರು ಕೇಳುತ್ತಿಲ್ಲ. ಈ ರೀತಿ ಮಾಡಿದರೆ ಸದನವನ್ನು ಹೇಗೆ ನಡೆಸುವುದು?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ತಮ್ಮ ಮೇಲೆ ಮತ್ತು ಮಾನ್ಯ ಸಚಿವರ ಮೇಲೆ ನಮಗೆ ಗೌರವ ಇದೆ. ಮಾನ್ಯ ರವಿಕುಮಾರ್‌ರವರು ಈ ವಿಚಾರವಾಗಿ ಪ್ರಸ್ತಾಪ ಮಾಡಿದ ಮೇಲೆ ಈ ವಿಚಾರವು ಸದನ ಆಸ್ತಿ. It is not an individual property. ಇದು ರಾಜ್ಯದ ನಾಡಿನ ಜನತೆಯ ಆರೋಗ್ಯಕ್ಕೆ ಸಂಬಂಧಪಟ್ಟ ವಿಚಾರವಾಗಿದೆ.

**ಡಾ|| ತೇಜಸ್ವಿನಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಉತ್ತರ ನೀಡಿದ್ದು, ತನಿಖೆ ಮಾಡುತ್ತೇವೆ ಎಂದು ತಿಳಿಸಿದ್ದಾರೆ. **(ಗೊಂದಲ)** ಮಾನ್ಯ ರವಿಕುಮಾರ್‌ರವರು ಈಗಾಗಲೇ ಮಾನ್ಯ ಸಚಿವರ ಉತ್ತರಕ್ಕೆ ಸಮಾಧಾನವಾಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ನಾಡಿನ ಜನತೆಯ ಆರೋಗ್ಯಕ್ಕೆ ಸಂಬಂಧಪಟ್ಟ ವಿಚಾರವಾಗಿದೆ. ನಾನು ಅತ್ಯಂತ ಪ್ರಾಮಾಣಿಕವಾಗಿ ಒಬ್ಬ ಶಿಕ್ಷಕನಾಗಿ, ಪ್ರಾಚಾರ್ಯನಾಗಿ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ರಾಜಕಾರಣ ಮಾಡುವುದಾಗಲಿ, ತಮಾಷೆ ಮಾಡುವುದಾಗಲಿ ಬೇಡ. ದಯವಿಟ್ಟು ಸದನ ಸಮಿತಿ ರಚನೆ ಮಾಡಬೇಕು.

**(ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ರವಿಕುಮಾರ್‌ರವರು ಪ್ರಶ್ನೆ ಕೇಳಿದ್ದು, ಅವರೇ ಸುಮ್ಮನಿರುವಾಗ ಇವರು ಏತಕ್ಕೆ ಈ ರೀತಿ ಮಾಡುತ್ತಿದ್ದಾರೆ?

**ಸಭಾಪತಿಯವರು:-** ನಾನು ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕೆ ಅನುಮತಿಯನ್ನು ನೀಡಿದ್ದೇ. ಸರ್ಕಾರ ಸದನ ಸಮಿತಿಗೆ ಒಪ್ಪಿಗೆ ಸೂಚಿಸಲಿಲ್ಲವೆಂದರೆ, ನಾನು ಏನು ಹೇಳುವುದಕ್ಕಾಗುವುದಿಲ್ಲ. ಈಗಾಗಲೇ ಸರ್ಕಾರವು ತಪ್ಪು ಮಾಡಿದವರ ಮೇಲೆ ಕ್ರಮ ತೆಗೆಯುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಜೊತೆಗೆ ತಾವು ಸಹ ಬೇರೆ ರೂಪದಲ್ಲಿ ಈ ವಿಚಾರವನ್ನು ತರುವುದಕ್ಕೆ ಸೂಚಿಸಿದ್ದು, ನಂತರ ಚರ್ಚೆ ಮಾಡಿ, ತಪ್ಪಾಗಿದ್ದರೆ ಕ್ರಮ ತೆಗೆದುಕೊಳ್ಳುತ್ತಾರೆ.

**(ಈ ಹಂತದಲ್ಲಿ ಸದನದಲ್ಲಿ ಸದಸ್ಯರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)**

**ಸಭಾಪತಿಯವರು:-** ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿರುವುದು ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ನಿಂತು ಮಾತನಾಡಿರುವುದನ್ನು ನಡವಳಿಯಲ್ಲಿ ದಾಖಲಿಸಿರುವುದಿಲ್ಲ)**

ಮಾನ್ಯ ಮರಿತಿಬ್ಬೇಗೌಡರೆ ತಾವು ಈ ರೀತಿ ಮಾತನಾಡಿದರೆ ಹೇಗೆ ಸದನ ನಡೆಸುವುದು?

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಮೇಲೆ ಚರ್ಚೆ ಮಾಡಲು ಗಮನ ಸೆಳೆಯುವ ಸೂಚನೆಗಿಂತಲೂ ಬೇರೆ ರೂಪದಲ್ಲಿ ತರುವುದು ಬೇಕಾಗಿಲ್ಲ. ಈ ವಿಚಾರದ ಮೇಲೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚರ್ಚೆ ಮಾಡುವುದಕ್ಕೆ ಮತ್ತೆ ಗಮನ ಸೆಳೆಯುವ ಸೂಚನೆಯಲ್ಲಿ ತರುವುದು ಬೇಡ. ಸರ್ಕಾರ ದಯಮಾಡಿ ಸದನ ಸಮಿತಿ ರಚನೆ ಮಾಡಲಿ.

**(ಗೊಂದಲ)**

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತನಿಖೆ ಮಾಡಿಸುತ್ತೇವೆಂದು ಹೇಳಿದ್ದಾರೆ. ಯಾರ್‍ಯಾರು ನೂರಾರು ಕಾಲೇಜುಗಳಿಗೆ ಅನುಮತಿ ನೀಡಿದ್ದಾರೆ ಗೊತ್ತಾಗುತ್ತದೆ. ಇಲ್ಲಿ ದಬ್ಬಾಳಿಕೆ ಮಾಡುವುದು ಬೇಕಾಗಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೆ ತಾವು ಸಹ ಹಿರಿಯ ಸದಸ್ಯರಾಗಿದ್ದೀರಿ. ಸರ್ಕಾರಕ್ಕೆ ಹೀಗೆ ಮಾಡಿ ಎಂದು ಯಾರು ಹೇಳುವುದಕ್ಕಾಗುವುದಿಲ್ಲ. ನೋಡಿ ಇದಕ್ಕಿಂತ ಹೆಚ್ಚಿಗೆ ನಾನು ಏನು ಹೇಳುವುದಕ್ಕಾಗುವುದಿಲ್ಲ. ಏನು ಮಾಡಬೇಕೆಂದು ನೀವೇ ಹೇಳಿ.

**(ಗೊಂದಲ)**

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಯಾರ್‍ಯಾರು ಇನ್ನೂರು, ಮುನ್ನೂರು ಕಾಲೇಜುಗಳಿಗೆ ಅನುಮತಿ ನೀಡಿದ್ದಾರೆ ಎಂಬುದು ಹೊರಗೆ ಬರಬೇಕು. ಅದಕ್ಕಾಗಿ ಮಾನ್ಯ ಸಚಿವರು ತನಿಖೆ ಮಾಡಿ, ಅದನ್ನು ಹೊರಗೆ ತರುವಂತೆ ನಾವು ಒತ್ತಾಯ ಮಾಡುತ್ತೇವೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಕೈ ಮುಗಿದು ಪ್ರಾರ್ಥನೆ ಮಾಡುವುದೇನೆಂದರೆ, ಸದನ ಸಮಿತಿ ರಚನೆ ಮಾಡುವುದರಿಂದ ಇರುವ ತೊಂದರೆ ಏನು? ಸತ್ಯ ಹೊರಗೆ ಬರಲಿ. ಇದರಲ್ಲಿ ಯಾವುದೇ ರಾಜಕಾರಣ ಇಲ್ಲ. ಇದು ಈ ನಾಡಿನ ಜನರ ಆರೋಗ್ಯ, ಬದುಕು ಮತ್ತು ಜೀವನದ ವಿಚಾರವಾಗಿದೆ. ನನಗೆ ಆಳವಾಗಿ ಗೊತ್ತಿದೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ನಮಗೂ ಸಹ ಜನರ ಬಗ್ಗೆ ಕಾಳಜಿ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಶೇ. 90 ರಷ್ಟು ಕಾಲೇಜುಗಳಲ್ಲಿ physically ನಡೆಯುತ್ತಿಲ್ಲ. ಭೋದನೆ ಇಲ್ಲ. Certificate ಸಿಗುತ್ತಿದೆ. ಹಣ ನೀಡಿದ ಹಾಗೆ ಮೆರಿಟ್ ಮೇಲೆ ಸೀಟು ಸಿಗುತ್ತಿದೆ. ದಯವಿಟ್ಟು ಸತ್ಯ ಹೊರಗೆ ಬರುವಂತೆ ಮಾಡೋಣ. ಈ ನಾಡಿನ ಜನರ ಆರೋಗ್ಯವನ್ನು ಉಳಿಸುವ ಕೆಲಸ ಮಾಡೋಣ. ದಯವಿಟ್ಟು ಸದನ ಸಮಿತಿ ರಚನೆ ಆಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಕೇಳುತ್ತಾರೆ ಎಂದು ಸದನ ಸಮಿತಿ ರಚನೆ ಮಾಡುವುದಕ್ಕಾಗುವುದಿಲ್ಲ. ಎಲ್ಲಿ ಅಕ್ರಮವಾಗಿದೆ, ತಪ್ಪಾಗಿದೆ ಅದರ ಮೇಲೆ ತನಿಖೆ ಮಾಡುತ್ತೇವೆ ಎಂದು ಈಗಾಗಲೇ ಮಾನ್ಯ ಸಚಿವರು ತಿಳಿಸಿದ್ದಾರೆ. ದಯವಿಟ್ಟು ಸದನ ನಡೆಸುವುದಕ್ಕೆ ಎಲ್ಲರೂ ಅವಕಾಶ ಮಾಡಿಕೊಡಬೇಕು.

**(ಈ ಹಂತದಲ್ಲಿ ಮಾನ್ಯ ಕೆ.ಟಿ.ಶ್ರೀಕಂಠೇಗೌಡ ಸದನದ ಬಾವಿಗೆ ಬಂದು ಧರಣಿ ನಿರತರಾದರು ಹಾಗೂ ಮಾನ್ಯ ಹೆಚ್.ಎಂ.ರಮೇಶ ಗೌಡರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಸಮಗ್ರವಾದ ಉತ್ತರವನ್ನು ನೀಡಿದ್ದಾರೆ. ಯಾವುದು illegal ಕಾಲೇಜುಗಳಿವೆ ತನಿಖೆ ಮಾಡುತ್ತೇವೆ, ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಂಕನೂರರವರೆ ಮಾನ್ಯ ಸಚಿವರು ಸದನದಲ್ಲಿದ್ದಾರೆ. ತಾವೇನು ಉತ್ತರ ನೀಡುವುದು ಕುಳಿತುಕೊಳ್ಳಿ. ತಾವೇನು ಮಾನ್ಯ ಸಚಿವರ ಪರವಾಗಿ ಉತ್ತರ ನೀಡುತ್ತಿದ್ದೀರಾ?

**ಸಭಾಪತಿಯವರು:–** ಈಗಾಗಲೇ ಮಾನ್ಯ ಎಂ.ನಾರಾಯಣಸ್ವಾಮಿಯವರಿಗೆ ಗಮನ ಸೆಳೆಯುವ ಸೂಚನೆ ಮೇಲೆ ಪ್ರಸ್ತಾಪ ಮಾಡಲು ಕರೆಯಲಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ನಮ್ಮ ಪ್ರಶ್ನೆ ಇದೆ, ದಯವಿಟ್ಟು ಸದನ ನಡೆಸುವುದಕ್ಕೆ ಅನುಮತಿ ಮಾಡಿಕೊಡಬೇಕು. ಮುಂದಿನ ಪ್ರಶ್ನೆಯನ್ನು ಮುಂದುವರೆಸಬೇಕು.

**ಸಭಾಪತಿಯವರು:–** ಮಾನ್ಯ ಎಂ.ನಾರಾಯಣಸ್ವಾಮಿ ಮಾತನಾಡಿ. ನೀವು ಪ್ರಶ್ನೆಯನ್ನು ಮುಂದುವರೆಸಿ ಎಂದರೆ ಸುಮ್ಮನೆ ಇದ್ದೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, the House is not in order. House order ನಲ್ಲಿ ಇಲ್ಲದಿರುವಾಗ ನಾನು ಹೇಗೆ ಪ್ರಶ್ನೆಯನ್ನು ಕೇಳಲಿ?

**ಸಭಾಪತಿಯವರು:-** ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಅವರಿಗೆ ತಿಳಿಸಿದ್ದೇನೆ. ಸರ್ಕಾರ ಸದನ ಸಮಿತಿ ರಚನೆಗೆ ಒಪ್ಪಲಿಲ್ಲವೆಂದರೆ, ನಾನು ಏನು ಮಾಡಬೇಕು?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದಂಥ ಪ್ರಶ್ನೆಯನ್ನು ನಾನು ಕೇಳಬೇಕಾಗಿದೆ. House order ನಲ್ಲಿ ಇಲ್ಲದಿರುವಾಗ ನಾನು ಹೇಗೆ ಪ್ರಶ್ನೆಯನ್ನು ಕೇಳಲಿ.

**ಸಭಾಪತಿಯವರು:-** ಆಯಿತು. ಅವರು ಎಷ್ಟು ಸಮಯಗಳ ಕಾಲ ಮಾತನಾಡುತ್ತಾರೆಯೋ ಮಾತನಾಡಲಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದಂಥ ಪ್ರಶ್ನೆಯನ್ನು ನಾನು ಕೇಳಬೇಕಾಗಿದೆ. ದಯವಿಟ್ಟು House ನ್ನು order ಗೆ ತನ್ನಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾವು ಸಹ ಈ ವಿಚಾರದಲ್ಲಿ ಮಾತನಾಡಬೇಕಾಗಿತ್ತು. ಆದರೆ, ಮಾನ್ಯ ಸಚಿವರು ಒಂದು ನೈತಿಕವಾದ ವಿಚಾರದಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಇದು ಈ ಸದನದ ನೈತಿಕ ವಿಚಾರ. ಆದ್ದರಿಂದ ನಾವು ಈ ವಿಚಾರದಲ್ಲಿ ಪಾಲ್ಗೊಳ್ಳುವುದಿಲ್ಲ. ನಾವು ಇದನ್ನು ಬಹಿಷ್ಕಾರ ಮಾಡುತ್ತೇವೆ. ಇಲ್ಲದಿದ್ದರೆ ನಾವು ಸಹ ಇದರಲ್ಲಿ ಪಾಲ್ಗೊಳ್ಳಬೇಕಾಗಿತ್ತು.

**ಸಭಾಪತಿಯವರು:-** ಈ ರೀತಿ ಮಾಡಿದರೆ ಸದನ ನಡೆಸುವುದು ಬಹಳ ಕಷ್ಟವಾಗುತ್ತದೆ. ಒಂದು ರೀತಿ-ನೀತಿ ಇರಬೇಕು. ಹೇಳಿದ ವಿಚಾರವನ್ನೇ ಪದೇ ಪದೇ ಹೇಳಿದರೆ ಏನು ಮಾಡಬೇಕು. ಹೇಳಿದ ಹಾಗೆಯೇ ಮಾಡಬೇಕೆಂದರೆ ಹೇಗೆ ಸಾಧ್ಯ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು ಹಾಗೂ ಮಾನ್ಯ ರಮೇಶ ಗೌಡರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಸಭಾಪತಿಯವರು:–** ಸರ್ಕಾರ ಉತ್ತರ ನೀಡಿದ್ದು, ತಾವು ಸಹ ಕೇಳಿದ್ದೀರಿ. ಇಲ್ಲದಿದ್ದರೆ ಬೇರೆ ರೂಪದಲ್ಲಿ ಈ ಪ್ರಶ್ನೆಯನ್ನು ತನ್ನಿ. ಸದನ ಸಮಿತಿ ಮಾಡುವಂಥ ಅಧಿಕಾರ ನನಗೆ ಇಲ್ಲ. ಸರ್ಕಾರಕ್ಕೆ ಬಿಟ್ಟ ವಿಚಾರ. ಸರ್ಕಾರ ಏನು ಹೇಳುತ್ತದೆ ಹೇಳಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸಭಾನಾಯಕರಿಗೆ, ಮಾನ್ಯ ಸಚಿವರಿಗೆ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇವೆ.

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೆ ನಿಮಗೆ ಏನು ಅನಿಸುವುದಿಲ್ಲವೇ? ಏತಕ್ಕೆ ಈ ರೀತಿ ಮಾಡುತ್ತೀರಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸಭಾನಾಯಕರಿಗೆ ಹಾಗೂ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಇದು ಸತ್ಯವನ್ನು ಹೊರಗೆ ತೆಗೆಯುವ ವಿಚಾರವಾಗಿದೆ. ಸಚಿವರು ತಪ್ಪು ಮಾಡಿದ್ದಾರೆ ಎಂದು ನಾವು ಹೇಳುತ್ತಿಲ್ಲ ಅಥವಾ ಮಾನ್ಯ ಸಚಿವರು ಅಥವಾ ಈ ಸರ್ಕಾರ ಇದಕ್ಕೆ ಹೊಣೆ ಎಂದು ಹೇಳುತ್ತಿಲ್ಲ. ವಾಸ್ತವವಾಗಿ ಈ ನಾಡಿನಲ್ಲಿ 90% of the B.Sc. Nursing and Paramedical Courses are physically not running. ಏನು ತಿಳಿಯದ ಹುಡುಗ ಬಂದು ರೂ.10 ರಿಂದ 20 ಲಕ್ಷ ಲಂಚ ನೀಡಿ ಪ್ರಮಾಣಪತ್ರವನ್ನು ಪಡೆದುಕೊಳ್ಳುತ್ತಾನೆ. ಆತ ಕಾಲೇಜ್‌ಗೆ ಹೋಗುವುದಿಲ್ಲ.

**(ಗೊಂದಲ)**

**ಡಾ: ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಅದು ಸರ್ಕಾರಕ್ಕೂ ಗೊತ್ತಿದೆ. ಈ ಮೊದಲು ಯಾವ ಸರ್ಕಾರ ಅಸ್ತಿತ್ವದಲ್ಲಿತ್ತು. ಮಾನ್ಯ ಸಚಿವರು ಈಗಾಗಲೇ ತನಿಖೆ ಮಾಡುತ್ತೇವೆ, ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದಾರೆ. ಮತ್ತೆ ಏತಕ್ಕೆ ಸದನ ಸಮಿತಿ ರಚನೆ ಮಾಡಬೇಕು? ಅವರು ಮಾನ್ಯ ಸಚಿವರಿಗೆ ಬಾಯಿಗೆ ಬಂದ ಹಾಗೆ ಮಾತನಾಡಬಾರದು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ ಈ ರೀತಿಯಾದರೆ ನಾನು ಹೇಗೆ ಸದನ ನಡೆಸುವುದು?

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(ಗೊಂದಲ)**

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಮೊದಲು ತನಿಖೆಯಾಗಲಿ.

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಎಷ್ಟು ಸಲ ಹೇಳಬೇಕು. ಮಾನ್ಯ ಸಭಾನಾಯಕರೆ ತಮ್ಮ ಉತ್ತರ ಏನೆಂದು ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ಕೇಳಿದಂಥ ಪ್ರಶ್ನೆಗೆ ಮಾನ್ಯ ಸಚಿವರು ಸಮರ್ಪಕವಾದ ಉತ್ತರ ನೀಡಿದ್ದಾರೆ. ಆದರೂ ಸಹ ಹಿರಿಯ ಸದಸ್ಯರಾದ ಮಾನ್ಯ ಶ್ರೀಕಂಠೇಗೌಡರು ಮತ್ತು ಮಾನ್ಯ ಮರಿತಿಬ್ಬೇಗೌಡರು ಇನ್ನು ಕೆಲವು ಸಮಸ್ಯೆಗಳಿವೆ, ಅಕ್ರಮವಾಗಿವೆ, ಭ್ರಷ್ಟಚಾರವಾಗಿದೆ ಎನ್ನುವಂಥ ವಿಚಾರವನ್ನು ಹೇಳುತ್ತಿದ್ದು, ಅದಕ್ಕೆ ಬೇಕಾದಂಥ ಸಮಗ್ರವಾದ ತನಿಖೆಯನ್ನು ಸರ್ಕಾರ ಮಾಡುತ್ತದೆ. ಯಾವುದೇ ಕಾರಣಕ್ಕೂ ಈ ವಿಚಾರದಲ್ಲಿ ಸದನ ಸಮಿತಿ ರಚನೆ ಮಾಡುವ ಅಗತ್ಯ ಇಲ್ಲವೆಂದು ಸರ್ಕಾರ ಭಾವಿಸುತ್ತದೆ. ದಯವಿಟ್ಟು ಅವರೆಲ್ಲರೂ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಉತ್ತರ ನೀಡಿದರು. ನನ್ನ ಒಂದು ಪ್ರಶ್ನೆಯೇನೆಂದರೆ,...

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೆ ತಮಗೆ ಹೇಳುವವರು, ಕೇಳುವವರು ಯಾರು ಇಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆಯಲ್ಲಿಯೇ 55 ನರ್ಸಿಂಗ್ ಕಾಲೇಜ್‌ಗಳಿವೆ. ಆ ಕಾಲೇಜ್‌ಗೆ ಮಕ್ಕಳು ಎಲ್ಲಿಂದ ಬರುತ್ತಿದ್ದಾರೆ? ನಾನು ಅವರು ಕಾಲೇಜ್‌ಗೆ ಅನುಮತಿ ನೀಡಿದ್ದಾರೆ ಎಂದು ಹೇಳುತ್ತಿಲ್ಲ. ಈ ನಾಡಿನಲ್ಲಿ B.Sc. Nursing ಮತ್ತು Paramedical Course ನಲ್ಲಿ ದೊಡ್ಡ ದಂಧೆಯಾಗುತ್ತಿದೆ. ಇದನ್ನು ನಾವು ಪತ್ತೆ ಹಚ್ಚಲೇಬೇಕು. ಹೀಗೆ ಎಷ್ಟು ವರ್ಷ ಬಿಡುವುದು. ಅಮಾಯಕ ಜನರು ಬಲಿಯಾಗಬಾರದಲ್ಲವೇ? ಹಾಗಾಗಿ ದಯವಿಟ್ಟು ಮುಕ್ತ ಮನಸ್ಸಿನಿಂದ ಸರ್ಕಾರ ಸದನ ಸಮಿತಿ ರಚನೆ ಮಾಡಲಿ. ಸತ್ಯ ಹೊರಗೆ ಬರುವಂತೆ ಮಾಡೋಣ. ಅವುಗಳನ್ನು streamline ಗೆ ತರೋಣ, ಅವು ನಡೆಯುವ ಹಾಗೆ ಮಾಡೋಣ ಅಲ್ಲಿ ಮಕ್ಕಳಾಗಲಿ, ಪ್ರಾಚಾರ್ಯರಾಗಲಿ ಎಲ್ಲಿದ್ದಾರೆ ಹೇಳಿ?

**(ಈ ಹಂತದಲ್ಲಿ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**(ಗೊಂದಲ)**

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದರಲ್ಲಿ ಸರ್ಕಾರವಾಗಲಿ, ಪಕ್ಷವಾಗಲಿ ಮುಜುಗರಕ್ಕೆ ಒಳಗಾಗುವ ವಿಚಾರವೇನಿಲ್ಲ.

**(ಮುಂದು)**

**(510) 18.03.2021/6.00/ಎಸ್‌ಕೆ-ಎಕೆ**

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ರವಿಯವರೇ ಒಂದೇ ನಿಮಿಷ. ಸಚಿವರಿಗೆ ಪ್ರಶ್ನೆಯನ್ನು ಕೇಳಿದ್ದೆ. ನಾನು ಎರಡೇ ವಾಕ್ಯದಲ್ಲಿ ಹೇಳುತ್ತೇನೆ. ಆನಂತರ ತಾವು ಮಾತನಾಡಿ. ರಾಜ್ಯದಲ್ಲಿ ಸುಮಾರು 600 ಕ್ಕಿಂತ ಹೆಚ್ಚು ನರ್ಸಿಂಗ್ ಕಾಲೇಜುಗಳಿವೆ ಮತ್ತು ಅಲ್ಲಿ ಮೂಲಭೂತ ಸೌಕರ್ಯಗಳಿಲ್ಲ ಮತ್ತು ಇತ್ಯಾದಿ ವಿಷಯಗಳ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ತನಿಖೆ ಮಾಡುತ್ತೇನೆಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಒಂದು ವಾಕ್ಯವನ್ನು ಸೇರಿಸುತ್ತೇನೆ. ಬರೀ ಬೀದರ್ ಜಿಲ್ಲೆಯಲ್ಲಿ ಸುಮಾರು 20 ರಿಂದ 30 ಕಾಲೇಜುಗಳಿವೆ. ಕೇರಳದವರು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಸುಮಾರು 55 ಕಾಲೇಜುಗಳಿವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎನ್. ರವಿಕುಮಾರ್:-** ಇರಬಹುದು. ಆದರೆ ನನಗೆ ನಿಖರವಾಗಿ ಕಾಲೇಜುಗಳ ಸಂಖ್ಯೆ ಗೊತ್ತಿಲ್ಲ. ಸುಮಾರು 20 ರಿಂದ 30 ಕಾಲೇಜುಗಳಿರಬಹುದು. ಬರೀ ಪರೀಕ್ಷೆ ಬರೆಯುವುದಕ್ಕೆ ಮಾತ್ರ ಬರುತ್ತಾರೆ. ಹಾಗಾಗಿ ನಾನು ಏನು ಹೇಳುತ್ತಿದ್ದೇನೆಂದರೆ, ಮಾನ್ಯ ಸಚಿವರು ಇಷ್ಟು ಕಾಲೇಜುಗಳಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ವಿಚಾರಣೆ ಮಾಡುತ್ತೇನೆಂದು ಹೇಳಿದ್ದಾರೆ. ಅದನ್ನು ಕೂಡ ನಾನು ಸ್ವಾಗತ ಮಾಡುತ್ತೇನೆ. ನನ್ನ ಪ್ರಶ್ನೆಗೆ ಬೆಂಬಲಿಸಿರತಕ್ಕಂತಹ ಅವರ ಕಳಕಳಿಗೆ ನಾನು ಅಭಿನಂದನೆಯನ್ನು ವ್ಯಕ್ತಪಡಿಸುತ್ತೇನೆ. ಈ ವಿಷಯದ ಬಗ್ಗೆ ನಾನು ಅನೇಕ ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದೇನೆ. ಮಾನ್ಯ ಸಚಿವರು ಇದನ್ನು ಸಂಪೂರ್ಣವಾಗಿ ವಿಚಾರಣೆ ಮಾಡುತ್ತೇನೆಂದು ಹೇಳಿದ್ದಾರೆ. ಅದನ್ನು ಕೂಡ ನಾನು ಸ್ವಾಗತ ಮಾಡುತ್ತೇನೆ. ನಮಗೆ ಬೆಂಬಲಿಸಿರತಕ್ಕಂತಹ ನಮ್ಮ ಎಲ್ಲಾ ಮಿತ್ರರು ಮತ್ತು ಗೌರವಾನ್ವಿತ ಸದಸ್ಯರು ಇದನ್ನು ಒಪ್ಪಿಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಇದು ಸರಿಯಿದೆ. ಮಾನ್ಯ ನಾರಾಯಣಸ್ವಾಮಿಯವರೇ ತಾವು ಕೇಳಿತ್ತೀರೋ ಇಲ್ಲವೋ, ತಾವು ಕೇಳಿಬಿಡಿ. ಮಾನ್ಯ ಸದಸ್ಯರು ಯಾರೂ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, House order ನಲ್ಲಿ ಇಲ್ಲದೇ ತಾವು ಪ್ರಶ್ನೆ ಕೇಳಿ ಎಂದರೆ ಹೇಗೆ? First you bring the House into order. ಆನಂತರ ಪ್ರಶ್ನೆ ಕೇಳುತ್ತಾರೆ. ಇದರ ಬಗ್ಗೆ ಸರಿಯಾಗಿ ಚರ್ಚೆಯಾಗಬೇಕು.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ದಯವಿಟ್ಟು, ಮಾನ್ಯ ರವಿಕುಮಾರ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿ. ಆದರೆ ಬೇರೆಯವರು ಬೇಡ. ... ಮಾನ್ಯ ಸಭಾನಾಯಕರೇ, ... ಸದನ ಸಮಿತಿ ಮಾಡಿ.

**(ಗೊಂದಲ)**

**ಸಭಾಪತಿಯವರು:-** ದಯವಿಟ್ಟು ಮಾನ್ಯ ಶ್ರೀಕಂಠೇಗೌಡರೇ ಒಂದು ನಿಮಿಷ ಕೇಳಿ. ಯಾವುದೂ ಸಹ ಕಡತಕ್ಕೆ ಹೋಗಬಾರದು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರು ಮಾತನಾಡಿರುವುದನ್ನು ನಡೆವಳಿಯಲ್ಲಿ ದಾಖಲಿಸಿರುವುದಿಲ್ಲ.)**

**(ಗೊಂದಲ)**

**ಸಭಾಪತಿಯವರು:–** ನಾನು ಹೇಳುವುದನ್ನು ಅವರು ಕೇಳುವುದಿಲ್ಲ. **(ಗೊಂದಲ)** ನೋಡಿ ಒಂದು ನಿಮಿಷ ನನ್ನ ಮಾತನ್ನು ಕೇಳಿ. ಮಾನ್ಯ ಸಚಿವರು ಇದರ ಬಗ್ಗೆ ವಿಚಾರಣೆ ಮಾಡುತ್ತಾರೆಂದು ಎಂದು ಹೇಳಿದ್ದಾರೆ. ದಯವಿಟ್ಟು, ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾಳಗಳಿಗೆ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಆ ವಿಚಾರಣೆಗೆ ಹೋದರೆ ನ್ಯಾಯ ಸಿಗುವುದಿಲ್ಲ. ಡಾ॥ ತೇಜಸ್ವಿನಿ ಗೌಡರವರನ್ನು ಅಧ್ಯಕ್ಷರನ್ನಾಗಿ ಮಾಡಿ. ಇಲ್ಲವಾದರೆ ಮಾನ್ಯ ರವಿಕುಮಾರ್‌ರವರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿ. ಮಾನ್ಯ ಸಚಿವರನ್ನಾದರೂ ಅಧ್ಯಕ್ಷರನ್ನಾಗಿ ಮಾಡಿ. ಇದಕ್ಕೆ ನಮ್ಮ ಅಡ್ಡಿ ಇಲ್ಲ. ಈ ವಾಸ್ತವಾಂಶದ ಬಗ್ಗೆ ಸತ್ಯ ಹೊರಗೆ ಬರಬೇಕು.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, **(ಗೊಂದಲ)** ಮಾನ್ಯ ಸಚಿವರನ್ನು ... ಮಾನ್ಯ ಸಚಿವರಿಗೆ ಒಂದು ಅವಕಾಶ ಕೊಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಇದು ಹುಡುಗಾಟವಲ್ಲ. 36 ವರ್ಷಗಳ ಕಾಲ ನಾನು ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡಿದ್ದೇನೆ. ಎಷ್ಟು ದಿನ ಈ ದಂಧೆಯನ್ನು ಸುಧಾರಿಸಬೇಕು ನಾವು.

**ಸಭಾಪತಿಯವರು:–** ಮಾನ್ಯ ಸುಧಾಕರ್‌ರವರೇ ತಮ್ಮದೇನಿದೆ ಎಂಬುದರ ಬಗ್ಗೆ ಹೇಳಿ. ಮಾನ್ಯ ಶ್ರೀಕಂಠೇಗೌಡರೇ ದಯವಿಟ್ಟು ಕುಳಿತುಕೊಳ್ಳಿ.

**ಡಾ॥ ಕೆ. ಸುಧಾಕರ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಸುಮಾರು 650 ನರ್ಸಿಂಗ್ ಕಾಲೇಜುಗಳಿವೆ ಎಂದು ಈಗಾಗಲೇ ನಾನು ಹೇಳಿದ್ದೇನೆ. ಸುಮಾರು 650 ಕಾಲೇಜುಗಳಲ್ಲಿ ಕೆಲವು ಕಾಲೇಜುಗಳಲ್ಲಿ ಲೋಪದೋಷಗಳಿವೆ. ಯಾರ್‍ಯಾರ ಕಾಲದಲ್ಲಿ ಎಷ್ಟು ಕೊಟ್ಟರು ಎಂಬ ಬಗ್ಗೆ ಮಾಹಿತಿಯನ್ನು ತರಿಸುತ್ತಿದ್ದೇನೆ. ಆನಂತರ ಎಲ್ಲವೂ ಕೂಡ ಹೇಳುತ್ತೇನೆ. ಈ ಬಾರಿ ಆಗಿರತಕ್ಕಂತಹ ಸುಮಾರು 45 ಕಾಲೇಜುಗಳಲ್ಲಿ ಏನು ಕೊಟ್ಟಿದ್ದೇವೆ. ಅದು ಎಷ್ಟು ಶಿಸ್ತು ಬದ್ಧವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆದಿದೆ ಎನ್ನುವುದು ಕೂಡ ತನಿಖೆಯಿಂದ ಹೊರ ಬರುತ್ತದೆ. ಈ ರಾಜ್ಯದಲ್ಲಿ 650 ಕಾಲೇಜುಗಳ ಹಿಂದೆ ಯಾರ್ಯಾರು ಮಂತ್ರಿಗಳಾಗಿದ್ದಾಗ, ಈ ರಾಜ್ಯದಲ್ಲಿ ಮಾಡಿಕೊಟ್ಟಿದ್ದರು. ಅದರ ಪರಿಸ್ಥಿತಿಯ ಬಗ್ಗೆ ಈ ರಾಜ್ಯದ ಜನತೆಗೆ ಗೊತ್ತಾಗುತ್ತದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಇದನ್ನು ಮಾಡಿದರೆ ಬಹಳ ಒಳ್ಳೆಯದು.

**ಸಭಾಪತಿಯವರು:-** ಮಾನ್ಯ ಸದಸ್ಯರೇ ಮಾತನಾಡಬೇಡಿ. ಬಾವಿಯಲ್ಲಿ ನಿಂತು ಏಕೆ ಮಾತನಾಡುತ್ತೀರಾ?

**ಡಾ|| ಕೆ. ಸುಧಾಕರ್:-** ಹಾಗಾಗಿ ವಿಚಾರಣೆ ನಡೆಸಿ, ಎಲ್ಲಾ ಕಾಲೇಜುಗಳನ್ನು ಸಮರ್ಪಕವಾಗಿ ತೆಗೆದುಕೊಂಡು, ಸರ್ಕಾರವೇ ಉನ್ನತ ಮಟ್ಟದ ತನಿಖೆಯನ್ನು ಮಾಡಿ, ಮೂರು ತಿಂಗಳೊಳಗಾಗಿ ಇದೇ ಸದನಕ್ಕೆ ನಾವು ಸಂಪೂರ್ಣವಾದ ವರದಿಯನ್ನು table ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ ಸರಿಯಿದೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂದಿರುಗಿದರು.)**

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ ಒಂದು ನಿಮಿಷ ಕೇಳಿ. ಸಭಾಪತಿಯವರಿಗೆ ಗೌರವವನ್ನು ಕೊಡುವುದನ್ನು ಕಲಿಯಿರಿ.

**ಶ್ರೀ ಮರಿತಿಬ್ಬೇಗೌಡ:-** ಆಯಿತು. ಸಭಾಪತಿಯವರೇ ಹೇಳಿ.

**ಸಭಾಪತಿಯವರು:-** ಮಾನ್ಯ ಸಚಿವರು ಮೂರು ತಿಂಗಳೊಳಗಾಗಿ ವರದಿಯನ್ನು ಕೊಡುತ್ತೇನೆಂದು ಹೇಳಿದ್ದಾರೆ. ಮಾನ್ಯ ಸಚಿವರು ಈ ಸದನಕ್ಕೆ ವರದಿ ಕೊಟ್ಟ ನಂತರ ಚರ್ಚೆ ಮಾಡೋಣವೆಂದು ಹೇಳಿದ್ದಾರೆ. ಮಾನ್ಯ ಸಚಿವರು ವರದಿ ಕೊಟ್ಟ ನಂತರ ಮುಂದೆ ವಿಚಾರ ಮಾಡೋಣ.

**ಶ್ರೀ ಮರಿತಿಬ್ಬೇಗೌಡ:-** ಇದು ನಮಗೆ ಒಪ್ಪಿಗೆ ಇಲ್ಲ. ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ಸದನ ಸಮಿತಿಯಾಗಲೇ ಬೇಕು.

**(ಈ ಹಂತದಲ್ಲಿ ಮಾನ್ಯ ಮರಿತಿಬ್ಬೇಗೌಡರು ಸದನದ ಬಾವಿಗೆ ಆಗಮಿಸಿದರು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ ಒಂದು ನಿಮಿಷ ಕೇಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಸದನದ ಬಾವಿಯಲ್ಲಿ ನಿಂತು ಮಾತನಾಡಿದರು.)**

**(ಗೊಂದಲ)**

**ಸಭಾಪತಿಯವರು:-** ಯಾವುದೂ ಕೂಡ ಕಡತಕ್ಕೆ ಹೋಗಬಾರದು.

**(ಗೊಂದಲ)**

**(ಈ ಮಾನ್ಯ ಸಭಾಪತಿಯವರ ಆದೇಶಾನುಸಾರ ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡಿರುವುದನ್ನು ನಡೆವಳಿಯಲ್ಲಿ ದಾಖಲಿಸಿರುವುದಿಲ್ಲ.)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ ಒಂದು ನಿಮಿಷ ಕೇಳಿ. ನಾನು ಹೇಳುವುದನ್ನು ಕೇಳುವುದಿಲ್ಲವೆಂದರೆ ಹೇಗೆ? ಮಾನ್ಯ ಶ್ರೀಕಂಠೇಗೌಡರೇ, ಸರ್ಕಾರದ ಗಮನಕ್ಕೆ ತಂದಿದ್ದೀರಿ. ಈಗಾಗಲೇ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ಹೀಗೆ ಮಾಡಿ ಎಂದು ಹೇಳುವುದಕ್ಕೆ ನನಗೆ ಅಧಿಕಾರವಿಲ್ಲ. ಇದಕ್ಕಿಂತ ಹೆಚ್ಚಾಗಿ ಮಾನ್ಯ ಸಚಿವರು ಸದನ ಸಮಿತಿ ಮಾಡುವುದಕ್ಕೆ ಒಪ್ಪುತ್ತಿಲ್ಲ. ಮಾನ್ಯ ಸಚಿವರು ಇದರ ಬಗ್ಗೆ ವಿಚಾರಣೆ ಮಾಡಿ, ಮೂರು ತಿಂಗಳೊಳಗಾಗಿ ವರದಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ.

**(ಈ ಹಂತದಲ್ಲಿ ಮಾನ್ಯ ಕೆ.ಟಿ. ಶ್ರೀಕಂಠೇಗೌಡರು ಸದನದ ಬಾವಿಗೆ ಆಗಮಿಸಿದರು.)**

ಈ ವರದಿ ಬಂದ ನಂತರ ಇನ್ನು ಉಳಿದಿದ್ದು ಮಾಹಿತಿ ಏನಿದೆಯೋ, ಅದನ್ನು ಕೊಡಲಿ. ದಯವಿಟ್ಟು, ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೋಗಬೇಕೆಂದು ನನ್ನ ವಿನಂತಿ. ಸದನವನ್ನು ಹೇಗೆ ನಡೆಸಬೇಕು ತಾವೇ ಹೇಳಿ. ಪ್ರಶ್ನೆಗಳು ಮತ್ತು ಇತರೆ ವಿಚಾರಗಳು ಈ ದಿನ ಹಾಗೆಯೇ ಉಳಿದುಕೊಳ್ಳುತ್ತೇವೆ. ತಮ್ಮಂತೆಯೇ ಬೇರೆ ಸದಸ್ಯರೆಲ್ಲರೂ ಸಹ ಪ್ರಶ್ನೆಗಳನ್ನು ಮತ್ತು ಇತರೆ ವಿಚಾರಗಳನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿದ್ದಾರಲ್ಲವೆ, ಸದನ ಹೇಗೆ ನಡೆಸಬೇಕು ಎಂಬುದನ್ನು ತಾವೇ ಹೇಳಿ. ತಾವೊಬ್ಬ ಹಿರಿಯ ಸದಸ್ಯರಿದ್ದೀರಿ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಸದಸ್ಯರೆಲ್ಲರೂ ಬಾವಿಯಲ್ಲಿಯೇ ಕುಳಿತುಕೊಂಡರು.)**

ಆಯಿತು. ನಾನು ಸದನವನ್ನು ಮುಂದುವರೆಸುತ್ತೇನೆ ಅಷ್ಟೆ. ನಾನು ಮತ್ತೆ ಏನು ಮಾಡುವುದಕ್ಕಾಗುತ್ತದೆ? ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಇವೆಲ್ಲವೂ ಹೋಗುತ್ತೇವೆ. ನಾನು ಇವು ಹೋಗುವುದು ಬೇಡ ಎಂದು ಹೇಳುತ್ತೇನೆ. ದಯವಿಟ್ಟು, ನನ್ನ ಮಾತನ್ನು ಕೇಳಿ. ಇನ್ನೊಂದು ಸಾರಿ ಈ ರೀತಿ ಹಠ ಮಾಡುವುದು ಸರಿಯಲ್ಲ. ಇದು Calling Attention ಎಂದು ತಾವೆಲ್ಲರೂ ತಿಳಿದುಕೊಳ್ಳಬೇಕು. ತಿಳುವಳಿಕೆಯಿದ್ದಂತಹವರು ಈ ರೀತಿ ಮಾಡಿದರೆ, ಸದನವನ್ನು adjourn ಮಾಡಿದರೆ ಏನಾಗುತ್ತದೆ? ಮಾನ್ಯ ಸದಸ್ಯರೆಲ್ಲರೂ ಇಷ್ಟೊಂದು ಪ್ರಶ್ನೆಯನ್ನು ಕೇಳಿದ್ದಾರೆ. ಸದನವು order ನಲ್ಲಿ ಇಲ್ಲವೆಂದಾಗ ನಾನು ಏನು ಮಾಡುವುದಕ್ಕಾಗುತ್ತದೆ? ಮಾನ್ಯ ವಿರೋಧ ಪಕ್ಷದ ನಾಯಕರೇ ಏನು ಮಾಡಬೇಕು ಹೇಳಿ?

**Sri S.R. PATIL:** Mr. Chairman Sir, you bring the House into order. ಗೌರವಾನ್ವಿತ ಪ್ರತಿ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿದ್ದಾರೆ. ಮಾನ್ಯ ಸದಸ್ಯರು ಬಾವಿಯಲ್ಲಿದ್ದುಕೊಂಡು ಕೂಗುತ್ತಿದ್ದಾರೆ ಮತ್ತು ಅವರು ಬಾವಿಯಲ್ಲಿದ್ದಾಗ, ನಾವು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ, ಇದರಲ್ಲಿ ಹೇಗೆ ಭಾಗವಹಿಸಬೇಕೆಂಬುದನ್ನು ತಾವೇ ಹೇಳಿ. ಅನೇಕ ಸಂದರ್ಭದಲ್ಲಿ ಈ ರೀತಿ...

**ಸಭಾಪತಿಯವರು:-** ಆಯಿತು. ಬೇಡ ಎಂದರೆ ಬಿಟ್ಟು ಬಿಡಿ. ನಾನು ಮತ್ತೆ ಏನು ಮಾಡುವುದಕ್ಕಾಗುತ್ತದೆ? ಅವರು ಹೇಳುವುದಕ್ಕೆ ಏನು ಮಾಡಬೇಕು?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, House order ನಲ್ಲಿಯಾದರೂ ಇರಬೇಕಲ್ಲ.

**ಸಭಾಪತಿಯವರು:-** ತಾವು ಬಾವಿಯಲ್ಲಿದ್ದಾಗಲೂ ಕೂಡ ಬಿಲ್‌ನ್ನು ಪಾಸ್ ಮಾಡಿದ್ದಾರೆ ಮತ್ತು ಎಲ್ಲವನ್ನೂ ಮಾಡಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನೋಡಿ ಇದು ತಮಗೆ ಶೋಭೆ ಕಾಣುವುದಿಲ್ಲ. ಯಾವಾಗಲೂ ಈ ಸದನದಲ್ಲಿ ಸದಸ್ಯರು ಬಾವಿಯಲ್ಲಿದ್ದಂತಹ ಸಂದರ್ಭದಲ್ಲಿ ಏನಾದರೂ transactions, business ಆಗಿರುವ ಬಗ್ಗೆ ಉದಾಹರಣೆಗಳಿವೆಯೇ?

**ಸಭಾಪತಿಯವರು:-** ನನಗೆ ಉತ್ತರ ಹೇಳುವುದಕ್ಕೆ ಕಷ್ಟವಾಗುತ್ತದೆ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ಹತ್ತು ನಿಮಿಷಗಳ ಕಾಲ ಸದನವನ್ನು adjourn ಮಾಡಿದ ನಂತರ ಅವರ ಹತ್ತಿರ ಮಾತನಾಡಿದ ಮೇಲೆ ಸದನವನ್ನು ಕರೆಯಿರಿ.

**ಶ್ರೀ ಎಸ್.ಆರ್. ಪಾಟೀಲ್:-** ಅದು ಸತ್ಸಂಪ್ರದಾಯ. ತಾವು..

**ಸಭಾಪತಿಯವರು:-** ಮಾನ್ಯ ಪಾಟೀಲ್‌ರವರೇ, ನನಗೆ ಗೊತ್ತಿದೆ. ನಿಮಗೆಲ್ಲಾ ಇಷ್ಟೆಲ್ಲಾ ಹೇಳಿ, ನಾನು ವಿನಂತಿ ಮಾಡಿಕೊಂಡೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ತಮಗೆ ವಿನಂತಿ ಮಾಡಿಕೊಳ್ಳುತ್ತೇವೆ. ನನ್ನದು ನಿಯಮ 330 ಇದೆ. ಅನೇಕ ಸದಸ್ಯರ Calling Attention ಇದೆ. We are very much interested. ಸದಸ್ಯರೆಲ್ಲರೂ ಬಾವಿಯಲ್ಲಿದ್ದಾಗ, ನಾವು ಚರ್ಚೆ ಮಾಡುವುದು ಸರಿಯಾಗಿ ಕಾಣುವುದಿಲ್ಲ.

**ಸಭಾಪತಿಯವರು:-** ಆಯ್ತು. ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡುತ್ತೇನೆ. ದಯವಿಟ್ಟು, ಎಲ್ಲಾ ನಾಯಕರು ಮತ್ತು ಮಾನ್ಯ ಮಂತ್ರಿಗಳು ನಮ್ಮ ಛೇಂಬರ್‌ಗೆ ಬನ್ನಿ.

**(ಮುಂದು)**

**(511) 18/03/2021/ಎಸ್‌ಪಿಆರ್/ವಿಕೆ/6:40**

**(ಸಾಯಂಕಾಲ 6 ಗಂಟೆ 7 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಸಂಜೆ 6 ಗಂಟೆ 48 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ, ಶ್ರೀ ಮರಿತಿಬ್ಬೇಗೌಡ, ಶ್ರೀ ಎನ್.ಅಪ್ಪಾಜಿಗೌಡ ಮತ್ತು ಶ್ರೀ ಹೆಚ್.ಎಂ.ರಮೇಶ ಗೌಡ ರವರುಗಳು ಸದನದ ಬಾವಿಯೊಳಗಿದ್ದರು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಬಾವಿಯಲ್ಲಿರುವ ಎಲ್ಲಾ ಸದಸ್ಯರುಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಮುಂದಿನ ಎಲ್ಲಾ ಕಾರ್ಯಕಲಾಪಗಳನ್ನು ನಡೆಸಲು ಅನುವು ಮಾಡಿಕೊಡಬೇಕು. ಇದರ ಬಗ್ಗೆ ಸರ್ಕಾರವು ಈಗಾಗಲೇ ಹೇಳಿದೆ. ಆದರೂ ಸಹ ಸಭಾನಾಯಕರು ಇನ್ನೊಮ್ಮೆ ತಮ್ಮ ಸ್ಪಷ್ಟವಾದ ನಿಲುವನ್ನು ಮಂಡಿಸಲಿ. ಹೀಗಾಗಿ ತಾವುಗಳೆಲ್ಲರೂ ಸದನದ ಬಾವಿಯಿಂದ ಹೊರ ನಡೆದು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಈಗಾಗಲೇ ಚರ್ಚೆಯಾಗಿದೆ. ಮಾನ್ಯ ಮಂತ್ರಿಗಳು ಮೂರು ತಿಂಗಳಲ್ಲಿ ವರದಿಯನ್ನು ತರಿಸಿ, ಇದೇ ಸದನದಲ್ಲಿ ಮಂಡಿಸುವುದಾಗಿ ತಿಳಿಸಿದ್ದಾರೆ. ಒಂದು ವೇಳೆ, ಆ ತನಿಖಾ ವರದಿಯಲ್ಲಿ ಸದಸ್ಯರುಗಳಿಗೆ ವಿಶ್ವಾಸ ಮೂಡದಿದ್ದರೆ ಮುಂದೇನು ಎನ್ನುವುದನ್ನು ಯೋಚನೆ ಮಾಡೋಣ. ದಯಮಾಡಿ ಸದಸ್ಯರುಗಳು ಮೂರು ತಿಂಗಳ ಕಾಲಾವಕಾಶವನ್ನು ನೀಡಲಿ ಎಂದು ವಿನಂತಿ ಮಾಡುತ್ತೇನೆ. ತಮ್ಮ ಮೂಲಕ ಜನತಾ ದಳ (ಎಸ್)ನ ಎಲ್ಲಾ ಗೌರವಾನ್ವಿತ ಸದಸ್ಯರುಗಳಲ್ಲಿ ವಿನಂತಿ ಮಾಡುವುದೇನೆಂದರೆ, ದಯಮಾಡಿ ಅವರುಗಳು ತಮ್ಮ ತಮ್ಮ ಸ್ಥಾನಕ್ಕೆ ತೆರಳಿ ಪುನಃ ಸದನವನ್ನು ಮುಂದುವರೆಸುವುದಕ್ಕೆ ಅವಕಾಶ ಮಾಡಕೊಡಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಪರಿ ಪರಿಯಾಗಿ ಮನವಿಯನ್ನು ಮಾಡಿದ್ದೇವೆ. ಈ ವಿಚಾರದಲ್ಲಿ ಖಂಡಿತವಾಗಿಯೂ ಸಹ ನಾವು ರಾಜಕಾರಣವನ್ನು ಬೆರೆಸುತ್ತಿಲ್ಲ. ನನಗೆ ಅನಾಮಧೇಯ ಪತ್ರವೊಂದು ಬಂದಿದ್ದು, ಅದರಲ್ಲಿ 'ನಮ್ಮ ಜಿಲ್ಲೆಯಲ್ಲಿ 28 ರಿಂದ 30 ಕಾಲೇಜುಗಳಿವೆ; ಇಲ್ಲಿ ವಿದ್ಯಾರ್ಥಿಗಳು ಕೇವಲ ಪರೀಕ್ಷೆಗಾಗಿ ಮಾತ್ರವೇ ಬರುತ್ತಾರೆ. ಇದು ಒಂದು ದೊಡ್ಡ ದಂಧೆ' ಎಂಬುದಾಗಿ ಬರೆಯಲಾಗಿರುತ್ತದೆ. ಇದಕ್ಕೆ ಯಾವುದೇ ಸಹಿ ಇಲ್ಲದೇ ಬಂದಿರುತ್ತದೆ. ನಾನು ತಮ್ಮ ಮೂಲಕ ಸರ್ಕಾರದಲ್ಲಿ ವಿನಮ್ರವಾಗಿ ಮನವಿ ಮಾಡಿಕೊಳ್ಳುವುದೇನೆಂದರೆ, ಸಚಿವರು ವಿಚಾರಣೆಗಾಗಿ ಈಗಾಗಲೇ ಒಪ್ಪಿಕೊಂಡು, ತಮ್ಮ ಸಹಮತಿಯನ್ನು ವ್ಯಕ್ತಪಡಿಸಿದ್ದಾರೆ. ವಿಚಾರಣೆಗೆ ಒಪ್ಪಿದ ಮೇಲೆ ಅದು ಸದನದ ಮೂಲಕವೇ ಆಗಲಿ. You have agreed for enquiry. 'ಸದನ ಸಮಿತಿ' ಎಂದಾಗ ಅದಕ್ಕೆ ನ್ಯಾಯ ಬರುತ್ತದೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(512)18-03-2021(06-50)ಬಿಎಸ್‌ಡಿ-ಬಿಎನ್‌ಎಸ್**

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಮುಂದು):-**

ಸದನ ಸಮಿತಿಯಿಂದ ವಿಚಾರಣೆಯಾದರೆ ಅದಕ್ಕೆ ನ್ಯಾಯ ಬರುತ್ತದೆ, ಘನತೆ-ಗೌರವ ಬರುತ್ತದೆ. Ruling party ಯ ಒಬ್ಬ ಸದಸ್ಯರ ಅಧ್ಯಕ್ಷತೆಯಲ್ಲಿ ಸದನ ಸಮಿತಿ ಮಾಡಿದರೆ ನಮ್ಮದೇನೂ ತಕರಾರು ಇಲ್ಲ. ನಮ್ಮ ಪ್ರಶ್ನೆ ಅಥವಾ ವಿಚಾರ ಏನೆಂದರೆ, ನಾಡಿನ ಜನರ ಆರೋಗ್ಯದ ವಿಚಾರದಲ್ಲಿ ಸತ್ಯವನ್ನು ಹೆಕ್ಕಿ ತೆಗೆಯಬೇಕಾಗಿದೆ, ಜನರ ಪ್ರಾಣವನ್ನು ಉಳಿಸಬೇಕಾಗಿದೆ. ಆ ವಿಚಾರದಲ್ಲಿ ಈ ಸರ್ಕಾರ ಚೆಲ್ಲಾಟ ಆಡುವುದಿಲ್ಲ ಎಂಬುದು ನನಗೆ ಗೊತ್ತಿದೆ. ಅವರೆಲ್ಲರ ಬಗ್ಗೆ ನನಗೆ ಗೌರವ ಇದೆ. ಮಾನ್ಯ ಸಚಿವರು ಅತ್ಯಂತ ದಕ್ಷರು ಹಾಗೂ ಸಮರ್ಥರಿದ್ದಾರೆ. ಕೋವಿಡ್-19 ಅನ್ನು ಬಹಳ ಚೆನ್ನಾಗಿ manage ಮಾಡಿದ್ದಾರೆ. ಅವರು ಇವತ್ತು enquiry ಮಾಡಲು ಒಪ್ಪಿದ್ದಾರೆ. ನನ್ನ ಮನವಿ ಏನೆಂದರೆ ruling party ಯ ಸದಸ್ಯರ ನೇತೃತ್ವದಲ್ಲಿ ಸದನ ಸಮಿತಿ ಆಗಬೇಕು, ಈ ನಾಡಿಗೆ ನ್ಯಾಯ ಕೊಡಬೇಕೆಂಬುದು ನಮ್ಮೆಲ್ಲರ ಕಳಕಳಿಯಾಗಿದೆ.

**ಡಾ: ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಹೇಳಿದ್ದೇನೆ. ಹೊಸದಾಗಿ ಪರವಾನಗಿ ಕೊಡಬೇಕೆಂದು ವಿಶ್ವವಿದ್ಯಾಲಯದವರು High Power Committee ಗೆ ಕೊಟ್ಟಿದ್ದಾರೆ. ಅದನ್ನು ಪುರಸ್ಕಾರ ಮಾಡುವುದಕ್ಕೆ ಮುಂಚೆ ಇಲ್ಲಿಯವರೆಗೂ ಇರುವ ಸುಮಾರು 650 Institution ಗಳು ಹಾಗೂ ಹೊಸದು, ಎರಡೂ ಸೇರಿ ಸರ್ಕಾರವು ಉನ್ನತ ಮಟ್ಟದ ತನಿಖೆಯನ್ನು 3 ತಿಂಗಳೊಳಗೆ ಮಾಡಿಸಿ, ಯಾವ ಕಾಲೇಜುಗಳಿಗೆ ಸರಿಯಾದ infrastructure ಇಲ್ಲ, ನ್ಯೂನ್ಯತೆಗಳಿವೆ ಎಂಬುದನ್ನು ನೋಡಿ, ಅವುಗಳ ಪರವಾನಗಿಯನ್ನು ರದ್ದು ಮಾಡುತ್ತೇವೆ. ಅಧಿಕೃತ, ನೈತಿಕ ಮತ್ತು legal ಆಗಿರುವ Institution ಗಳು ಮಾತ್ರ ರಾಜ್ಯದಲ್ಲಿ ನಡೆದುಕೊಂಡು ಹೋಗಲು ಅನುಕೂಲ ಮಾಡಿಕೊಡುತ್ತೇವೆ. ಇದರ ಪ್ರಕಾರ ನಾವು ದಾಪುಗಾಲು ಹಾಕಿದ್ದೇವೆ. ಕಳೆದ 15 ವರ್ಷಗಳಲ್ಲಿ Nursing College ಗಳಲ್ಲಿರುವ ನ್ಯೂನ್ಯತೆಗಳನ್ನು ನೋಡಿರಲಿಲ್ಲ. ಈ ಸರ್ಕಾರವು Task Force ಸಮಿತಿಯನ್ನು ರಚನೆ ಮಾಡಿದೆ. ಹಾಗಾಗಿ ನಮಗೆ ಬಹಳಷ್ಟು ಬದ್ಧತೆ ಇರುವುದರಿಂದಲೇ Nursing and paramedical ವಿದ್ಯಾರ್ಥಿಗಳು ಸರಿಯಾದ ರೀತಿಯಲ್ಲಿ ಕಲಿಕೆ ಮಾಡಬೇಕು, ಅವರ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾದ ಸೇವಾ ಸೌಲಭ್ಯಗಳು ರಾಜ್ಯದ ಜನರಿಗೆ ಮತ್ತು ಬಡವರಿಗೆ ಸಿಗಬೇಕು ಎನ್ನುವ ಕಾರಣದಿಂದ ಈ ನಿರ್ದೇಶನ ಕೊಟ್ಟಿದ್ದೇನೆ. ಹಾಗಾಗಿ ಇನ್ನೂ ಮುಂದುವರೆದು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉನ್ನತ ಮಟ್ಟದ ತನಿಖೆ ಮಾಡಿಸಿ, 90 ದಿವಸಗಳ ಒಳಗೆ ವರದಿ ಕೊಡುತ್ತೇನೆ. ಆ ವರದಿಯಲ್ಲಿ ಸತ್ಯ ಇಲ್ಲದಿದ್ದರೆ ಅಥವಾ ಸಮಾಧಾನವಾಗದಿದ್ದರೆ ಮಾನ್ಯ ಸಭಾಪತಿಯವರಾದ ತಾವು ಕೊಡುವ ತೀರ್ಮಾನಕ್ಕೆ ಬದ್ಧರಾಗಿರುತ್ತೇನೆ.

**ಸಭಾಪತಿಯವರುಃ-** ಮಾನ್ಯ ಸಚಿವರು 3 ತಿಂಗಳೊಳಗೆ ವರದಿ ಕೊಡುವ ಬಗ್ಗೆ ತಿಳಿಸಿದ್ದು, ಆ ವರದಿ ಸರಿಯಿಲ್ಲದಿದ್ದರೆ ಆ ಸಮಯದಲ್ಲಿ ಸದನ ಸಮಿತಿ ಮಾಡುತ್ತೀರಾ? ಅಂದರೆ ತಾವು ಕೊಟ್ಟ ವರದಿ ಸಮಾಧಾನವಾಗದಿದ್ದರೆ ಸದನ ಸಮಿತಿ ಮಾಡುತ್ತೀರಾ?

**ಡಾ: ಕೆ. ಸುಧಾಕರ್ಃ-** ಮಾನ್ಯ ಸಭಾಪತಿಯವರೇ, ವರದಿ ಖಂಡಿತವಾಗಿ ಬಹಳಷ್ಟು ಪಾರದರ್ಶಕವಾಗಿ ಹೊರಬರುತ್ತದೆ, ಖಂಡಿತವಾಗಿ ಈ ಸದನ ಒಪ್ಪುತ್ತದೆ ಎಂದು ನನಗೆ ವಿಶ್ವಾಸ ಇದೆ. ಆದರೂ ಕೂಡ ವರದಿಯಲ್ಲಿ ಏನಾದರೂ ಅಪನಂಬಿಕೆ ಉಳಿದಿದ್ದರೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ, ಮಾನ್ಯ ಮುಖ್ಯಮಂತ್ರಿಯವರ ಸೂಚನೆ ಮೇರೆಗೆ ಯಾವ ತನಿಖೆ ಮಾಡಬೇಕೋ, ಆ ತನಿಖೆಗೂ ಒಳಪಡಿಸುತ್ತೇನೆ.

**ಸಭಾಪತಿಯವರುಃ-** ದಯಮಾಡಿ ಬಾವಿಯಲ್ಲಿ ಇರುವ ಸದಸ್ಯರೆಲ್ಲರೂ ಸದನವನ್ನು ನಡೆಸಲು ಅನುವು ಮಾಡಿಕೊಡಬೇಕು ಮತ್ತು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ವಿನಂತಿಸುತ್ತೇನೆ. ಇದಕ್ಕಿಂತ ಹೆಚ್ಚು ನನಗೆ ಏನೂ ಮಾಡಲು ಆಗುವುದಿಲ್ಲ. ಬಾವಿಯಲ್ಲಿ ನಿಂತು ಯಾರೇ ಸದಸ್ಯರು ಮಾತನಾಡಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** Agenda ಬಹಳ ಇರುವುದರಿಂದ ದಯಮಾಡಿ ತೆಗೆದುಕೊಳ್ಳಬೇಕು.

**ಸಭಾಪತಿಯವರುಃ-** Agenda ತೆಗೆದುಕೊಳ್ಳಲು ಹೇಳುತ್ತೀರಿ, ಸದನವು order ನಲ್ಲಿ ಇಲ್ಲ ಎಂದು ಹೇಳುತ್ತೀರಿ, ನಾನು ಹೇಗೆ ಮಾಡಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ-** ಮಾನ್ಯ ಸಭಾಪತಿಯವರೇ, ಹೀಗೆ ವಿರೋಧ ಪಕ್ಷದ ಕೆಲವು ಸದಸ್ಯರುಗಳು ಬಾವಿಯಲ್ಲಿ ಇರುವಾಗಲೇ ಬಿಲ್‌ಗಳು ಪಾಸ್ ಆಗಿವೆ, ಬೇರೆ ಬೇರೆ ವಿಚಾರಗಳ ಚರ್ಚೆಗಳು ನಡೆದಿವೆ. ಅವರು ಸಹಕಾರ ಕೊಡುತ್ತೇವೆ, ಯಾವುದೇ ಗೊಂದಲ ಇಲ್ಲ ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊಂದಲವಿಲ್ಲದೇ ಪ್ರತಿಭಟನೆ ಮಾಡುವುದಾಗಿ ಹೇಳಿದ್ದಾರೆ. ಆದ್ದರಿಂದ ತಾವು Agenda ವನ್ನು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಚಾರ ಇತ್ಯರ್ಥವಾಗದೇ ಹಾಗೂ ಗೌರವಾನ್ವಿತ ಸದಸ್ಯರು ಬಾವಿಯಲ್ಲಿದ್ದ ಸಂದರ್ಭದಲ್ಲಿ ನಾವು ಚರ್ಚೆಯನ್ನು ಹೇಗೆ ಮಾಡುವುದು? ಅದು ಸರಿ ಕಾಣುವುದಿಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ ಒಂದು ದಾರಿ ಹೇಳಬೇಕು. ಅವರು ಪಟ್ಟು ಹಿಡಿದು ಸದನ ಸಮಿತಿ ಆಗಬೇಕು ಎನ್ನುತ್ತಿದ್ದಾರೆ. ಇವರು ಸದನ ಸಮಿತಿ ಮಾಡುವುದಿಲ್ಲ, enquiry ಮಾಡುತ್ತೇವೆ ಎನ್ನುತ್ತಿದ್ದಾರೆ. ತಾವು ಮಾರ್ಗದರ್ಶನ ಮಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್–** ನಾನು ಈ ವಿಚಾರದಲ್ಲಿ ಏನನ್ನೂ ಮಾತನಾಡುವುದಿಲ್ಲ. ಪ್ರಚಲಿತ ವಿಚಾರದ ಬಗ್ಗೆ ನಮ್ಮ ಪಕ್ಷದ ನಿಲುವು ಇದೆ, ನಮ್ಮ ಎಲ್ಲ ಸದಸ್ಯರ ಅಭಿಪ್ರಾಯ ಬೇರೆ ಇದೆ. ಇದರಲ್ಲಿ ನಾವು ಭಾಗವಹಿಸುವುದಿಲ್ಲ ಹಾಗೂ ಮಾತನಾಡುವುದಿಲ್ಲ.

**ಸಭಾಪತಿಯವರು:–** ಶ್ರೀ ಎಂ. ನಾರಾಯಣಸ್ವಾಮಿಯವರು calling attention ಬಗ್ಗೆ ಪ್ರಸ್ತಾಪಿಸಿ.

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿನಿರತರಾಗಿದ್ದ ಜೆಡಿ(ಎಸ್) ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಎಂ. ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾನು ಅತ್ಯಂತಲೂ ಗಂಭೀರವಾದ ವಿಚಾರವನ್ನು ಪ್ರಸ್ತಾಪಿಸುತ್ತಿದ್ದೇನೆ. ಇದು ಮೂರನೆಯ ಬಾರಿ ಬರುತ್ತಿದೆ. ಈ ರೀತಿ ಆದರೆ ಹೇಗೆ ಪ್ರಸ್ತಾಪ ಮಾಡಲಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಆ) ವಿಷಯ:- ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್. ಪುರಂ, ವಾರ್ಡ್ ಸಂಖ್ಯೆ 53ನೇ ವ್ಯಾಪ್ತಿಯ ಬಸವನಪುರ ಗ್ರಾಮದ ಸ.ನಂ 26/01ರಲ್ಲಿ ನಾಲ್ಕು ಎಕರೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಇದ್ದರೂ ಅಲ್ಲಿನ ಜಿಲ್ಲಾಧಿಕಾರಿಗಳು ಕಾನೂನುಬಾಹಿರವಾಗಿ ಭೂಪರಿವರ್ತನೆ ಆದೇಶ ಹೊರಡಿಸಿರುವ ಬಗ್ಗೆ.**

– – –

**ಶ್ರೀ ಎಂ. ನಾರಾಯಣಸ್ವಾಮಿ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್. ಪುರಂ, ವಾರ್ಡ್ ಸಂಖ್ಯೆ 53ನೇ ವ್ಯಾಪ್ತಿಯ ಬಸವನಪುರ ಗ್ರಾಮದ ಸ.ನಂ 26/01ರಲ್ಲಿ ನಾಲ್ಕು ಎಕರೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಇದ್ದರೂ ಅಲ್ಲಿನ ಜಿಲ್ಲಾಧಿಕಾರಿಗಳು ಕಾನೂನುಬಾಹಿರವಾಗಿ ಭೂಪರಿವರ್ತನೆ ಆದೇಶ ಹೊರಡಿಸಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ. **(ಗೊಂದಲ)**

**ಶ್ರೀ ಆರ್. ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿಃ–** ಮಾನ್ಯ ಸಭಾಪತಿಯವರೇ, ನಾನು ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪಿಸಿದ್ದು, ಸುಮಾರು ರೂ.80 ಕೋಟಿ ರೂಪಾಯಿಗಳ ವಿಚಾರವಾಗಿದೆ.

**ಸಭಾಪತಿಯವರುಃ–** ಈ ರೀತಿ ಆದರೆ ಸದನ ನಡೆಸುವುದಕ್ಕೆ ಆಗುವುದಿಲ್ಲ, ಇಂದಿನ ನಿಯಮ 330, ಗಮನ ಸೆಳೆಯುವ ಸೂಚನೆಗಳು ಅರ್ಧ ಗಂಟೆಯ ಚರ್ಚೆ ವಿಷಯಗಳು ಎಲ್ಲವನ್ನು......

**ಶ್ರೀ ಎಂ. ನಾರಾಯಣಸ್ವಾಮಿಃ–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ನಾನು ಏನು ಮಾಡಬೇಕೆಂದು ಹೇಳಿ. **(ಗೊಂದಲ)** ಯಾರೂ ಸಹಕಾರ ಮಾಡದಿದ್ದರೆ ಏನು ಮಾಡಬೇಕು. ಅವರು ಸದನ ಸಮಿತಿ ಮಾಡಿ ಎಂದರೆ ಸರ್ಕಾರ ಒಪ್ಪುವುದಿಲ್ಲ ಎನ್ನುತ್ತಿದ್ದಾರೆ. ನೀವು ಸದನ order ನಲ್ಲಿ ಇಲ್ಲ ಎನ್ನುತ್ತಿದ್ದೀರಿ, ನಾನು ಹೇಗೆ ಸದನವನ್ನು ನಡೆಸಬೇಕು? ಇದಕ್ಕೊಂದು ದಾರಿ ಹುಡುಕಿ. **(ಗೊಂದಲ)** ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಬೇಕು. You are part and parcel of the House. 10 ನಿಮಿಷಗಳ ಕಾಲ ಸದನವನ್ನು ಮುಂದೂಡಿದ್ದಾಗ ನನ್ನ ಕೊಠಡಿಗೆ ನಿಮ್ಮನ್ನು ಆಹ್ವಾನಿಸಿದಾಗ ತಾವು ಬರುವುದಿಲ್ಲ ಎಂದು ಹೇಳಿ ಕಳುಹಿಸಿದಿರಿ. **(ಗೊಂದಲ)**

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಬೇರೆ ಸದಸ್ಯರ ಗಮನ ಸೆಳೆಯುವ ಸೂಚನೆ ಇದೆ, ದಯವಿಟ್ಟು ತೆಗೆದುಕೊಳ್ಳಬೇಕು. **(ಗೊಂದಲ)**

**ಸಭಾಪತಿಯವರು:–** ನಾನು ಸುಮಾರು 15–20 ನಿಮಿಷಗಳ ಕಾಲ ಮಾತನಾಡಿ, ದಾರಿ ಹುಡುಕೋಣ ಎಂದು ಹೇಳಿದೆ, ಏನಾದರೂ ಮಾಡಿ ಸದನ ನಡೆಯಬೇಕು, ಬೇರೆ ರೀತಿ ವಿಚಾರ ಮಾಡುವಂತೆ ಹೇಳಿದೆ. ಇಬ್ಬರೂ ಒಪ್ಪಲಿಲ್ಲ. ಮುಖ್ಯವಾದ ವಿಷಯಗಳು ಇವತ್ತಿನ ಕಾರ್ಯಕಲಾಪದ ಪಟ್ಟಿಯಲ್ಲಿವೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ವಿಚಾರ ಮಾಡಬೇಕು, ಅವರು ಧಿಕ್ಕಾರ ಕೂಗುತ್ತಿದ್ದಾರೆ, ನಾನು ಏನು ಮಾಡಬೇಕೆಂದು ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:–** ತಾವು ಇನ್ನೊಂದು ಸುತ್ತಿನ ಮಾತುಕತೆ ಮಾಡಿ ನಂತರ ನಿರ್ಧಾರಕ್ಕೆ ಬನ್ನಿ.

**ಸಭಾಪತಿಯವರು:–** ಎಷ್ಟು ಬಾರಿ ಮಾಡುವುದು? ನೀವು ಬನ್ನಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:–** ಭಗವಂತ ಸರ್ಕಾರಕ್ಕೆ ಒಳ್ಳೆಯ ಬುದ್ಧಿ ಕೊಟ್ಟು ಪ್ರತಿಪಕ್ಷದ ಜೆಡಿ(ಎಸ್) ಶಾಸಕರ ಬೇಡಿಕೆ ಏನು ಇದೆ......

**ಸಭಾಪತಿಯವರು–** ಒಬ್ಬೊಬ್ಬರು ಮಾತನಾಡಿ, ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಸಭೆಗೆ ಬನ್ನಿ ಎಂದು ಈ ರೀತಿ ಹೇಳುತ್ತೀರಿ. ತಾವು ಬಂದು ಸಲಹೆ ಕೊಡಿ, ಇನ್ನೊಮ್ಮೆ ಚಿಜರಿಂಣಡಿಟಿ ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ಃ–** ನಾನು ಸಲಹೆ ಕೊಟ್ಟಿದ್ದೇನೆ, ಎರಡನೆಯ ಸುತ್ತಿನ ಮಾತುಕತೆಯಲ್ಲಿಯದರೂ ತಾವುಗಳೆಲ್ಲರೂ..... ಸರ್ಕಾರಕ್ಕೆ ಬುದ್ಧಿ ಬರುವುದಿಲ್ಲ ಎಂದಲ್ಲ ಜ್ಞಾನೋದಯ ಆಗಬಹುದು. ಇಂತಹ ಮಹತ್ತರವಾದ, ಜ್ವಲಂತ ಸಮಸ್ಯೆಗೆ ಶಾಸಕರ ಬೇಡಿಕೆ ಸ್ಪಂದಿಸಿ ಸದನ ಸಮಿತಿ ಮಾಡಬಹುದು. ತಾವು ಇನ್ನೊಂದು ಸುತ್ತಿನ ಮಾತುಕತೆ ಮಾಡಿ and then come to a conclusion.

**ಸಭಾಪತಿಯವರುಃ–** ಸರ್ಕಾರ ಮಾತನ್ನು ಕೇಳುತ್ತದೆಂದೇ?

**ಶ್ರೀ ಎಸ್.ಆರ್. ಪಾಟೀಲ್ಃ–** ನಮ್ಮ ಪಕ್ಷದ ನಿಲುವನ್ನು ಹೇಳಿದ್ದೇನೆ.

**(ಮುಂದು)**

**(513)/18.03.2021/7.00/ಹೆಚ್‌ವಿ:ವಿಎನ್‌ಎಸ್**

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮ ಬಗ್ಗೆ ಅವರಿಗೆ ಅಪಾರವಾಗಿರುವ ಗೌರವವಿದೆ. ತಮ್ಮ ಮಾತುಗಳನ್ನು ಅವರು ಕೇಳುತ್ತಾರೆನ್ನುವ ನಂಬಿಕೆ ನನಗಿದೆ. ತಾವು ಮಾತನಾಡುವುದಕ್ಕೆ ಬರುವುದಾದರೆ, ಮತ್ತೊಮ್ಮೆ ಸದನವನ್ನು 5 ನಿಮಿಷಗಳ ಕಾಲ ಮುಂದೂಡುತ್ತೇನೆ. ನಾನು, ತಾವು ಜಾತ್ಯಾತೀತ ಜನತಾ ಪಕ್ಷದವರು ಮತ್ತು ಆಡಳಿತ ಪಕ್ಷದವರು ಎಲ್ಲರೂ ಕೂಡಿ ಮಾತುಕತೆ ನಡೆಸೋಣ. ತಾವು ಬರುವುದಿಲ್ಲವೆಂದರೆ ಹೇಳಿಬಿಡಿ, ನನಗೆ ಬೇರೆ ದಾರಿಯಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ನಮ್ಮ ಪಕ್ಷದ ನಿಲುವಿದೆ. ಇಲ್ಲದಿದ್ದರೆ ನಾನು ಮಾತುಕತೆಗೆ ಬರುತ್ತಿದ್ದೆ. ಎಷ್ಟೋ ಬಾರಿ ಮೊದಲನೆಯ ಸುತ್ತಿನ ಮಾತುಕತೆ ಯಶಸ್ವಿಯಾಗದಿದ್ದರೆ, ಎರಡನೆಯ ಸುತ್ತಿನ ಮಾತುಕತೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಸಿರುವಂತಹ ಉದಾಹರಣೆಗಳು ಇವೆ. ನಾನು ಬರುವುದಕ್ಕೆ ನಮ್ಮ ಪಕ್ಷದ ನಿಲುವಿದೆ. We will never compromise with our decisions. How can I compromise with it? 6 ಜನ tainted Minister ಗಳಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ನಾವು ಭಾಗಿಯಾಗುವುದಿಲ್ಲವೆಂದು ನಮ್ಮ ಪಕ್ಷ ನಿರ್ಧಾರ ಮಾಡಿದೆ. ಇಲ್ಲದಿದ್ದರೆ ನಾನು ಬರುತ್ತಿದ್ದೆ.

**ಸಭಾಪತಿಯವರು:–** ಹಾಗಾದರೆ, ತಾವು ಮಾತುಕತೆಗೆ ಬರುವುದಿಲ್ಲವೇ?

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಇದು ನಮ್ಮ ಪಕ್ಷದ ನಿಲುವಾಗಿದೆ. ನಮ್ಮ ಪಕ್ಷದ ತೀರ್ಮಾನವನ್ನು ಬಿಟ್ಟು ಬರುವುದಕ್ಕೆ ಸಾಧ್ಯವಾಗುವುದಿಲ್ಲ.

**ಸಭಾಪತಿಯವರು:–** ನೀವು ಬರುವುದಿಲ್ಲ ಎಂದು ಹೇಳಿದ ಮೇಲೆ ನಾನು ಏನೂ ಮಾತನಾಡುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಬೇರೆ ವಿಚಾರಕ್ಕೆ ಸಂಬಂಧಪಟ್ಟಂತೆ ತಾವು ಎಲ್ಲಿಗೆ ಕರೆದರೂ ಬರುತ್ತೇವೆ. ಆದರೆ, ಈ ನಿರ್ದಿಷ್ಟ ವಿಚಾರಕ್ಕೆ ಸಂಬಂಧಪಟ್ಟಂತೆ ನಾವು ಭಾಗವಹಿಸುವುದಿಲ್ಲವೆನ್ನುವ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ವಿನಂತಿ ಮಾಡುವುದು ನನ್ನ ಕರ್ತವ್ಯ, ಆ ಕೆಲಸವನ್ನು ನಾನು ಮಾಡಿದ್ದೇನೆ. ತಾವು ಬರುವುದಿಲ್ಲವೆಂದರೆ, ನನ್ನ ಅಭ್ಯಂತರವೇನೂ ಇಲ್ಲ. ನಾನು ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಾನು ಬರುವುದಿಲ್ಲವೆಂದು ಹೇಳಲಿಲ್ಲ. ತಮ್ಮ ಮಾತಿಗೆ ನಾವು ಗೌರವ ಕೊಡುತ್ತೇವೆ. ಪೀಠದ ಬಗ್ಗೆ ನಮಗೆ ಗೌರವವಿದೆ. ತಮ್ಮ ಮಾತುಗಳನ್ನು ಶಿರಸಾವಹಿಸಿ ಪಾಲಿಸುತ್ತೇವೆ. ಆದರೆ, ಈ ವಿಚಾರವಾಗಿ ನಮ್ಮ ಪಕ್ಷದ ನಿಲುವಿದೆ. ನಾವು 6 ಜನ tainted Ministerಗಳ ವಿಚಾರವಾಗಿ ತಲೆ ಹಾಕುವುದಿಲ್ಲ. ಅವರಿಗೆ ಪ್ರಶ್ನೆಗಳನ್ನು ಕೇಳುವುದಿಲ್ಲ, ಗಮನಸೆಳೆಯುವ ಸೂಚನೆಗಳನ್ನು ಕೇಳುವುದಿಲ್ಲ ಎನ್ನುವ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. It is my humble submission. ತಾವು ಕರೆದರೂ ನಾವು ಬರದೇ ಇರುವುದಕ್ಕೆ ದಯವಿಟ್ಟು ತಾವು ನಮ್ಮನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈ ವಿಚಾರದಲ್ಲಿ ನಾವು ಭಾಗವಹಿಸುವುದಿಲ್ಲ. ಬೇರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರಗಳಿಗೆ ಸಂಬಂಧಪಟ್ಟಂತೆ ತಾವು ನಮ್ಮನ್ನು ಮಾತುಕತೆಗೆ ಕರೆದರೆ ನಾವು ಬರುತ್ತೇವೆ. ತಾವು ಹೇಳಿದಂತಹ ವಿಚಾರಕ್ಕೆ ಸ್ಪಂದಿಸುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಬಗ್ಗೆ ನಮಗೆ ಅಪಾರವಾಗಿರುವ ಗೌರವವಿದೆ. ನಮ್ಮ ಪಕ್ಷದ ನಿಲುವಿರುವುದರಿಂದ ನಾವು ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

**ಸಭಾಪತಿಯವರು:–** ತಮ್ಮ ಮಾತುಗಳಿಗೆ ನಾನು ಯಾವುದೇ ತಕರಾರು ತೆಗೆದಿಲ್ಲ. ಸರಿ ಎಂದು ಹೇಳಿದ್ದೇನೆ.

**(ಗೊಂದಲ)**

**ಡಾ॥ತೇಜಸ್ವಿನಿಗೌಡ:–** ಸನ್ಮಾನ್ಯ ಸಭಾಪತಿಯವರೇ, ಈ ಸದನಕ್ಕೆ ತಾವೇ ಹಿರಿಯರು, ನಿಯಮಗಳನ್ನು ಮೀರಿ ಕಲಾಪ ನಡೆಸುವುದಕ್ಕೆ ಅವಕಾಶವಿದೆಯೇ? ತಮ್ಮ ಮಾತಿಗೆ ಗೌರವವಿಲ್ಲವೆಂದರೆ ಹೇಗೆ? ನಿಯಮ 72ರಡಿಯಲ್ಲಿ . . . .

**ಸಭಾಪತಿಯವರು:–** ಎಲ್ಲವನ್ನು ನಿಯಮಗಳ ಪುಸ್ತಕ ನೋಡಿಯೇ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

**ಡಾ॥ತೇಜಸ್ವಿನಿಗೌಡ:–** ಹೌದು, ಆದರೆ ಹಿರಿಯರಾದ ತಮ್ಮ ಮಾತಿಗೂ ಅವರುಗಳು ಗೌರವ ಕೊಡುತ್ತಿಲ್ಲ. ನಿಯಮಗಳ ಪುಸ್ತಕಕ್ಕೂ ಗೌರವ ಕೊಡುವುದಿಲ್ಲವೆಂದರೆ ಹೇಗೆ?

**ಸಭಾಪತಿಯವರು:–** ಮಾನ್ಯ ತೇಜಸ್ವಿನಿಗೌಡರವರೇ, ತಮಗಿಂತ ಹೆಚ್ಚು ಕಾನೂನು ನನಗೆ ಗೊತ್ತಿದೆ. ನಿಯಮ 72ರಡಿಯಲ್ಲಿ ಸಂಬಂಧಪಟ್ಟ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಬೇಕು ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು. ನಂತರ ಏನಾದರೂ ಸ್ಪಷ್ಟೀಕರಣಗಳು ಇದ್ದರೆ ಕೇಳುವುದಕ್ಕೆ ಅವಕಾಶವಿದೆ. ನಾನು ಸ್ವಲ್ಪ ಧಾರಾಳತನವನ್ನು ತೋರಿಸಿ ಹೆಚ್ಚು ಚರ್ಚೆಗೆ ಅವಕಾಶವನ್ನು ನೀಡಿದ್ದೇನೆ. ನಿಯಮಗಳ ಪ್ರಕಾರ ನೋಡಿದರೆ ಆ ರೀತಿ ಇಲ್ಲ. ನಿಯಮಗಳ ಪ್ರಕಾರ ನಡೆಯುವುದರ ಜೊತೆಗೆ, ಸದನದಲ್ಲಿರುವ ಎಲ್ಲ ಸದಸ್ಯರ ಗೌರವ ಮತ್ತು ಕಳಕಳಿಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ನಾನು ಅವರುಗಳ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ತಾವು ನಿಯಮಗಳ ಪುಸ್ತಕವನ್ನು ತೆರೆದು ನೋಡಬೇಡಿ. ನಿಯಮಗಳ ಪುಸ್ತಕದಲ್ಲಿರುವಂತೆ ತಾವು ನಡೆಯುತ್ತಿದ್ದೀರಾ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ತೇಜಸ್ವಿನಿಗೌಡ:–** ಸನ್ಮಾನ್ಯ ಸಭಾಪತಿಯವರೇ, ತಾವು ಈ ಸದನದ ಅತ್ಯಂತ ಹಿರಿಯರಾಗಿದ್ದೀರಿ, ತಮ್ಮ ಮಾತಿಗೂ ಅವರು ಗೌರವ ಕೊಡುತ್ತಿಲ್ಲವೆಂದರೆ ಹೇಗೆ? ಸಾರ್ವಜನಿಕರ ದುಡ್ಡಿನಲ್ಲಿ ಈ ಸದನ ನಡೆಯುತ್ತಿದೆ. ಈ ರೀತಿ ಆದರೆ, ಸದನ ನಡೆಸುವುದು ಹೇಗೆ? ಅನೇಕ ಬಾರಿ ಸದಸ್ಯರು ಸದನದ ಬಾವಿಯೊಳಗೆ ಧರಣಿ ನಡೆಸುತ್ತಿದ್ದಾಗ, ವಿಧೇಯಕಗಳಿಗೆ ಅನುಮೋದನೆಯನ್ನು ಪಡೆದುಕೊಳ್ಳಲಾಗಿದೆ. ಮಾನ್ಯ ಸಚಿವರು ಈ ಬಗ್ಗೆ ಉತ್ತರವನ್ನು ನೀಡಿದ್ದಾರೆ ತಾವು ಸಹ ತಮ್ಮ ಕೊಠಡಿಗೆ ಕರೆಸಿಕೊಂಡು ಚರ್ಚೆ ಮಾಡಿದ್ದೀರಿ, ಮಾನ್ಯ ಎನ್.ರವಿಕುಮಾರ್‌ರವರು ಸ್ವತಃ ಮನವಿ ಮಾಡಿದ್ದಾರೆ. ಅವರುಗಳು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ನಾವೆಲ್ಲರೂ ಅವರುಗಳ ಜೊತೆಗಿದ್ದೇವೆ. ತಾವು ನಮಗೆ ದಾರಿ ದೀಪವಾಗಿದ್ದೀರಿ. ತಾವೇ ಅಸಹಾಯಕರಾದರೇ, ನಾವು ಎಲ್ಲಿಗೆ ಹೋಗಬೇಕು, ನಮಗೆ ದಾರಿ ತೋರಿಸುವವರು ಯಾರು? ತಮಗೆ ಸಾಧ್ಯವಿಲ್ಲವೆಂದರೆ, ಮತ್ತ್ಯಾರು ಈ ಸನ್ನಿವೇಶದಲ್ಲಿ ಸದನವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ತಮಗೂ ಗೊತ್ತಿರುವಂತೆ ಹಿಂದೆ ಈ ಸದನದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡುವ ವಿಚಾರದಲ್ಲಿ ಅವ್ಯವಹಾರ ನಡೆದಿದೆಯೆಂದು ಮಾನ್ಯ ಕೆ.ಎಸ್.ಈಶ್ವರಪ್ಪನವರು ಪ್ರಸ್ತಾಪ ಮಾಡಿ, ಅವ್ಯವಹಾರದ ಬಗ್ಗೆ ತನಿಖೆ ಮಾಡುವುದಕ್ಕೆ ಒಂದು ಸದನ ಸಮಿತಿಯನ್ನು ರಚನೆ ಮಾಡಬೇಕೆಂದು ಒತ್ತಾಯ ಮಾಡಿದಾಗ, ನಮ್ಮ ಸರ್ಕಾರ ಸದನ ಸಮಿತಿ ರಚನೆಗೆ ಒಪ್ಪಿಗೆಯನ್ನು ನೀಡಿತ್ತು. ಅದೇ ರೀತಿಯಲ್ಲಿ ಗಂಗಾಕಲ್ಯಾಣ ಯೋಜನೆಯಲ್ಲಿ ಅವ್ಯವಹಾರವಾಗಿದೆಯೆಂದು ಸದನ ಸಮಿತಿ ರಚನೆಗೆ ಒತ್ತಾಯ ಮಾಡಿದಾಗ ನಾವೆಲ್ಲರೂ ಒಕ್ಕೊರಲಿನಿಂದ ಒಪ್ಪಿಗೆಯನ್ನು ಸೂಚಿಸಿದ್ದೆವು. ಈ ವಿಚಾರವನ್ನು ಸರ್ಕಾರ ಏತಕ್ಕೋಸ್ಕರ ಇಷ್ಟೊಂದು ಪ್ರತಿಷ್ಠೆಯಾಗಿ ತೆಗೆದುಕೊಂಡಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ತನಿಖೆ ನಡೆಸುವುದಕ್ಕೆ ತಯಾರಿದ್ದೇವೆಂದು ಅವರು ಹೇಳುತ್ತಿದ್ದಾರೆ. ಆದರೆ, ಸದನ ಸಮಿತಿಯನ್ನು ರಚನೆ ಮಾಡುತ್ತಿಲ್ಲ. ಸದನ ಸಮಿತಿಯನ್ನು ರಚನೆ ಮಾಡುವುದಕ್ಕೆ ಸರ್ಕಾರ ಒಪ್ಪಿಕೊಂಡರೆ, ಈ ದಿನದ ಕಾರ್ಯಕಲಾಪಗಳು ಸುಸೂತ್ರವಾಗಿ ನಡೆಯುತ್ತದೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭೆಯಿಂದ ಚುನಾಯಿತರು):–** ಸನ್ಮಾನ್ಯ ಸಭಾಪತಿಯವರೇ, ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡುವ ಯೋಜನೆಯಲ್ಲಿ ಅವ್ಯವಹಾರವಾಗಿದೆ, ಹಣದ ದುರ್ಬಳಕೆಯಾಗಿದೆ, ಅದರ ಬಗ್ಗೆ ತನಿಖೆ ನಡೆಸುವುದಕ್ಕೆ ಸದನ ಸಮಿತಿಯನ್ನು ರಚನೆ ಮಾಡಬೇಕೆಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒತ್ತಾಯ ಮಾಡಿದ್ದು ನಾನೇ. ಅದಕ್ಕಿಂತ ಮೊದಲು ನಾವು ಹಲವಾರು ಬಾರಿ ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದೆವು. ಸದನ ಸಮಿತಿ ರಚನೆ ಮಾಡುವುದಕ್ಕೂ ಮೊದಲು ಎರಡು ತನಿಖಾ ಸಮಿತಿಗಳನ್ನು ಸಹ ರಚನೆ ಮಾಡಲಾಗಿತ್ತು. Even after two Enquiry Committees' Report, ಆ ಸಮಿತಿಯಲ್ಲಿ ಸೂಕ್ತವಾದ ನಿರ್ಧಾರಗಳು ಆಗಿಲ್ಲವೆಂದು ಸದನ ಅದನ್ನು ಒಪ್ಪಲಿಲ್ಲ. ಸದನದ ಸದಸ್ಯರನ್ನು ತೃಪ್ತಿಪಡಿಸುವ ದೃಷ್ಟಿಯಿಂದ ಪಕ್ಷಾತೀತವಾಗಿ ಎಲ್ಲ ಸದಸ್ಯರು ಸದನ ಸಮಿತಿ ರಚನೆಯಾಗಬೇಕೆಂದು, including Ruling Party, ಒಕ್ಕೊರಲಿನಿಂದ ಒತ್ತಾಯ ಮಾಡಿದ ಹಿನ್ನೆಲೆಯಲ್ಲಿ, ಆಗ ಮಾನ್ಯ ಸಚಿವರು ಸದನ ಸಮಿತಿ ರಚನೆ ಮಾಡುವುದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರು. ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ಈ ವಿಷಯದಲ್ಲಿ ಅಂತಹ ಸನ್ನಿವೇಶ ಸೃಷ್ಟಿಯಾಗಿಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಅದಕ್ಕಿಂತ ಹೆಚ್ಚಿನ ಅವ್ಯವಹಾರವಾಗಿದೆ.

**(ಗೊಂದಲ)**

**ಸಭಾಪತಿಯವರು:–** ನಾನು ಮಾತನಾಡುವುದಕ್ಕೆ ಎಲ್ಲ ಸದಸ್ಯರಿಗೂ ಅವಕಾಶವನ್ನು ಕೊಡುತ್ತೇನೆ. ಯಾರೂ ಸಹ ಮಧ್ಯೆ ಎದ್ದು ನಿಂತು ಮಾತನಾಡಬಾರದು. ಎಷ್ಟು ಹೊತ್ತಾದರೂ ಸಹ ಎಲ್ಲರಿಗೂ ಮಾತನಾಡುವುದಕ್ಕೆ ಅನುಮತಿಯನ್ನು ಕೊಡುತ್ತೇನೆ. ಮಾನ್ಯ ರಘುನಾಥ್ ರಾವ್ ಮಲ್ಕಾಪೂರೆಯವರು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಲಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಸನ್ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಎಲ್ಲರೂ ಒಪ್ಪುವಂತಹ ತೀರ್ಮಾನವನ್ನು ಮಾನ್ಯ ಸಚಿವರು ಮಾಡಿದ್ದಾರೆ. ಮೊನ್ನೆ ಅನುಮತಿ ಕೊಟ್ಟ ಕಾಲೇಜುಗಳಿಗೆ ಮಾತ್ರವಲ್ಲ, ಹಿಂದೆ ಅನುಮತಿಕೊಟ್ಟ ಕಾಲೇಜುಗಳಲ್ಲಿ ಏನಾದರೂ ತಪ್ಪಾಗಿದ್ದರೇ ಅವುಗಳನ್ನು ಸಹ ಸವಿಸ್ತಾರವಾಗಿ ತನಿಖೆ ಮಾಡುವುದಕ್ಕೆ ಒಂದು High Power Committee ಯನ್ನು ರಚನೆ ಮಾಡುತ್ತೇನೆಂದು ಹೇಳಿದ್ದಾರೆ, ಇದರ ಜೊತೆಗೆ ಅದಕ್ಕಾಗಿ ಮೂರು ತಿಂಗಳ ಕಾಲಾವಕಾಶವನ್ನು ಕೇಳಿದ್ದಾರೆ. ಮೂರು ತಿಂಗಳ ಕಾಲಾವಕಾಶವನ್ನು ನೀಡುವುದರಲ್ಲಿ ತಪ್ಪೇನಿದೆ? ಆ ತನಿಖಾ ವರದಿಯಿಂದ ಮಾನ್ಯ ಸದಸ್ಯರುಗಳು ತೃಪ್ತಿ ಹೊಂದದಿದ್ದರೆ, ನಾನು ಪುನಃ ಸದನದ ಮುಂದೆ ಬರುತ್ತೇನೆಂದು ಹೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸನ್ಮಾನ್ಯ ಸಭಾಪತಿಯವರೇ, ಈ ಮನೆಯ ಘನತೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಮಾನ್ಯ ಸಚಿವರು ಕೊಟ್ಟಿರುವ ವಾಗ್ದಾನಕ್ಕೆ ಎಲ್ಲರೂ ಸಮ್ಮತಿಯನ್ನು ಸೂಚಿಸಬೇಕೆಂದು ತಮ್ಮ ಮೂಲಕ ಎಲ್ಲ ಸದಸ್ಯರುಗಳಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು:-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳಲ್ಲಿ ನಿಯಮ 72, ಗಮನ ಸೆಳೆಯುವ ಸೂಚನೆ ಏನು ಹೇಳುತ್ತದೆ ಎನ್ನುವುದರ ಬಗ್ಗೆ ಸದನದ ಗಮನಕ್ಕೆ ತರುತ್ತಿದ್ದೇನೆ.

1. ಯಾರೇ ಒಬ್ಬ ಸದಸ್ಯರು ಪೂರ್ವಭಾವಿಯಾಗಿ ಸಭಾಪತಿಯವರ ಅನುಮತಿಯನ್ನು ತೆಗೆದುಕೊಂಡು ಸಾರ್ವಜನಿಕ ಮಹತ್ವದ ಯಾವುದಾದರೂ ಜರೂರು ವಿಚಾರವನ್ನು ಸಚಿವರ ಗಮನಕ್ಕೆ ತರಬಹುದು ಮತ್ತು ಸಚಿವರು ಸಂಕ್ಷಿಪ್ತವಾಗಿ ಒಂದು ಹೇಳಿಕೆಯನ್ನು ಕೊಡಬಹುದು ಅಥವಾ ಸ್ವಲ್ಪ ಸಮಯದ ನಂತರ ಅಥವಾ ಇನ್ನೊಂದು ದಿನ ತಮ್ಮ ಹೇಳಿಕೆ ನೀಡಲು ಕಾಲಾವಕಾಶ ನೀಡಬೇಕೆಂದು ಕೇಳಿಕೊಳ್ಳಬಹುದು;
2. ಹೇಳಿಕೆಯನ್ನು ನೀಡಲಾದ ಕಾಲದಲ್ಲಿ ಅಂಥ ಹೇಳಿಕೆಯ ಮೇಲೆ ಯಾವ ಚರ್ಚೆಯನ್ನು ಮಾಡತಕ್ಕುದಲ್ಲ, ಆದರೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಷಯವು ಯಾರ ಹೆಸರಿನಲ್ಲಿ ಇದೆಯೋ ಆ ಪ್ರತಿಯೊಬ್ಬ ಸದಸ್ಯರು ಸಭಾಪತಿಯವರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೇಳಬಹುದು;

ಎಂದು ಇದೆ. ನನ್ನ ವಿನಂತಿ ಏನೆಂದರೆ, ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರು ಉತ್ತರದಲ್ಲಿ 'ಇಲ್ಲಿ ಸಮಸ್ಯೆ ಇದೆ. ಬಹಳಷ್ಟು ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳಿಲ್ಲ ಎನ್ನುವ ಅಂಶ ನನ್ನ ಗಮನಕ್ಕೆ ಬಂದಿದೆ, ಈ ಎಲ್ಲ ಹಿನ್ನೆಲೆಯಲ್ಲಿ ನಾನು ತನಿಖೆಯನ್ನು ಮಾಡಿಸುತ್ತೇನೆ' ಎಂದು ಹೇಳಿದ್ದಾರೆ. ಆ ಉತ್ತರದಿಂದ ನಾನು ಸಮಾಧಾನಗೊಂಡಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ವ್ಯಾಪ್ತಿಗೆ ಸುಮಾರು 700 ಕಾಲೇಜುಗಳು ಬರುವುದರಿಂದ ಮಾನ್ಯ ಸದಸ್ಯರುಗಳ ಗಮನಕ್ಕೂ ಇದು ಬಂದಿರುವ ಹಿನ್ನೆಲೆಯಲ್ಲಿ ಅವರು ಮಧ್ಯೆ ಪ್ರವೇಶ ಮಾಡಿ ಮಾತನಾಡಿದ್ದಾರೆ. ನಾನು ಅವರಲ್ಲಿ ವಿನಂತಿ ಮಾಡುವುದೇನೆಂದರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ನಾವು ಪಾಲನೆ ಮಾಡೋಣ. ತನಿಖೆ ನಡೆಯಲಿ, ಆ ತನಿಖಾ ವರದಿ ಸಮಾಧಾನ ತರದಿದ್ದರೆ ಪುನಃ ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡೋಣ. ನಮ್ಮ ಸಮಾಜದಲ್ಲಿ ಈ ರೀತಿಯ ಅನೇಕ ಸಮಸ್ಯೆಗಳಿವೆ ಅವೆಲ್ಲದಕ್ಕೂ ಸದನ ಸಮಿತಿಯೇ ಉತ್ತರವಲ್ಲ. ತನಿಖೆಯ ಮೂಲಕವೂ ನಾವು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರವನ್ನು ಪಡೆಯಬಹುದಾಗಿದೆ. ಇದರ ಬಗ್ಗೆ ನಂಬಿಕೆ ಇರಲಿ ಎಂದು ಗೌರವಾನ್ವಿತ ಸದಸ್ಯರುಗಳಲ್ಲಿ ವಿನಂತಿ ಮಾಡುತ್ತಿದ್ದೇನೆ. ಸದನದ ಸಮಯ ವ್ಯರ್ಥವಾಗದಂತೆ, ಸದನ ಸುಗಮವಾಗಿ ನಡೆಯಲು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ (ಬಾವಿಯಿಂದ):–** ಸನ್ಮಾನ್ಯ ಸಭಾಪತಿಯವರೇ, . . . .

**ಸಭಾಪತಿಯವರು:–** ಬಾವಿಯೊಳಗಿನಿಂದ ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಮಾತನಾಡಿದ್ದು ದಾಖಲಿಸಿರುವುದಿಲ್ಲ)**

**ಡಾ॥ತೇಜಸ್ವಿನಿಗೌಡ:–** ಸನ್ಮಾನ್ಯ ಸಭಾಪತಿಯವರೇ, ಸಿ.ಡಿ., ಇ.ಡಿ., ಎಲ್ಲವೂ ನಮಗೆ ಗೊತ್ತಿದೆ. ನಾವು ಯಾವ ತಪ್ಪು ಮಾಡಿಲ್ಲ. ಎಲ್ಲ ಸಚಿವರು ಸದನದಲ್ಲಿ ಕುಳಿತಿದ್ದಾರೆ. ಅವರುಗಳು ಪ್ರತಿ ಸಾರಿ ಈ ರೀತಿ ಮಾತನಾಡುತ್ತಿದ್ದರೆ, ನಾವು ಹೆಣ್ಣುಮಕ್ಕಳು ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ಹಿಂಸೆ ಆಗುತ್ತಿದೆ. ಪ್ರತಿಯೊಂದಕ್ಕೂ ಇತಿಮಿತಿ ಇರಬೇಕಾಗುತ್ತದೆ.

**(ಮುಂದು)**

**(514) 18.3.2021 7.10 ಪಿಕೆಜಿಆರ್**

**ಡಾ:ತೇಜಸ್ವಿನಿ ಗೌಡ(ಮುಂದು):–**

ಸ್ವಾತಂತ್ರ್ಯ ಇದೆ ಎಂದು ಅದೇ ವಿಚಾರವನ್ನು ಎಷ್ಟು ಸಲ ಹೇಳುತ್ತೀರಿ? ಇಲ್ಲದಿದ್ದರೆ ಅವರು ಸಿ.ಡಿ., ಯನ್ನೇ ನೋಡಿಕೊಳ್ಳಲಿ. ನಾವು ಹೊರಗೆ ಹೋಗಿಬಿಡುತ್ತೇವೆ. ಇದಕ್ಕೂ ಅನುಮತಿ ಕೊಟ್ಟುಬಿಡಿ.

**(ಗೊಂದಲ)**

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿಯಮ 72ಕ್ಕೆ ಸಂಬಂಧಪಟ್ಟಂತೆ ನಿಯಮಗಳಲ್ಲೇನಿದೆ ಎಂಬ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಏನು ಹೇಳಬೇಕಾಗಿತ್ತೋ ಅದನ್ನು ಹೇಳಿದರು. ನಂತರ ತಾವು ಅನುಮತಿ ಕೊಟ್ಟ ಮೇಲೆ ಎಲ್ಲರೂ ಮಾತನಾಡಿದರು. ಎಲ್ಲರೂ ಮಾತನಾಡಿದ ಮೇಲೆ ಮಾನ್ಯ ಸಭಾನಾಯಕರು ಸೇರಿದಂತೆ, ನಿಯಮಗಳ ಬಗ್ಗೆ ಮತ್ತು ಸದನ ಆರ್ಡರ್‌ನಲ್ಲಿರದೇ ಇರುವಾಗಲೂ ವಿಧೇಯಕಗಳನ್ನು ಅಂಗೀಕರಿಸಿದ್ದೇವೆ ಎಂಬ ಮಾತನ್ನು ಹೇಳಿದರು. ಭಾರತೀಯ ಜನತಾ ಪಕ್ಷದ ಸದಸ್ಯರಿಗೆ ಒಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಹಿಂದೆ ಸಮ್ಮಿಶ್ರ ಸರ್ಕಾರ ಇದ್ದ ಸಂದರ್ಭದಲ್ಲಿ ಆವತ್ತು ಭಾರತೀಯ ಜನತಾ ಪಕ್ಷವು ವಿರೋಧ ಪಕ್ಷದಲ್ಲಿದ್ದಾಗ ಒಂದೇ ಒಂದು ದಿನ ಸದನ ನಡೆಯುವುದಕ್ಕೆ ಬಿಡಲಿಲ್ಲ. ಅಂಥವರು ಇವತ್ತು ಬಹಳ ಮಾತನಾಡುತ್ತಿದ್ದಾರೆ. ಅವರು ಆವತ್ತು ಅರ್ಥ ಮಾಡಿಕೊಳ್ಳಬೇಕಾಗಿತ್ತು. ಈ ಒಂದು ವಿಚಾರ ಸಾರ್ವಜನಿಕ ಮಹತ್ವದ ವಿಚಾರವೆಂದು ನಾವು ಪ್ರಸ್ತಾಪ ಮಾಡಿದ್ದೇವೆ. ಇವತ್ತು ಅವರಿಗೆ ಬಹಳ ನೋವಾಗುತ್ತಿದೆ. ಆದರೆ ಆ ದಿನ ಅರ್ಥ ಮಾಡಿಕೊಳ್ಳಲಿಲ್ಲ. ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ಮೂರು ಸಲ ಅಧಿವೇಶನ ನಡೆಯುವಂತಹ ಸಂದರ್ಭಗಳಲ್ಲೂ, ಮಹತ್ತರವಾದ ವಿಚಾರಗಳು ಇದ್ದರೂ ಸಹ, ಪ್ರಕರಣಗಳಿದ್ದರೂ ಸಹ ಅವುಗಳನ್ನು ಚರ್ಚೆ ಮಾಡುವುದಕ್ಕೆ ಬಿಡಲಿಲ್ಲ.

**ಸಭಾಪತಿಯವರು:–** ಈಗೇನು ಮಾಡಬೇಕು ಅದನ್ನು ಹೇಳಿ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಅಂತಿಮವಾಗಿ ತಾವು ಏನು ತೀರ್ಮಾನ ಮಾಡುತ್ತೀರೋ ಅದಕ್ಕೆ ನಾವು ಬದ್ಧರಾಗಿರುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಸಹೋದರಿಯಾದ ತೇಜಸ್ವಿನಿಗೌಡರವರು ಬಹಳ ನೊಂದು ಕೆಲವು ವಿಚಾರಗಳನ್ನು ಹೇಳಿದರು. ಪದೇ ಪದೇ ಸಿ.ಡಿ., ಪ್ರಕರಣದ ಬಗ್ಗೆ ಹೇಳಿದಾಗ ಸದನದಲ್ಲಿರುವ ಮಹಿಳೆಯವರಿಗೆ ಮುಜುಗರ ಆಗುತ್ತದೆ ಎಂಬ ಮಾತನ್ನು ಹೇಳಿದರು. ಖಾಲಿ ಇಲ್ಲಿರುವ ಹತ್ತು ಜನ ಮಹಿಳೆಯರಿಗೆ ಮುಜುಗರವಾದರೆ ಕರ್ನಾಟಕ ರಾಜ್ಯದಲ್ಲಿ ಓಡಾಡುವವರಿಗೆ ಎಷ್ಟು ಮುಜುಗರವಾಗಬಹುದು?

**ಸಭಾಪತಿಯವರು:–** ನಾನು ಇನ್ನೊಂದು ಸಲ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೂ ಮಹತ್ವದ ವಿಚಾರಗಳ ಬಗ್ಗೆ ಚರ್ಚೆ ಮಾಡುವುದಿದೆ. ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ಅಪ್ಪಾಜಿಗೌಡರು ಮತ್ತು ಮಾನ್ಯ ಶ್ರೀಕಂಠೇಗೌಡರು ದಯಮಾಡಿ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಳ್ಳಿ. ಮುಂದೆ ನೋಡೋಣ. ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಿಮ್ಮ ಬಗ್ಗೆ, ಪೀಠದ ಬಗ್ಗೆ ಅಪಾರ ಗೌರವ ಇದೆ.

**ಸಭಾಪತಿಯವರು:–** ಗೌರವ ಇದೆ ಎಂದು ಹೇಳುತ್ತೀರಿ ಮತ್ತೆ ಉಲ್ಟಾ ಹೊಡೆಯುತ್ತೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, please allow me to speak. ಮಾನ್ಯ ಸಚಿವರು ಬಹಳ ಮುಕ್ತ ಮನಸ್ಸಿನಿಂದ ವಿಚಾರಣೆಗೆ ಒಪ್ಪಿದ್ದಾರೆ. He has agreed for an enquiry. But the thing is ನಮ್ಮ ನಡುವೆ ಒಂದು ಸಣ್ಣ ಸಮಸ್ಯೆ ಇದೆ. ಅವರು ಅಧಿಕಾರಿಗಳಿಂದ ವಿಚಾರಣೆ ಮಾಡಿಸುತ್ತೇವೆ ಎಂದು ಹೇಳುತ್ತಿದ್ದಾರೆ. ನಮ್ಮ ಸ್ನೇಹಿತರಾದ ಮಾನ್ಯ ಮಲ್ಕಾಪೂರೆ ಅವರ ನೇತೃತ್ವದಲ್ಲಿ ಒಂದು ಸದನ ಸಮಿತಿ ನಡೆಯುತ್ತಿದೆ. ನಮ್ಮ ಸಹೋದರಿ ತೇಜಸ್ವಿನಿಯವರಿಗೆ ಒಂದು ಪ್ರಾಣ ಸಂಕಟ ಇದೆ, ಹಿಂಸೆ ಇದೆ, ಮುಜುಗರ ಇದೆ; because, she is a ruling party member. ಮಾನ್ಯ ರವಿಕುಮಾರ್‌ರವರು ಅತ್ಯಂತ ಮಹತ್ವದ ವಿಚಾರವನ್ನು ಪ್ರಾಮಾಣಿಕವಾಗಿ ಎತ್ತಿದ್ದಾರೆ. ಅವರಿಗೂ ಮುಜುಗರ ಇದೆ, ಸಂಕೋಚ ಇದೆ, because, he is also a member of the ruling party. ನನ್ನ ಪ್ರಶ್ನೆ, ನನ್ನ ವಿಚಾರ ನಾಡಿನ ಜನರ ಪರವಾಗಿದೆ. ಸರ್ಕಾರ ಏನು ವಿಚಾರಣೆಯನ್ನು ಒಪ್ಪಿಕೊಂಡಿದೆಯೋ ಅದನ್ನು ಮಾನ್ಯ ರವಿಕುಮಾರ್‌ರವರ ಅಥವಾ ಮಾನ್ಯ ತೇಜಸ್ವಿನಿ ಗೌಡರವರ ಅಧ್ಯಕ್ಷತೆಯಲ್ಲಿ ಮಾಡಿಸಲಿ. There is no dispute.

ಮಾನ್ಯ ಸಭಾಪತಿಯವರೇ, ಇದು 50-60 ವರ್ಷಗಳ ವಿಚಾರವಾಗಿದೆ. ನಿನ್ನೆ-ಮೊನ್ನೆಯದಲ್ಲ. ನಾನು ನಿಮ್ಮ ಮೇಲೆ ಆರೋಪ ಮಾಡುತ್ತಿಲ್ಲ. 60 ವರ್ಷದ ವಿಚಾರ ತಾರ್ಕಿಕವಾಗಿ ಅಂತ್ಯವಾಗಬೇಕು ಅಲ್ಲವೇ? ವಾಸ್ತವದ ನೆಲಗಟ್ಟಿನ ಮೇಲೆ ಸತ್ಯವನ್ನು ಈ ನಾಡಿನ ಜನರಿಗೆ ಕೊಡಬೇಕು ಅಲ್ಲವೇ? ಸದನಕ್ಕೆ ಇಂಥದ್ದು ಬಿಟ್ಟು ಬೇರೇನು ಕೆಲಸ ಇರುತ್ತದೆ? ಒಂದು ನಾಗರಿಕ ಸರ್ಕಾರದ ಜವಾಬ್ದಾರಿ ಏನು? ಆರೋಗ್ಯದ ವಿಚಾರದಲ್ಲಿ ಹುಡುಗಾಟ ಆಡುವುದಕ್ಕೆ ಆಗುತ್ತದೆಯೇ? ಆದ್ದರಿಂದ ನಾನು, ಇದಕ್ಕೆ ರಾಜಕಾರಣವ ಬೆರೆಸಬೇಡಿ ಎಂದು ಪರಿಪರಿಯಾಗಿ ಬೇಡಿಕೊಳ್ಳುತ್ತೇನೆ. ಸತ್ಯವನ್ನು ಹೆಕ್ಕಿ ತೆಗೆಯೋಣ, ನಾಡಿನ ಜನರಿಗೆ ಸಂತೋಷ ಕೊಡೋಣ. ಮೋಸ, ವಂಚನೆಗೆ ಇತಿಶ್ರೀ ಹಾಡೋಣ. ದಯವಿಟ್ಟು ಸದನ ಸಮಿತಿಗೆ ಒಪ್ಪಬೇಕು ಎನ್ನುವುದು ನಮ್ಮ ಸವಿನಯ ಮನವಿಯಾಗಿದೆ. ಇದು ಆಗ್ರಹವಲ್ಲ, ಮನವಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-**ಮಾನ್ಯ ಸಭಾಪತಿಯವರೇ, ಮಾನ್ಯ ಮಲ್ಕಾಪೂರೆಯವರ ನೇತೃತ್ವದಲ್ಲಿ ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟಂತೆ ಕೊಳವೆ ಬಾವಿಗಳ ವಿಚಾರದಲ್ಲಿ ಸದನ ಸಮಿತಿ ಮಾಡಿದ್ದು ನಿಜ. ಅದಕ್ಕೆ ಮೊದಲು ಮಾನ್ಯ ಹೆಚ್.ಕೆ.ಪಾಟೀಲರು ತನಿಖೆ

ಮಾಡಿಸಿ ಎರಡು ವರದಿಗಳನ್ನು ಪಡೆದುಕೊಂಡಿದ್ದರು. ತನಿಖಾ ವರದಿಯನ್ನು ಎರಡೆರಡು ಸಲ ತೆಗೆದುಕೊಂಡಾಗಲೂ ಸದನಕ್ಕೆ ತೃಪ್ತಿಯಾಗದ ಕಾರಣ ಇಡೀ ಸದನ ಸರ್ವಾನುಮತದಿಂದ ಒಪ್ಪಿದಾಗ ಸದನ ಸಮಿತಿ ರಚನೆಗೆ ಅವಕಾಶ ಮಾಡಿ ಕೊಡಲಾಯಿತು. ಅದೇರೀತಿ, ಮಾನ್ಯ ಸಚಿವರು, ನಾನೊಂದು ತನಿಖೆ ಮಾಡಿಸಿ 3 ತಿಂಗಳ ಒಳಗೆ ಒಂದು ವರದಿ ತರಿಸಿಕೊಂಡು ಸದನದಲ್ಲಿ ಮಂಡಿಸುತ್ತೇನೆ. ಒಂದು ವೇಳೆ ಆ ವರದಿ ತೃಪ್ತಿ ತರದೇ ಇದ್ದರೆ ಮುಂದಿನದನ್ನು ನೋಡೋಣ ಎಂದು ಹೇಳಿದ್ದಾರೆ. ಯಾವ ಕಾರಣಕ್ಕೂ ಕೂಡ ಸದನ ಸಮಿತಿ ಮಾಡುವುದಕ್ಕೆ ನಮ್ಮ ಸಹಮತ ಇಲ್ಲ. ತನಿಖಾ ವರದಿಯನ್ನು 3 ತಿಂಗಳ ಒಳಗೆ ಮಂಡಿಸುತ್ತೇವೆ. ಮಂಡಿಸಿದ ನಂತರ ಆ ಕುರಿತು ಮತ್ತೆ ಚರ್ಚೆ ಮಾಡೋಣ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲಿ ಪರಸ್ಪರ ಹೊಂದಾಣಿಕೆ ಆಗುತ್ತಿಲ್ಲ. ಹಾಗಾಗಿ ತಾವು ಅಸಹಾಯಕರಾಗಿದ್ದೀರಿ. ನಿಯಮಾವಳಿಗಳ ಪ್ರಕಾರ ಎಲ್ಲವನ್ನೂ ನಡೆಸುವುದಕ್ಕೆ ಆಗುವುದಿಲ್ಲ, ಮಾನ್ಯ ಸದಸ್ಯರುಗಳ ವಿಶ್ವಾಸವನ್ನು ಪಡೆದುಕೊಂಡು ಸದನ ನಡೆಸಬೇಕಾಗುತ್ತದೆ ಎಂದು ಹೇಳಿದಿರಿ. ಯಾವಾಗ ಎಲ್ಲರೂ ವಿಶ್ವಾಸಕ್ಕೆ ಬಂದು ಸದನವನ್ನು ನಡೆಸುವುದಕ್ಕೆ ಅವಕಾಶವಾಗುತ್ತದೆಯೋ ಆವತ್ತು ಚರ್ಚೆಯಲ್ಲಿ ಭಾಗವಹಿಸೋಣ. ಇದು ಸಣ್ಣ ಇಶ್ಯೂ ಆಗಿದ್ದರೂ, ಎರಡೂ ಕಡೆಯಿಂದಲೂ ಪ್ರತಿಷ್ಠೆಯ ವಿಷಯದಂತಾಗಿದೆ. ನಿಯಮಾವಳಿಗಳ ಪ್ರಕಾರವೂ ನಡೆಸುವುದಕ್ಕೆ ಆಗುವುದಿಲ್ಲ ಎಂದ ಮೇಲೆ ಪೀಠ ಯಾವಾಗ ಹೇಳುತ್ತದೆಯೋ ಆಗ ಚರ್ಚೆ ಮಾಡೋಣ. ಈಗಾಗಲೇ ಸಮಯ ಸಂಜೆ 7.15 ಗಂಟೆಯಾಗಿದೆ. ಈ ವಿಚಾರ ಪ್ರತಿಷ್ಠೆಯ ಮೇಲೆ ನಿಂತಿದೆಯೇ ಹೊರತು ಸದನವನ್ನು ನಡೆಸಬೇಕು ಎನ್ನುವ ವಿಚಾರ ಇಲ್ಲ. ಪೀಠವೇ ಅಸಹಾಯಕವಾದಾಗ ನಾವು ಸದಸ್ಯರಗಳು ಏನು ಮಾಡುವುದಕ್ಕಾಗುತ್ತದೆ? ನೀವು ಕರೆದಾಗ ಬರುತ್ತೇವೆ.

**ಸಭಾಪತಿಯವರು:-** ಇದರಲ್ಲಿ ಅಸಹಾಯಕತೆ ಎಂದೇನಿಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಸರ್ಕಾರ ತನ್ನ ನಿಲುವನ್ನು ಪ್ರಕಟಿಸಿದೆ. ಈ ರೀತಿ ಗೊಂದಲವಾದಾಗ ನಿಯಮಾವಳಿಗಳನ್ನು ಆಶ್ರಯಿಸಬೇಕು. ಮಾನ್ಯ ಸಭಾಪತಿಯವರೇ, ತಾವು ತಮ್ಮ ಶಕ್ತಿ ಮೀರಿ ಸಂಧಾನವನ್ನು ಮಾಡಿದ್ದೀರಿ. ಎರಡೂ ಕಡೆಯವರು ಒಪ್ಪದೇ ಇದ್ದಾಗ ನಂತರದ ಮಾರ್ಗವೇನು? ಅದಕ್ಕೆ ಒಂದೇ ದಾರಿ. ಸದನವನ್ನು ನಡೆಸುವುದಕ್ಕೆ ಮಾರ್ಗದರ್ಶಿ ಸೂತ್ರಗಳಾದ ನಿಯಮಾವಳಿಗಳ ಪ್ರಕಾರ ನಡೆಸಬೇಕಾಗುತ್ತದೆ. ಆಗ ಸರ್ಕಾರದ ಮುಖವನ್ನು ತಾವು ನೊಡಬೇಡಿ, ನಮ್ಮ ಮುಖಗಳನ್ನೂ ನೋಡಬೇಡಿ. ಸದನ ನಡೆಸುವ ಜವಾಬ್ದಾರಿ ತಮ್ಮ ಮೇಲಿದೆ. ತಾವು ದಿಟ್ಟ ನಿರ್ಧಾರ ತೆಗೆದುಕೊಂಡು ಸರ್ಕಾರಕ್ಕಾದರೂ ಹೇಳಿ ಅಥವಾ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಅವರಿಗಾದರೂ ಹೇಳಿ. ಒಟ್ಟಿನಲ್ಲಿ ತಾವು ಒಂದು ನಿರ್ಧಾರವನ್ನು ಪ್ರಕಟಿಸಬೇಕು. ಇದು ನನ್ನ ವಿನಂತಿಯಾಗಿದೆ. ನಿಮಗೆ ಪರಮಾಧಿಕಾರ ಇದೆ, ದಯವಿಟ್ಟು ಚಲಾಯಿಸಿ. ಅದು ಯಾರ ಪರವಾಗಿಯೂ ಇರುವುದಿಲ್ಲ ಅಥವಾ ಯಾರ ವಿರುದ್ಧವಾಗಿಯೂ ಇರುವುದಲ್ಲ. ಸದನದ ಹಿತದೃಷ್ಟಿಯಿಂದ ತಮ್ಮ ಪರಮಾಧಿಕಾರವನ್ನು ಚಲಾಯಿಸಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಅಂತಿಮವಾಗಿ ಎರಡು ಸಾಲುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಹಿರಿಯ ಸದಸ್ಯರಾದ ಮಾನ್ಯ ಆಯನೂರು ಮಂಜುನಾಥ್‌ರವರು ಮಾತನಾಡಿದರು.

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ ನೀವು ಹಿರಿಯ ಸದಸ್ಯರಾಗಿದ್ದೀರಿ. ಈ ಸದನದ ಘನತೆ-ಗೌರವದ ಬಗ್ಗೆ ಯೋಚನೆ ಮಾಡಿ. ಅರ್ಥ ಮಾಡಿಕೊಳ್ಳಿ. ನಾನು ನನ್ನ ಎಲ್ಲಾ ಪ್ರಯತ್ನ ಮಾಡಿದ್ದೇನೆ, ವಿನಂತಿ ಮಾಡಿದ್ದೇನೆ. ನಾನು ಸದನವನ್ನು ನಡೆಸಬೇಕಾಗುತ್ತದೆ. ಆದ್ದರಿಂದ ಬಾವಿಯೊಳಗಿರುವವರು ಯಾವುದೇ ರೀತಿಯ ಗಲಾಟೆ ಮಾಡದೇ ಸುಮ್ಮನೆ ಇರಬೇಕು. ಮಾನ್ಯ ನಾರಾಯಣಸ್ವಾಮಿಯವರೇ ನಿಮ್ಮ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ಉತ್ತರವನ್ನು ಓದಿದ್ದಾರೆ. ನೀವು ನಿಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಆರ್.ಅಶೋಕ್:-** ನಾನು ಉತ್ತರವನ್ನು ಓದಿದ್ದೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ ಪ್ರಶ್ನೆಯನ್ನು ಕೇಳಿ.

**(ಈ ಹಂತದಲ್ಲಿ ಬಾವಿಯೊಳಗಿದ್ದ ಜೆಡಿ(ಎಸ್) ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಯವರೇ, ತಾವು ಉತ್ತರವನ್ನು ಓದಿ ಎಂದು ಹೇಳಿದಿರಿ. ನಾನು ಓದುತ್ತಿದ್ದೇನೆ. **(ಈ ಹಂತದಲ್ಲಿ ಮಾನ್ಯ ಸಚಿವರು ಲಿಖಿತ ಉತ್ತರವನ್ನು ಓದಲು ಪ್ರಾರಂಭಿಸಿದರು)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಇನ್ನು ಪ್ರಶ್ನೆಯನ್ನೇ ಕೇಳಲಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ ಒಂದು ನಿಮಿಷ ಇರಿ. ಮಾನ್ಯ ನಾರಾಯಣಸ್ವಾಮಿಯವರೇ ನಿಮ್ಮ ಪ್ರಶ್ನೆಯನ್ನು ಕೇಳಿ.

**(ಮುಂದು)**

**(515) 18-03-2021/7-20/bkp-gr**

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಸದನ ಆರ್ಡರ್‌ನಲ್ಲಿ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ನೀವು ಮಾತನಾಡಿ ಎಂದರೆ ಹೇಗೆ ಮಾತನಾಡುವುದು?

**ಸಭಾಪತಿಯವರು:** ವಿರೋಧಪಕ್ಷದ ನಾಯಕರೆ, ನಿಮ್ಮ ಮಾತನ್ನು ಒಪ್ಪುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಇಂದಿನ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಚರ್ಚೆಯಾಗದೇ ಉಳಿದಿರುವ ಗಮನ ಸೆಳೆಯುವ ಸೂಚನೆಗಳು ಹಾಗೂ ನಿಯಮ 330ರ ವಿಷಯಗಳಿಗೆ ಸಂಬಂಧಿಸಿದ ಎಲ್ಲಾ ಉತ್ತರಗಳನ್ನು ಸದನದಲ್ಲಿ ಮಂಡಿಸಿದ್ದೇನೆ. ಎಲ್ಲರೂ ಕುಳಿತುಕೊಳ್ಳಿ.

**8. ಕಾರ್ಯಕಲಾಪಗಳ ಪಟ್ಟಿಯಲ್ಲಿನ ಚರ್ಚೆಯಾಗದೆ ಉಳಿದಿರುವ ಗಮನ ಸೆಳೆಯುವ ಸೂಚನೆ ಮತ್ತು ನಿಯಮ 330ರ ವಿಷಯಗಳಿಗೆ ಉತ್ತರಗಳ ಮಂಡನೆ**

**i)ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು**

**ಅ)ವಿಷಯ: ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್. ಪುರಂ ವಾರ್ಡ್ ಸಂಖ್ಯೆ 53ನೇ ವ್ಯಾಪ್ತಿಯ ಬಸವನಪುರ ಗ್ರಾಮದ ಸರ್ವೆ ನಂ.26/01 ರಲ್ಲಿ ನಾಲ್ಕು ಎಕರೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಇದ್ದರೂ ಸಹ ಅಲ್ಲಿನ ಜಿಲ್ಲಾಧಿಕಾರಿಗಳು ಕಾನೂನುಬಾಹಿರವಾಗಿ ಭೂಪರಿವರ್ತನೆ ಆದೇಶ ಹೊರಡಿಸಿರುವ ಬಗ್ಗೆ.**

**(ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ)ವಿಷಯ: ಉತ್ತರ ಕನಾಟಕ ಭಾಗದ ಅಭಿವೃದ್ಧಿ ದೃಷ್ಟಿಯಿಂದ ಪ್ರಮುಖ ಇಲಾಖೆಗಳ ವಿಭಾಗೀಯ ಕಛೇರಿ ಹಾಗೂ ಪ್ರಾದೇಶಿಕ ಆಡಳಿತ ಕಛೇರಿಯನ್ನು ನಿರ್ಮಿಸಲು ಹಾಗೂ ಸುವರ್ಣ ವಿಧಾನ ಸೌಧವನ್ನು ಸದ್ಭಳಕೆ ಮಾಡಿಕೊಳ್ಳುವ ಬಗ್ಗೆ**

**(ಉತ್ತರವನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ವಿಷಯ: ಬೆಂಗಳೂರು ಜಲಮಂಡಳಿಯವರು ನೀರಿನ ಸಂಪರ್ಕ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಪಡೆದವರಿಗೆ ಹಾಗೂ ಪಡೆಯದವರಿಗೆ ನೋಟೀಸ್ ಜಾರಿ ಮಾಡಿರುವುದರಿಂದ ಸಾರ್ವಜನಿಕರು ಆತಂಕಕ್ಕೊಳಗಾಗಿರುವ ಬಗ್ಗೆ.**

**(ಉತ್ತರವನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ) ವಿಷಯ: ಉತ್ತರ ಕರ್ನಾಟಕ ಭಾಗದ ಜನರ ಹಾಗೂ ಜಾನುವಾರುಗಳ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸುವ ನಿಟ್ಟಿನಲ್ಲಿ ಸಮಗ್ರ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

(ಉತ್ತರವನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ii)**ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವದ ಮೇಲೆ ಜರೂರು ವಿಷಯಗಳು

.

ಅ) ವಿಷಯ:ರಾಜ್ಯದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಕೋವಿಡ್-19 ಸಾಂಕ್ರಾಮಿಕ ರೋಗದ ಪರಿಣಾಮದಿಂದಾಗಿ ಲಾಕ್‌ಡೌನ್ ವಿಧಿಸಲಾಗಿ ಶಾಲಾ ಮಕಕ್ಕಳ ಕಲಿಕೆಯಲ್ಲಿ ತೀವ್ರ ಹಿನ್ನಡೆ ಉಂಟಾಗಿರುವುದರಿಂದ ವಿದ್ಯಾರ್ಥಿಗಳ ಕುಟುಂಬಗಳ ಸ್ಥಿತಿ, ಆರ್ಥಿಕ ಸಂಕಷ್ಟ ಹಾಗೂ ಜೀವನ ಶೈಲಿಗಳ ಕುರಿತಂತೆ ಸಮಗ್ರ ಸಮೀಕ್ಷೆ ನಡೆಸುವ ಬಗ್ಗೆ.

(ಉತ್ತರವನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ: ಪದವಿ ಪೂರ್ವ ಶಿಕ್ಷಣ ಇಲಾಖೆಯು ದಿನಾಂಕ 27.09.2018ರಂದು ಹೊರಡಿಸಿರುವ ಆದೇಶ ಸಂಖ್ಯೆ ಇಡಿ/107/ಟಿಪಿಯು/2017 ರ ಪ್ರಕಾರ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ತೊಂದರೆಯಾಗುತ್ತಿರುವ ಬಗ್ಗೆ.**

**(ಉತ್ತರವನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇ) ವಿಷಯ: ರಾಜ್ಯದಲ್ಲಿನ ಪೊಲೀಸ್ ಸಿಬ್ಬಂದಿಗಳ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಶ್ರೀ ರಾಘವೇಂದ್ರ ಔರದ್ಕರ್‌ರವರ ವರದಿಗೆ ವ್ಯತಿರಿಕ್ತವಾಗಿ ಆರ್ಥಿಕ ಇಲಾಖೆ ಹೊರಡಿಸಿರುವ ಮತ್ತೊಂದು ಆದೇಶದ ಪರಿಣಾಮವಾಗಿ ಅನೇಕ ವರ್ಷ ಸೇವೆ ಸಲ್ಲಿಸಿರುವ ಹಿರಿಯ ಸಿಬ್ಬಂದಿಗಳಿಗೆ ಹಾಗೂ ಹೊಸದಾಗಿ ಸೇವೆಗೆ ಸೇರಿರುವ ಸಿಬ್ಬಂದಿಗಳಿಗೆ ಸಮಾನ ವೇತನ ನಿಗದಿಯಾಗಿರುವುದರಿಂದ ತಾರತಮ್ಯವಾಗಿರುವ ವಿಷಯದ ಬಗ್ಗೆ.

(ಉತ್ತರವನ್ನು ಲಗತ್ತಿಸಲಾಗಿದೆ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:** ಸದನವನ್ನು ನಾಳೆ ಬೆಳಗ್ಗೆ 10–00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 7 ಗಂಟೆ 22 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ: 19ನೇ ಮಾರ್ಚ್ ಮಾಹೆ 2021ರ ಶುಕ್ರವಾರದಂದು ಬೆಳಿಗ್ಗೆ 10–00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"